ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಮಂಗಳೂರು
ಭಾನುವಾರ, 24 ಮೇ 2026
ಸಂಪುಟ 48, ಸಂಚಿಕೆ 66 ಪುಟಗಳು 12+6
■ ಬೆಂಗಳೂರು ■ ಮಂಗಳೂರು
■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital



ವಿಶ್ವದ ಬೃಹತ್ ಶಸ್ತ್ರಾಸ್ತ್ರ ರಫ್ತುದಾರ ಭಾರತ ಶೀಘ್ರ: ರಾಜನಾಥ್ ಸಿಂಗ್ |೦೭

ಯುದ್ಧದ ತಂತ್ರಗಳಲ್ಲಿ ವೇಗದ ಬದಲಾವಣೆ: ಸಿಡಿಎಸ್ |೦೭



ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ನವಮಿ, ನಕ್ಷತ್ರ:ಪೂರ್ವ

ದಿನದ ಮಾತು

ಜಾಣ ಮಾತನ್ನು ಪ್ರಶಂಸಿಸಿ, ಸಜ್ಜನರೊಂದಿಗೆ ಮಾತಾಡಬೇಕೇ ಹೊರತು, ಅಜ್ಞರೊಂದಿಗೆ ಮಾತಾಡುವುದಲ್ಲ.
▲ ಚೂಡಾರತ್ನ ಶತಕ

ಸ್ಪೀನನು ಕೊಂಡೀರಾ
ವಕ್ರದೃಷ್ಟಿ
• ಎನ್.ರಾಮನಾಥ್
• ಪುಟ ೬

ಕಿರುಸುದ್ದಿ

ನಿತಿನ್ ನವೀನ್ ಭೇಟಿ: ಬಿಜೆಪಿಯಲ್ಲಿ ಉತ್ಸಾಹ

• **ಬೆಂಗಳೂರು:** ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾದ ಬಳಿಕ ಇದೇ ಮೊದಲ ಬಾರಿಗೆ ನಿತಿನ್ ನವೀನ್ ಬೆಂಗಳೂರಿಗೆ ಆಗಮಿಸಿದ್ದಾರೆ. ಇದು ಪಕ್ಷದಲ್ಲಿ ಉತ್ಸಾಹಕ್ಕೆ ಕಾರಣವಾಗಿದೆ. ರಾಷ್ಟ್ರೀಯ ಅಧ್ಯಕ್ಷರ ಮಾರ್ಗದರ್ಶನದಲ್ಲಿ ಪಕ್ಷ ಸಂಘಟನೆ ಇನ್ನಷ್ಟು ಬಲವಾಗಲಿದೆ. ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿದ ನಿತಿನ್ ನವೀನ್ ಅವರನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಪ್ರತಿಪಕ್ಷ ನಾಯಕರಾದ ಆರ್. ಅಶೋಕ, ಛಲವಾದಿ ನಾರಾಯಣಸ್ವಾಮಿ, ಕರ್ನಾಟಕ ರಾಜ್ಯ ಉಸ್ತುವಾರಿ ಮತ್ತು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಾಧಾಮೋಹನ್ ದಾಸ್ ಅಗ್ರವಾಲ್, ರಾಜ್ಯ ಸಹ–ಉಸ್ತುವಾರಿ ಸುಧಾಕರ್ ರೆಡ್ಡಿ ಮುಂತಾದವರು ಸ್ವಾಗತಿಸಿದರು.

• ಪುಟ ೫

ಬಿಸಿಗಾಳಿಗೆ ಆಂಧ್ರದಲ್ಲಿ ಒಂದೇ ದಿನ 21 ಸಾವು

• **ಅಮರಾವತಿ:** ಆಂಧ್ರಪ್ರದೇಶದಲ್ಲಿ ಮುಂದುವರಿದಿರುವ ತೀವ್ರ ಬಿಸಿಗಾಳಿ ಜನಜೀವನವನ್ನು ಅಸ್ತವ್ಯಸ್ತಗೊಳಿಸಿದ್ದು, ಹೆಚ್ಚಿದ ತಾಪಮಾನಕ್ಕೆ ಒಂದೇ ದಿನ 21 ಮಂದಿ ಮೃತಪಟ್ಟಿರುವ ಘಟನೆ ಆತಂಕ ಮೂಡಿಸಿದೆ. ಇನ್ನು ಆಂಧ್ರದ ನೆರೆ ರಾಜ್ಯ ತೆಲಂಗಾಣದಲ್ಲಿ ಬಿಸಿಲಿನ ತಾಪಕ್ಕೆ 16 ಜನ ಮೃತಪಟ್ಟಿದ್ದಾರೆ.

• ಪುಟ ೦೭

ಚೀನಾದ ಗಣಿ ಸ್ಫೋಟ, 90 ಕಾರ್ಮಿಕರ ಸಾವು

• ಪುಟ ೦೭

ಕೈ ಮುಖಂಡ ಅಜಯ್ ರೈ ವಿರುದ್ಧ ಬಿಜೆಪಿ ಕಿಡಿ

• ಪುಟ ೦೭

ಆನೇಕಲ್‌ನ ಇಂಡ್ಲವಾಡಿಯಲ್ಲಿ ದೇಶದ ಎರಡನೇ ಬೃಹತ್ ಕ್ರಿಕೆಟ್ ಕ್ರೀಡಾಂಗಣಕ್ಕೆ ಶಂಕು | 2 ವರ್ಷದಲ್ಲಿ ಪೂರ್ಣ: ಸಿಎಂ ಸಿದ್ದರಾಮಯ್ಯ

ಚಿನ್ನಸ್ವಾಮಿಗೆ ಪರ್ಯಾಯ



ಬೃಹತ್ ಕ್ರಿಕೆಟ್ ಕ್ರೀಡಾಂಗಣಕ್ಕೆ ಶನಿವಾರ ಶಂಕುಸ್ಥಾಪನೆ ನೆರವೇರಿಸಿದ ಬಳಿಕ ಕ್ರಿಕೆಟ್ ಆಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ.



ಸೂರ್ಯಶೈನ್ ಮತ್ತು ಸೂರ್ಯ ಡಿವೈನ್, ವಸತಿ ಸಮುಚ್ಚಯಗಳಿಗೆ ಹಾಗೂ ವಸತಿ ಯೋಜನೆಗೆ ಭೂಮಿ ನೀಡಿದ ಭೂಮಾಲೀಕರಿಗೆ ಸಾಂಕೇತಿಕ ನಿವೇಶನ ಹಂಚಿಕೆ ಪತ್ರ ವಿತರಿಸಿದ ಸಿದ್ದರಾಮಯ್ಯ. ಜತೆಯಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವ ಜಮೀರ್ ಅಹಮದ್ ಖಾನ್ ಮೊದಲಾದವರಿದ್ದರು.

• **ಆನೇಕಲ್:** ಕ್ರೀಡೆ ಹಾಗೂ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಈ ಕ್ರೀಡಾಂಗಣ ನಿರ್ಮಿಸಲಾಗುತ್ತಿದೆ. ಬೆಂಗಳೂರಿನಲ್ಲಿ ಅಂತಾರಾಷ್ಟ್ರೀಯ ಬೃಹತ್ ಕ್ರಿಕೆಟ್ ಕ್ರೀಡಾಂಗಣ ಇರಲಿಲ್ಲ. ಹೀಗಾಗಿ ಆನೇಕಲ್ ತಾಲೂಕಿನ ಇಂಡ್ಲವಾಡಿ ಸೂರ್ಯನಗರದ 4ನೇ ಹಂತದಲ್ಲಿ ಸುಸಜ್ಜಿತ ಕ್ರೀಡಾಂಗಣ ನಿರ್ಮಿಸಲಾಗುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.



ತಾಲೂಕಿನ ಸೂರ್ಯನಗರದ ನಾಲ್ಕನೇ ಹಂತದ ಇಂಡ್ಲವಾಡಿ ಬಳಿ 80 ಸಾವಿರ ಆಸನಗಳ ಸಾಮರ್ಥ್ಯವಿರುವ 945 ಕೋಟಿ ರೂಪಾಯಿ ವೆಚ್ಚದಲ್ಲಿ ಅಂತಾರಾಷ್ಟ್ರೀಯ ಮಟ್ಟದ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣಕ್ಕೆ ಭೂಮಿ ಪೂಜೆ, ಮುಖ್ಯಮಂತ್ರಿಗಳ ನಮ್ಮ ಮನೆ, ಸೂರ್ಯಶೈನ್ ಮತ್ತು ಸೂರ್ಯ ಡಿವೈನ್, ವಸತಿ ಸಮುಚ್ಚಯಗಳಿಗೆ ಹಾಗೂ ವಸತಿ ಯೋಜನೆಗೆ ಭೂಮಿ ನೀಡಿದ ಭೂಮಾಲೀಕರಿಗೆ ಸಾಂಕೇತಿಕ ನಿವೇಶನ ಹಂಚಿಕೆ ಪತ್ರ ನೀಡಿಕೆ ಸೇರಿದಂತೆ ಹಲವು ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ದುರಂತದಲ್ಲಿ ಅನೇಕ ಸಾವು ನೋವು ಉಂಟಾಯಿತು. ಈ ಹಿನ್ನೆಲೆಯಲ್ಲಿ 80 ಸಾವಿರ ಆಸನ ಸಾಮರ್ಥ್ಯವಿರುವ ದೇಶದ ಎರಡನೇ ದೊಡ್ಡ ಕ್ರಿಕೆಟ್ ಕ್ರೀಡಾಂಗಣ ನಿರ್ಮಿಸಲು ಉದ್ದೇಶಿಸಲಾಯಿತು. ➡ ಪುಟ ೪

- ಕರ್ನಾಟಕ ಗೃಹ ಮಂಡಳಿ ವತಿಯಿಂದ ನಿರ್ಮಾಣ
- ಸುಮಾರು 75 ಎಕರೆ ಜಾಗದಲ್ಲಿ ಕ್ರೀಡಾಂಗಣ
- 945 ಕೋಟಿ ರೂ. ವೆಚ್ಚದಲ್ಲಿ ಸ್ಟೇಡಿಯಂ
- 80 ಸಾವಿರ ಆಸನಗಳ ಸಾಮರ್ಥ್ಯ

ಶಾಲೆ ನಿರ್ಮಾಣಕ್ಕೆ 10 ಎಕರೆ: ಜಮೀರ್

ಸೂರ್ಯನಗರ ನಾಲ್ಕನೇ ಹಂತಕ್ಕೆ ಸುಮಾರು 3974 ಎಕರೆ ಸ್ವಾಧೀನಪಡಿಸಿಕೊಳ್ಳುವ ಸಂದರ್ಭದಲ್ಲಿ ರೈತರು ಯಾವುದೇ ತೊಂದರೆ ನೀಡದೆ ಸಹಕಾರ ನೀಡಿದ್ದಾರೆ. ಅಂತಾರಾಷ್ಟ್ರೀಯ ಕ್ರೀಡಾಂಗಣವಲ್ಲದೆ ಶಾಲೆ ನಿರ್ಮಾಣಕ್ಕೆ 10 ಎಕರೆ ಜಾಗ ಮೀಸಲಿಡಲಾಗುವುದು ಎಂದು ವಸತಿ ಸಚಿವ ಜಮೀರ್ ಅಹಮದ್ ಹೇಳಿದರು. ➡ ಪುಟ ೪

2 ಸಾವಿರ ಕೋಟಿ ವೆಚ್ಚದಲ್ಲಿ ಕ್ರೀಡಾನಗರ: ಡಿಕೆಶಿ

ಅಂತಾರಾಷ್ಟ್ರೀಯ ಕ್ರೀಡಾಂಗಣ ನಿರ್ಮಾಣಕ್ಕೆ ಮಾಜಿ ಸಂಸದ ಡಿ.ಕೆ.ಸುರೇಶ್ ಹಾಗೂ ಶಾಸಕ ಬಿ.ಶಿವಣ್ಣ ಅವರ ಒತ್ತಾಸೆಯೇ ಕಾರಣವಾಗಿದೆ. ಹೀಗಾಗಿ ಸುಮಾರು ಎರಡು ಸಾವಿರ ಕೋಟಿ ರೂ. ವೆಚ್ಚದಲ್ಲಿ ಕ್ರೀಡಾನಗರ ನಿರ್ಮಿಸಲು ಸಾಧ್ಯವಾಗುತ್ತಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು. ಸೂರ್ಯನಗರದ 4ನೇ ಹಂತಕ್ಕೆ ಕಾವೇರಿ ನೀರು ಮತ್ತು ಮೆಟ್ರೋ ಸೇರಿದಂತೆ ಇನ್ನು ಹೆಚ್ಚು ಸೌಕರ್ಯಗಳನ್ನು ಒದಗಿಸಲಾಗುವುದು. ➡ ಪುಟ ೪

ಶ್ವೇತಭವನಕ್ಕೆ ಮೋದಿ ಆಹ್ವಾನಿಸಿದ ಟ್ರಂಪ್

ಅಮೆರಿಕ–ಭಾರತ ಬಂಧ ವೃದ್ಧಿ ಯತ್ನ

• **ಹೊಸದಿಲ್ಲಿ:** ಭಾರತ ಮತ್ತು ಅಮೆರಿಕ ಜಾಗತಿಕ ಹಿತಾಸಕ್ತಿಗಾಗಿ ಇನ್ನಷ್ಟು ಸಮನ್ವಯದಿಂದ ಕಾರ್ಯನಿರ್ವಹಿಸಲಿವೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ.

ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ, ಶನಿವಾರ ಪ್ರಧಾನಿ ಮೋದಿಯನ್ನು ಭೇಟಿ ಮಾಡಿ ಪಶ್ಚಿಮ ಏಷ್ಯಾ ಬಿಕ್ಕಟ್ಟು, ರಕ್ಷಣಾ ಸಹಕಾರ, ತಂತ್ರಜ್ಞಾನ, ವ್ಯಾಪಾರ ಮತ್ತು ಇಂಧನ ಭದ್ರತೆ ಕುರಿತು ವಿಸ್ತೃತ ಮಾತುಕತೆ ನಡೆಸಿದರು.



ಭಾರತ ಪ್ರವಾಸಕ್ಕೆ ಬಂದಿರುವ ರೂಬಿಯೊ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪರವಾಗಿ ಪ್ರಧಾನಿ ಮೋದಿಗೆ ಶೀಘ್ರದಲ್ಲೇ ವೈಟ್‌ಹೌಸ್‌ಗೆ ಭೇಟಿ ನೀಡುವಂತೆ ಆಹ್ವಾನ ನೀಡಿದ್ದಾರೆ ಎಂದು ಅಮೆರಿಕ ರಾಯಭಾರಿ ಸರ್ಜಿಯೋ ಗಾರ್ ತಿಳಿಸಿದ್ದಾರೆ.

ಭೇಟಿಯ ಬಳಿಕ ಸಾಮಾಜಿಕ ಜಾಲ ತಾಣದಲ್ಲಿ ಪ್ರತಿಕ್ರಿಯಿಸಿದ ಮೋದಿ, 'ಭಾರತ–ಅಮೆರಿಕ ಸಮಗ್ರ ಜಾಗತಿಕ ತಂತ್ರಾತ್ಮಕ ಸಹಭಾಗಿತ್ವದ ನಿರಂತರ ಪ್ರಗತಿ ಹಾಗೂ ಪ್ರಾದೇಶಿಕ ಮತ್ತು ಜಾಗತಿಕ ಶಾಂತಿ–ಭದ್ರತೆ ವಿಚಾರಗಳ ಬಗ್ಗೆ ಚರ್ಚೆ ನಡೆಸಿದೆವು' ಎಂದು ತಿಳಿಸಿದ್ದಾರೆ. ➡ ಪುಟ ೪

- ಮೋದಿ–ಅಮೆರಿಕ ವಿದೇಶಾಂಗ ಕಾರ್ಯದರ್ಶಿ ರೂಬಿಯೊ ಭೇಟಿ
- ಪಶ್ಚಿಮ ಏಷ್ಯಾ ಬಿಕ್ಕಟ್ಟು, ರಕ್ಷಣಾ ಸಹಕಾರ, ವ್ಯಾಪಾರ ಚರ್ಚೆ



ಪಶ್ಚಿಮ ಏಷ್ಯಾ ಸ್ಥಿತಿ ಕುರಿತು ಚರ್ಚೆ

ಪಶ್ಚಿಮ ಏಷ್ಯಾದ ಇತ್ತೀಚಿನ ಬೆಳವಣಿಗೆಗಳ ಕುರಿತು ರೂಬಿಯೊ, ಪ್ರಧಾನಿ ಮೋದಿ ಅವರಿಗೆ ಅಮೆರಿಕದ ನಿಲುವು ವಿವರಿಸಿದ್ದಾರೆ. ಈ ವೇಳೆ ಶಾಂತಿ ಮತ್ತು ರಾಜತಾಂತ್ರಿಕ ಮಾತುಕತೆಯ ಮೂಲಕ ಸಮಸ್ಯೆಗಳನ್ನು ಬಗೆಹರಿಸಬೇಕೆಂಬ ಭಾರತದ ನಿಲುವನ್ನು ಮೋದಿ ಪುನರುಚ್ಚರಿಸಿದರು. ➡ ಪುಟ ೪

ಸಂಬಂಧ ಸುಧಾರಣೆಗೆ ಹೊಸ ಪ್ರಯತ್ನ

ಕಳೆದ ವರ್ಷ ಅಮೆರಿಕ ಭಾರತ ಮೇಲಿನ ಹೆಚ್ಚುವರಿ ಸುಂಕ ಕ್ರಮ ಹಾಗೂ ಭಾರತ–ಪಾಕಿಸ್ತಾನ ಉದ್ವಿಗ್ನತೆ ವಿಚಾರದಲ್ಲಿ ಟ್ರಂಪ್ ನೀಡಿದ್ದ ಹೇಳಿಕೆಗಳಿಂದ ಉಭಯ ರಾಷ್ಟ್ರಗಳ ಸಂಬಂಧದಲ್ಲಿ ಕೆಲ ಮಟ್ಟಿನ ವ್ಯತ್ಯಯ ಉಂಟಾಗಿತ್ತು. ಆದರೆ ಇತ್ತೀಚಿನ ತಿಂಗಳುಗಳಲ್ಲಿ ಸಂಬಂಧ ಪುನಃ ಬಲಪಡಿಸಲು ಎರಡೂ ರಾಷ್ಟ್ರಗಳು ಪ್ರಯತ್ನ ನಡೆಸುತ್ತಿವೆ. ಶೀಘ್ರದಲ್ಲೇ ಪರಸ್ಪರ ಲಾಭದಾಯಕ ವ್ಯಾಪಾರ ಒಪ್ಪಂದ ಅಂತಿಮಗೊಳಿಸುವ ದಿಸೆಯಲ್ಲಿ ಚರ್ಚೆಗಳು ನಡೆಯುತ್ತಿವೆ.

ಮಿಷನ್ 500 ಗುರಿಗೆ ವೇಗ

• ಪುಟ ೪

ಮಂಗಳೂರಲ್ಲಿ 4 ಸಭಾಭವನ ಏಕಕಾಲಕ್ಕೆ ಲೋಕಾರ್ಪಣೆ | ಪಾಲೆಮಾರ್ ಮಾಹಿತಿ

ಸಭಾಭವನ ಲಾಭಾಂಶ ಶಿಕ್ಷಣಕ್ಕೆ ವಿನಿಯೋಗ

• **ಮಂಗಳೂರು:** ಕರಾವಳಿಯ ಹೆಮ್ಮೆಯ ಹಾಗೂ ಅತ್ಯಂತ ಪ್ರತಿಷ್ಠಿತ ರಿಯಲ್ ಎಸ್ಟೇಟ್ ಸಂಸ್ಥೆಯಾದ ಲ್ಯಾಂಡ್ ಲಿಂಕ್ಸ್, ಕರಾವಳಿ ಭಾಗದಲ್ಲಿ ಕಳೆದ 45 ವರ್ಷಗಳಿಂದ ತನ್ನ ಪ್ರಾಮಾಣಿಕ ಮತ್ತು ಯಶಸ್ವಿ ಉದ್ಯಮದ ಮೂಲಕ ಲಕ್ಷಾಂತರ ಜನರ ನಂಬಿಕೆಯನ್ನು ಗಳಿಸಿದೆ. ಇದರ ಸುವಿನಹಿತಾಗಿ ಭವ್ಯವಾದ ನಾಲ್ಕು ಸಭಾಭವನಗಳನ್ನು ಸಮಾಜಕ್ಕೆ ಲೋಕಾರ್ಪಣೆ ಮಾಡಲಾಗಿದೆ. ಇದರಿಂದ ಬರುವ ಲಾಭಾಂಶವನ್ನು ವಿದ್ಯಾರ್ಥಿಗಳ ಶಿಕ್ಷಣಕ್ಕೆ ವಿನಿಯೋಗಿಸಲು ಚಿಂತನೆ ನಡೆಸಲಾಗಿದೆ ಎಂದು ಲ್ಯಾಂಡ್ ಲಿಂಕ್ಸ್ ಸಂಸ್ಥೆಯ ರೂವಾರಿ, ಮಾಜಿ ಸಚಿವ ಕೃಷ್ಣ ಜೆ. ಪಾಲೆಮಾರ್ ಹೇಳಿದರು.

ಮಂಗಳೂರಿನ ಪ್ರಮುಖ ನಾಲ್ಕು ಸ್ಥಳಗಳಲ್ಲಿ ಪ್ರಪ್ರಥಮ ಬಾರಿಗೆ ಅತ್ಯಾಧುನಿಕ ಸೌಲಭ್ಯಗಳನ್ನೊಳಗೊಂಡ, ನಾಡಿನ ಜನತೆಗೆ ಯೋಗ್ಯವಾದ 4 ಭವ್ಯ ಸಭಾಭವನಗಳನ್ನು ಶನಿವಾರ ಏಕಕಾಲದಲ್ಲಿ ಲೋಕಾರ್ಪಣೆ ಮಾಡಲಾಗಿದ್ದು, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ➡ ಪುಟ ೪



ಯುವಶಕ್ತಿಗೆ ಉದ್ಯೋಗ

• **ಹೊಸದಿಲ್ಲಿ:** ದೇಶದ ಯುವಶಕ್ತಿಗೆ ಪೂರಕವಾಗಲೆಂದೇ ಅಂತಾರಾಷ್ಟ್ರೀಯ ಪಾಲುದಾರಿಕೆಗಳನ್ನು ಉದ್ದೇಶಪೂರ್ವಕವಾಗಿ ಸೃಷ್ಟಿಸಲಾಗಿದೆ. ಭಾರತದ ಯುವಜನತೆಗೆ ಉದ್ಯೋಗ ದೊರೆಯಬೇಕು ಮತ್ತು ನಮ್ಮ ಯುವಕರು ಜಾಗತಿಕವಾಗಿ ಗುರುತಿಸಲ್ಪಡಬೇಕೆಂಬುದು ಪಾಲುದಾರಿಕೆಗಳ ಹಿಂದಿನ



ನೈಜ ಆಶಯ. ಅದಷ್ಟೇ ರಾಷ್ಟ್ರಗಳನ್ನು ಪ್ರತಿನಿಧಿಸುವ ಜಾಗತಿಕ ಸಂಸ್ಥೆಗಳ ನಾಯಕರು ಭಾರತದ ಯುವಶಕ್ತಿ ಸಾಮರ್ಥ್ಯದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಮತ್ತು ರಾಷ್ಟ್ರದ ತಾಂತ್ರಿಕ ಮುನ್ನಡೆಯನ್ನು ಕೊಂಡಾಡಿದ್ದಾರೆ. ಜಗತ್ತು ಭಾರತದ ಅಭಿವೃದ್ಧಿ ಯಾನದ ಭಾಗವಾಗಲು ಆಶಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಇಡೀ ಜಗತ್ತು ಭಾರತದ ಯುವಶಕ್ತಿಯ ಪ್ರತಿಭೆ– ಸಾಮರ್ಥ್ಯಗಳನ್ನು ಕೊಂಡಾಡುತ್ತಿರುವುದು ಪಂಚ ರಾಷ್ಟ್ರಗಳಿಗೆ ಪ್ರವಾಸ ಸಂದರ್ಭ ತನ್ನ ಗಮನಕ್ಕೆ ಬಂತು ಎಂದು ಪ್ರಧಾನಿ ಮೋದಿ ಹೆಮ್ಮೆ ವ್ಯಕ್ತಪಡಿಸಿದರು. ➡ ಪುಟ ೪

ಕಾರ್ಮಿಕರ ಕನಿಷ್ಠ ವೇತನ ಶೇ.60 ಹೆಚ್ಚಳ

• **ಬೆಂಗಳೂರು:** ಕಾರ್ಮಿಕರ ಕನಿಷ್ಠ ವೇತನವನ್ನು ಸರಾಸರಿ ಶೇ.60ರಷ್ಟು ಏರಿಕೆ ಮಾಡಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಈ ಅಧಿಸೂಚನೆಯು ರಾಜ್ಯದ ಅಸಂಘಟಿತ ಮತ್ತು ನಿರ್ದಿಷ್ಟ ವಲಯಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಆರ್ಥಿಕ ಸೌಲಭ್ಯ ಒದಗಿಸಲಿದೆ. ಸುಪ್ರೀಂಕೋರ್ಟ್ ನಿರ್ದೇಶನ ದನ್ವಯ ಈ ವೇತನ ಪರಿಷ್ಕರಣೆ ಮಾಡಲಾಗಿದೆ. ಇದೇ ಮೊದಲ ಬಾರಿಗೆ ಎಲ್ಲಾ ನಿಗದಿತ ಉದ್ಯೋಗಗಳನ್ನು ಒಂದೇ ಅಧಿಸೂಚನೆಯಲ್ಲಿ ತರಲಾಗಿದೆ. ಈ ಹಿಂದೆ ಇದ್ದ ನಾಲ್ಕು ವಲಯಗಳ ವರ್ಗೀ ಕರಣವನ್ನು ಮೂರು ವಲಯಗಳಿಗೆ ಪರಿಷ್ಕರಿಸಲಾಗಿದೆ. ಈ ಮೂಲಕ ರಾಜ್ಯದ ಕೋಟ್ಯಂತರ ಕಾರ್ಮಿಕರಿಗೆ ಸರ್ಕಾರ, ಕಾರ್ಮಿಕ ಇಲಾಖೆಯ ಮೂಲಕ ಭರ್ಜರಿ ಕೊಡುಗೆ ನೀಡಿದೆ.



ನೂತನ ಕಾರ್ಮಿಕರ ಕನಿಷ್ಠ ವೇತನ ಹೆಚ್ಚಳ ಅಧಿಸೂಚನೆಯು ಖಾಸಗಿ ಶಾಲೆ– ಕಾಲೇಜು ಬೋಧಕೇತರ ಸಿಬ್ಬಂದಿ, ಇ–ಕಾಮರ್ಸ್ ವಲಯದ ನೌಕರರು ಮತ್ತು ಕೊರಿಯರ್ ಸಂಸ್ಥೆಗಳ ನೌಕರರು ಮತ್ತು ಧಾರ್ಮಿಕ ಸಂಸ್ಥೆಗಳಲ್ಲಿ ದುಡಿಯುವ ಸಿಬ್ಬಂದಿಗೂ ಲಾಭ ಮಾಡಿಕೊಟ್ಟಿದೆ. ಒಟ್ಟಾರೆಯಾಗಿ ಕರ್ನಾಟಕದಲ್ಲಿನ 81 ಅನುಸೂಚಿತ ಉದ್ಯೋಗಗಳಲ್ಲಿ ದುಡಿಯುವ ಶ್ರಮಿಕರಿಗೆ ಅನುಕೂಲವಾಗಲಿದೆ. ಕನಿಷ್ಠ ವೇತನ ಪರಿಷ್ಕರಣೆ ಮಾಡಬೇಕು ಎಂಬುದು ಬಹುದಿನಗಳ ಬೇಡಿಕೆಯಾಗಿತ್ತು.

ವಿವಿಧ ಸಂಘಟನೆಗಳು, ಕಾರ್ಮಿಕರ ಒಕ್ಕೂಟಗಳು ಇದಕ್ಕಾಗಿ ಬೇಡಿಕೆ ಇಟ್ಟಿದ್ದವು. ಇದೀಗ ಕಾರ್ಮಿಕ ಇಲಾಖೆ ಸ್ಪಂದಿಸಿದೆ. ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ಜೀವನ ನಡೆಸಲು ಕಷ್ಟಪಡುತ್ತಿದ್ದ ಕಾರ್ಮಿಕ ವಲಯಕ್ಕೆ ಈ ಕನಿಷ್ಠ ವೇತನ ಪರಿಷ್ಕರಣೆಯು ದೊಡ್ಡ ಮಟ್ಟದ ಅನುಕೂಲ ಮಾಡಿಕೊಡಲಿದೆ. ➡ ಪುಟ ೪

ಏರಿಕೆ ಲೆಕ್ಕಾಚಾರ ಹೇಗೆ?

ವಲಯ 3 ರಲ್ಲಿನ ಕೌಶಲರಹಿತ ಕಾರ್ಮಿಕರಿಗೆ 19,300 ರೂ.ರಿಂದ ವಲಯ 1ರಲ್ಲಿ ಹೆಚ್ಚು ಕೌಶಲಪೂರ್ಣ ಕಾರ್ಮಿಕರಿಗೆ 31,100 ರೂ.ರವರೆಗೆ ಏರಿಕೆ ಮಾಡಲಾಗಿದೆ. ಎರಡು ವರ್ಷಗಳ 1,030 ರೂ. ಮೊತ್ತದ ವಿಡಿಎಯನ್ನು (ಹಣದುಬ್ಬರಕ್ಕೆ ಅನುಗುಣವಾಗಿ ಭತ್ಯೆ) ಕನಿಷ್ಠ ವೇತನದಲ್ಲಿ ಸೇರಿಸಲಾಗಿದೆ. ಕನಿಷ್ಠ ವೇತನ ಲೆಕ್ಕಾಚಾರ ಮಾಡಲು ರಾಜ್ಯವನ್ನು ಮೂರು ವಲಯಗಳಾಗಿ ವರ್ಗೀಕರಿಸಲಾಗಿದೆ. ಗ್ರೇಟರ್ ಬೆಂಗಳೂರು ಪ್ರದೇಶವು ವಲಯ 1ರ ಅಡಿಯಲ್ಲಿ ಬರಲಿದೆ. ವಲಯ 2ರಲ್ಲಿ ಜಿಲ್ಲಾ ಕೇಂದ್ರಗಳು ಬರಲಿವೆ ಮತ್ತು ಉಳಿದ ಪ್ರದೇಶಗಳು ವಲಯ 3ರ ಅಡಿಯಲ್ಲಿ ವರ್ಗೀಕರಿಸಲಾಗಿದೆ.

ಮನರೇಗಾಗೆ ಅಧಿಕೃತ ವಿದಾಯ | ಡಿಬಿಟಿ ಮೂಲಕವೇ ವೇತನ ಪಾವತಿ

ವಿಬಿ–ಜಿ ರಾಮ್‌ಜಿ ಜು.1ರಿಂದ ಜಾರಿ

• **ಹೊಸದಿಲ್ಲಿ:** ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ (ಎಂಜಿಎನ್‌ಆರ್ ಇಜಿಎ) ಬದಲಾಗಿ ಜಾರಿಯಾಗಲಿರುವ ವಿಕಸಿತ ಭಾರತ–ಗ್ರಾಮೀಣ ಉದ್ಯೋಗ ಮತ್ತು ಜೀವನೋಪಾಯ ಮಿಷನ್ (ವಿಬಿ–ಜಿ ರಾಮ್ ಜಿ) ಅನುಷ್ಠಾನಕ್ಕೆ ಕೇಂದ್ರ ಸರ್ಕಾರ ಶನಿವಾರ ಕರಡು ನಿಯಮಾವಳಿ ಪ್ರಕಟಿಸಿದೆ. ಜು.1ರಿಂದ ದೇಶಾದ್ಯಂತ ಹೊಸ ಯೋಜನೆ ಜಾರಿಗೆ ಬರಲಿದ್ದು, ಅಂತಿಮ ಅನುಮೋದನೆಗೂ ಮುನ್ನ ಸಾರ್ವಜನಿಕರಿಂದ ಅಭಿಪ್ರಾಯ ಆಹ್ವಾನಿಸಲಾಗಿದೆ.

2025ರ ಕಾಯ್ದೆಯ ಸೆಕ್ಷನ್ 33 ಸೇರಿದಂತೆ ವಿವಿಧ ವಿಧಿಗಳಲ್ಲಿ ಈ ಕರಡು ನಿಯಮಗಳನ್ನು ರೂಪಿಸಲಾಗಿದ್ದು, ರಾಜ್ಯಗಳು, ತಜ್ಞರು, ಕಾರ್ಮಿಕ ಸಂಘಟನೆಗಳು ಹಾಗೂ ನಾಗರಿಕ ಸಮಾಜ ಸಂಸ್ಥೆಗಳೊಂದಿಗೆ ವ್ಯಾಪಕ ಚರ್ಚೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ➡ ಪುಟ ೪



- ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಹೊಸ ರೂಪ
- ಮನರೇಗಾಗೆ ಬದಲಾಗಿ ಹೊಸ ಯೋಜನೆ
- ಉದ್ಯೋಗ ಖಾತರಿ 100 ದಿನಗಳಿಂದ 125 ದಿನಕ್ಕೆ ಏರಿಕೆ
- ಗ್ರಾಮಾಭಿವೃದ್ಧಿ ಮತ್ತು ಹವಾಮಾನ ಸಹಿಷ್ಣುತೆಗೆ ಒತ್ತು
- ತಂತ್ರಜ್ಞಾನ ಆಧಾರಿತ ದೂರು ಪರಿಹಾರ

ಸದ್ಯಕ್ಕೆ ಹಳೆಯ ಕಾರ್ಡ್‌ಗಳೇ ಮಾನ್ಯ

ಈ ಯೋಜನೆಯಲ್ಲಿ ಈಗಿನ ಮನರೇಗಾ ಕೆಲಸಗಳು ಮುಂದುವರಿಯಲಿದ್ದು, ಬಾಕಿ ಬಾಧ್ಯತೆಗಳ ನಿರ್ವಹಣೆ, ದಾಖಲೆಗಳ ವರ್ಗಾವಣೆ ಹಾಗೂ ಕಾರ್ಮಿಕರ ಹಕ್ಕುಗಳಿಗೆ ವ್ಯತ್ಯಯ ಉಂಟಾಗದಂತೆ ಕ್ರಮ ಕೈಗೊಳ್ಳಲಾಗುತ್ತದೆ. ಇ–ಕೆವೈಸಿ ದೃಢೀಕೃತ ಹಳೆಯ ಜಾಬ್ ಕಾರ್ಡ್‌ಗಳು ಹೊಸ ಗ್ರಾಮೀಣ ಉದ್ಯೋಗ ಖಾತರಿ ಕಾರ್ಡ್‌ಗಳು ಬಿಡುಗಡೆವರೆಗೆ ತಾತ್ಕಾಲಿಕವಾಗಿ ಮಾನ್ಯವಾಗಲಿವೆ. ➡ ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,73,200(2,74,200) ಅಪರಂಜಿ ಚಿನ್ನ: 15,820(15,900) ಆಭರಣ ಚಿನ್ನ: 14,580(14,660) ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿ.ಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ) $1 = ₹96.21

ಕಿರುಸುದ್ದಿ

ಸಚಿವ ದಿನೇಶ್ ಹೇಳಿಕೆ ದೇಶದ ವಿರುದ್ಧ: ಕುಂಪಲ

ಮಂಗಳೂರು: ದೇಶದ ಆರ್ಥಿಕ ಪರಿಸ್ಥಿತಿ ಪಾಕಿಸ್ತಾನಕ್ಕಿಂತಲೂ ಶೋಚನೀಯವಾಗಿದೆ ಎಂಬ ದ.ಕ. ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಅವರ ಹೇಳಿಕೆ ದೇಶದ ವಿರುದ್ಧವಾಗಿದೆ ಎಂದು ಬಿಜೆಪಿ ದ.ಕ. ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಹೇಳಿದ್ದಾರೆ.



ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮವಾಗಿ ತೈಲಬೆಲೆಗಳು ಜಾಗತಿಕವಾಗಿ ಗಣನೀಯವಾಗಿ ಏರಿಕೆಯಾಗಿದೆ. ದೇಶದ ಆರ್ಥಿಕತೆಗೆ ಧಕ್ಕೆ ಬಾರದಂತೆ ನಿಭಾಯಿಸುವುದು ಆಡಳಿತ ವ್ಯವಸ್ಥೆಯ ಪ್ರಮುಖ ಆದ್ಯತೆಯಾಗುತ್ತದೆ.

ಪ್ರಧಾನಿ ನರೇಂದ್ರ ಮೋದಿಯವರು ದೇಶದ ಜನತೆಗೆ ಮಿತವ್ಯಯಕ್ಕೆ ವಿನಂತಿಸಿದ ಸಂದರ್ಭದಲ್ಲಿಯೂ ಕಾಂಗ್ರೆಸ್ ಉಡಾಫೆಯಾಗಿ ವರ್ತಿಸಿತ್ತು. ಪ್ರಸ್ತುತ ಅನಿವಾರ್ಯವಾಗಿ ಪೆಟ್ರೋಲ್, ಡಿಸೇಲ್ ಬೆಲೆಗಳು ಏರಿಕೆಯಾಗುವಾಗ ರಾಜ್ಯದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ದೇಶದ ಆರ್ಥಿಕ ಪರಿಸ್ಥಿತಿ ಪಾಕಿಸ್ತಾನಕ್ಕಿಂತಲೂ ಶೋಚನೀಯವಾಗಿದೆ ಎಂಬ ಹೇಳಿಕೆ ನೀಡಿ ಮತ್ತೆ ಮತ್ತೆ ತಮ್ಮ ಕಾಂಗ್ರೆಸ್‌ನ ಪಾಕಿಸ್ತಾನ ಪ್ರೀತಿಯನ್ನು ಪ್ರದರ್ಶಿಸುತ್ತಿದ್ದಾರೆ. ಈ ಹೇಳಿಕೆಯನ್ನು ಬಿ.ಜೆ.ಪಿ. ಖಂಡಿಸುತ್ತದೆ ಮತ್ತು ಇದು ಸಂಪೂರ್ಣ ದೇಶದ ವಿರುದ್ಧದ ಹೇಳಿಕೆಯಾಗಿದೆ ಎಂದು ಅವರು ಹೇಳಿದ್ದಾರೆ.

ದಿನೇಶ್ ಗುಂಡೂರಾವ್ ಅವರು ಪಾಕಿಸ್ತಾನದ ಪರಿಸ್ಥಿತಿಯನ್ನು ಅರಿತು ಮಾತನಾಡಲಿ. ಅಲ್ಲಿ ಪೆಟ್ರೋಲ್, ಡೀಸೆಲ್ ಬೆಲೆಗಳು ಲೀಟರ್ ಗೆ 400 ರೂ. ಮತ್ತು ಗೃಹ ಬಳಕೆಯ ಅಡುಗೆ ಅನಿಲ 3,500 ರೂ., ವಾಣಿಜ್ಯ ಬಳಕೆಯ ಅನಿಲ ದರ 10,000 ರೂ.ಗಿಂತಲೂ ಅಧಿಕವಿದೆ. ಜನರು ಜೀವನ ನಡೆಸಲು ಪರದಾಡುತ್ತಿದ್ದಾರೆ. ಪಾಕಿಸ್ತಾನದ ಆಡಳಿತ ನಡೆಸುವವರು ಬೇರೆ ದೇಶಗಳಿಂದ ಸಾಲಕ್ಕಾಗಿ ಬೇಡುತ್ತಿರುವುದು ಕಾಣುತ್ತಿಲ್ಲವೇ ಎಂದು ಕುಂಪಲ ಪ್ರಶ್ನಿಸಿದ್ದಾರೆ.

ಉಡುಪಿ ಜಿಲ್ಲೆಯಲ್ಲಿ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರ ಪ್ರವಾಸ

ಉಡುಪಿ: ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ಡಾ. ನಾಗಲಕ್ಷ್ಮೀ ಚೌಧರಿ ಅವರು ಮೇ 24 ರಿಂದ 26 ರ ವರೆಗೆ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ. ಮೇ 24ರಂದು ಬೆಳಗ್ಗೆ 10.30ಕ್ಕೆ ಕಾರ್ಕಳದ ಬಂಡಿಮಠ ಬಸ್ ನಿಲ್ದಾಣದಲ್ಲಿ ಸ್ಥಳೀಯ ಕಾರ್ಯಕ್ರಮ, ಮಧ್ಯಾಹ್ನ 12.45ಕ್ಕೆ ಉಡುಪಿಯ ಅಯ್ಯಪ್ಪ ನಗರದಲ್ಲಿರುವ ಶ್ರೀ ಗುರು ರಾಘವೇಂದ್ರ ಸೇವಾ ಟ್ರಸ್ಟ್‌ನ ಅಧೀನದಲ್ಲಿರುವ ವಿಜೇತ ವಿಶೇಷ ವಸತಿ ಶಾಲೆಗೆ ಭೇಟಿ, ಮ. 3.30 ಕ್ಕೆ ಕುಂದಾಪುರ ತಾಲೂಕು ತೆಕ್ಕಟ್ಟೆಯ ಶ್ರೀ ದುರ್ಗಾಪರಮೇಶ್ವರಿ ಕಲ್ಯಾಣ ಮಂಟಪದಲ್ಲಿ ಉಡುಪಿ ಜಿಲ್ಲಾ ಸ್ತ್ರೀ ಶಕ್ತಿ ಒಕ್ಕೂಟ ಮತ್ತು ವಿವಿಧ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಲಾಗಿರುವ ಮಹಿಳಾ ಸ್ಪಂದನ ಸಮಾವೇಶದಲ್ಲಿ ಭಾಗಿ, ಸಂಜೆ 5.30ಕ್ಕೆ ಉಡುಪಿ ನಗರದ ಐ.ಬಿ ಬಳಿ ಇರುವ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯಕ್ಕೆ ಭೇಟಿ ನೀಡಿ, ನಂತರ ಉಡುಪಿಯಲ್ಲಿ ವಾಸ್ತವ್ಯ ಮಾಡಲಿದ್ದಾರೆ. 25 ಮತ್ತು 26 ರಂದು ಕೂಡಾ ವಿವಿಧ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಸವಣೂರು ಸೀತಾರಾಮ ರೈ ರಶ್ಮಿ ನಿವಾಸದಲ್ಲಿ ಸೀತಾ–ಕಸ್ತೂರಿ ಕಲ್ಯಾಣ 50ರ ಸಂಭ್ರಮ

ಡಾ. ಆಳ್ವ ನೇತೃತ್ವದಲ್ಲಿ ವಿವಾಹ ಮರುಸೃಷ್ಟಿ

ಪುತ್ತೂರು: ಸವಣೂರಿನ ಶಿಕ್ಷಣ ಕ್ರಾಂತಿಯ ಹರಿಕಾರ, ಸಹಕಾರ ರತ್ನ, ಸವಣೂರು ಕೆ. ಸೀತಾರಾಮ ರೈ ಮತ್ತು ಕಸ್ತೂರಿಕಲಾ ಎಸ್. ರೈ ದಂಪತಿಯ ವೈವಾಹಿಕ ಜೀವನದ 50ರ ಸಂಭ್ರಮಾಚರಣೆ 'ಸೀತಾ–ಕಸ್ತೂರಿ ಕಲ್ಯಾಣ' ಕಾರ್ಯಕ್ರಮವು ಶನಿವಾರ ಸಂಜೆ ಸೀತಾರಾಮ ರೈಯವರ ಸವಣೂರಿನ ರಶ್ಮಿ ನಿವಾಸದಲ್ಲಿ ನಡೆಯಿತು.



ಸವಣೂರಿನಲ್ಲಿ ಶನಿವಾರ ನಡೆದ ಸೀತಾ–ಕಸ್ತೂರಿ ಕಲ್ಯಾಣ ಸಮಾರಂಭ

ಸೀತಾ–ಕಸ್ತೂರಿ ಕಲ್ಯಾಣದ ಸಭಾ ಕಾರ್ಯಕ್ರಮದಲ್ಲಿ ಶ್ರೀ ಸುಬ್ರಹ್ಮಣ್ಯ ಮಠದ ಮಠಾಧೀಶರಾದ ವಿದ್ಯಾ ಪ್ರಸನ್ನತೀರ್ಥ ಸ್ವಾಮೀಜಿ ಆಶೀರ್ವಚನ ನೀಡಿ, ಮನುಷ್ಯ ಜೀವನ ಮಂಗಳಮುಖಿ ಆಗಬೇಕಾದರೆ ಸೇವಾ ಸಾಧನೆ ಮಾಡಬೇಕು. ಆಧ್ಯಾತ್ಮಿಕ, ಸಾಮಾಜಿಕ ಸಾಧನೆ ವಿಸ್ತರವಾದ ಗೌರವ ನೀಡುತ್ತದೆ. ಭಾರತೀಯ ಕೌಟುಂಬಿಕ ಪದ್ಧತಿ ವಿಶಿಷ್ಟ. ಜನ್ಮಾತರದ ಸಂಬಂಧ ಇದು ಎಂದು ಕಿರಿಯರಿಗೆ ತಿಳಿಸಬೇಕಾಗಿದೆ. ಸೀತಾರಾಮ ರೈ ಅವರ ಬದುಕಿನ ಶಿಸ್ತು, ಸಂಯಮ, ಸೇವೆ ಮಾದರಿಯಾಗಿದೆ ಎಂದರು.

ಒಡಿಯೂರು ಶ್ರೀ ಗುರುದೇವ ದತ್ತ ಸಂಸ್ಥಾನದ ಗುರುದೇವಾನಂದ ಸ್ವಾಮೀಜಿ ಆಶೀರ್ವಚನ ನೀಡಿ, ಇದು ಆದರ್ಶಮಯ ಕಾರ್ಯಕ್ರಮ. ಅರಿತು ಬಾಳಿದರೆ ಬಾಳು ಬಂಗಾರ, ಅರಿತು ಬೆರೆತು ಬಾಳಿದರೆ ಬದುಕು ಶೃಂಗಾರ ಎನ್ನುವಂತೆ ಬಾಳಿದವರು ಸೀತಾರಾಮ ರೈ. ಸಂಬಂಧ ಅರ್ಥೈಸಿಕೊಂಡು ಬದುಕಿನಲ್ಲಿ ಕೂಡಿಸಿಕೊಂಡರೆ ಉನ್ನತಿ ಸಾಧ್ಯವಾಗುತ್ತದೆ. ಸಹಕಾರಿ ತತ್ವವನ್ನು ತನ್ನ ಬದುಕಿನಲ್ಲಿ ಅಳವಡಿಸಿಕೊಂಡವರು ಎಂದರು.

ದೀಪ ಪ್ರಜ್ವಲನೆ ಮಾಡಿದ ಮಂಗಳೂರಿನ ಲಕ್ಷ್ಮೀ ಮೆಮೋರಿಯಲ್ ಎಜುಕೇಶನ್ ಟ್ರಸ್ಟ್‌ನ ಸಂಸ್ಥಾಪಕ ಡಾ. ಎ.ಜೆ. ಶೆಟ್ಟಿ ದೀಪ ಪ್ರಜ್ವಲನೆ ಮಾಡಿ, ಸೀತಾರಾಮ ರೈ ಅವರು ಮಾಡಿದ ಒಳ್ಳೆಯ ಕೆಲಸಕ್ಕೆ ಉತ್ತಮ ಪ್ರತಿಫಲ ಸಮಾಜದಿಂದ ಸಿಕ್ಕಿದೆ. ಹಲವು ಮಂದಿಗೆ ಉದ್ಯೋಗ ಕೊಟ್ಟು ಬದುಕು ಕಟ್ಟಿ ಕೊಟ್ಟಿದ್ದಾರೆ. ಶಿಸ್ತಿನ ಸಿಪಾಯಿ ಆದ ತಂದೆಯ ಆದರ್ಶ ಪಾಲಿಸಿಕೊಂಡು ಬೆಳೆದಿದ್ದಾರೆ. ಆದಾಯದ ಪಾಲಿನಲ್ಲಿ ಸಮಾಜಕ್ಕೂ ಕೊಡುಗೆ ನೀಡಿದ್ದಾರೆ. ಅವರಿಗೆ ದೇವರು ಇನ್ನಷ್ಟು ಆಯಸ್ಸು ನೀಡಿ ಸಮಾಜಕ್ಕೆ ಸೇವೆ ನೀಡುವಂತಾಗಲಿ ಎಂದು ಶುಭ ಹಾರೈಸಿದರು.

ಸಂಗೀತ ಗಾನ ಸಂಭ್ರಮ

ಅಪರಾಹ್ನ 3ರಿಂದ ಪುತ್ತೂರು ಜಗದೀಶ್ ಆಚಾರ್ಯ ಮತ್ತು ಬಳಗದವರಿಂದ ಸಂಗೀತ ಗಾನ ಸಂಭ್ರಮ ಜರಗಿತು. ಕಾರ್ಯಕ್ರಮದಲ್ಲಿ ಸಾವಿರಾರು ಮಂದಿ ಅಭಿಮಾನಿಗಳು, ಹಿತೈಷಿಗಳು ಪಾಲ್ಗೊಂಡರು.

ಸನ್ಮಾನ ನೆರವೇರಿಸಿದ ಮೂಡಬಿದಿರೆಯ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವ ಮಾತನಾಡಿ, ಸೀತಾರಾಮ ರೈ ಸರಳ ಜೀವನ ನಡೆಸಿದವರು. ಸಮಾಜಕ್ಕೆ ಆದರ್ಶಪ್ರಾಯ ಬದುಕು ನಡೆಸುತ್ತಿರುವ ಅವರು ಎಲ್ಲರಿಗೂ ಮಾದರಿ ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ದ.ಕ. ಸಂಸದ ಕ್ಯಾ. ಬ್ರಿಜೇಶ್ ಚೌಟ, ಜಿಲ್ಲೆಯ ಎಲ್ಲರಿಗೂ ಈ ಕಾರ್ಯಕ್ರಮ ಪ್ರೇರಣೆ ಆಗಲಿ. ಧಾರ್ಮಿಕ,ಸಹಕಾರ, ಶಿಕ್ಷಣ ಕ್ಷೇತ್ರದಲ್ಲಿ ಅಪರೂಪದ ಸೇವಾ ಸಾಧಕ ಸೀತಾರಾಮ ರೈ ಎಂದರು. ವಿಕಸಿತ ಭಾರತದ ಸಂಕಲ್ಪಕ್ಕೆ ನಮ್ಮ ಜಿಲ್ಲೆಯ ಪ್ರತಿಯೊಬ್ಬರು ಕೊಡುಗೆ ನೀಡಬೇಕು ಎಂದರು.

ವಿವಾಹ ಮರು ಸೃಷ್ಟಿ

ಕುಟುಂಬಿಕರ ಸಮ್ಮುಖದಲ್ಲಿ ಡಾ. ಮೋಹನ್ ಆಳ್ವ ನೇತೃತ್ವದಲ್ಲಿ ಆಳ್ವಾಸ್ ಪ್ರತಿಷ್ಠಾನದಿಂದ ವಿವಾಹ ಕಾರ್ಯಕ್ರಮ ಮರು ಸೃಷ್ಟಿಸಿದ್ದು ವಿಶೇಷವಾಗಿತ್ತು.ದಂಪತಿ ಪರಸ್ಪರ ಹಾರ ಹಾಕಿದರು.

ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ, ಸೀತಾರಾಮ ರೈ ಅವರು ನಡೆದು ಬಂದ ದಾರಿ ಸಮಾಜಕ್ಕೆ ಮಾರ್ಗದರ್ಶನ. ಅವರು ದ.ಕ. ಜಿಲ್ಲೆಯ ಶಿಲ್ಪಿ. ಅವರು ನೂರು ವರ್ಷ ಸುಖದಿಂದ ಬಾಳಲಿ ಎಂದು ಹಾರೈಸಿದರು.

ಕೊಂಬೆಟ್ಟು ಸರಕಾರಿ ಜೂನಿಯರ್ ಕಾಲೇಜಿನ ಉಪನ್ಯಾಸಕಿ ಕಾವ್ಯ ಶೆಟ್ಟಿ ಅಭಿನಂದನಾ ನುಡಿಗಳನ್ನಾಡಿದರು.

ಸಾರ್ಥಕ ಜೀವನ

ಅಧ್ಯಕ್ಷತೆ ವಹಿಸಿದ ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಮಾತನಾಡಿ, 50 ದಿನ ದಾಂಪತ್ಯ ನಡೆಸಲು ಕಷ್ಟ ಪಡುವ ದಿನದಲ್ಲಿ 50 ವರ್ಷ ಸಾರ್ಥಕ ಜೀವನ ನಡೆಸಿದ ಸೀತಾರಾಮ ರೈ ದಂಪತಿ ಯುವ ಪೀಳಿಗೆಗೆ ಮಾದರಿ. ಇನ್ನಷ್ಟು ಸೇವೆ ಸಮಾಜಕ್ಕೆ ಅವರಿಂದ ಲಭಿಸಲಿ ಎಂದು ಆಶಿಸಿದರು.

ಸನ್ಮಾನ

ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್‌ನ ಸಂಸ್ಥಾಪಕ ಪಟ್ಲ ಸತೀಶ್ ಶೆಟ್ಟಿ, ಕಂಬಳ ಉದ್ಘೋಷಕ ಮತ್ತು ತೀರ್ಪುಗಾರರಾದ ಎಡ್ತೂರು ರಾಜೀವ್ ಶೆಟ್ಟಿ ಮತ್ತು ಕನ್ನಡ ಚಲನಚಿತ್ರ ರಂಗದ ನಿರ್ಮಾಪಕ ರವಿ ರೈ ಕಳಸ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಶಶಿಕಲಾ ಆಳ್ವ ಸನ್ಮಾನ ಪತ್ರ ವಾಚಿಸಿದರು.

ಸವಣೂರು ಸೀತಾರಾಮ ರೈ ಪ್ರಾಸ್ತಾವಿಕವಾಗಿ ಮಾತನಾಡಿ, ಸ್ವಾಗತಿಸಿದರು.

ಸೀತಾರಾಮ ರೈ ಅವರ ಪುತ್ರಿ ರಶ್ಮಿ ಎ. ಶೆಟ್ಟಿ ಮತ್ತು ಅಳಿಯ ಅಶ್ವಿನ್ ಎಲ್. ಶೆಟ್ಟಿ ಸವಣೂರು, ಸೊಸೆ ಪಲ್ಲವಿ ಎಂ. ರೈ ಮತ್ತು ಪುತ್ರ ಮಹೇಶ್ ರೈ ಸವಣೂರು, ಸೊಸೆ ಅಶ್ವಿತಾ ಆರ್. ರೈ ಮತ್ತು ಪುತ್ರ ಡಾ. ರಾಜೇಶ್ ರೈ ಸವಣೂರು ಸ್ವಾಮೀಜಿಗಳು ಹಾಗೂ ಅತಿಥಿಗಳನ್ನು ಗೌರವಿಸಿದರು.

ಪವಿತ್ರ ರೂಪೇಶ್ ಶೇಟ್ ಮತ್ತು ತಂಡ ಪ್ರಾರ್ಥಿಸಿದರು. ಎನ್. ಜಯಪ್ರಕಾಶ ರೈ ಚೊಕ್ಕಾಡಿ ವಂದಿಸಿದರು. ಚಂದ್ರಶೇಖರ್ ಮತ್ತು ಮಾಧವಿ ರೈ ಕಾರ್ಯಕ್ರಮ ನಿರ್ವಹಿಸಿದರು.

ಕೇರಳ ಸರಕಾರದಿಂದ ಸಿಲ್ವರ್ ಲೈನ್ ಯೋಜನೆ ರದ್ದು

ಕಾಸರಗೋಡು: ಕೇರಳದಲ್ಲಿ ವ್ಯಾಪಕ ಪ್ರತಿಭಟನೆಗಳಿಗೆ ಕಾರಣವಾಗಿದ್ದ ಸಿಲ್ವರ್ ಲೈನ್ ಹೈಸ್ಪೀಡ್ ರೈಲು ಯೋಜನೆಯನ್ನು (ಕೆ-ರೈಲ್) ಕೇರಳ ರಾಜ್ಯ ಸರಕಾರ ರದ್ದುಗೊಳಿಸಿದೆ. ಸಚಿವ ಸಂಪುಟ ಸಭೆಯ ಬಳಿಕ ಮುಖ್ಯಮಂತ್ರಿ ವಿ.ಡಿ.ಸತೀಶನ್ ಈ ಮಹತ್ವದ ನಿರ್ಧಾರವನ್ನು ಪ್ರಕಟಿಸಿದ್ದಾರೆ.

ಯೋಜನೆ ಅನುಷ್ಠಾನಕ್ಕೆ ಭೂಸ್ವಾಧೀನಕ್ಕೆ ಸಂಬಂಧಿಸಿದ ಅಧಿಸೂಚನೆಯನ್ನು ರದ್ದುಗೊಳಿಸಲು ನಿರ್ಧರಿಸಲಾಗಿದೆ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ. ಸಿಲ್ವರ್‌ಲೈನ್ ವಿರೋಧಿ ಪ್ರತಿಭಟನೆಗೆ ಸಂಬಂಧಿಸಿದ ಬಾಕಿ ಪ್ರಕರಣಗಳನ್ನು ಹಿಂತೆಗೆದುಕೊಳ್ಳುವ ಬಗ್ಗೆ ಗೃಹ ಇಲಾಖೆ ಪರಿಶೀಲನೆ ನಡೆಸಿ



ಶಿಫಾರಸು ಮಾಡಲಿದೆ. ಅಲ್ಲದೆ ಸಿಲ್ವರ್ ಲೈನ್ ಯೋಜನೆಗಾಗಿ ಸ್ಥಾಪಿಸಲಾಗಿರುವ ಹಳದಿ ಬ್ಲಾಕ್‌ಗಳನ್ನು ತೆಗೆದು ಹಾಕಲು ಕಂದಾಯ ಇಲಾಖೆಗೆ ಸೂಚಿಸಲಾಗಿದೆ ಎಂದು ಕೇರಳ ಮುಖ್ಯಮಂತ್ರಿ ಹೇಳಿದ್ದಾರೆ. ಎಡರಂಗ ಸರಕಾರ ಜಾರಿಗೆ ತರಲು ಉದ್ದೇಶಿಸಿದ್ದ ಸಿಲ್ವರ್‌ಲೈನ್ ಯೋಜನೆಯಿಂದ ಜನರಿಗೆ ತೊಂದರೆಯಾಗಿದೆ. ಸಮಸ್ಯೆಯನ್ನು ವೈಯಕ್ತಿಕವಾಗಿ ಅರ್ಥಮಾಡಿಕೊಂಡಿದ್ದೇನೆ. ಎಡರಂಗ ಸರಕಾರ ಯೋಜನೆಯನ್ನು ಕಾರ್ಯಗತಗೊಳಿಸದಿದ್ದರೂ ಅಧಿಸೂಚನೆಯನ್ನು ರದ್ದುಗೊಳಿಸದ ಕಾರಣ ಜನರಿಗೆ ತೊಂದರೆಯಾಗಿದೆ. ಜನಸಾಮಾನ್ಯರಿಗೆ ಹಲವು ವರ್ಷಗಳಿಂದ ತಮ್ಮ ಜಮೀನನ್ನು ಮಾರಾಟ ಮಾಡಲು, ಸಾಲ ಪಡೆಯಲು ಸಾಧ್ಯವಾಗುತ್ತಿಲ್ಲ. ನಾವು ಸಿಲ್ವರ್‌ಲೈನ್ ವಿರುದ್ಧ ಪ್ರತಿಭಟನೆ ನಡೆಸಿದ್ದೇವೆ. ಅದರ ಆಧಾರದ ಮೇಲೆ, ಒಂದು ಪ್ರಮುಖ ನಿರ್ಧಾರ ತೆಗೆದುಕೊಳ್ಳಲಾಗಿದೆ. ಕೇರಳಕ್ಕೆ ಆರ್ಥಿಕವಾಗಿ ತೊಂದರೆಯಾಗದ ಪರಿಸರ ಸ್ನೇಹಿ ಹೈಸ್ಪೀಡ್ ರೈಲು ಯೋಜನೆಯನ್ನು ಸರಕಾರ ವಿರೋಧಿಸುವುದಿಲ್ಲ. ಈ ವಿಷಯಗಳನ್ನು ಕೂಲಂಕಷವಾಗಿ ಪರಿಶೀಲಿಸಿ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ. ಯೋಜನೆ ರದ್ದುಗೊಳಿಸಿದ ಸರಕಾರದ ನಿರ್ಧಾರವನ್ನು ಸಿಲ್ವರ್‌ಲೈನ್ ಜನಕೀಯ ಸಮಿತಿಯು ಸ್ವಾಗತಿಸಿದೆ. ಪಿಣರಾಯಿ ವಿಜಯನ್ ಸರಕಾರವು ಸಿಲ್ವರ್‌ಲೈನ್ ಯೋಜನೆಗಾಗಿ ಅಡುಗೆ ಕೋಣೆ ಸಹಿತ ಮನೆಗಳ ಒಳಗಡೆ ಹಳದಿ ಬ್ಲಾಕ್‌ಗಳನ್ನು ಸ್ಥಾಪಿಸಿತ್ತು. ಆದರೆ ಕೇಂದ್ರ ಸರಕಾರದ ಅನುಮತಿ ಲಭಿಸಿರಲಿಲ್ಲ.

ಇಂದು ಮೆಗಾ ಜಲಧಾರೆ ಯೋಜನೆ ಉದ್ಘಾಟನೆ

ಮಂಗಳೂರು: ಸೀನಿಯರ್ ಛೇಂಬರ್ ಇಂಟರ್‌ನ್ಯಾಷನಲ್ ಮಂಗಳೂರು ಲೀಜನ್ ವತಿಯಿಂದ ಎಫ್.ಟಿ.ಆರ್ ಎಕ್ವಿಪ್ಮೆಂಟ್ಸ್ ಇಂಡಿಯಾ, ಪದವು ಆಟೋ ರಿಕ್ಷಾ ಚಾಲಕರ ಸಂಘ, ಮಂಗಳೂರು ಮಹಾನಗರ ಪಾಲಿಕೆ ಸಹಯೋಗದೊಂದಿಗೆ ಮೆಗಾ ಜಲಧಾರೆ ಯೋಜನೆ ನಗರದ ನಂತೂರು ಬಳಿಯ ಪದವು ಆಟೋ ರಿಕ್ಷಾ ನಿಲ್ದಾಣದಲ್ಲಿ ಮೇ 24ರಂದು ಬೆಳಗ್ಗೆ 10.30ಕ್ಕೆ ಉದ್ಘಾಟನೆಗೊಳ್ಳಲಿದೆ.

ಮಾಜಿ ಕಾರ್ಪೊರೇಟರ್ ಶಕೀಲಾ ಕಾವ ಉದ್ಘಾಟಿಸುವರು. ಎಸ್.ಸಿ.ಐ. ಫೌಂಡೇಶನ್ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಡಾ. ಕೇದಿಗೆ ಅರವಿಂದ ರಾವ್ ಮುಖ್ಯ ಅತಿಥಿಯಾಗಿ ಭಾಗವಹಿಸುವರು. ಎಸ್.ಸಿ.ಐ ಮಂಗಳೂರು ಲೀಜನ್ ವಲಯ ಸಿ. ಅಧ್ಯಕ್ಷ ಹರೀಶ ಎ.ಅಧ್ಯಕ್ಷತೆ ವಹಿಸುವರು. ಎಫ್.ಟಿ.ಆರ್ ಎಕ್ವಿಪ್ಮೆಂಟ್ಸ್ ಇಂಡಿಯಾ ಮಾಲೀಕ ಮುರಳೀಧರ್ ಆಚಾರ್ಯ, ಪದವು ಆಟೋ ರಿಕ್ಷಾ ನಿಲ್ದಾಣ ಅಧ್ಯಕ್ಷ ಜಯ ಕುಮಾರ್ ನಂತೂರು ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.

ಆಧುನಿಕ ಬ್ಯಾಂಕಿಂಗ್ ಸೇವೆಯಲ್ಲಿ ಎಸ್‌ಸಿಡಿಸಿಸಿ ಬ್ಯಾಂಕ್ ಮುಂಚೂಣಿಯಲ್ಲಿ

ಮಂಗಳೂರು: ಅತ್ಯಾಧುನಿಕ ತಂತ್ರಜ್ಞಾನ ಅಳವಡಿಕೆ, ಗ್ರಾಹಕ ಸ್ನೇಹಿ ಸೇವೆಗಳು ಹಾಗೂ ಸಿಬ್ಬಂದಿಗಳ ಸಮರ್ಪಿತ ಕಾರ್ಯನಿರ್ವಹಣೆಯ ಮೂಲಕ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ (ಎಸ್‌ಸಿಡಿಸಿಸಿ ಬ್ಯಾಂಕ್) ಸಹಕಾರಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆ ಮಾಡಿದೆ ಎಂದು ಬ್ಯಾಂಕಿನ ಅಧ್ಯಕ್ಷ ಸಹಕಾರ ರತ್ನ ಡಾ. ಎಂ.ಎನ್. ರಾಜೇಂದ್ರ ಕುಮಾರ್ ಹೇಳಿದರು.

ನಗರದ ಬ್ಯಾಂಕ್ ಸಭಾಂಗಣದಲ್ಲಿ ಶನಿವಾರ ನಡೆದ ಬ್ಯಾಂಕಿನ ಸಿಬ್ಬಂದಿಗಳಿಗೆ ಗಿಫ್ಟ್ ಕೂಪನ್ ವಿತರಣೆ ಹಾಗೂ ವಿವಿಧ ವಿಭಾಗಗಳಲ್ಲಿ ಸಾಧನೆಗೈದ ಶಾಖಾ ವ್ಯವಸ್ಥಾಪಕರು ಮತ್ತು ಸಿಬ್ಬಂದಿಗಳನ್ನು ಸನ್ಮಾನಿಸುವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.



ಡಾ. ಎಂ.ಎನ್. ರಾಜೇಂದ್ರ ಕುಮಾರ್ ಗಿಫ್ಟ್ ಕೂಪನ್ ವಿತರಿಸಿದರು.

ಎಸ್‌ಸಿಡಿಸಿಸಿ ಬ್ಯಾಂಕ್ ರಾಜ್ಯದ ಸಹಕಾರಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಮಾದರಿ ಸಂಸ್ಥೆಯಾಗಿ ಹೊರಹೊಮ್ಮಿದ್ದು, ಮುಂದಿನ ದಿನಗಳಲ್ಲಿ ಠೇವಣಿ ಸಂಗ್ರಹಣೆ, ಸಾಲ ವಿತರಣೆ ಹಾಗೂ ಸಾಲ ಮರುಪಾವತಿ ಕ್ಷೇತ್ರಗಳಲ್ಲಿ ಇನ್ನಷ್ಟು ಸಾಧನೆ ಮಾಡಿ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್‌ಗೆ ಸಮಾನವಾಗಿ ಬೆಳೆಯುವ ಗುರಿ ಹೊಂದಿದೆ ಎಂದು ಅವರು ತಿಳಿಸಿದರು.

ಬ್ಯಾಂಕಿನ 113 ಶಾಖೆಗಳಲ್ಲಿ ಅತ್ಯಾಧುನಿಕ ಕೋರ್ ಬ್ಯಾಂಕಿಂಗ್ ವ್ಯವಸ್ಥೆಯನ್ನು ಅಳವಡಿಸಲಾಗಿದ್ದು, ಗ್ರಾಮೀಣ ಹಾಗೂ ನಗರ ಪ್ರದೇಶದ ಗ್ರಾಹಕರಿಗೆ ವೇಗವಾದ, ಸುರಕ್ಷಿತ ಮತ್ತು ವಿಶ್ವಾಸಾರ್ಹ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸಲಾಗುತ್ತಿದೆ. ಗ್ರಾಹಕರ ವಿಶ್ವಾಸ ಹಾಗೂ ಸಿಬ್ಬಂದಿಗಳ ಪರಿಶ್ರಮದಿಂದ ಬ್ಯಾಂಕ್ ರಾಷ್ಟ್ರಮಟ್ಟದಲ್ಲೂ ಗುರುತಿಸಿಕೊಂಡಿದೆ ಎಂದು ಹೇಳಿದರು.

ಸತತ ಐದನೇ ಬಾರಿ ಎಪಿವೈ ರಾಷ್ಟ್ರೀಯ ಪ್ರಶಸ್ತಿ

ಭಾರತ ಸರ್ಕಾರದ ಮಹತ್ವಾಕಾಂಕ್ಷೆಯ 'ಅಟಲ್ ಪಿಂಚಣಿ ಯೋಜನೆ (ಎಪಿವೈ)'ಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿರುವ ಹಿನ್ನೆಲೆಯಲ್ಲಿ ಬ್ಯಾಂಕ್‌ಗೆ ಸತತ ಐದು ವರ್ಷಗಳ ಕಾಲ (2021–22ರಿಂದ 2025–26ರವರೆಗೆ) ಪ್ರತಿಷ್ಠಿತ 'ಎಪಿವೈ ರಾಷ್ಟ್ರೀಯ ಪ್ರಶಸ್ತಿ' ಲಭಿಸಿರುವುದು ಸಿಬ್ಬಂದಿಗಳ ಪ್ರಾಮಾಣಿಕ ಸೇವೆಗೆ ಸಾಕ್ಷಿಯಾಗಿದೆ ಎಂದು ಡಾ. ರಾಜೇಂದ್ರ ಕುಮಾರ್ ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಬ್ಯಾಂಕಿನ ಸಿಬ್ಬಂದಿಗಳ ಪರವಾಗಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ. ಗೋಪಾಲಕೃಷ್ಣ ಭಟ್ ಹಾಗೂ ಮಹಾಪ್ರಬಂಧಕ ಸುನಿಲ್ ಕುಮಾರ್ ಹೊಳ್ಳ ಅವರು ಅಧ್ಯಕ್ಷರಿಂದ ರೂ.10,000 ಮೌಲ್ಯದ ಗಿಫ್ಟ್ ಕೂಪನ್ ಸ್ವೀಕರಿಸಿದರು. 2025–26ನೇ ಸಾಲಿನಲ್ಲಿ ತಾಲೂಕು ಮಟ್ಟದಲ್ಲಿ ಸಮಗ್ರ ಸಾಧನೆ ತೋರಿದ ಶಾಖಾ ವ್ಯವಸ್ಥಾಪಕರು, ವೈಯಕ್ತಿಕ ಠೇವಣಿ ಸಂಗ್ರಹಣೆ, ನೇರ ಸಾಲ ವಿತರಣೆ ಹಾಗೂ ಅನುತ್ಪಾದಕ ಸಾಲದ ಪ್ರಮಾಣವನ್ನು ಶೂನ್ಯ ಮಟ್ಟಕ್ಕೆ ತರುವಲ್ಲಿ ಸಾಧನೆಗೈದ ಸಿಬ್ಬಂದಿಗಳನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಬ್ಯಾಂಕಿನ ಉಪಾಧ್ಯಕ್ಷ ವಿನಯಕುಮಾರ್ ಸೂರಿಂಜೆ, ನಿರ್ದೇಶಕರಾದ ಭಾಸ್ಕರ್ ಎಸ್. ಕೋಟ್ಯಾನ್, ಎಂ. ವಾದಿರಾಜ ಶೆಟ್ಟಿ, ಶಶಿಕುಮಾರ್ ರೈ ಬಾಲ್ಯೊಟ್ಟು, ದೇವಿಪ್ರಸಾದ್ ಶೆಟ್ಟಿ ಬೆಳಪು, ಸದಾಶಿವ ಉಳ್ಳಾಲ್, ಎಸ್.ಬಿ. ಜಯರಾಮ್ ರೈ, ಎಂ. ಮಹೇಶ್ ಹೆಗ್ಡೆ, ಅಶೋಕ್ ಕುಮಾರ್ ಶೆಟ್ಟಿ, ಮೋನಪ್ಪ ಶೆಟ್ಟಿ ಎಕ್ಕಾರು, ಜೈರಾಜ್ ಬಿ. ರೈ, ರಾಜೇಶ್ ರಾವ್, ಎಸ್.ಎನ್. ಮನ್ಮಥ ಹಾಗೂ ಕುಶಾಲಪ್ಪ ಗೌಡ ಉಪಸ್ಥಿತರಿದ್ದರು. ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ. ಗೋಪಾಲಕೃಷ್ಣ ಭಟ್ ಸ್ವಾಗತಿಸಿದರು. ಮಹಾಪ್ರಬಂಧಕ ಸುನಿಲ್ ಕುಮಾರ್ ಹೊಳ್ಳ ವಂದಿಸಿದರು. ರಾಜೀವ್ ಕೆ. ಕಾರ್ಯಕ್ರಮ ನಿರೂಪಿಸಿದರು.

ಡಿಜಿಟಲ್ ಸೇವೆಗಳಿಗೆ ಹೆಚ್ಚಿನ ಒತ್ತು

ಗ್ರಾಹಕರ ಅನುಕೂಲಕ್ಕಾಗಿ ಬ್ಯಾಂಕ್ ವಿವಿಧ ರೀತಿಯ ಸಾಲ ಸೌಲಭ್ಯಗಳು, ಠೇವಣಿಗಳ ಮೇಲೆ ಆಕರ್ಷಕ ಬಡ್ಡಿದರ, ಸುರಕ್ಷಿತ ಲಾಕರ್ ವ್ಯವಸ್ಥೆ, ಆರ್‌ಟಿಜಿಎಸ್ / ನೆಫ್ಟ್ ಸೇರಿದಂತೆ ಸಂಪೂರ್ಣ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸುತ್ತಿದೆ. ಜೊತೆಗೆ ಯುಪಿಐ ಮತ್ತು ಐಎಂಪಿಎಸ್ ಸೇವೆಗಳ ಪರಿಚಯದ ಮೂಲಕ ಡಿಜಿಟಲ್ ಬ್ಯಾಂಕಿಂಗ್ ವ್ಯವಸ್ಥೆ ಯನ್ನು ಮತ್ತಷ್ಟು ಬಲಪಡಿಸಲಾಗಿದೆ ಎಂದು ತಿಳಿಸಿದರು. ಬ್ಯಾಂಕಿನ ವಿವಿಧ ಯೋಜನೆಗಳು ಹಾಗೂ ಸೇವೆಗಳ ಕುರಿತು ಸಿಬ್ಬಂದಿಗಳು ಗ್ರಾಹಕರಿಗೆ ಸಮರ್ಪಕ ಮಾಹಿತಿ ನೀಡಬೇಕು. ಇದರಿಂದ ಗ್ರಾಹಕರೊಂದಿಗೆ ಉತ್ತಮ ಬಾಂಧವ್ಯ ಬೆಳೆದು ಬ್ಯಾಂಕಿನ ಅಭಿವೃದ್ಧಿಗೂ ನೆರವಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

4.26 ಕೋಟಿ ಫಲಾನುಭವಿಗಳಿಗೆ ಆಹಾರ ಭದ್ರತೆ । 'ಹಸಿವು ಮುಕ್ತ ಕರ್ನಾಟಕ'ದ ಕನಸು ನನಸು

ದಾಸೋಹ ಪರಂಪರೆಯ ಆಧುನಿಕ ರೂಪ ಅನ್ನಭಾಗ್ಯ

ಗ್ಯಾರಂಟಿ ವಾರ್ತೆ

ಬೆಂಗಳೂರು: 'ಆಶೆ ಇಚ್ಚೆಗೆನ್ನ ಗಾಸಿ ಮಾಡದಿರಯ್ಯಾ, ದಾಸೋಹಿಯಾಗಿರ್ಪ ದಾಸನಾಗಿರಿಸೆನ್ನ ಕೂಡಲಸಂಗಮದೇವಾ, ನಿಮ್ಮ ಧರ್ಮ'– ಜಗಜ್ಯೋತಿ ಬಸವಣ್ಣನವರ ಈ ಅಮರ ವಚನದ ಸಾಲುಗಳು ಮನುಷ್ಯನಲ್ಲಿರಬೇಕಾದ ಕರುಣೆ ಮತ್ತು ದಾಸೋಹದ ನಿಜವಾದ ಪರಿಕಲ್ಪನೆಯನ್ನು ಎತ್ತಿಹಿಡಿಯುತ್ತವೆ. ಶರಣರ ಈ ಕಲ್ಯಾಣದ ಆಶಯವೇ ಕರ್ನಾಟಕ ಸರ್ಕಾರದ 'ಅನ್ನಭಾಗ್ಯ' ಯೋಜನೆಯಾಗಿ ನಾಡಿನಲ್ಲಿ ಸಾಕಾರಗೊಂಡಿದೆ. 2023ರಲ್ಲಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಪ್ರಕಟಿಸಿದ ಪಂಚ ಗ್ಯಾರಂಟಿ ಯೋಜನೆಗಳಲ್ಲಿ 'ಅನ್ನಭಾಗ್ಯ' ಅತ್ಯಂತ ಪ್ರಮುಖ ಹಾಗೂ ತಳಮಟ್ಟದ ಜನರನ್ನು ತಲುಪಿದ ಯೋಜನೆಯಾಗಿ ಯಶಸ್ಸನ್ನೂ ಸಾಧಿಸಿದೆ.

ರಾಜ್ಯದ ಬಡತನ ರೇಖೆಗಿಂತ ಕೆಳಗಿರುವ (BPL) ಮತ್ತು ಅಂತ್ಯೋದಯ ಕಾರ್ಡ್ ಹೊಂದಿರುವ ಕುಟುಂಬಗಳ ಪ್ರತಿಯೊಬ್ಬ ಸದಸ್ಯನಿಗೆ ತಿಂಗಳಿಗೆ ಒಟ್ಟು 10 ಕೆಜಿ ಆಹಾರ ಧಾನ್ಯವನ್ನು ನೀಡುವ ಉದ್ದೇಶದೊಂದಿಗೆ ಈ ಯೋಜನೆಗೆ ಚಾಲನೆ ನೀಡಲಾಗಿತ್ತು. ಕೇಂದ್ರ ಸರ್ಕಾರವು ಬೇಡಿಕೆಯಷ್ಟು ಅಕ್ಕಿಯನ್ನು ಪೂರೈಸಲು ವಿಫಲವಾದಾಗ, ರಾಜ್ಯ ಸರ್ಕಾರವು ಕೈಕಟ್ಟಿ ಕೂರದೆ, ಹೆಚ್ಚುವರಿಯಾಗಿ ಘೋಷಿಸಿದ 5 ಕೆಜಿ ಅಕ್ಕಿಯ ಬದಲಾಗಿ, ಪ್ರತಿ ಕೆಜಿಗೆ 34 ರೂಪಾಯಿಯಂತೆ 2024ರ ಡಿಸೆಂಬರ್‌ವರೆಗೆ ಫಲಾನುಭವಿಗಳ ಬ್ಯಾಂಕ್ ಖಾತೆಗೆ 11,821 ಕೋಟಿ ರೂ. ನೇರವಾಗಿ ನಗದು ವರ್ಗಾವಣೆ (Direct Benefit Transfer - DBT) ಮಾಡುವ ಮೂಲಕ 'ನುಡಿದಂತೆ ನಡೆದ ಸರ್ಕಾರ' ಎಂಬ ಘೋಷವಾಕ್ಯವನ್ನು ಉಳಿಸಿಕೊಂಡಿತ್ತು. ಕಳೆದ ಮೂರು ವರ್ಷಗಳಲ್ಲಿ 4.26 ಕೋಟಿ ಬಡ ಕುಟುಂಬಗಳ ಹಸಿವು ನೀಗಿಸಿರುವ 'ಅನ್ನಭಾಗ್ಯ'ವು, ಮುಖ್ಯಮಂತ್ರಿ ಸಿದ್ದರಾಮಯ್ಯನವರ 'ಹಸಿವು ಮುಕ್ತ ಕರ್ನಾಟಕ'ದ ಕನಸನ್ನು ನನಸಾಗಿಸಿದೆ.



ದಿನಗೂಲಿ ನೌಕರರು, ಆಟೋ ಚಾಲಕರು, ಕೃಷಿ ಕಾರ್ಮಿಕರು ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಕುಟುಂಬಗಳಿಗೆ ಅನ್ನಭಾಗ್ಯ ಯೋಜನೆಯಿಂದಾಗಿ ಪ್ರತಿ ತಿಂಗಳು ಆಹಾರಕ್ಕಾಗಿ ವ್ಯಯಿಸುತ್ತಿದ್ದ ಸಾವಿರಾರು ರೂಪಾಯಿಗಳು ಉಳಿತಾಯವಾಗುತ್ತಿವೆ. ಒಂದು ವರ್ಷಗಳವರೆಗೆ ಬ್ಯಾಂಕ್ ಖಾತೆಗೆ ನೇರವಾಗಿ ಜಮೆಯಾದ ನಗದು ಹಣವನ್ನು ಬಡ ಕುಟುಂಬಗಳು ಬೇಳೆಕಾಳು, ಎಣ್ಣೆ, ತರಕಾರಿ ಸೇರಿದಂತೆ ಇನ್ನಿತರ ಪೌಷ್ಟಿಕ ಆಹಾರ ಪದಾರ್ಥಗಳ ಖರೀದಿಗೆ ಹಾಗೂ ಮಕ್ಕಳ ವಿದ್ಯಾಭ್ಯಾಸದ ಖರ್ಚಿಗೆ ಬಳಸಿಕೊಂಡಿದ್ದಾರೆ. ಈ ಯೋಜನೆಯು ರಾಜ್ಯದಲ್ಲಿ ಅಪೌಷ್ಟಿಕತೆಯನ್ನು ನಿವಾರಿಸುವಲ್ಲಿ ಮತ್ತು ಗ್ರಾಮೀಣ ಭಾಗದ ಆರ್ಥಿಕತೆಗೆ ಚೇತರಿಕೆ ನೀಡುವಲ್ಲಿ ಕ್ರಾಂತಿಕಾರಿ ಬದಲಾವಣೆ ತಂದಿದೆ.



ಕೋಟ್ಯಂತರ ಫಲಾನುಭವಿಗಳು: ಸರ್ಕಾರದ ಅಂಕಿ–ಅಂಶಗಳ ಪ್ರಕಾರ, ಅನ್ನಭಾಗ್ಯ ಯೋಜನೆಯಡಿ ರಾಜ್ಯದ 4.26 ಕೋಟಿಗೂ ಅಧಿಕ ಫಲಾನುಭವಿಗಳು ನಿರಂತರವಾಗಿ ಈ ಯೋಜನೆಯ ಪ್ರಯೋಜನ ಪಡೆಯುತ್ತಿದ್ದಾರೆ. 2023– 24ರವರೆಗೆ ಡಿಬಿಟಿಯಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನು ನೇರವಾಗಿ ಬಡವರ ಖಾತೆಗೆ ವರ್ಗಾಯಿಸುವ ಮೂಲಕ ಪಾರದರ್ಶಕತೆಯನ್ನು ಕಾಯ್ದುಕೊಂಡಿದೆ. ಪಡಿತರ ವಿತರಣಾ ವ್ಯವಸ್ಥೆಯನ್ನು (PDS) ಇನ್ನಷ್ಟು ಬಲಪಡಿಸಲಾಗಿದ್ದು, ಯಾವುದೇ ಸೋರಿಕೆಯಿಲ್ಲದೆ ಅರ್ಹರಿಗೆ ಸೌಲಭ್ಯ ತಲುಪುವಂತೆ ತಂತ್ರಜ್ಞಾನವನ್ನು ಯಶಸ್ವಿಯಾಗಿ ಬಳಸಿಕೊಳ್ಳಲಾಗಿದೆ.

ದೇಶದಲ್ಲೇ ಮಾದರಿ: ಕರ್ನಾಟಕದ 'ಅನ್ನಭಾಗ್ಯ' ಯೋಜನೆಯು ಕೇವಲ ಉಚಿತ ಪಡಿತರ ನೀಡುವುದಕ್ಕೆ ಸೀಮಿತವಾಗಿರದೆ, ಬಡವರ ಆಹಾರದ ಹಕ್ಕನ್ನು ಎತ್ತಿಹಿಡಿದಿದೆ. ದೇಶದ ಯಾವುದೇ ರಾಜ್ಯದಲ್ಲೂ ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ಉಚಿತ ಆಹಾರ ಧಾನ್ಯ ಮತ್ತು ನಗದು ವರ್ಗಾವಣೆಯ ಸೌಲಭ್ಯವನ್ನು ನೀಡಿದ ಉದಾಹರಣೆಯಿಲ್ಲ. ಕರ್ನಾಟಕದ ಈ ಹಸಿವು ಮುಕ್ತ ಮತ್ತು ಪೌಷ್ಟಿಕ ಭದ್ರತೆಯ ಮಾದರಿಯನ್ನು ಇಂದು ದೇಶದ ಇತರೆ ರಾಜ್ಯಗಳು ಹಾಗೂ ಸಾಮಾಜಿಕ ತಜ್ಞರು ಮುಕ್ತಕಂಠದಿಂದ ಶ್ಲಾಘಿಸುತ್ತಿದ್ದಾರೆ.

'ಇಂದಿರಾ ಕಿಟ್' ಶೀಘ್ರ ಅನುಷ್ಠಾನ

'ಅನ್ನಭಾಗ್ಯ' ಯೋಜನೆಯಡಿ ಹೆಚ್ಚುವರಿ 5 ಕೆ.ಜಿ ಅಕ್ಕಿ ಬದಲಾಗಿ 'ಇಂದಿರಾ' (Integrated Nutrition And Dietary Initiative for Revitalizing Annabhagya Beneficiaries) ಆಹಾರ ಕಿಟ್ ವಿತರಿಸುವ ಕುರಿತು ಈಗಾಗಲೇ ಸಂಪುಟದಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. ಈ ಯೋಜನೆಯಡಿ ಕುಟುಂಬದ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಐದು ಕೆಜಿ ಅಕ್ಕಿ ಬದಲಾಗಿ ತೊಗರಿ ಬೇಳೆ, ಸೂರ್ಯಕಾಂತಿ ಎಣ್ಣೆ, ಸಕ್ಕರೆ, ಉಪ್ಪು ನೀಡಲಾಗುವುದು. ಇದಕ್ಕಾಗಿ ಪ್ರತಿ ತಿಂಗಳು ಒಟ್ಟು 18,628 ಮೆ.ಟನ್ ತೊಗರಿ ಬೇಳೆ ಮತ್ತು ತಲಾ 12,419 ಮೆ.ಟನ್ ಸೂರ್ಯಕಾಂತಿ ಎಣ್ಣೆ,

ಕಿರುಸುದ್ದಿ

ಮೇ 25ಕ್ಕೆ ನೀಲಾವರದಲ್ಲಿ ಪೇಜಾವರ ಶ್ರೀ ವಿಶ್ವೇಶತೀರ್ಥರ ಕಂಚಿನ ಪುತ್ಥಳಿ ಲೋಕಾರ್ಪಣೆ

ಉಡುಪಿ: ಯತಿಕುಲ ಚಕ್ರವರ್ತಿ, ಪದ್ಮವಿಭೂಷಣ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರ ಪಾವನ ಸ್ಮರಣಾರ್ಥ ನಿರ್ಮಿಸಲಾಗಿರುವ ಭವ್ಯ 'ಸ್ಮೃತಿವನ' ಹಾಗೂ ಶ್ರೀಪಾದರ ಕಂಚಿನ ಪುತ್ಥಳಿಯ ಉದ್ಘಾಟನಾ ಸಮಾರಂಭವು ಮೇ 25ರ ಸೋಮವಾರದಂದು ಜರುಗಲಿದೆ. ಉಡುಪಿ ಶ್ರೀ ಪೇಜಾವರ ಮಠ ಹಾಗೂ ಅರಣ್ಯ ಇಲಾಖೆ ಉಡುಪಿ ಇವುಗಳ ಜಂಟಿ ಆಶ್ರಯದಲ್ಲಿ ಈ ಮಹತ್ವದ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.ಉಡುಪಿಯ ನೀಲಾವರ ಗೋಶಾಲೆಯ ಮುಂಭಾಗದಲ್ಲಿ ನಿರ್ಮಾಣಗೊಂಡಿರುವ ಈ ಸ್ಮೃತಿವನವು ಸೋಮವಾರ ಸಂಜೆ 4.30 ಕ್ಕೆ ಲೋಕಾರ್ಪಣೆಗೊಳ್ಳಲಿದೆ. ಪ್ರಸ್ತುತ ಪೇಜಾವರ ಸ್ವಾಮೀಜಿ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದರ ದಿವ್ಯ ಆದೇಶ ಹಾಗೂ ಮಾರ್ಗದರ್ಶನದನ್ವಯ ಈ ಭವ್ಯ ಸ್ಮಾರಕ ನಿರ್ಮಾಣವಾಗಿದೆ.

ಕಾಲು ಜಾರಿ ನದಿಗೆ ಬಿದ್ದು ಮಹಿಳೆ ಸಾವು

ಬ್ರಹ್ಮಾವರ: ಆಕಸ್ಮಿಕವಾಗಿ ಕಾಲು ಜಾರಿ ನದಿಗೆ ಬಿದ್ದು ಮಹಿಳೆಯೊಬ್ಬರು ಮೃತಪಟ್ಟ ಘಟನೆ ಹಂದಾಡಿ ಗ್ರಾಮದ, ಬೆಣ್ಣೆಕುದ್ರು ಎಂಬಲ್ಲಿ ನಡೆದಿದೆ. ಮೃತರನ್ನು ಹಂದಾಡಿ ಗ್ರಾಮದ ಮೀನಾಕ್ಷಿ (65) ಎಂದು ಗುರುತಿಸಲಾಗಿದೆ. ಇವರು ಮೇ 19ರಂದು ಮನೆಯಿಂದ ಹೋದವರು ನಾಪತ್ತೆಯಾಗಿದ್ದು, ಹುಡುಕಾಡಿದಾಗ ಇವರ ಮೃತದೇಹ ಮೇ 22ರಂದು ಬೆಳಗ್ಗೆ ಬೆಣ್ಣೆಕುದ್ರು ಸೀತಾನದಿಯ ತೀರದಲ್ಲಿ ಪತ್ತೆಯಾಗಿದೆ. ಮನೆ ಬಿಟ್ಟು ನದಿಯ ತಟಕ್ಕೆ ಹೋದ ಇವರು, ಆಕಸ್ಮಿಕವಾಗಿ ಕಾಲು ಜಾರಿ ನೀರಿಗೆ ಬಿದ್ದು ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ. ಈ ಬಗ್ಗೆ ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿಎಸ್‌ಎನ್‌ಎಲ್ ಟೆಲಿಫೋನ್ ಎಕ್ಸ್‌ಚೇಂಜಿನಲ್ಲಿ ಎರಡು ಬಾರಿ ಕಳವು

ಬಂಟ್ವಾಳ: ತಾಲೂಕಿನ ಕಾವಳಪಡೂರು ಗ್ರಾಮದ ವಗ್ಗದಲ್ಲಿರುವ ಬಿಎಸ್‌ಎನ್‌ಎಲ್ ಟೆಲಿಫೋನ್ ಎಕ್ಸ್‌ಚೇಂಜಿನ ಶಟರ್‌ನ ಬೀಗ ಒಡೆದು ಒಳನುಗ್ಗಿರುವ ಕಳ್ಳರು ಬ್ಯಾಟರಿ, ಕೇಬಲ್ ಹಾಗೂ ಪ್ಲೇಟ್‌ಗಳನ್ನು ಕಳವುಗೈದಿರುವ ಬಗ್ಗೆ ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬಿ.ಸಿ. ರೋಡಿನ ಬಿಎಸ್‌ಎನ್ ಎಲ್ ಜ್ಯೂನಿಯರ್ ಟೆಲಿಕಾಂ ಆಫೀಸರ್ ಸುದರ್ಶನ್ ಕೆ. ಅವರು ಪೊಲೀಸರಿಗೆ ದೂರು ನೀಡಿದ್ದು, ಮೇ 16 ರಂದು ಮಧ್ಯರಾತ್ರಿ ಸುಮಾರು 1.19ರ ವೇಳೆಗೆ ಕಾವಳಪಡೂರು ಗ್ರಾಮದ ವಗ್ಗದಲ್ಲಿರುವ ಟವರ್ ಆಫ್ ಆಗಿರುವ ಬಗ್ಗೆ ಮೊಬೈಲ್ ಆ್ಯಪ್ ಮೂಲಕ ಮಾಹಿತಿ ಬಂದಿದ್ದು, ಬೆಳಿಗ್ಗೆ 8 ಗಂಟೆಗೆ ಮಾಹಿತಿ ಗಮನಿಸಿ ಟೆಕ್ನಿಶಿಯನ್ ತಿಮ್ಮಪ್ಪ ಅವರನ್ನು ಸ್ಥಳಕ್ಕೆ ಕಳುಹಿಸಿರುವುದಾಗಿ ತಿಳಿಸಿದ್ದಾರೆ. ಟೆಕ್ನೆಶೀಷಿಯನ್ ಸ್ಥಳಕ್ಕೆ ತೆರಳಿ ಪರಿಶೀಲಿಸಿದಾಗ ಟೆಲಿಫೋನ್ ಎಕ್ಸ್ ಚೇಂಜಿನ ಶಟರ್ ಬೀಗ ಮುರಿದು ಒಳನುಗ್ಗಿದ ಕಳ್ಳರು ಬ್ಯಾಟರಿ ಜೋಡಣೆಗೆ ಬಳಸಲಾಗಿದ್ದ ಸುಮಾರು 2,0 ಸಾ.ರೂ. ಮೌಲ್ಯದ 40 ಮೀಟರ್ ಉದ್ದ ತಾಮ್ರದ ಕೇಬಲ್ ಕಳವು ಮಾಡಿರುವುದು ಬೆಳಕಿಗೆ ಬಂದಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಇದಾದ ಬಳಿಕ ಎಕ್ಸ್‌ಚೇಂಜಿಗೆ ಹೊಸ ಬೀಗ ಹಾಕಲಾಗಿದ್ದು, ಮೇ 18 ರಂದು ಬೆಳಿಗ್ಗೆ 10.30 ಗಂಟೆಗೆ ಎಜಿಎಂ ಸ್ನೇಹ ಹಾಗೂ ಟೆಕ್ನಿಶಿಯನ್ ತಿಮ್ಮಪ್ಪ ಅವರು ಮತ್ತೆ ಎಕ್ಸ್ ಚೇಂಜಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದಾಗ ಅಲ್ಲಿನ ಕಿಟಕಿಯ ಗಾಜುಗಳನ್ನು ಪುಡಿಗೈದು ಒಳನುಗ್ಗಿರುವ ಕಳ್ಳರು 35 ಸಾವಿರ ರೂಪಾಯಿ ಮೌಲ್ಯದ 600 ಎ ಎಚ್ ಸಾಮರ್ಥ್ಯದ 4 ಎಕ್ಸ್‌ಚೇಂಜ್ ಬ್ಯಾಟರಿಗಳನ್ನು ಹಾಗೂ ಸುಮಾರು 20ಸಾ. ರೂ. ಮೌಲ್ಯದ ಪ್ಲೇಟ್‌ಗಳನ್ನು ಕಳವು ಮಾಡಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.
ಮೇ 16 ರಿಂದ ಮೇ 18 ರ ನಡುವಿನ ಅವಧಿಯಲ್ಲಿ ಸುಮಾರು 62 ಸಾವಿರ ರೂಪಾಯಿ ಮೌಲ್ಯದ ಬ್ಯಾಟರಿ, ತಾಮ್ರದ ಕೇಬಲ್ ಹಾಗೂ ಪ್ಲೇಟ್‌ಗಳನ್ನು ಕಳವು ಮಾಡಲಾಗಿದೆ ಎಂದು ಸುದರ್ಶನ್ ಅವರು ನೀಡಿದ ದೂರಿನ ಮೇರೆಗೆ ಈ ಬಗ್ಗೆ ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯಾರ್ಥಿನಿ ಶವ ಪತ್ತೆ

ಕಾಸರಗೋಡು: ಆಯುರ್ವೇದ ವಿದ್ಯಾರ್ಥಿನಿ ಮನೆಯ ಬೆಡ್‌ರೂಮ್‌ನಲ್ಲಿ ನೇಣು ಬಿಗಿದು ಸಾವಿಗೀಡಾದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾಳೆ. ವೆಳ್ಳರಿಕುಂಡ್ ಪೊಲೀಸ್ ಠಾಣೆ ವ್ಯಾಪ್ತಿಯ ಮಾಲೋಮ್ ವಲಯ ಪಾಮತಟ್ ತುಂಬೆ ಮಠ ನಿವಾಸಿ ಬಿನೀಶ್ ಎಂಬವರ ಪುತ್ರಿ ಟಿ.ವಿ. ಆರ್ಯ (18) ಸಾವಿಗೀಡಾದವಳು. ಶುಕ್ರವಾರ ರಾತ್ರಿ 7.30ರ ವೇಳೆಗೆ ಆರ್ಯ ಬೆಡ್‌ರೂಮ್‌ನಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದಳು. ಯುವತಿ ನೇಣಿಗೆ ಶರಣಾಗಲು ಕಾರಣವೇನೆಂದು ತಿಳಿದು ಬಂದಿಲ್ಲ.





ಆಂಧ್ರ ರಾಜ್ಯಪಾಲರಿಂದ ಪ್ರತಿಷ್ಠಿತ ಲ್ಯಾಂಡ್ ಲಿಂಕ್ಸ್ ಸಂಸ್ಥೆಯ ನಾಲ್ಕು ಭವ್ಯ ಸಭಾಭವನ ಲೋಕಾರ್ಪಣೆ

ಪಾಲೆಮಾರ್ ಕಳಕಳಿ ಅನನ್ಯ: ನ್ಯಾ.ನಜೀರ್

ಮಂಗಳೂರು: ಕರಾವಳಿಯ ಹೆಮ್ಮೆಯ ಹಾಗೂ ಅತ್ಯಂತ ಪ್ರತಿಷ್ಠಿತ ರಿಯಲ್ ಎಸ್ಟೇಟ್ ಸಂಸ್ಥೆಯಾದ ಲ್ಯಾಂಡ್ ಲಿಂಕ್ಸ್ ಸಂಸ್ಥೆ ಮಂಗಳೂರಿನ ಪ್ರಮುಖ ನಾಲ್ಕು ಸ್ಥಳಗಳಲ್ಲಿ ನಿರ್ಮಿಸಿದ ಅತ್ಯಾಧುನಿಕ ಸೌಲಭ್ಯಗಳನ್ನೊಳಗೊಂಡ, ನಾಡಿನ ಜನತೆಗೆ ಯೋಗ್ಯವಾದ ನಾಲ್ಕು ಭವ್ಯ ಸಭಾಭವನಗಳ ಲೋಕಾರ್ಪಣೆ ಕಾರ್ಯಕ್ರಮ ನಗರದ ಮೇರಿಹಿಲ್ ಪಾಲೆಮಾರ್ ಕನ್ವೆನ್ಷನ್ ಸೆಂಟರ್‌ನಲ್ಲಿ ಶನಿವಾರ ನೆರವೇರಿತು.

ಆಂಧ್ರಪ್ರದೇಶದ ರಾಜ್ಯಪಾಲ ಜಸ್ಟಿಸ್ ಎಸ್. ಅಬ್ದುಲ್ ನಜೀರ್ ಅವರು ಪಾಲೆಮಾರ್ ಕನ್ವೆನ್ಷನ್ ಸೆಂಟರ್‌ನ್ನು ಉದ್ಘಾಟಿಸಿದರು. ಈ ವೇಳೆ ಮಾತನಾಡಿದ ನ್ಯಾ. ಅಬ್ದುಲ್ ನಜೀರ್, ಮಾಜಿ ಸಚಿವ ಕೃಷ್ಣ ಪಾಲೆಮಾರ್ ಅವರು ಬಹುಮುಖ ಪ್ರತಿಭೆ. ಕೈಗಾರಿಕೋದ್ಯಮಿ, ಬಿಲ್ಡರ್, ಶಿಕ್ಷಣ ಕ್ಷೇತ್ರ, ಸಮಾಜಸೇವೆಯಲ್ಲಿ ತೊಡಗಿಸಿಕೊಂಡಿರುವ ಅವರು ಶೈಕ್ಷಣಿಕ, ಸಾಮಾಜಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ್ದಾರೆ. ಬಡ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ನೆರವಾಗಿದ್ದಾರೆ. ಅರ್ಹರಿಗೆ ಉಚಿತ ಶಿಕ್ಷಣ ನೀಡಿದ್ದಾರೆ. ದುಡಿಯುವ ಕೈಗಳಿಗೆ ಕೆಲಸ ಕಲ್ಪಿಸಿದ್ದಾರೆ. ಬಡತನ ನಿರ್ಮೂಲನೆ, ಸಮಾಜದಲ್ಲಿ ಸಮಾನತೆಗೆ ಶಿಕ್ಷಣ ಪ್ರಮುಖ ಅಸ್ತ್ರ. ಶಿಕ್ಷಣಕ್ಕೆ ಆದ್ಯತೆ ನೀಡುವ ಪಾಲೆಮಾರ್ ಅವರ ಗುಣ ಶ್ಲಾಘನೀಯ ಎಂದರು.

ಪಾಲೆಮಾರ್ ಕನ್ವೆನ್ಷನ್ ಸೆಂಟರ್‌ನಲ್ಲಿ ಸಾಮುದಾಯಿಕ ಒಳಗೊಳ್ಳುವಿಕೆ, ವಿಚಾರ ಸಂಕಿರಣಗಳು, ಆರ್ಥಿಕ ಸಂವಾದಗಳು, ಕೌಶಲ್ಯಾಭಿವೃದ್ಧಿ ಕುರಿತಾದ ಕಾರ್ಯಕ್ರಮಗಳು ನಡೆಯಲಿ. ಸಾಮಾಜಿಕ ಜಾಗೃತಿ, ಸೌಹಾರ್ದಾತೆಗೆ ಕೇಂದ್ರವಾಗಲಿ. ಇಲ್ಲಿ ವಿವಾಹಕ್ಕೊಳಗಾದವರಿಗೆ ಶ್ರೇಯಸ್ಸು ಉಂಟಾಗಲಿ ಎಂದು ಶುಭ ಹಾರೈಸಿದರು.



ಅತಿಥಿಯಾಗಿದ್ದ ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಮಾತನಾಡಿ, ಕರ್ತವ್ಯನಿಷ್ಠೆ, ಉತ್ತಮ ನಡವಳಿಕೆ, ತಂದೆ ತಾಯಿ ಆಶೀರ್ವಾದ ಇದ್ದರೆ ಜೀವನದಲ್ಲಿ ಪ್ರಗತಿ ಸಾಧಿಸಬಹುದು ಎಂಬುದಕ್ಕೆ ಕೃಷ್ಣ ಪಾಲೆಮಾರ್ ಅವರ ಜೀವನವೇ ದೃಷ್ಟಾಂತವಾಗಿದೆ. ಒಂದು ಜಿಲ್ಲೆಯಲ್ಲಿ ಒಬ್ಬನೇ ಒಬ್ಬ ವ್ಯಕ್ತಿ ತನ್ನ ಕೈಂಕರ್ಯದ ಮೂಲಕ ಏಕಕಾಲದಲ್ಲಿ ನಾಲ್ಕು ಸಭಾಭವನಗಳನ್ನು ಲೋಕಾರ್ಪಣೆಗೊಳಿಸುತ್ತಿರುವುದು, ಅದರಿಂದ ಬಂದ ಆದಾಯವನ್ನು ಸಮಾಜಮುಖಿಯಾಗಿ ವಿನಿಯೋಗಿಸುವ ಸಂಕಲ್ಪ ತೊಟ್ಟಿರುವುದು ಅಪೂರ್ವ ಸಂಗತಿ. ಈ ಮೂಲಕ ರಾಷ್ಟ್ರದ ಪ್ರಗತಿಗೂ ಅವರು ಕೊಡುಗೆ ನೀಡಿದ್ದಾರೆ. ಸಮಾಜದ ಬಗ್ಗೆ ಚಿಂತನೆ ಇರುವ ಅವರ ವ್ಯಕ್ತಿತ್ವ 'ಕೋಟಿಗೊಬ್ಬ ಪಾಲೆಮಾರ್' ಎನ್ನುವಂತದ್ದು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸ್ಪೀಕರ್ ಯು.ಟಿ. ಖಾದರ್ ಮಾತನಾಡಿ, ತುಳುನಾಡಿನ ಸೌಂದರ್ಯದ ಕಿರೀಟವಾಗಿ ಪಾಲೆಮಾರ್ ಕನ್ವೆನ್ಷನ್ ಸೆಂಟರ್ ಮೂಡಿಬಂದಿದೆ. ಆರ್ಥಿಕ ವ್ಯವಸ್ಥೆ ಚಲನಶೀಲವಾಗಿದ್ದಾಗ ಮಾತ್ರ ಅಭಿವೃದ್ಧಿ ಸಾಧ್ಯ. ಇಂದು ಉದ್ಘಾಟನೆಗೊಂಡಿರುವ ನಾಲ್ಕು ಸಭಾಭವನಗಳು ಅಭಿವೃದ್ಧಿಗೆ ಪೂರಕವಾದ ಯೋಜನೆಗಳಾಗಿವೆ. ಸಣ್ಣ ಸಮುದಾಯಕ್ಕೆ ಸೇರಿದವರಾಗಿದ್ದರೂ, ಬದ್ಧತೆ, ಪ್ರಾಮಾಣಿಕತೆ, ಕರ್ತವ್ಯನಿಷ್ಠೆ ಮೂಲಕ ದೊಡ್ಡ ಸಾಧನೆ ಸಾಧ್ಯ ಎಂಬುದನ್ನು ಪಾಲೆಮಾರ್ ಅವರು ತೋರಿಸಿಕೊಟ್ಟಿದ್ದಾರೆ. ಪಾಲೆಮಾರ್ ಅವರ ವ್ಯಕ್ತಿತ್ವ ಯುವಜನತೆಗೆ ಮಾದರಿಯಾದುದು. ಅವರ ಜೀವನ ಚರಿತ್ರೆ ಪುಸ್ತಕದ ರೂಪದಲ್ಲಿ ಬಿಡುಗಡೆ ಆಗಬೇಕು ಎಂದು ಹೇಳಿದರು.

ಲ್ಯಾಂಡ್ ಲಿಂಕ್ಸ್ ಗ್ರೂಪ್‌ನ ಅಧ್ಯಕ್ಷ ಕೃಷ್ಣ ಜೆ. ಪಾಲೆಮಾರ್ ಅಧ್ಯಕ್ಷತೆ ವಹಿಸಿದ್ದರು. ಸಂಸದ ಬ್ರಿಜೇಶ್ ಚೌಟ, ಶಾಸಕರಾದ ಡಾ.ವೈ. ಭರತ್ ಶೆಟ್ಟಿ, ಉಮಾನಾಥ ಕೋಟ್ಯಾನ್, ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ ಅತಿಥಿಗಳಾಗಿದ್ದರು. ಪ್ರದೀಪ್ ಪಾಲೆಮಾರ್, ಪ್ರಸನ್ನ ಪಾಲೆಮಾರ್ ಉಪಸ್ಥಿತರಿದ್ದರು.

ಈ ವೇಳೆ ವಿವಿಧ ಸೇವಾ ಕಾರ್ಯ ನಡೆಸಲಾಯಿತು. ಶಕ್ತಿನಗರದ ಭಿನ್ನಸಾಮರ್ಥ್ಯದ ಮಕ್ಕಳ ಶಾಲೆ ಸಾನಿಧ್ಯದ ವಿದ್ಯಾರ್ಥಿಗಳಿಗೆ, ಸ್ನೇಹದೀಪ ಸಂಸ್ಥೆ ಸಂಸ್ಥಾಪಕಿ ತಬಸ್ಸುಮ್, ದ್ವಿತೀಯ ಪಿಯುಸಿಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ದಿಶಾ ಪೂಜಾರಿ, ಎಸ್‌ಎಸ್‌ಎಲ್‌ಸಿಯಲ್ಲಿ ಅತ್ಯಧಿಕ ಅಂಕ ಗಳಿಸಿದ ಮಹಾಲಕ್ಷ್ಮಿ ಪೈ, ಮಹಾಲಕ್ಷ್ಮೀ ಭಾರ್ಗವ್, ದಿವ್ಯಾಂಗ ಕಲಾವಿದ ಕೌಶಿಕ್ ಆಚಾರ್ಯ, ಸಮಾಜ ಸೇವಕಿ ಗೀತಾ ಶೆಟ್ಟಿ ಹಾಗೂ ಕುತ್ತಾರು ಬಾಲಸಂರಕ್ಷಣಾ ಕೇಂದ್ರಕ್ಕೆ ಗೌರವಾರ್ಪಣೆ ಸಲ್ಲಿಸಲಾಯಿತು. ಸಂಸ್ಥೆಯ ಟ್ರಸ್ಟಿ ಜೆ. ಕೊರಗಪ್ಪ ಅವರಿಗೆ ಗೌರವಾಭಿನಂದನೆ ಅರ್ಪಿಸಲಾಯಿತು. ಇಂಜಿನಿಯರ್ ಪ್ರವೀಣ್‌ಕುಮಾರ್ ಅವರನ್ನು ಗೌರವಿಸಲಾಯಿತು. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಿಸಲಾಯಿತು.

ಕದ್ರಿ ನವನೀತ ಶೆಟ್ಟಿ ಸ್ವಾಗತಿಸಿದರು. ನಿತಿನ್ ಸಾಲ್ಯಾನ್, ಯಶಸ್ವಿನಿ ಕಾರ್ಯಕ್ರಮ ನಿರೂಪಿಸಿದರು.

ಕರಾವಳಿಯ ಸಾಂಸ್ಕೃತಿಕ ಶ್ರೀಮಂತಿಕೆಗೆ ಒತ್ತು ನೀಡುವುದು ಮತ್ತು ಇಲ್ಲಿನ ಜನರಿಗೆ ಸುಲಭವಾಗಿ ಕೈಗೆಟುಕುವ ದರದಲ್ಲಿ ಅತ್ಯುನ್ನತ ಸೌಲಭ್ಯಗಳ ಸಭಾಂಗಣಗಳನ್ನು ಒದಗಿಸುವುದು ನಮ್ಮ ಮೂಲ ಉದ್ದೇಶವಾಗಿದೆ. ಜನರ ಪ್ರೀತಿ, ವಿಶ್ವಾಸದಿಂದ ಈ ಕಾರ್ಯಸಾಧನೆ ಆಗಿದೆ. ಪಾಲೆಮಾರ್ ಕನ್ವೆನ್ಷನ್ ಸೆಂಟರ್ ವಿಕಾಸ್ ಎಜುಕೇಶನ್ ಟ್ರಸ್ಟ್‌ನಡಿ ಕಾರ್ಯನಿರ್ವಹಿಸಲಿದೆ. ಈ ಮೂಲಕ ವಿದ್ಯೆಗೆ ಪ್ರೋತ್ಸಾಹ ನೀಡಲಾಗುವುದು. ಬಡವರ್ಗದ ಜನರಿಗೆ ಉಪಯೋಗ ಆಗುವ ದೃಷ್ಟಿಯಿಂದ ನಾಲ್ಕು ಸಭಾಂಗಣಗಳನ್ನು ನಿರ್ಮಿಸಲಾಗಿದೆ.

■ **ಕೃಷ್ಣ ಜೆ. ಪಾಲೆಮಾರ್, ಲ್ಯಾಂಡ್ ಲಿಂಕ್ಸ್ ಗ್ರೂಪ್‌ನ ಅಧ್ಯಕ್ಷ**

ಏಕಕಾಲಕ್ಕೆ ಉದ್ಘಾಟನೆ

ಮೇರಿಹಿಲ್ ಪಾಲೆಮಾರ್ ಕನ್ವೆನ್ಷನ್, ಮೋರ್ಗನ್ಸ್ ಗೇಟ್‌ನ ಪಾಲೆಮಾರ್ ಗಾರ್ಡನ್, ಸುರತ್ಕಲ್ ಸಮೀಪದ ಪಾಲೆಮಾರ್ ಫಾರ್ಮ್ಸ್ ಸಭಾಭವನ, ಜೆಪ್ಪಿನಮೊಗರು ಕಡೆಕಾರ್‌ನ ನೇತ್ರಾವತಿ ಸಭಾಭವನವನ್ನು ಏಕಕಾಲಕ್ಕೆ ಉದ್ಘಾಟಿಸಲಾಯಿತು. ಉದ್ಘಾಟನೆಗೊಂಡ ಸಭಾಭವನಗಳು ವಿವಾಹ ಕಾರ್ಯಕ್ರಮಗಳು, ಸಾಮೂಹಿಕ ವಿವಾಹಗಳು, ಧಾರ್ಮಿಕ-ಸಾಂಸ್ಕೃತಿಕ ಕಾರ್ಯಕ್ರಮಗಳು, ಉದ್ಯೋಗ ಮೇಳಗಳು, ವಸ್ತು ಪ್ರದರ್ಶನಗಳು, ಸಾರ್ವಜನಿಕ ಕಾರ್ಯಕ್ರಮಗಳು ಹಾಗೂ ಮಹಿಳಾ ಸಬಲೀಕರಣದಂತಹ ಸಮಾಜಮುಖಿ ಚಟುವಟಿಕೆಗಳಿಗೆ ಮುಕ್ತವಾಗಿರಲಿವೆ ಎಂದು ಕೃಷ್ಣ ಜೆ. ಪಾಲೆಮಾರ್ ತಿಳಿಸಿದರು. ಹೆಚ್ಚಿನ ಮಾಹಿತಿಗಾಗಿ 7411394759, 7483574759, 9148435759 ಸಂಪರ್ಕಿಸಬಹುದು.

ರೈಲು ನಿಲ್ದಾಣದ ಅಭಿವೃದ್ಧಿ ಪರಿಶೀಲನೆ | ಕೇಂದ್ರ ಸಚಿವ ವಿ. ಸೋಮಣ್ಣ ಭರವಸೆ

ಶೀಘ್ರ ಮಂಗಳೂರು ಪ್ರತ್ಯೇಕ ರೈಲ್ವೆ ವಿಭಾಗ

ಮಂಗಳೂರು: ಮಂಗಳೂರು ಪ್ರತ್ಯೇಕ ರೈಲ್ವೆ ವಿಭಾಗ ಸೃಜಿಸುವ ಕಾರ್ಯ ಪ್ರಗತಿಯಲ್ಲಿದೆ. ಅದಕ್ಕೂ ಮುನ್ನ ಮಂಗಳೂರು ಒಳಗೊಂಡಿರುವ ಕೊಂಕಣ, ನೈರುತ್ಯ ಹಾಗೂ ದಕ್ಷಿಣ ರೈಲ್ವೆ ಈ ಮೂರು ವಿಭಾಗಗಳಲ್ಲಿ ಮಂಗಳೂರಿನ ಒಂದೇ ವಿಭಾಗದಡಿ ತರುವ ಬಗ್ಗೆ ಕೆಲಸ ಕಾರ್ಯಗಳು ನಡೆಯುತ್ತಿವೆ. ಆದಷ್ಟು ಶೀಘ್ರದಲ್ಲಿ ಮಂಗಳೂರು ಪ್ರತ್ಯೇಕ ರೈಲ್ವೆ ವಿಭಾಗ ಬೇಡಿಕೆ ನೆರವೇರಲಿದೆ ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದರು.

ಮಂಗಳೂರು ಜಂಕ್ಷನ್ ರೈಲು ನಿಲ್ದಾಣಕ್ಕೆ ಶನಿವಾರ ಭೇಟಿ ನೀಡಿದ ವೇಳೆ ಅವರು ಅಮೃತ ಭಾರತ್ ಯೋಜನೆಯಡಿ ಇಲ್ಲಿನ ರೈಲು ನಿಲ್ದಾಣದ ಅಭಿವೃದ್ಧಿ ಕಾಮಗಾರಿಯ ಪರಿಶೀಲನೆ ನಡೆಸಿದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಹಾಸನ-ಮಂಗಳೂರು ನಡುವೆ 247 ಕಿ.ಮೀ. ರೈಲು ಹಳಿಯನ್ನು 8,300 ಕೋಟಿ ರೂ.ಗಳಲ್ಲಿ ದ್ವಿಗುಣ ಗೊಳಿಸುವ ಕಾರ್ಯದ ಎಫ್‌ಎಲ್‌ಸಿ ಪರಿಶೀಲನಾ ಹಂತದಲ್ಲಿದೆ. ಶೋರ್ನೂರು- ಮಂಗಳೂರು ನಡುವೆ 306 ಕಿ.ಮೀ. ದೂರದ ರೈಲು ಹಳಿಯನ್ನು 3 ಮತ್ತು 4ನೇ ಹಳಿ ರಚಿಸುವ ಕಾರ್ಯವೂ ನಡೆಯಲಿದೆ. ಈ ಮಾರ್ಗವನ್ನು ಗಂಟೆಗೆ 160 ಕಿ.ಮೀ. ವೇಗದಲ್ಲಿ ರೈಲು ಸಂಚಾರಕ್ಕೆ ಸಿದ್ಧಗೊಳಿಸಲು ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸಲಾಗುವುದು. ಮೊದಲ ಹಂತದಲ್ಲಿ 3ನೇ ಹಳಿ ರಚನೆಯ ಕಾಮಗಾರಿಗೆ ಕ್ರಮ ಕೈಗೊಳ್ಳಲಾಗುವುದು ಎಂದರು.ಮಂಗಳೂರುವಿಮಾನನಿಲ್ದಾಣಕ್ಕೆ ತೆರಳುವವರಿಗೆ ಅನುಕೂಲವಾಗಲು ಸಮೀಪದಲ್ಲೇ ರೈಲು ನಿಲ್ದಾಣ ರಚನೆ ಬಗ್ಗೆ ಪ್ರಸ್ತಾವನೆ ಸಲ್ಲಿಸುವಂತೆ ರೈಲ್ವೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಸಚಿವ ಸೋಮಣ್ಣ ಹೇಳಿದರು.

ಭೂಸ್ವಾಧೀನ ನಡೆಸಿ ಕೈಗೊಳ್ಳುವ ರೈಲ್ವೆ ಇಲಾಖೆಯ ಕಾಮಗಾರಿಗೆ ರಾಜ್ಯ ಸರ್ಕಾರ ತನ್ನ ಪಾಲಿನ ಮೊತ್ತ ನೀಡದೆ ವೃಥಾ ವಿಳಂಬಕ್ಕೆ ಕಾರಣವಾಗುತ್ತಿದೆ. ಹೀಗಾಗಿ ಭೂಸ್ವಾಧೀನದ ಕಾಮಗಾರಿಗಳಿಗೆ ರೈಲ್ವೆಯೇ ಪರಿಹಾರ ಮೊತ್ತ ಪಾವತಿಸಿ ಕಾಮಗಾರಿ ನಡೆಸಲು ತೀರ್ಮಾನಿಸಲಾಗಿದೆ ಎಂದು ಸಚಿವರು ಹೇಳಿದರು.

ಮಂಗಳೂರು ಜಂಕ್ಷನ್ ಮತ್ತು ಮಂಗಳೂರು ಸೆಂಟ್ರಲ್ ರೈಲು ನಿಲ್ದಾಣಗಳ ತ್ವರಿತ ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕು. ಮಂಗಳೂರು ಜಂಕ್ಷನ್‌ನಲ್ಲಿ 38 ಕೋಟಿ ರೂ.ಗಳಲ್ಲಿ ಅಭಿವೃದ್ಧಿ ಕಾಮಗಾರಿ ಅಕ್ಟೋಬರ್‌ನಲ್ಲಿ ಮುಕ್ತಾಯಗೊಳ್ಳಬೇಕು ಎಂದರು. ಮಂಗಳೂರು ಸೆಂಟ್ರಲ್ ಅಭಿವೃದ್ಧಿಗೆ ಮಾಸ್ಟರ್ ಪ್ಲ್ಯಾನ್ ರೂಪಿಸಬೇಕು. ಅಲ್ಲದೆ ಇಡೀ ಮಂಗಳೂರು ಪ್ರದೇಶದಲ್ಲಿ ರೈಲ್ವೆ ಅಭಿವೃದ್ಧಿಗೆ ಪ್ರತ್ಯೇಕ ಮಾಸ್ಟರ್ ಪ್ಲ್ಯಾನ್ ರೂಪಿಸುವಂತೆ ಜಿಲ್ಲಾಧಿಕಾರಿಗೆ ಸಚಿವರು ಸೂಚಿಸಿದರು. ಮಂಗಳೂರು ಸೆಂಟ್ರಲ್ ಹಾಗೂ ಜಂಕ್ಷನ್ ರೈಲು ನಿಲ್ದಾಣದಲ್ಲಿ ಕನ್ನಡ ಬಲ್ಲ ಸಿಬ್ಬಂದಿ ನೇಮಿಸುವಂತೆ ಸಚಿವ ಸೋಮಣ್ಣ ಅಧಿಕಾರಿಗಳಿಗೆ ಹೇಳಿದರು. ಭಾಷಾ ಸಮಸ್ಯೆ ಉಂಟಾಗಬಾರದು. ಬೇರೆ ರಾಜ್ಯದವರಾಗಿದ್ದರೂ ಕರ್ನಾಟಕದಲ್ಲಿ ಕನಿಷ್ಠ ಸಂವಹನ ನಡೆಸಲು ಕನ್ನಡ ಭಾಷೆ ಕಲಿಯಬೇಕು ಎಂದು ತಾಕೀತು ಮಾಡಿದರು.

ಸಂಸದ ಕ್ಯಾ. ಬ್ರಿಜೇಶ್ ಚೌಟ, ಪಾಲ್ಘಾಟ್ ರೈಲ್ವೆ ಅಧಿಕಾರಿ ಮಧುಕರ ರಾವತ್ ಮತ್ತಿತರರಿದ್ದರು.



ಮೆಮು ರೈಲು

ಮಂಗಳೂರು-ಕುಕ್ಕೆ ಸುಬ್ರಹ್ಮಣ್ಯ ಮಾರ್ಗ ನಡುವೆ ಮೆಮು ರೈಲು ಓಡಾಟಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಪಾಲ್ಘಾಟ್ ರೈಲ್ವೆ ಅಧಿಕಾರಿಗೆ ಸಚಿವ ಸೋಮಣ್ಣ ಸೂಚಿಸಿದರು. ಈ ಮಾರ್ಗದಲ್ಲಿ ಹಾಲಿ ಸಂಚರಿಸುವ ಪ್ಯಾಸೆಂಜರ್ ಓಡಾಟವನ್ನು ಇನ್ನಷ್ಟು ಹೆಚ್ಚಳಗೊಳಿಸುವ ಉದ್ದೇಶ ಇದೆ ಎಂದರು. ಪಂಚಗಂಗಾ ಎಕ್ಸ್‌ಪ್ರೆಸ್ ಸೇರಿದಂತೆ ಬೆಂಗಳೂರು-ಮಂಗಳೂರು-ಕಾರವಾರ ನಡುವಿನ ಯಾವುದೇ ರೈಲುಗಳ ವೇಳಾಪಟ್ಟಿ ಪರಿಷ್ಕರಿಸಿ ವಿಳಂಬಿಸುವ ಯೋಚನೆ ಇಲ್ಲ. ಮುಂಬೈ ಸಿಎಸ್‌ಟಿ, ಗೋಮಟೇಶ್ವರ ಎಕ್ಸ್‌ಪ್ರೆಸ್ ಹಾಗೂ ಯಶವಂತಪುರ ಎಕ್ಸ್‌ಪ್ರೆಸ್ ರೈಲನ್ನು ಮಂಗಳೂರು ಸೆಂಟ್ರಲ್‌ಗೆ ವಿಸ್ತರಿಸಲು ಪರಿಶೀಲಿಸಲಾಗುವುದು. ಮಂಗಳೂರು ಸೆಂಟ್ರಲ್ ನಿಲ್ದಾಣದಲ್ಲಿ ಮತ್ತೆ ಹೆಚ್ಚುವರಿ ಪ್ಲ್ಯಾಟ್ ಫಾರಂ ರಚನೆಗೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಖಾಸಗಿ ಬಸ್ ದರ ಏರಿಕೆ ಅನಿವಾರ್ಯ: ಪರ್ತಿಪಾಡಿ

ಮಂಗಳೂರು: ಖಾಸಗಿ ಬಸ್ ಪ್ರಯಾಣ ದರ ಪರಿಷ್ಕರಣೆ ಮಾಡದೆ 5 ವರ್ಷವಾಗಿದೆ. ಹಾಗಾಗಿ ದರ ಏರಿಕೆ ಮಾಡುವುದು ಅನಿವಾರ್ಯವಾಗಿದೆ. ಡೀಸೆಲ್ ಬೆಲೆಯನ್ನು ಒಂದು ತಿಂಗಳ ಕಾಲ ಅವಲೋಕಿಸಿ, ವೈಜ್ಞಾನಿಕವಾಗಿ ಪರಿಶೀಲನೆ ನಡೆಸಿ, ಈ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು ಎಂದು ದ.ಕ. ಬಸ್ಸು ಮಾಲಕರ ಸಂಘದ ಅಧ್ಯಕ್ಷ ಅಜೀಝ್ ಪರ್ತಿಪಾಡಿ ತಿಳಿಸಿದರು.

ಡೀಸೆಲ್ ದರ ಏರಿಕೆ, ಬಿಡಿ ಭಾಗಗಳ ಬೆಲೆಯಲ್ಲಿ ಹೆಚ್ಚಳ, ತೆರಿಗೆ, ವಿಮೆ ಎಂದು ಬಸ್ಸು ಮಾಲಕರು ಹೈರಾಣಾಗಿ ಹೋಗಿದ್ದಾರೆ. ಆದ್ದರಿಂದ ಬಸ್ ಪ್ರಯಾಣ ದರವನ್ನು ಏರಿಕೆ ಮಾಡುವುದು ಅನಿವಾರ್ಯವಾಗಿದೆ. ಆದರೆ ಸದ್ಯದ ಮಟ್ಟಿಗೆ ಏರಿಸದಿರಲು ನಿರ್ಧರಿಸಲಾಗಿದೆ. ಒಂದು ತಿಂಗಳು ಕಾದು ಪರಿಸ್ಥಿತಿ ಅವಲೋಕಿಸಿ ತೀರ್ಮಾನಕ್ಕೆ ಬರಲಾಗುವುದು ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು. ಮುಂಗಾರು ಪ್ರಾರಂಭವಾಗುತ್ತಿರುವುದರ ಜತೆಗೆ ಶಿಕ್ಷಣ ಸಂಸ್ಥೆಗಳು ಆರಂಭವಾಗುತ್ತಿದ್ದು, ಪ್ರಯಾಣಿಕರು, ವಿದ್ಯಾರ್ಥಿಗಳೊಂದಿಗೆ ಬಸ್ಸು ಚಾಲಕ- ನಿರ್ವಾಹಕರು ಸೌಮ್ಯ ರೀತಿಯಲ್ಲಿ ವರ್ತಿಸುವುದು, ಮಳೆಗೆ ಸುರಕ್ಷಿತವಾಗಿ ಪ್ರಯಾಣಿಕರನ್ನು ಗಮ್ಯ ಸ್ಥಾನಕ್ಕೆ ತಲುಪಿಸುವುದು ಇತ್ಯಾದಿಗಳ ಬಗ್ಗೆ ಸಂಘದಿಂದ ಸೂಕ್ತ ನಿರ್ದೇಶನ ನೀಡಲಾಗುವುದು ಎಂದರು.

ನಗರದೊಳಗಿನ ಕುಂಟಿಕಾನ ಜಂಕ್ಷನ್, ಲಾಲ್‌ಬಾಗ್, ಪಿವಿಎಸ್, ಬಂಟ್ಸ್ ಹಾಸ್ಟೆಲ್ ಜಂಕ್ಷನ್‌ಗಳಲ್ಲೂ ವಿಪರೀತ ದಟ್ಟಣೆಯಿಂದ ಬಸ್ಸುಗಳಿಗೆ ಸಾರ್ವಜನಿಕರನ್ನು ಸಮಯಕ್ಕೆ ಸರಿಯಾಗಿ ತಲುಪಿಸುವುದು ದೊಡ್ಡ ಸಮಸ್ಯೆಯಾಗಿದೆ ಎಂದು ವಿವರಿಸಿದರು.

ಸಂಘದ ಉಪಾಧ್ಯಕ್ಷ ಕೆ.ರಾಮಚಂದ್ರ ನಾಯ್ಕ್, ಪ್ರಧಾನ ಕಾರ್ಯದರ್ಶಿ ರಾಮಚಂದ್ರ ಪಿಲಾರ್, ಕೋಶಾಧಿಕಾರಿ ಜೋಯೆಲ್ ಫೆರ್ನಾಂಡಿಸ್ ಉಪಸ್ಥಿತರಿದ್ದರು.

ಪೊಲೀಸ್ ಔಟ್ ಪೋಸ್ಟ್ ರಚಿಸಿ

ಸ್ಟೇಟ್‌ಬ್ಯಾಂಕ್ ಬಸ್ಸು ನಿಲ್ದಾಣದಲ್ಲಿ ಗೂಡಂಗಡಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಸಂಜೆಯಾಗುತ್ತಲೇ ಅನೈತಿಕ ವ್ಯವಹಾರಗಳು ನಡೆಯುತ್ತವೆ. ಸಂಜೆ ಬಳಿಕ ಮಹಿಳೆಯರು ಬಸ್ಸಿಗಾಗಿ ಕಾದು ನಿಲ್ಲುವುದು ಕೂಡಾ ಅಪಾಯಕಾರಿಯಾಗಿ ಪರಿಣಮಿಸುತ್ತಿದೆ. ಆದ್ದರಿಂದ ಇಲ್ಲಿ ಪೊಲೀಸ್ ಔಟ್ ಪೋಸ್ಟ್ ರಚಿಸಬೇಕು ಎಂದು ಅಜೀಝ್ ಪರ್ತಿಪಾಡಿ ಆಗ್ರಹಿಸಿದರು.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
೦೪

ಭಾರತದ ಯುವಶಕ್ತಿಗೆ ಉದ್ಯೋಗ


ಪುಟ ೧➔ ಮುಂಬರುವ ವರ್ಷಗಳಲ್ಲಿ ವಿಕಸಿತ ಭಾರತದ ಸಾಕಾರದಲ್ಲಿ ದೇಶದ ಯುವಶಕ್ತಿ ನಿರ್ಣಾಯಕ ಪಾತ್ರ ವಹಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ರೋಜ್‌ಗಾರ್ ಮೇಳದಲ್ಲಿ 51 ಸಾವಿರಕ್ಕೂ ಅಧಿಕ ಯುವಶಕ್ತಿಗೆ ನೇಮಕಾತಿ ಪತ್ರಗಳನ್ನು ವರ್ಚುವಲ್ ಆಗಿ ಪ್ರಧಾನಿ ಮೋದಿ ವಿತರಿಸಿದರು.

ಯಾವ ರಾಷ್ಟ್ರದ ಜತೆ ಯಾವ ಒಪ್ಪಂದ: ಸೆಮಿಕಂಡಕ್ಟರ್‌ಗಳು ಜಲ, ಕೃಷಿ ಮತ್ತು ಅತ್ಯಾಧುನಿಕ ಉತ್ಪಾದನಾ ಪ್ರಕ್ರಿಯೆಗೆ ಸಂಬಂಧಿಸಿ ನೆದರ್‌ಲ್ಯಾಂಡ್ ಜತೆ ಚರ್ಚೆ ನಡೆಯಿತು. ಕೃತಕ ಬುದ್ಧಿಮತ್ತೆ, ಡಿಜಿಟಲ್ ಆವಿಷ್ಕಾರ ಕುರಿತು ಸ್ವೀಡನ್ ಜತೆ, ಹಸಿರು ತಂತ್ರಜ್ಞಾನ ಮತ್ತು ಸಾಗರ ಸಂಬಂಧಿತ ಸಹಕಾರಗಳ ಬಗ್ಗೆ ನಾರ್ವೆ ನಾಯಕರ ಜತೆ ಮಾತುಕತೆ ನಡೆಸಿದ್ದೇನೆ. ವ್ಯೂಹಾತ್ಮಕ ಇಂಧನ ಮತ್ತು ತಂತ್ರಜ್ಞಾನ ಪಾಲುದಾರಿಕೆ ಬಗ್ಗೆ ಯುಎಇ ಜತೆ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ರಕ್ಷಣೆ, ಅಪೂರ್ವ ಖನಿಜಗಳು ಮತ್ತು ವಿಜ್ಞಾನ-ತಂತ್ರಜ್ಞಾನ ರಂಗಗಳಲ್ಲಿ ಸಹಕಾರ ವರ್ಧನೆಗೆ ಸಂಬಂಧಿಸಿ ಇಟಲಿ ಜತೆ ಮಹತ್ತ್ವದ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ ಎಂದು ಪಂಚ ರಾಷ್ಟ್ರಗಳ ಪ್ರವಾಸದಿಂದಾದ ರಾಜತಾಂತ್ರಿಕ ಮತ್ತು ಆರ್ಥಿಕ ಪರಿಣಾಮಗಳ ಕುರಿತು ಪ್ರಧಾನಿ ಮೋದಿ ಮಾಹಿತಿ ನೀಡಿದರು. ಮುಂದಿನ 25 ವರ್ಷಗಳ ಅವಧಿಗೆ ಜಾಗತಿಕ ಪ್ರಗತಿಯನ್ನು ವ್ಯಾಖ್ಯಾನಿಸಬಲ್ಲ ಉದ್ದಿಮೆಗಳಿಗೆ ರೂಪು ನೀಡಲು ಪ್ರಸ್ತುತ ಸಹಕಾರ -ಸಹಯೋಗಗಳು ಪೂರಕವಾಗಲಿವೆ ಎಂದು ಒಪ್ಪಂದಗಳ ದೀರ್ಘಕಾಲೀನ ಮಹತ್ತ್ವವನ್ನು ಪ್ರಧಾನಿ ವಿವರಿಸಿದರು. ಎಐ ರಂಗದಲ್ಲಿ ಸ್ವೀಡನ್ ಜತೆ ಪಾಲುದಾರಿಕೆ, ಸೂಪರ್‌ಕಂಪ್ಯೂಟಿಂಗ್‌ನಲ್ಲಿ ಯುಎಇ ಜತೆಗಿನ ಸಹಕಾರವು ಭಾರತದ ತಂತ್ರಜ್ಞಾನೀಯ ಸಾಮರ್ಥ್ಯಗಳನ್ನು ಮತ್ತಷ್ಟು ಬಲಿಷ್ಠಗೊಳಿಸಲಿದೆ ಎಂದು ಹೇಳಿದರು.

ವಿಶ್ವಾಸಾರ್ಹ ಜಾಗತಿಕ ಪೂರೈಕೆ ಪಾಲುದಾರ

ಅತ್ಯಂತ ವಿಶ್ವಾಸಾರ್ಹ ಜಾಗತಿಕ ಪೂರೈಕೆ ಪಾಲುದಾರನಾಗಿ ಭಾರತದ ಸ್ಥಾನಮಾನ ಬೆಳೆಯುತ್ತಿರುವುದಕ್ಕೆ ಎಎಸ್‌ಎಂಎಲ್-ಟಾಟಾ ಇಲೆಕ್ಟ್ರಾನಿಕ್ಸ್ ಜತೆ ಏರ್ಪಟ್ಟ ಒಪ್ಪಂದ ರಚನಾತ್ಮಕ ನಿದರ್ಶನವಾಗಿದೆ. ಸೆಮಿಕಂಡಕ್ಟರ್ ರಂಗದಲ್ಲಿ ಮುಂಚೂಣಿಯಲ್ಲಿರುವ ಡಚ್ ರಾಷ್ಟ್ರ ಒಪ್ಪಂದ ಮಾಡಿಕೊಂಡಿರುವ ಬೆರಳೆಣಿಕೆಯ ರಾಷ್ಟ್ರಗಳಲ್ಲಿ ಭಾರತ ಒಂದೆಂದು ಪ್ರಧಾನಿ ಮೋದಿ ಹೆಮ್ಮೆ ವ್ಯಕ್ತಪಡಿಸಿದರು.

ರಾಮ ಬಾಣ



ಪೊಲೀಸ್ ಅಧಿಕಾರಿ ಅಮಾನತು!

• **ಕಾಸರಗೋಡು:** ಕೇರಳದ ಸ್ಥಳೀಯಾಡಳಿತ ಸಚಿವ ಹಾಗೂ ಮುಸ್ಲಿಂಲೀಗ್ ನಾಯಕ ಕೆ.ಎಂ.ಶಾಜಿಯ ವಿರುದ್ಧ ಪೊಲೀಸ್ ಸಿಬ್ಬಂದಿಗೆ ಸಂಬಂಧಿಸಿದ ವಾಟ್ಸಾಪ್ ಗ್ರೂಪಿನಲ್ಲಿ ಸಂದೇಶವೊಂದನ್ನು ಹಾಕಿದ್ದಾಗಿ ಆರೋಪಿಸಿ ವೆಳ್ಳರಿಕುಂಡು ಪೊಲೀಸ್ ಠಾಣೆಯ ನಾಗರಿಕ ಆರಕ್ಷಕ ಅಧಿಕಾರಿಯೊಬ್ಬರನ್ನು ಅಮಾನತುಗೊಳಿಸಲಾದ ಘಟನೆ ನಡೆದಿದೆ.

'ಪೊಲೀಸ್ ಫ್ರೆಂಡ್ಸ್'ಹೆಸರಿನ ವಾಟ್ಸಾಪ್ ಗ್ರೂಪಿನಲ್ಲಿ, ಸಚಿವ ಶಾಜಿ ಅವರನ್ನು 'ಕೋಮುವಾದಿ' ಎಂಬುದಾಗಿ ಹೇಳಿದ್ದಾರೆಂದು ಆರೋಪಿಸಿ ನಾಗರಿಕ ಪೊಲೀಸ್ ಅಧಿಕಾರಿ ಸುಜಿತ್ ಅವರನ್ನು ಅಮಾನತುಗೊಳಿಸಲಾಗಿದೆ.ಸಚಿವರ ಕುರಿತು ಅವರು ಹೇಳಿದ್ದಾರೆನ್ನಲಾದ ಸಂದೇಶ ಸಾಮಾಜಿಕ ಮಾಧ್ಯಮದಲ್ಲಿ ಪ್ರಸಾರವಾಗಿ ವಿವಾದ ಸೃಷ್ಟಿಸಿದ್ದು, ಅವರನ್ನೀಗ ಕಾಸರಗೋಡು ಜಿಲ್ಲಾ ಪೊಲೀಸ್ ಮುಖ್ಯಸ್ಥರಾದ ಬಿ.ವಿ.ವಿಜಯ ಭರತ್ ರೆಡ್ಡಿ ಅವರು ಅಮಾನತುಗೊಳಿಸಿದ್ದಾರೆ.

ಮಾಜಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಕೇರಳದ ನೂತನ ಸರಕಾರದ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಪಾಲ್ಗೊಂಡಿದ್ದನ್ನು ಉಲ್ಲೇಖಿಸುವ ಮೂಲಕ ಆರಂಭಗೊಂಡ ಪೋಸ್ಟ್‌ನಲ್ಲಿ ಸಚಿವ ಶಾಜಿ ಅವರನ್ನು 'ಕೋಮುವಾದಿ' ಎಂದು ಕರೆಯಲಾಗಿತ್ತು. ಈ ಸಂಬಂಧದ ಸ್ಕ್ರೀನ್‌ಶಾಟ್ ಆನ್‌ಲೈನ್‌ನಲ್ಲಿ ಪ್ರಸಾರಗೊಂಡ ಬಳಿಕ ಟೀಕೆಗಳು ವ್ಯಕ್ತವಾಗಿ, ಪೊಲೀಸ್ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವವರು ರಾಜಕೀಯ ಕಮೆಂಟ್ ಹಾಕಿದ್ದಾರೆಂದು ಆಕ್ಷೇಪಿಸಿ ಅವರ ವಿರುದ್ಧ ಕ್ರಮಕ್ಕೆ ಒತ್ತಡ ಹೇರಲಾಗಿತ್ತು. ಇದೀಗ ಇದರ ಪರಿಣಾಮ ಪೊಲೀಸ್ ಅಧಿಕಾರಿಯ ಅಮಾನತಾಗಿದೆ.

ಅಲ್ಲದೆ ಜಿಲ್ಲಾ ಪೊಲೀಸ್ ಮುಖ್ಯಸ್ಥರ ಆದೇಶದಂತೆ ಜಿಲ್ಲಾ ಕ್ರೈಮ್ ಬ್ರಾಂಚ್ ಡಿವೈಎಸ್‌ಪಿ ಬಾಲಚಂದ್ರನ್ ಅವರು ಪ್ರಾಥಮಿಕ ತನಿಖೆಯೊಂದನ್ನು ನಡೆಸಿ ವರದಿ ನೀಡಿದ್ದು, ಇದರಂತೆ ಶಿಸ್ತುಕ್ರಮ ಕೈಗೊಳ್ಳಲಾಗಿರುವುದಾಗಿ ಹೇಳಲಾಗಿದೆ.ಶಾಜಿ ಹಿಂದೆ ಅಯಿಕೋಡ್ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದರೆ, ಈ ಬಾರಿ ಮಲಪ್ಪುರಂ ಜಿಲ್ಲೆಯ ವೆಂಗರಾ ಕ್ಷೇತ್ರದಿಂದ ಆಯ್ಕೆಯಾಗಿದ್ದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ನಾನು ಮುಖ್ಯಮಂತ್ರಿ ಆಗುವುದನ್ನು ಕಾಲವೇ ತೀರ್ಮಾನಿಸುತ್ತದೆ – ಡಿಕೆಶಿ

– ಅಂದರೆ ಪ್ರಯತ್ನ ಮಾಡಬೇಕು, ಫಲಕ್ಕಾಗಿ ಕಾಯಬೇಕು. ಮಾವಿನ ಗಿಡವನ್ನು ನೆಡಬಹುದು, ಆದರೆ ಮಾವಿನಹಣ್ಣು ಯಾವಾಗ ಆಗುತ್ತೆ ಎಷ್ಟು ಆಗುತ್ತೆ ಎನ್ನುವುದು ನಮ್ಮ ಕೈಯಲ್ಲಿ ಇಲ್ಲ. ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ಎಂಬುದು ಶ್ರೀಕೃಷ್ಣನ ಬೋಧನೆ!

ದಿನ ಭವಿಷ್ಯ

ಮೇಷ
ಕೌಟುಂಬಿಕವಾಗಿ ಹೊಸ ಸಮಸ್ಯೆ ಸಂಭವ. ಸೌಹಾರ್ದತೆಗೆ ಧಕ್ಕೆ. ಕಾಪಾಡಿ. ದುಡುಕಿನಿಂದ ಪ್ರತಿಕ್ರಿಯಿಸಬೇಡಿ. ಹಣದ ಕೊರತೆ.

ವೃಷಭ
ಇಲ್ಲದ ವಿಷಯಕ್ಕೆ ಚಿಂತೆ ಮಾಡುವಿರಿ. ಎಲ್ಲ ಸರಿಯಿದ್ದರೂ ಏನೋ ಕೊರತೆಯ ಭಾವ. ಧ್ಯಾನ ನಿಮಗೆ ಸಹಕಾರಿಯಾದೀತು.

ಮಿಥುನ
ನಿಮ್ಮ ವರ್ತನೆಯಿಂದ ಎಲ್ಲರ ಮನ ಗೆಲ್ಲುವಿರಿ. ಪ್ರೀತಿಯಲ್ಲಿ ಯಶಸ್ಸು. ಮಕ್ಕಳಿಂದ ಸಂತೋಷ. ಹೆಚ್ಚುತ್ತಿರುವ ಖರ್ಚು ಚಿಂತೆಗೆ ಕಾರಣವಾದೀತು.

ಕಟಕ
ನಿರಾಳವಾಗಿರಲು ಅವಕಾಶ ಸಿಗದು. ಅನವಶ್ಯ ಚಿಂತೆ. ದೃಢವಾಗಿ ವರ್ತಿಸಿದರೆ ಎಲ್ಲವನ್ನು ನಿಭಾಯಿಸಬಲ್ಲಿರಿ. ಆರೋಗ್ಯ ಸುಸ್ಥಿರ.

ಸಿಂಹ
ಪ್ರತಿಕೂಲ ಪರಿಸ್ಥಿತಿ ಇದ್ದರೂ ಅದನ್ನು ನಿಮ್ಮ ಪರವಾಗಿ ಬದಲಿಸಲು ಯತ್ನಿಸಿ. ಕೌಟುಂಬಿಕ ಭಿನ್ನಾಭಿಪ್ರಾಯ ಸಂಭವ. ಪ್ರಬುದ್ಧವಾಗಿ ವರ್ತಿಸಿ.

ಕನ್ಯಾ
ಗುರಿ ಸಾಧನೆಗೆ ಪೂರಕ ದಿನ. ಸಂಬಂಧದಲ್ಲಿ ಒಡಕು ಮೂಡದಂತೆ ಎಚ್ಚರದಿಂದ ನಡಕೊಳ್ಳಿ. ವೃದ್ಧರು ಆಹಾರದಲ್ಲಿ ಎಚ್ಚರ ವಹಿಸಿ.

ತುಲಾ
ನಿಮ್ಮ ಕಾರ್ಯದಲ್ಲಿ ದಿನವಿಡೀ ವ್ಯಸ್ತ. ಇತರರೂ ತಮ್ಮ ಸಮಸ್ಯೆ ಹಿಡಿದುಕೊಂಡು ನಿಮ್ಮ ಬಳಿ ಬರುತ್ತಾರೆ. ನೆಮ್ಮದಿ, ವಿರಾಮ ದೂರ.

ವೃಶ್ಚಿಕ
ಬಿಡುವಿರದ ದಿನ. ಹೆಚ್ಚು ಹೊಣೆಗಾರಿಕೆ. ಸಂಬಂಧದಲ್ಲಿ ಮೂಡಿದ ಬಿಕ್ಕಟ್ಟು ಬಗೆಹರಿಸಲು ಹೆಚ್ಚು ಸಮಯ ವ್ಯಯ. ಖರೀದಿಯಿಂದ ಖರ್ಚು.

ಧನು
ನಿಮ್ಮ ಬದುಕಲ್ಲಿ ಕೆಲವು ಬದಲಾವಣೆ ಉಂಟಾದೀತು. ಗುಣಾತ್ಮಕ ಪ್ರಗತಿ. ಸಂಬಂಧ ಗಟ್ಟಿಗೊಳ್ಳಲಿದೆ. ದೈಹಿಕ ಶ್ರಮ ಅತಿಯಾಗಿಸಬೇಡಿ.

ಮಕರ
ಹಳೆಯ ಚಿಂತೆ ಮರೆತು ಮುಂದೆ ಸಾಗಿರಿ. ಒತ್ತಡವನ್ನು ನಿಭಾಯಿಸುವ ಕಲೆ ಅರಿಯಿರಿ. ಸಣ್ಣ ವಿಷಯಕ್ಕೆ ದುಡುಕಿನ ವರ್ತನೆ ತೋರದಿರಿ.

ಕುಂಭ
ಕುಟುಂಬ, ಸ್ನೇಹಿತರ ಜತೆ ಆತ್ಮೀಯವಾಗಿ ಕಾಲ ಕಳೆಯುವ ಅವಕಾಶ. ಆದರೂ ಯಾವುದೋ ಕೊರಗು ಮನದೊಳಗೆ ಕಾಡುತ್ತಿರುತ್ತದೆ.

ಮೀನ
ಸಣ್ಣ ವಿಷಯಕ್ಕೂ ಅತಿರೇಕದ ಪ್ರತಿಕ್ರಿಯೆ ತೋರದಿರಿ. ಸಮಾಧಾನದ ನಡೆ ಅವಶ್ಯ. ಇತರರ ಜತೆ ಅನ್ಯೋನ್ಯತೆ ಸಾಧಿಸಿ, ಅದರಿಂದ ಕಾರ್ಯಸಿದ್ಧಿ.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ : 3,7,2,9

ಜಾಗತಿಕ ಬೆಳವಣಿಗೆಯಿಂದ ಬೆಲೆ ಹೆಚ್ಚಳ: ವಿಜಯೇಂದ್ರ

ಸಿಎಂ ತೈಲ ಸುಂಕ ಇಳಿಸಲಿ: ಬಿವೈವಿ

• **ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಹಿಂದೆ ತೈಲ ಬೆಲೆ ಹತ್ತು ರೂಪಾಯಿ ಕಡಿಮೆ ಮಾಡುತ್ತೇನೆ ಎಂದಿದ್ದರು. ಈಗ ರಾಜ್ಯದ ಜನರ ಒಳಿತಿಗಾಗಿ ತೈಲದ ಮೇಲಿನ ತೆರಿಗೆ ಕಡಿಮೆ ಮಾಡಲಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸವಾಲು ಹಾಕಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಶನಿವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಕೇಂದ್ರದಿಂದ ಮೂರನೇ ಬಾರಿಗೆ ತೈಲ ಬೆಲೆ ಏರಿಕೆ ಆಗಿದೆ. ಜಾಗತಿಕ ಬೆಳವಣಿಗೆಯಿಂದ ಅನಿವಾರ್ಯವಾಗಿ ಕೇಂದ್ರ ಸರ್ಕಾರ ತೈಲ ಬೆಲೆ ಏರಿಸಿದೆ. ಸರ್ಕಾರಕ್ಕೆ ಇಷ್ಟ ಇಲ್ಲದೇ ಇದ್ದರೂ ಕಠಿಣ ನಿರ್ಧಾರ ಕೈಗೊಂಡಿದೆ. ಜಾಗತಿಕ ಸ್ಥಿತಿಗತಿಯನ್ನು ಸಿದ್ದರಾಮಯ್ಯ ಅವರು ಅರ್ಥ ಮಾಡಿಕೊಂಡು ತೈಲದ ಮೇಲಿನ ಹೆಚ್ಚುವರಿ ತೆರಿಗೆಯನ್ನು ಇಳಿಸಲಿ ಎಂದು ಆಗ್ರಹಿಸಿದರು.

ಸಚಿವ ಪ್ರಿಯಾಂಕ್ ಖರ್ಗೆ ಅವರು ಬಿಜೆಪಿಗೆ ಬುದ್ಧಿ ಹೇಳುವುದು ಬಿಟ್ಟು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಹೆಚ್ಚುವರಿ ತೆರಿಗೆಯನ್ನು ಕಡಿಮೆ ಮಾಡಿ ದೇಶಕ್ಕೆ ಮಾದರಿಯಾಗುವ ಕೆಲಸ ಮಾಡಿಸಲಿ. ಈ ವಿಷಯದಲ್ಲಿ ಅವರು ಮುಖ್ಯಮಂತ್ರಿಯವರಿಗೆ ಬುದ್ಧಿ ಹೇಳಲಿ ಎಂದರು.

ರೈತರ ಕುರಿತು ಕಾಳಜಿಯಿಲ್ಲ: ಆನೇಕಲ್ ಸಮೀಪ ರೈತರ ಫಲವತ್ತಾದ ಜಮೀನನ್ನು ಪಡೆದು ಕ್ರಿಕೆಟ್ ಸ್ಟೇಡಿಯಂ ನಿರ್ಮಿಸುತ್ತಿರುವ ಸಂಬಂಧ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ವಿಜಯೇಂದ್ರ, ಕಾಂಗ್ರೆಸ್ ಸರ್ಕಾರಕ್ಕೆ ರೈತರ ಬಗ್ಗೆ ಅಸಡ್ಡೆ ಇದೆ. ಅವರ ಸಮಸ್ಯೆ ತಿಳಿದಿಲ್ಲ. ಬದಲಿಗೆ ರಿಯಲ್ ಎಸ್ಟೇಟ್ ದಂಧೆಯಲ್ಲಿ ತೊಡಗಿದೆ. ರಾಜ್ಯದಲ್ಲಿ ನೆರೆ ಬಂದಾಗ ಸರ್ಕಾರ ರೈತರ ಪರವಾಗಿ ನಿಲ್ಲಲಿಲ್ಲ. ಬರಗಾಲ ಇದ್ದಾಗಲೂ ಸಹಾಯ ಮಾಡಲಿಲ್ಲ. ಉಸ್ತುವಾರಿ ಸಚಿವರು ಹಾಗೂ ಕ್ಷೇತ್ರದ ಶಾಸಕರು ತಮ್ಮ ಜನರ ನೋವು ಆಲಿಸಲಿಲ್ಲ ಎಂದು ಟೀಕಿಸಿದರು.

ಬೆಂಗಳೂರು ವಿಮಾನನಿಲ್ದಾಣದ ಸಮೀಪ ಸಾವಿರಾರು ಎಕರೆ ಜಾಗವಿದೆ. ಅಲ್ಲೇ ಸ್ಟೇಡಿಯಂ ನಿರ್ಮಿಸಬಹುದಿತ್ತು. ಅದು ಬಿಟ್ಟು ಆನೇಕಲ್‌ನಲ್ಲಿ ಫಲವತ್ತಾದ ಜಮೀನು ಪಡೆದು ರೈತರಿಗೆ ಪದೇ ಪದೇ ತೊಂದರೆ ಕೊಡುತ್ತಿದ್ದಾರೆ. ಅನ್ನದಾತರ ಹಿತಾಸಕ್ತಿ ಕಡೆಗಣಿಸಲು ಅವಕಾಶ ನೀಡುವುದಿಲ್ಲ. ರೈತರ ಪರವಾಗಿ ಬಿಜೆಪಿ ನಿಲ್ಲಲಿದೆ ಎಂದು ಹೇಳಿದರು.



“ ರಾಜ್ಯಸಭೆ ಅಭ್ಯರ್ಥಿ ಆಯ್ಕೆ ವಿಚಾರದಲ್ಲಿ ಚರ್ಚೆ ಆಗಿದೆ. ಒಬ್ಬರಿಗೆ ಅವಕಾಶವಿದೆ. ದೇವೇಗೌಡರನ್ನು ರಾಜ್ಯಸಭೆಗೆ ಕಳಿಸಲು ಬಿಜೆಪಿ ವಿರೋಧಿಸಿಲ್ಲ. ದೇವೇಗೌಡರಿಗೆ ಅವಕಾಶ ನೀಡುವ ನಿರ್ಧಾರ ರಾಷ್ಟ್ರೀಯ ನಾಯಕರದ್ದು. ಈ ಸಂಬಂಧ ಯಾವುದೇ ಸೂಚನೆ ಸಿಕ್ಕಿಲ್ಲ.

■ **ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ**

ಅಮೆರಿಕ-ಭಾರತ ಬಂಧ ವೃದ್ಧಿ ಯತ್ನ

ಪುಟ ೧➔ ಅಮೆರಿಕದ ವಿದೇಶಾಂಗ ಇಲಾಖೆ ಬಿಡುಗಡೆ ಮಾಡಿದ ಮಾಹಿತಿ ಪ್ರಕಾರ, ಎರಡೂ ರಾಷ್ಟ್ರಗಳು ವ್ಯಾಪಾರ, ರಕ್ಷಣಾ ಸಹಕಾರವನ್ನು ಮತ್ತಷ್ಟು ಗಟ್ಟಿಗೊಳಿಸುವುದರ ಜತೆಗೆ ಉದಯೋನ್ಮುಖ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಹಯೋಗ ವೇಗಗೊಳಿಸಲು ಒಪ್ಪಿಕೊಂಡಿವೆ.

ಕ್ವಾಡ್ ಸಭೆಗೆ ಸಜ್ಜು: ಭಾರತದಲ್ಲಿ ನಡೆಯಲಿರುವ ಕ್ವಾಡ್ ವಿದೇಶಾಂಗ ಸಚಿವರ ಸಭೆಯನ್ನು ಯಶಸ್ವಿಯಾಗಿ ಆಯೋಜಿಸುತ್ತಿರುವುದಕ್ಕೆ ರೂಬಿಯೊ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಇಂಡೋ-ಪೆಸಿಫಿಕ್ ಪ್ರದೇಶವನ್ನು ಮುಕ್ತ ಮತ್ತು ಸಮತೋಲನಯುತವಾಗಿಡಲು ಭಾರತ, ಅಮೆರಿಕ, ಜಪಾನ್ ಮತ್ತು ಆಸ್ಟ್ರೇಲಿಯಾ ಸಹಕಾರ ಮುಂದುವರಿಸಲಿದೆ ಎಂದು ತಿಳಿಸಿದ್ದಾರೆ.

ಪಶ್ಚಿಮ ಏಷ್ಯಾ ಸ್ಥಿತಿ ಕುರಿತು ಚರ್ಚೆ

ಪುಟ ೧➔ ಮಾರುಕಟ್ಟೆಯನ್ನು ಇರಾನ್ ಒತ್ತೆಯಾಳಾಗಿಸಲು ಅಮೆರಿಕ ಅವಕಾಶ ನೀಡುವುದಿಲ್ಲ ಎಂದು ರೂಬಿಯೊ ಸ್ಪಷ್ಟಪಡಿ ಸಿದ್ದು, ಅಮೆರಿಕದ ಇಂಧನ ಉತ್ಪನ್ನಗಳು ಭಾರತದ ಇಂಧನ ಮೂಲಗಳನ್ನು ವೈವಿಧ್ಯಗೊಳಿಸಲು ನೆರವಾಗಲಿವೆ ಎಂದಿದ್ದಾರೆ.

ಮದರ್ ಹೌಸ್‌ಗೆ ಭೇಟಿ

ಇದಕ್ಕೂ ಮುನ್ನ ಕೋಲ್ಕತ್ತಾಗೆ ಆಗಮಿಸಿದ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಮತ್ತು ಆ ದೇಶದ ಉನ್ನತ ರಾಜತಾಂತ್ರಿಕರು ಸೇಂಟ್ ತೆರೇಸಾ ಅವರ ಮಿಷನರೀಸ್ ಆಫ್ ಚಾರಿಟಿಯ ಪ್ರಧಾನ ಕಚೇರಿಯಾದ ಮದರ್ ಹೌಸ್‌ಗೆ ಭೇಟಿ ನೀಡಿದರು. ಬಳಿಕ ಅವರು ಹೊಸದಿಲ್ಲಿಗೆ ತೆರಳಿದರು.

ಮಿಷನ್ 500 ಗುರಿಗೆ ವೇಗ

2030ರೊಳಗೆ ದ್ವಿಪಕ್ಷೀಯ ವ್ಯಾಪಾರವನ್ನು ದ್ವಿಗುಣಗೊಳಿಸುವ ಮಿಷನ್ 500 ಗುರಿ ಸಾಧನೆಗೆ ಮಹತ್ವದ ಹೂಡಿಕೆಗಳ ಬಗ್ಗೆ ಉಭಯ ನಾಯಕರು ಚರ್ಚೆ ನಡೆಸಿದರು ಎಂದು ಅಮೆರಿಕದ ವಿದೇಶಾಂಗ ಇಲಾಖೆ ತಿಳಿಸಿದೆ.

ಅಮೆರಿಕಗೆ ಭೇಟಿ ನೀಡುವಂತೆ ಮೋದಿಗೆ ಟ್ರಂಪ್ ಆಹ್ವಾನ

ಅಮೆರಿಕಗೆ ಭೇಟಿ ನೀಡುವಂತೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪ್ರಧಾನಿ ಮೋದಿ ಅವರನ್ನು ಆಮಂತ್ರಿಸಿದ್ದಾರೆ. ಈ ಕುರಿತು ಶನಿವಾರ ಭಾರತಕ್ಕೆ ಭೇಟಿ ನೀಡಿರುವ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಪ್ರಸ್ತುತ ವಿಚಾರವನ್ನು ಪ್ರಧಾನಿ ಮೋದಿ ಅವರಿಗೆ ಹೇಳಿದ್ದಾರೆ. ದಿಲ್ಲಿಗೆ ಬಂದಿಳಿದ ಬೆನ್ನಲ್ಲೇ ರುಬಿಯೊ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿದ್ದು ರಕ್ಷಣೆ, ವ್ಯಾಪಾರ, ಇಂಧನ ಮತ್ತು ತಂತ್ರಜ್ಞಾನ ರಂಗಗಳಲ್ಲಿ ಭಾರತ-ಅಮೆರಿಕ ದ್ವಿಪಕ್ಷೀಯ ಬಾಂಧವ್ಯಗಳ ಕುರಿತು ಚರ್ಚಿಸಿದ್ದಾರೆ.

ಎಸ್ಸಿ, ಎಸ್ಟಿ ಮೀಸಲಾತಿಯಲ್ಲಿ ಸರ್ಕಾರಗಳ ಚೆಲ್ಲಾಟ: ಉಗ್ರಪ್ಪ

• **ವಿಜಯನಗರ:** ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿಯನ್ನು ಹೆಚ್ಚಿಸಿ, ತಟ್ಟೆಗೆ ಅನ್ನ ಇಟ್ಟಂತೆ ಮಾಡಿದ್ದ ಸರ್ಕಾರಗಳು, ಈಗ ಅದಕ್ಕೆ ಕೋರ್ಟ್ ತಡೆಯಾಜ್ಞೆ (ಸ್ಟೇ) ಬರುವಂತೆ ಮಾಡಿ ನಮ್ಮ ಬದುಕಿನೊಂದಿಗೆ ಆಟವಾಡುತ್ತಿವೆ ಎಂದು ಮಾಜಿ ಸಂಸದ ವಿ.ಎಸ್.ಉಗ್ರಪ್ಪ ಆಕ್ರೋಶ ವ್ಯಕ್ತಪಡಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಬಸವರಾಜ್ ಬೊಮ್ಮಾಯಿ ಅವರು ಸಿಎಂ ಆಗಿದ್ದಾಗ ನಾಗ ಮೋಹನ್ ದಾಸ್ ಸಮಿತಿ ವರದಿ ಆಧರಿಸಿ ಮೀಸಲಾತಿ ಹೆಚ್ಚಿಸಲಾಯಿತು. ಇದನ್ನು ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರಿಸಲು 2023ರ ಕೇಂದ್ರಕ್ಕೆ ಪತ್ರ ಬರೆಯಲಾಗಿತ್ತು ಎಂದರು.

ವಿಬಿ-ಜಿ ರಾಮ್‌ಜಿ ಜು.1ರಿಂದ ಜಾರಿ

ಪುಟ ೧➔ **ವಿಕಸಿತ ಭಾರತಕ್ಕಾಗಿ ಬದಲಾವಣೆ:** ವಿಕಸಿತ ಭಾರತ 2047 ದೃಷ್ಟಿಕೋನಕ್ಕೆ ಹೊಂದಿಕೊಳ್ಳುವಂತೆ ಗ್ರಾಮೀಣ ಅಭಿವೃದ್ಧಿಗೆ ಹೊಸ ತಲೆಮಾರಿನ ರೂಪರೇಷೆಯಾಗಿ ಈ ಕಾಯ್ದೆ ರೂಪಿಸಲಾಗಿದೆ. ಉದ್ಯೋಗ ಖಾತರಿ ಅವಧಿಯನ್ನು 100 ದಿನಗಳಿಂದ 125 ದಿನಗಳಿಗೆ ಹೆಚ್ಚಿಸಲಾಗಿದ್ದು, ಗ್ರಾಮೀಣ ಮೂಲಸೌಕರ್ಯ ನಿರ್ಮಾಣ, ಹವಾಮಾನ ಸಹಿಷ್ಣುತೆ ಮತ್ತು ಗ್ರಾಮ ಪಂಚಾಯಿತಿ ಮಟ್ಟದ ಯೋಜನೆಗಳಿಗೆ ಹೆಚ್ಚಿನ ಒತ್ತು ನೀಡಲಾಗಿದೆ.

ಮಾರ್ಗದರ್ಶಕ ಸಮಿತಿ ರಚನೆ: ಹೊಸ ವ್ಯವಸ್ಥೆಯಲ್ಲಿ ರಾಷ್ಟ್ರೀಯ ಮಟ್ಟದ ಮಾರ್ಗದರ್ಶಕ ಸಮಿತಿ ರಚನೆಯಾಗಲಿದ್ದು, ಯೋಜನೆ ಅನುಷ್ಠಾನ, ಹಣಕಾಸು ಹಂಚಿಕೆ, ತಂತ್ರಜ್ಞಾನ ಆಧಾರಿತ ಮೇಲ್ವಿಚಾರಣೆ ಮತ್ತು ವಿವಿಧ ಇಲಾಖೆಗಳ ಸಮನ್ವಯಕ್ಕೆ ಮಾರ್ಗದರ್ಶನ ನೀಡಲಿದೆ. ಈ ಸಮಿತಿಯಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆ, ನೀತಿ ಆಯೋಗ, ವಿವಿಧ ಕೇಂದ್ರ ಸಚಿವಾಲಯಗಳು, ರಾಜ್ಯ ಸರ್ಕಾರಗಳು ಹಾಗೂ ತಾಂತ್ರಿಕ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

ತಂತ್ರಜ್ಞಾನ ಆಧರಿತ: ದೂರು ಪರಿಹಾರ ವ್ಯವಸ್ಥೆಯನ್ನು ಸಂಪೂರ್ಣ ತಂತ್ರಜ್ಞಾನ ಆಧಾರಿತವಾಗಿ ರೂಪಿಸುವ ಉದ್ದೇಶವಿದ್ದು, ನೋಂದಣಿ, ಮೇಲ್ದರ್ಜೆ ಅಪೀಲಾತ್ಮಕ ವ್ಯವಸ್ಥೆ ಹಾಗೂ ಮೇಲ್ವಿಚಾರಣೆಗೆ ಡಿಜಿಟಲ್ ಮೂಲಸೌಕರ್ಯ ಬಳಸಲಾಗುತ್ತದೆ.

ವೇತನ ಮತ್ತು ನಿರುದ್ಯೋಗ ಭತ್ಯೆಯನ್ನು ನೇರ ಲಾಭ ವರ್ಗಾವಣೆ (ಡಿಬಿಟಿ) ಮೂಲಕವೇ ಪಾವತಿಸಲಾಗುವುದು. ಕೆಲಸಕ್ಕೆ ಬೇಡಿಕೆ ಬಂದ 15 ದಿನಗಳೊಳಗೆ ಉದ್ಯೋಗ ಒದಗಿಸಬೇಕು. ವಿಫಲವಾದರೆ ನಿರುದ್ಯೋಗ ಭತ್ಯೆ ನೀಡಬೇಕಾಗುತ್ತದೆ ಎಂದು ಕರಡು ನಿಯಮಗಳಲ್ಲಿ ಸ್ಪಷ್ಟಪಡಿಸಲಾಗಿದೆ.

ಸದ್ಯಕ್ಕೆ ಹಳೆಯ ಕಾರ್ಡ್‌ಗಳೇ ಮಾನ್ಯ

ಪುಟ ೧➔ ಕರಡು ನಿಯಮಗಳ ಕುರಿತು ಆಕ್ಷೇಪಣೆ ಹಾಗೂ ಸಲಹೆಗಳನ್ನು ಜೂನ್ 21ರವರೆಗೆ ಸಲ್ಲಿಸಲು ಅವಕಾಶ ನೀಡಲಾಗಿದ್ದು, ಬಳಿಕ ಅಂತಿಮ ನಿಯಮಾವಳಿ ಪ್ರಕಟವಾಗಲಿದೆ.

ಕಾರ್ಮಿಕರ ಕನಿಷ್ಠ ವೇತನ ಶೇ.60 ಹೆಚ್ಚಳ

ಪುಟ ೧➔ ಪರಿಷ್ಕೃತ ಕನಿಷ್ಠ ವೇತನದ ಕರಡು ಅಧಿಸೂಚನೆಯನ್ನು ಕಳೆದ ವರ್ಷದ ಏಪ್ರಿಲ್ 11ರಂದು ಹೊರಡಿಸಲಾಗಿತ್ತು. 2016-2017ರಲ್ಲಿ ಜಾರಿಗೆ ಬಂದ ಕೊನೆಯ ಪರಿಷ್ಕರಣೆಯ ಒಂದು ದಶಕದ ನಂತರ ಈ ಪರಿಷ್ಕರಣೆ ಜಾರಿಗೆ ಬಂದಿದೆ. ಕಾರ್ಮಿಕ ಸಂಘಗಳು ಕನಿಷ್ಠ ವೇತನ ಅಧಿಸೂಚನೆ ಹೊರಡಿಸಲು ಒತ್ತಾಯಿಸುತ್ತಿದ್ದವು. ಆದರೆ ಕೈಗಾರಿಕೆಗಳು, ವಿಶೇಷವಾಗಿ ಎಂಎಸ್‌ಎಂಇ ವಲಯದಿಂದ ವಿರೋಧ ವ್ಯಕ್ತವಾಗಿತ್ತು.

ಕನಿಷ್ಠ ವೇತನ ಹೆಚ್ಚಿಸಿದ ದೇಶದ 3ನೇ ರಾಜ್ಯ: ಕಾರ್ಮಿಕರ ಕನಿಷ್ಠ ವೇತನ ಹೆಚ್ಚಳದ ಅಧಿಸೂಚನೆಯನ್ನು ಹೊರಡಿಸಿದ ದೇಶದ ಮೂರನೇ ರಾಜ್ಯ ಎಂಬ ಕೀರ್ತಿಗೆ ಕರ್ನಾಟಕ ಈಗ ಪಾತ್ರವಾಗಿದೆ. ಈಗಾಗಲೇ ಉತ್ತರ ಪ್ರದೇಶ ಮತ್ತು ಹರಿಯಾಣದಲ್ಲಿ ಈ ಸಂಬಂಧ ಅಧಿಸೂಚನೆ ಹೊರಡಿಸಲಾಗಿದೆ. ಈಗಿನ ಪ್ರಸ್ತುತ ಪರಿಷ್ಕರಣೆಯು 1991ರ ರೆಪ್ಟಕೋಸ್ ಬ್ರೆಟ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನಿಗದಿಪಡಿಸಿರುವ ಮಾರ್ಗಸೂಚಿಗಳ ಪ್ರಕಾರವೇ ಏರಿಕೆ ಮಾಡಲಾಗಿದೆ. ಮನೆಗಳಲ್ಲಿ ದಿನನಿತ್ಯದ ವೆಚ್ಚದ ಲೆಕ್ಕಾಚಾರದ ಮೇಲೆ ಇದನ್ನು ಜಾರಿ ಮಾಡಲಾಗಿದೆ.



“ ಇಎಸ್‌ಐ ಮತ್ತು ಪಿಎಫ್‌ಗಳಿಗೆ ವೇತನ ಕಡಿತ ಮಾಡಿದ ನಂತರ ಕಾರ್ಮಿಕರಿಗೆ ಕಡಿಮೆ ವೇತನ ಉಳಿಯುತ್ತಿತ್ತು. ಕೆಲವರು ಬಿಪಿಎಲ್ ವ್ಯಾಪ್ತಿಯಿಂದಲೂ ಹೊರಗಿದ್ದರು. ಅಂತಹವರಿಗೆಲ್ಲ ಈ ಕನಿಷ್ಠ ವೇತನ ಹೆಚ್ಚಳದಿಂದ ಸಹಾಯವಾಗಲಿದೆ. ಇದೊಂದು ಕ್ರಾಂತಿಕಾರಕ ಕ್ರಮವೆಂದೇ ಹೇಳಬಹುದು. ಹೊಸ ಕನಿಷ್ಠ ವೇತನ ಜಾರಿಯಿಂದ ರಾಜ್ಯದಲ್ಲಿನ ಸಾಕಷ್ಟು ಕಾರ್ಮಿಕರಿಗೆ ಅನುಕೂಲವಾಗಲಿದೆ.

■ **ಸಂತೋಷ್ ಎಸ್. ಲಾಡ್, ಕಾರ್ಮಿಕ ಸಚಿವ**

ಮುಸ್ಲಿಂ ಲೀಗ್ ಆಗುತ್ತಿರುವ ಕಾಂಗ್ರೆಸ್: ಜೋಶಿ

• **ಹುಬ್ಬಳ್ಳಿ:** ಮುಸ್ಲಿಂ ಸಮುದಾಯ ಓಲೈಕೆಗೆ ಕಾಂಗ್ರೆಸ್ ರಾಜ್ಯದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ, ಮತಾಂಧ ಶಕ್ತಿಗಳ ಮೇಲಿನ ಪ್ರಕರಣ ಹಿಂಪಡೆಯುವುದು, ವಿಶೇಷ ಅನುದಾನ ಬಿಡುಗಡೆ ಮಾಡುವ ಮೂಲಕ ತುಷ್ಟೀಕರಣ ಮಾಡುತ್ತಿದೆ. ಕಾಂಗ್ರೆಸ್ ಈಗ ಸ್ವಾತಂತ್ರ್ಯೋತ್ತರದ, ಆಧುನಿಕ ಮುಸ್ಲಿಂ ಲೀಗ್ ಆಗಿ ಪರಿವರ್ತನೆ ಆಗುತ್ತಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಕಿಡಿಕಾರಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್ ಐ ಆರ್ ಮೂಲಕ ಮತದಾರರ ಪಟ್ಟಿಯನ್ನು ಶುದ್ಧೀಕರಿಸಿದ್ದರೆ ಪಶ್ಚಿಮ ಬಂಗಾಳದಲ್ಲಿ 90 ಲಕ್ಷ ಮಂದಿ ಹೊರಗೆ ಹೋಗುತ್ತಿರಲಿಲ್ಲ. ಬಾಂಗ್ಲಾ ನುಸುಳುಕೋರರು ದೇಶದ್ರೋಹ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿರುವುದು, ಪೊಲೀಸರು ಅವರನ್ನು ಬಂಧಿಸಿ ಗಡಿಪಾರು ಮಾಡುತ್ತಿರುವುದು ಕಾಂಗ್ರೆಸ್‌ಗೆ ಗೊತ್ತಿಲ್ಲವೇ? ಎಂದು ಪ್ರಶ್ನಿಸಿದರು.

ರಾಜ್ಯದಲ್ಲಿ ಎಸ್ ಐ ಆರ್ ವಿರೋಧಿಸುವ ಕಾಂಗ್ರೆಸ್, ಕೇರಳದಲ್ಲಿ ಎಸ್‌ಐಆರ್ ಬೆಂಬಲಿಸಿ, ತಮಿಳುನಾಡಿನಲ್ಲಿ ಆ ಕುರಿತು ಯಾವುದೇ ಆಕ್ಷೇಪ ವ್ಯಕ್ತಪಡಿಸಿಲ್ಲ. ಅದಕ್ಕೆ ನಿರ್ದಿಷ್ಟ ನೀತಿಯೇ ಇಲ್ಲವಾಗಿದ್ದು, ಭೌದ್ಧಿಕವಾಗಿ ದಿವಾಳಿಯಾಗಿದೆ ಎಂದು ಹೇಳಿದರು.

ಸಭಾಭವನ ಲಾಭಾಂಶ ಶಿಕ್ಷಣಕ್ಕೆ ವಿನಿಯೋಗ

ಪುಟ ೧➔ ಸಾಮಾಜಿಕ ಬದ್ಧತೆಯೇ ನಮ್ಮ ಧ್ಯೇಯ. ಪಾಲೆಮಾರ್ ಕನ್ವೆನ್ಶನ್ ಸೆಂಟರ್ ವಿಕಾಸ್ ಎಜುಕೇಷನ್ ಟ್ರಸ್ಟ್‌ನಲ್ಲಿ ಕಾರ್ಯನಿರ್ವಹಿಸಲಿದೆ. ಈ ಮೂಲಕ ವಿದ್ಯೆಗೆ ಪ್ರೋತ್ಸಾಹ ನೀಡಲಾಗುವುದು. ಹಿಂದಿನಿಂದಲೂ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಲಾಗುತ್ತಿದ್ದು, ಅದನ್ನು ಮುಂದುವರಿಸಲಾಗುವುದು. ನೂತನ ಸಭಾಭವನದಲ್ಲಿ ಹೆಚ್ಚು ಹೆಚ್ಚು ಕಾರ್ಯಕ್ರಮಗಳು ನಡೆದರೆ ಅದರ ಲಾಭಾಂಶ ಸಮಾಜಕ್ಕೇ ವಾಪಸು ಸಿಗಲಿದೆ ಎಂದವರು ಹೇಳಿದರು.

ಕರಾವಳಿಯ ಸಾಂಸ್ಕೃತಿಕ ಶ್ರೀಮಂತಿಕೆಗೆ ಒತ್ತು ನೀಡುವುದು ಮತ್ತು ಇಲ್ಲಿನ ಜನರಿಗೆ ಸುಲಭವಾಗಿ ಕೈಗೆಟಕುವ ದರದಲ್ಲಿ ಅತ್ಯುನ್ನತ ಸೌಲಭ್ಯಗಳ ಸಭಾಂಗಣಗಳನ್ನು ಒದಗಿಸುವುದು ನಮ್ಮ ಮೂಲ ಉದ್ದೇಶವಾಗಿದೆ. ಜನರ ಪ್ರೀತಿ, ವಿಶ್ವಾಸದಿಂದ ಈ ಕಾರ್ಯಸಾಧನೆ ಆಗಿದೆ ಎಂದು ಪಾಲೆಮಾರ್ ಹೇಳಿದರು. ಈ ಸಭಾಭವನಗಳು ವಿವಾಹ ಕಾರ್ಯಕ್ರಮಗಳು, ಸಾಮೂಹಿಕ ವಿವಾಹಗಳು, ಧಾರ್ಮಿಕ-ಸಾಂಸ್ಕೃತಿಕ ಕಾರ್ಯಕ್ರಮಗಳು, ಉದ್ಯೋಗ ಮೇಳಗಳು, ವಸ್ತು ಪ್ರದರ್ಶನಗಳು, ಸಾರ್ವಜನಿಕ ಕಾರ್ಯಕ್ರಮಗಳು ಹಾಗೂ ಮಹಿಳಾ ಸಬಲೀಕರಣದಂತಹ ಸಮಾಜಮುಖಿ ಚಟುವಟಿಕೆಗಳಿಗೆ ಮುಕ್ತವಾಗಿರಲಿವೆ ಎಂದು ಕೃಷ್ಣ ಜೆ. ಪಾಲೆಮಾರ್ ತಿಳಿಸಿದರು.

ಹಲವರಿಗೆ ಗೌರವ

ಕಾರ್ಯಕ್ರಮದಲ್ಲಿ ಶಕ್ತಿನಗರದ ಭಿನ್ನಸಾಮರ್ಥ್ಯದ ಮಕ್ಕಳ ಶಾಲೆ ಸಾನಿಧ್ಯದ ವಿದ್ಯಾರ್ಥಿಗಳಿಗೆ, ಸ್ನೇಹದೀಪ ಸಂಸ್ಥೆ ಸಂಸ್ಥಾಪಕಿ ತಬಸ್ಸುಮ್, ದ್ವಿತೀಯ ಪಿಯುಸಿಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ದಿಶಾ ಪೂಜಾರಿ, ಎಸ್‌ಎಸ್‌ಎಲ್‌ಸಿಯಲ್ಲಿ ಅತ್ಯಧಿಕ ಅಂಕ ಗಳಿಸಿದ ಮಹಾಲಕ್ಷ್ಮಿ ಪೈ, ಮಹಾಲಕ್ಷ್ಮೀ ಭಾರ್ಗವ್, ದಿವ್ಯಾಂಗ ಕಲಾವಿದ ಕೌಶಿಕ್ ಆಚಾರ್ಯ, ಸಮಾಜ ಸೇವಕಿ ಗೀತಾ ಶೆಟ್ಟಿ ಹಾಗೂ ಕುತ್ತಾರು ಬಾಲಸಂರಕ್ಷಣಾ ಕೇಂದ್ರಕ್ಕೆ ಗೌರವಾರ್ಪಣೆ ಸಲ್ಲಿಸಲಾಯಿತು.

ಜೈಲಿನಲ್ಲಿ ಯಾವುದೇ ಘಟನೆ ನಡೆದಿಲ್ಲ: ಸಚಿವ

• **ಬೆಂಗಳೂರು:** ಜೈಲಿನಲ್ಲಿ ದರ್ಶನ್ ಆತ್ಮಹತ್ಯೆಗೆ ಯತ್ನಿಸಿದ್ದಾರೆ ಎಂಬ ವದಂತಿ ಹರಡಿದ ವಿಚಾರ ತಿಳಿದ ತಕ್ಷಣವೇ ನಾನು ಕಾರಾಗೃಹದ ಅಧಿಕಾರಿಗಳಿಂದ ಮೌಖಿಕವಾಗಿ ಮಾಹಿತಿ ಪಡೆದಿದ್ದೇನೆ. ಅಂತಹ ಯಾವುದೇ ಘಟನೆ ನಡೆದಿಲ್ಲ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಸ್ಪಷ್ಟಪಡಿಸಿದರು. ಶನಿವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದರ್ಶನ್ ಅವರು ಆತ್ಮಹತ್ಯೆಗೆ ಯತ್ನಿಸಿದ್ದಾರೆ ಎನ್ನುವುದು ಸತ್ಯಕ್ಕೆ ದೂರ. ಆ ರೀತಿ ಯಾವ ಘಟನೆಗಳು ನಡೆದಿಲ್ಲ ಎಂದರು. ಬಕ್ರೀದ್ ಹಬ್ಬದ ಸಂದರ್ಭದಲ್ಲಿ ಕುರ್ಬಾನಿಗೆ ರಕ್ಷಣೆ ನೀಡುವಂತೆ ವಕ್ಫ್ ಬೋರ್ಡ್ ಪತ್ರ ಬರೆದಿರುವ ಕುರಿತು ಮಾತನಾಡಿದ ಸಚಿವರು, ದೊಡ್ಡ ಹಬ್ಬಗಳ ಸಂದರ್ಭಗಳಲ್ಲಿ ಪೊಲೀಸರು ಹೆಚ್ಚುವರಿ ಎಚ್ಚರಿಕೆ ವಹಿಸುವುದು ಸಾಮಾನ್ಯ. ಅಗತ್ಯವಿದ್ದರೆ ಹೆಚ್ಚಿನ ಭದ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ವಕ್ಫ್ ಬೋರ್ಡ್‌ಗೆ ಯಾವ ಆತಂಕವಿದೆಯೋ ಗೊತ್ತಿಲ್ಲ. ಅವರು ಪತ್ರ ಬರೆದಿದ್ದರೆ, ಅದರ ಪ್ರಕಾರ ಪೊಲೀಸರು ಸ್ಪಂದಿಸುತ್ತಾರೆ ಎಂದು ತಿಳಿಸಿದರು. ಆಳಂದ ಲಾಡ್ಲೆ ಮಶಾಕ್ ದರ್ಗಾ ಪ್ರಕರಣಗಳನ್ನು ವಾಪಸ್ ಪಡೆಯುವ ವಿಚಾರಕ್ಕೆ ಬಿಜೆಪಿ ಹಾಗೂ ಹಿಂದುಪರ ಸಂಘಟನೆಗಳು ವಿರೋಧ ವ್ಯಕ್ತಪಡಿಸಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ವಿರೋಧ ಮಾಡುವುದು ಅವರಿಗೆ ಬಿಟ್ಟ ವಿಚಾರ. ಎಲ್ಲರನ್ನೂ ಸಮಾನವಾಗಿ ಕಾಣಬೇಕು ಎಂದು ಸಂವಿಧಾನ ಹೇಳುತ್ತದೆ. ಕಾಂಗ್ರೆಸ್ ಪಕ್ಷವು ಅದನ್ನೇ ಅನುಸರಿಸುತ್ತಿದೆ ಎಂದು ಹೇಳಿದರು.


ಚಿನ್ನಸ್ವಾಮಿಗೆ ಪರ್ಯಾಯ

ಪುಟ ೧➔ ಇದು ಇನ್ನೆರಡು ವರ್ಷದಲ್ಲಿ ಪೂರ್ಣಗೊಳ್ಳಲಿದ್ದು, ಭವಿಷ್ಯದಲ್ಲಿ ಎಂ.ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಪರ್ಯಾಯ ಆಯ್ಕೆಯಾಗಲಿದೆ ಎಂದರು. ಕ್ರೀಡಾಂಗಣ ನಿರ್ಮಾಣದಿಂದ ಈ ಭಾಗದಲ್ಲಿ ಪ್ರವಾಸೋದ್ಯಮ, ಉದ್ಯೋಗ ಸೃಷ್ಟಿ ಹಾಗೂ ಆರ್ಥಿಕ ಅಭಿವೃದ್ಧಿಗೆ ಹೆಚ್ಚು ಸಹಕಾರಿಯಾಗಲಿದೆ ಎಂದು ಸಿದ್ದರಾಮಯ್ಯ ತಿಳಿಸಿದರು.

ಸೂರು ಇಲ್ಲದ ಬಡವರಿಗೆ ಕಡಿಮೆ ದರದಲ್ಲಿ ಸೂರು ಕಲ್ಪಿಸುವುದು ಸರ್ಕಾರದ ಮುಖ್ಯ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ಸಾವಿರಾರು ನಿವೇಶನ ಹಾಗೂ ಮನೆಗಳನ್ನು ನಿರ್ಮಾಣ ಮಾಡಿ ಕಡಿಮೆ ಬೆಲೆಗೆ ಆರ್ಥಿಕವಾಗಿ ಹಿಂದುಳಿದ ಬಡವರಿಗೆ ಹಂಚಿಕೆ ಮಾಡಲಾಗಿದೆ. ಈ ಕ್ರೀಡಾಂಗಣವನ್ನು ಗೃಹ ಮಂಡಳಿ ವತಿಯಿಂದ ನಿರ್ಮಾಣ ಮಾಡಲಾಗುತ್ತಿದೆ. ಇನ್ನು ಕೆಹೆಚ್‌ಬಿ ಬಡಾವಣೆಯಲ್ಲಿ ಮೂಲೆ ನಿವೇಶನಗಳನ್ನು ಹರಾಜು ಹಾಕುವ ಮೂಲಕ ಸುಮಾರು 20 ಸಾವಿರ ಕೋಟಿ ಹಣ ಮಂಡಳಿಗೆ ಬರುತ್ತದೆ ಈ ಮೂಲಕ ಮಂಡಳಿಯ ಅಭಿವೃದ್ಧಿ ಕಾರ್ಯಗಳು ನಡೆಯಲಿವೆ ಎಂದರು. ಈ ಹಿಂದೆ ಸರ್ಕಾರ ಫಲಾನುಭವಿಗಳಿಗೆ 5 ಲಕ್ಷ ರೂ.ಗಳಿಗೆ ಮನೆ ನೀಡುತ್ತಿತ್ತು. ಇಷ್ಟು ಹಣ ಪಾವತಿಸಲು ಬಡವರಿಗೆ ಸಾಧ್ಯವಿಲ್ಲ ಎಂದು ಭಾವಿಸಿ ನಮ್ಮ ಕಾಂಗ್ರೆಸ್ ಸರ್ಕಾರ ಒಂದು ಲಕ್ಷ ರೂ. ಮಾತ್ರ ಪಡೆದು ಫಲಾನುಭವಿಗಳಿಗೆ ಮನೆ ನೀಡುತ್ತಿದೆ. ಉಳಿದ ಹಣವನ್ನು ಸರ್ಕಾರವೇ ಭರಿಸುತ್ತದೆ. ನಮ್ಮ ಸರ್ಕಾರವು ಈವರೆಗೆ ಒಂದು ಲಕ್ಷ ಮನೆಗಳನ್ನು ಬಡವರಿಗೆ ನೀಡಿದೆ ಎಂದರು. ವಡೇರ ಮಂಚನಹಳ್ಳಿ ಗ್ರಾಮದ ರಸ್ತೆ ಅಭಿವೃದ್ಧಿಗೆ 9 ಕೋಟಿ ಹಣ ಮಂಜೂರು ಮಾಡಿ ಕೆಲಸ ಪ್ರಾರಂಭಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

2 ಸಾವಿರ ಕೋಟಿ ವೆಚ್ಚದಲ್ಲಿ ಕ್ರೀಡಾನಗರ: ಡಿಕೆಶಿ

ಪುಟ ೧➔ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಅನೇಕ ಜನಪರ ಯೋಜನೆಗಳನ್ನು ಜಾರಿ ಮಾಡಿ ಜನರ ಆಶೋತ್ತರಗಳಿಗೆ ಸ್ಪಂದಿಸಿದೆ. ಐದು ಗ್ಯಾರಂಟಿ ಯೋಜನೆಗಳ ಜತೆ ಭೂ ಗ್ಯಾರಂಟಿಯನ್ನೂ ನೀಡಲಾಗಿದೆ ಎಂದು ಹೇಳಿದರು.



ಶಾಲೆ ನಿರ್ಮಾಣಕ್ಕೆ 10 ಎಕರೆ: ಜಮೀರ್

ಪುಟ ೧➔ ಈ ಬಡಾವಣೆಯ 2500 ನಿವೇಶನಗಳಿಗೆ ಸುಮಾರು 16 ಸಾವಿರ ಅರ್ಜಿಗಳು ಬಂದಿವೆ. ಅಭಿವೃದ್ಧಿಪಡಿಸಿದ 4 ಸಾವಿರ ನಿವೇಶನಗಳನ್ನು ಲಾಟರಿ ಮೂಲಕ ಹಂಚಿಕೆ ಮಾಡಲಾಗಿದೆ. ಕೆಎಚ್‌ಬಿ ನಿರ್ಮಿಸಿದ ಈ ಬಡಾವಣೆಯ ನಿವೇಶನಗಳಿಗೆ ಹೆಚ್ಚು ಬೇಡಿಕೆಯಿದ್ದು, ಸ್ಥಳೀಯರಿಗೆ ಶೇ.50 ನಿವೇಶನ ನೀಡಬೇಕು ಎಂದು ಮಾಜಿ ಸಂಸದ ಡಿ.ಕೆ. ಸುರೇಶ್ ಹಾಗೂ ಶಾಸಕ ಬಿ.ಶಿವಣ್ಣ ಮನವಿ ಮಾಡಿದ್ದು, ಮುಂದಿನ ದಿನಗಳಲ್ಲಿ ಇದನ್ನು ಪರಿಗಣಿಸಲಾಗುವುದು ಎಂದರು.

ನಾಲ್ಕೂ ದಿಕ್ಕಲ್ಲಿ ಕ್ರೀಡಾಂಗಣ- ಡಿ.ಕೆ.ಸುರೇಶ್ ಮನವಿ

ಮಾಜಿ ಸಂಸದ ಡಿ.ಕೆ. ಸುರೇಶ್ ಮಾತನಾಡಿ, ಬೆಂಗಳೂರು ನಗರ ಜಿಲ್ಲೆ ಅರ್ಧಭಾಗ ಆನೇಕಲ್ ತಾಲ್ಲೂಕಿಗೆ ಸೇರಿದೆ. ಈ ಭಾಗದಲ್ಲಿ ಕ್ರೀಡಾಂಗಣ ಮಾಡಬೇಕೆಂದು ಮನವಿ ಮಾಡಿದ್ದೆವು. ಇದರೊಂದಿಗೆ ಬೆಂಗಳೂರಿನ ನಾಲ್ಕು ದಿಕ್ಕುಗಳಲ್ಲಿಯೂ ಕ್ರೀಡಾಂಗಣ ನಿರ್ಮಾಣ ಮಾಡಬೇಕೆಂಬುದು ನನ್ನ ಒತ್ತಾಯವಾಗಿದೆ ಎಂದು ಹೇಳಿದರು. ಶಾಸಕ ಬಿ.ಶಿವಣ್ಣ ಮಾತನಾಡಿ, ನಮ್ಮ ಕ್ಷೇತ್ರದಲ್ಲಿ ಸಾವಿರಾರು ಎಕರೆ ಭೂಮಿಯನ್ನು ಗೃಹ ಮಂಡಳಿಗೆ ನೀಡಲಾಗಿದ್ದು, ಈ ಕ್ರೀಡಾಂಗಣ ನಿರ್ಮಾಣದಿಂದ ಅನೇಕ ಅಭಿವೃದ್ಧಿ ಕೆಲಸಗಳು ನಡೆಯುತ್ತವೆ ಎಂದರು. ಕಾರ್ಯಕ್ರಮದಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಶಾಸಕರಾದ ಜಯಚಂದ್ರ, ಕೃಷ್ಣಪ್ಪ. ಮಂಡಳಿಯ ಅಧ್ಯಕ್ಷ ಶಿವಲಿಂಗೇಗೌಡ, ಮಾಜಿ ಸಚಿವ ಎಚ್.ಎಂ.ರೇವಣ್ಣ, ವಿಧಾನಪರಿಷತ್ ಮಾಜಿ ಸದಸ್ಯರಾದ ರಾಮೋಜಿಗೌಡ, ಮಾಜಿ ಸದಸ್ಯರಾದ ವೇಣುಗೋಪಾಲ್, ಮನೋಹರ್, ವಸತಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಕೆ.ಪಿ.ಮೋಹನ್ ರಾಜು, ಆಯುಕ್ತ ಕೆ.ಎ.ದಯನಂದ, ಜಿಲ್ಲಾಧಿಕಾರಿ ಜಗದೀಶ್, ಪೊಲೀಸ್ ವರಿಷ್ಠಾಧಿಕಾರಿ ಚಂದ್ರಕಾಂತ್ ಮತ್ತಿತರರು ಭಾಗವಹಿಸಿದ್ದರು.



ಏನೇನಿರಲಿದೆ?

ಈ ಅತ್ಯಾಧುನಿಕ ಕ್ರೀಡಾಂಗಣದ ಒಳಾಂಗಣ ಬ್ಯಾಡ್ಮಿಂಟನ್, ಬಾಸ್ಕೆಟ್ ಬಾಲ್, ವಾಲಿಬಾಲ್ ಮತ್ತು ಹ್ಯಾಂಡ್ ಬಾಲ್, ಟೇಬಲ್ ಟೆನ್ನಿಸ್, ಸ್ಕ್ವ್ಯಾಷ್, ಕಬಡ್ಡಿ, ಖೋ-ಖೋ, ಜುಡೋ, ಟೈಕ್ವಾಂಡೋ, ಕುಸ್ತಿ, ಫೆನ್ಸಿಂಗ್ ಕೋರ್ಟ್ ಸೌಲಭ್ಯ ಹೊಂದಿರಲಿದೆ. ಹೊರಾಂಗಣವು ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್, ಪಾಡೆಲ್ ಮತ್ತು ಪಿಕಲ್‌ಬಾಲ್ ಆಟಗಳಿಗೂ ಅವಕಾಶ ಇರಲಿದೆ. ಅಂತಾರಾಷ್ಟ್ರೀಯ ಗುಣಮಟ್ಟದ ಈಜುಕೊಳ, ಹೈ-ಡೈವಿಂಗ್ ಪೂಲ್ ಸಹ ನಿರ್ಮಾಣವಾಗಲಿದೆ.

ಬಹು ಮಹಡಿ ಪಾರ್ಕಿಂಗ್: ಏಕಕಾಲದಲ್ಲಿ 500ಕ್ಕೂ ಅಧಿಕ ವಾಹನಗಳ ನಿಲುಗಡೆ ಮಾಡಬಹುದಾದ ಸುಸಜ್ಜಿತ ಬಹುಮಹಡಿ ಪಾರ್ಕಿಂಗ್ ವ್ಯವಸ್ಥೆ ಇರಲಿದೆ. ಮಳಿಗೆಗಳು, ಕ್ರೀಡಾ ಪರಿಕರಗಳ ಅಂಗಡಿ ಮತ್ತು ವಿಶಾಲವಾದ ಉಪಾಹಾರ ಗೃಹಗಳು, ಆಟಗಾರರು ಹಾಗೂ ಕ್ರೀಡಾ ಸಿಬ್ಬಂದಿ ವಾಸ್ತವ್ಯಕ್ಕೆ ಹೈಟೆಕ್ ವಸತಿಗೃಹಗಳು, ಹೆಲಿಪ್ಯಾಡ್ ನಿರ್ಮಾಣವಾಗಲಿದೆ.

ಕೇಂದ್ರೀಯ ವಿದ್ಯಾಲಯಗಳಲ್ಲಿ ಕೇಸರಿ ಶಾಲು ಹಾಕಿಸಲಿ: ಮಧು


• **ಮೈಸೂರು:** ಬಿಜೆಪಿ ನಾಯಕರು ಮೊದಲು ಕೇಂದ್ರೀಯ ವಿದ್ಯಾಲಯಗಳಲ್ಲಿ ಶಾಲು ಹಾಕಿ ಬರಲಿ, ಬಳಿಕ ಉತ್ತರ ಕೊಡ್ತೀನಿ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಕಿಡಿಕಾರಿದರು.

ಮೈಸೂರಿನ ಕುವೆಂಪುನಗರದಲ್ಲಿರುವ ಹಿರಿಯ ಸಾಹಿತಿ ದೇವನೂರು ಮಹದೇವ ಅವರ ಆರೋಗ್ಯ ವಿಚಾರಿಸಿದ ಬಳಿಕ ಮಾತನಾಡಿ, ಸರ್ಕಾರಿ ಶಾಲೆಗಳಲ್ಲಿ ಹಿಜಾಬ್‌ಗೆ ಅವಕಾಶ ನೀಡಿರುವ ಕುರಿತು ಬಿಜೆಪಿ ಮಾಡುತ್ತಿರುವ ಟೀಕೆಗಳ ಬಗ್ಗೆ ಪ್ರತಿಕ್ರಿಯಿಸಿ ವಿದ್ಯಾರ್ಥಿಗಳ



ಸಮವಸ್ತ್ರ ವಿಷಯದಲ್ಲಿ ಕೇಂದ್ರೀಯ ವಿದ್ಯಾಯಲಕ್ಕೆ, ಮಹಾರಾಷ್ಟ್ರಕ್ಕೆ, ಕರ್ನಾಟಕಕ್ಕೆ ಪ್ರತ್ಯೇಕ ನಿಯಮ ಇದೆಯೇ ರಾಜ್ಯದ ಒಟ್ಟು ವಿದ್ಯಾರ್ಥಿಗಳಲ್ಲಿ ಶೇ.95ರಷ್ಟು ಹಿಂದೂ ವಿದ್ಯಾರ್ಥಿಗಳು ಇದ್ದಾರೆ. ಸರ್ಕಾರಿ ನೌಕರರ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಸೇರಿಸುವುದನ್ನು ಕಡ್ಡಾಯ ಮಾಡುವುದು ಸಾಧ್ಯವಿಲ್ಲ ಎಂದರು.

ಯಾವ ಶಾಲೆಗೆ ಸೇರಿಸಬೇಕು ಎಂಬುದು ಪೋಷಕರು ಹಾಗೂ ಮಕ್ಕಳ ಹಕ್ಕು. ಈ ಬಗ್ಗೆ ಸುಪ್ರೀಂ ಕೋರ್ಟ್ ಕೂಡ ಸ್ಪಷ್ಟ ಅಭಿಪ್ರಾಯ ನೀಡಿದೆ. ಆದರೆ ಎಲ್ಲರೂ ಕನ್ನಡ ಶಾಲೆಗಳತ್ತ ಮುಖ ಮಾಡಬೇಕು ಎಂಬುದು ನಮ್ಮ ಆಶಯ ಎಂದು ತಿಳಿಸಿದರು. ಸಾಹಿತಿ ದೇವನೂರು ಮಹದೇವ ಅವರೊಂದಿಗೆ ನಡೆದ ಚರ್ಚೆಯಲ್ಲಿ ಮಕ್ಕಳಿಗೆ ಕಲೆ, ನಾಟಕ ಹಾಗೂ ಸಾಹಿತ್ಯದ ಅರಿವು ಮೂಡಿಸುವ ಕುರಿತು ಸಲಹೆ ಪಡೆದಿರುವುದಾಗಿ ಹೇಳಿದರು. ಜತೆಗೆ ಕೆಪಿಎಸ್ ಶಿಕ್ಷಣದ ಕುರಿತು ಮಹತ್ವದ ಸಲಹೆ ನೀಡಲಾಗಿದೆ ಎಂದು ತಿಳಿಸಿದರು. ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿ ಐದಾರು ಮಂದಿ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರದಾನ್ ಅವರು ಎಲ್ಲಿಗೆ ಹೋಗಿದ್ದರು. ನಾನು ಮೂರ್‍ನಾಲ್ಕು ಪರೀಕ್ಷೆಗಳನ್ನು ನಡೆಸಿದ್ದೇನೆ. ಎಲ್ಲಿಯೂ ಕೂಡ ಸೋರಿಕೆ ಆಗಿಲ್ಲ. ಧರ್ಮೇಂದ್ರ ಪ್ರದಾನ್ ಅವರು ಪರೀಕ್ಷೆ ನಡೆಸುವುದು ಹೇಗೆ ಎಂದು ಕಲಿತಿಲ್ಲ ಎಂದರೆ, ನನ್ನ ಬಳಿಗೆ ಬರಲಿ, ನಾನು ಕಲಿಸಿಕೊಡುತ್ತೇನೆ ಎಂದರು.



ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಶನಿವಾರ ತಿರುಮಲ ತಿರುಪತಿಯ ಶ್ರೀ ವೆಂಕಟೇಶ್ವರ ಸ್ವಾಮಿ ದರ್ಶನ ಪಡೆದು, ವಿಶೇಷ ಪೂಜೆ ಸಲ್ಲಿಸಿದರು. ಸಂಸದ ಬಿ.ವೈ. ರಾಘವೇಂದ್ರ, ಟಿಟಿಡಿ ಸದಸ್ಯ ನರೇಶ್ ಮತ್ತಿತರರು ಜತೆಯಲ್ಲಿದ್ದರು.

ನಿತಿನ್ ಭೇಟಿ: ಪಕ್ಷದಲ್ಲಿ ಉತ್ಸಾಹ

• **ಬೆಂಗಳೂರು:** ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾದ ಬಳಿಕ ಇದೇ ಮೊದಲ ಬಾರಿಗೆ ನಿತಿನ್ ನವೀನ್ ಬೆಂಗಳೂರಿಗೆ ಆಗಮಿಸಿದ್ದಾರೆ. ಇದು ಪಕ್ಷದಲ್ಲಿ ಉತ್ಸಾಹಕ್ಕೆ ಕಾರಣವಾಗಿದೆ. ರಾಷ್ಟ್ರೀಯ ಅಧ್ಯಕ್ಷರ



ಮಾರ್ಗದರ್ಶನದಲ್ಲಿ ಪಕ್ಷ ಸಂಘಟನೆ ಇನ್ನಷ್ಟು ಬಲವಾಗಲಿದೆ.

ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿದ ನಿತಿನ್ ನವೀನ್ ಅವರನ್ನು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ಪ್ರತಿಪಕ್ಷ ನಾಯಕರಾದ ಆರ್. ಅಶೋಕ, ಛಲವಾದಿ ನಾರಾಯಣಸ್ವಾಮಿ, ರಾಜ್ಯ ಉಸ್ತುವಾರಿ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಾಧಾಮೋಹನ್ ದಾಸ್ ಅಗ್ರವಾಲ್, ರಾಜ್ಯ ಸಹ–ಉಸ್ತುವಾರಿ ಸುಧಾಕರ್ ರೆಡ್ಡಿ ಸ್ವಾಗತಿಸಿದ್ದಾರೆ.

15 ದಿನಗಳ ಹಿಂದೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಚಿತ್ರದುರ್ಗಕ್ಕೆ ಆಗಮಿಸಿ ಕಾರ್ಯಕರ್ತರಲ್ಲಿ ರಣೋತ್ಸಾಹ ತುಂಬಿಸಿದ್ದರು. ಅಲ್ಲದೇ ಪ್ರಧಾನಿ ಮೋದಿ ಅವರೂ ಬೆಂಗಳೂರಿಗೆ ಆಗಮಿಸಿ ಸ್ಫೂರ್ತಿ ನೀಡಿದ್ದರು. ಇದೀಗ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರೇ ಆಗಮಿಸುತ್ತಿರುವುದು ಪಕ್ಷ ಸಂಘಟನೆಗೆ ಟಾನಿಕ್ ಆಗಲಿದೆ. ವಿಧಾನಸಭಾ ಚುನಾವಣೆಗೆ ಎರಡು ವರ್ಷ ಬಾಕಿಯಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಚುನಾವಣೆ ಇನ್ನೆರಡು ತಿಂಗಳಲ್ಲಿ ನಡೆಯಲಿದೆ. ಈ ಎಲ್ಲಾ ಚುನಾವಣೆಗಳ ಮೇಲೆ ಕಣ್ಣಿಟ್ಟಿರುವ ಬಿಜೆಪಿ ಸಂಘಟನೆಗೆ ಆದ್ಯತೆ ನೀಡುತ್ತಿದೆ. ಇದಕ್ಕಾಗಿ ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತಿದೆ.

ರಾಷ್ಟ್ರೀಯ ಅಧ್ಯಕ್ಷರ ಕಾರ್ಯಕ್ರಮ

ಬೆಂಗಳೂರಿಗೆ ಆಗಮಿಸಿದ ನಿತಿನ್ ನಬಿನ್ ಅವರು ಜಕ್ಕೂರಿನಲ್ಲಿರುವ ತಮ್ಮ ಸಹೋದರಿ ಮನೆಗೆ ತೆರಳಲಿದ್ದಾರೆ. ಭಾನುವಾರ ಬೆಳಗ್ಗೆ 9 ಗಂಟೆಗೆ ಡಾಲರ್ಸ್ ಕಾಲೊನಿಯಲ್ಲಿರುವ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರ ನಿವಾಸಕ್ಕೆ ಭೇಟಿ, ನಂತರ 10.45ಕ್ಕೆ ಮಲ್ಲೇಶ್ವರದ ಶ್ರೀ ಕಾಡು ಮಲ್ಲೇಶ್ವರ ಸ್ವಾಮಿ ದೇವಸ್ಥಾನಕ್ಕೆ ಭೇಟಿ ಕೊಡುತ್ತಾರೆ. 11.10ಕ್ಕೆ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನಕ್ಕೆ ಆಗಮಿಸುತ್ತಾರೆ. 11.30ರಿಂದ ಜಗನ್ನಾಥ ಭವನದಲ್ಲಿ ವಿವಿಧ ಮೋರ್ಚಾಗಳ ಅಧ್ಯಕ್ಷರು, ಜಾಲತಾಣ, ಐಟಿ ವಿಭಾಗದ ಸಂಚಾಲಕರು ಮತ್ತು ಜಿಲ್ಲಾಧ್ಯಕ್ಷರು ಸೇರಿದಂತೆ ಒಟ್ಟು 235 ಸದಸ್ಯರ ಬೃಹತ್ ಸಭೆ ಏರ್ಪಡಿಸಲಾಗಿದೆ.

ಕಿರುಸುದ್ದಿ

ನಾಳೆಯಿಂದ ಮಂಥನ ಕಾರ್ಯಾಗಾರ

• **ಬೆಂಗಳೂರು:** ಕೌನ್ಸಿಲಿಂಗ್ ಪ್ರಕ್ರಿಯೆ ಕುರಿತು ಜಾಗೃತಿ ಮೂಡಿಸಲು ರಾಜ್ಯದ 65 ಸರ್ಕಾರಿ ಇಂಜಿನಿಯರಿಂಗ್, ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳಲ್ಲಿ ಮೇ 25ರಿಂದ 30ರವರೆಗೆ ಸಿಇಟಿ ಸೀಟು ಹಂಚಿಕೆ ಮಂಥನ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ (ಕೆಇಎ) ಎಚ್.ಪ್ರಸನ್ನ ತಿಳಿಸಿದ್ದಾರೆ. ಮೇ 28ರಂದು ಹೊರತುಪಡಿಸಿ ಎಲ್ಲ ದಿನ ನಿತ್ಯ ಎರಡು ಸೆಷನ್ಸ್ (ಬೆಳಗ್ಗೆ 10ರಿಂದ 12, ಮಧ್ಯಾಹ್ನ 2ರಿಂದ ಸಂಜೆ 4 ಗಂಟೆವರೆಗೆ) ನಡೆಯಲಿದೆ. ನುರಿತ ಹಾಗೂ ಕೆಇಎಯಿಂದ ತರಬೇತಿ ಪಡೆದ ಸಂಪನ್ಮೂಲ ವ್ಯಕ್ತಿಗಳು ಪ್ರಾತ್ಯಕ್ಷಿಕೆ ಮೂಲಕ ಮಾಹಿತಿ ನೀಡಲಿದ್ದಾರೆ ಎಂದು ಹೇಳಿದ್ದಾರೆ. ಮಂಥನದಲ್ಲಿ ಭಾಗವಹಿಸಲು ಇಚ್ಛಿಸುವ ವಿದ್ಯಾರ್ಥಿಗಳು/ಪೋಷಕರು ಕೆಇಎ ವೆಬ್‌ಸೈಟ್‌ನಲ್ಲಿ ಸ್ಲಾಟ್ ಬುಕ್ ಮಾಡಿಕೊಂಡೇ ಕಾಲೇಜುಗಳಿಗೆ ಹೋಗಬೇಕು. ಇದಕ್ಕೆ ವೆಬ್‌ಸೈಟ್‌ನಲ್ಲಿ ಲಿಂಕ್ ಬಿಟ್ಟಿದ್ದು ಅದರಲ್ಲಿ ಸಮಯ ಹಾಗೂ ಕಾರ್ಯಕ್ರಮ ನಡೆಯುವ ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದ್ದಾರೆ.

ಕೇಂದ್ರ ಅನುಮತಿ ನೀಡಿದ್ರೆ ರಾಜ್ಯ ಮಟ್ಟದಲ್ಲೇ ನೀಟ್

• **ಬೆಂಗಳೂರು:** ಕೇಂದ್ರ ಸರ್ಕಾರ ಅನುಮತಿ ನೀಡಿದರೆ ರಾಜ್ಯ ಮಟ್ಟದಲ್ಲೇ ನೀಟ್ ಪರೀಕ್ಷೆ ನಡೆಸಲು ರಾಜ್ಯ ಸರ್ಕಾರ ಸಿದ್ಧವಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು. ನೀಟ್ ಪರೀಕ್ಷೆ ಕುರಿತು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಪ್ರತಿ ವರ್ಷವೂ ನೀಟ್ ಪರೀಕ್ಷೆ ಯಲ್ಲಿ ಒಂದಲ್ಲ ಒಂದು ಎಡವಟ್ಟು ನಡೆಯುತ್ತಿದೆ. ವಿದ್ಯಾರ್ಥಿಗಳು ಹಾಗೂ ಪೋಷಕರು ಸಂಕಷ್ಟಕ್ಕೆ ಸಿಲುಕುತ್ತಿ ದ್ದಾರೆ. ಪರೀಕ್ಷೆಗಳನ್ನು ಜವಾಬ್ದಾರಿಯುತವಾಗಿ ನಡೆಸುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿದರು. ಹಲವಾರು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡ ಘಟನೆಗಳು ನಡೆದಿವೆ. ಪೋಷಕರ ನೋವು ಕೇಳುವವರೇ ಇಲ್ಲದಂತಾಗಿದೆ ಎಂದರು. ರಾಜ್ಯ ಸರ್ಕಾರ ನಡೆಸುತ್ತಿರುವ ಸಿಇಟಿ ಪರೀಕ್ಷೆ ಮಾದರಿಯಾಗಿ ಯಶಸ್ವಿಯಾಗಿ ನಡೆಯುತ್ತಿದೆ. ಇದೇ ಮಾದರಿಯಲ್ಲಿ ನೀಟ್ ಪರೀಕ್ಷೆಯನ್ನೂ ಸಮರ್ಪಕವಾಗಿ ನಡೆಸುವ ಸಾಮರ್ಥ್ಯ ರಾಜ್ಯಕ್ಕಿದೆ ಎಂದು ದಿನೇಶ್ ಗುಂಡೂರಾವ್ ತಿಳಿಸಿದರು.

ದೇಶದ ಮತದಾರರಿಗೆ ಅವಕಾಶ: ಪೂಜಾರಿ

• **ಬೆಂಗಳೂರು:** ಬಡವರು ಮತ್ತು ದುರ್ಬಲರ ಮತವನ್ನು ಕಸಿಯುವ ತಂತ್ರದ ಭಾಗವಾಗಿ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಇಲ್ಲ ಎಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಈ ದೇಶದಲ್ಲಿ ವಾಸವಿದ್ದು, ದೇಶದ ಮತದಾರ ಅಲ್ಲದವರಿಗೆ ಮತ ನಿರಾಕರಿಸಿ, ನೈಜ ಭಾರತೀಯರಿಗೆ ಮಾತ್ರ ಮತದಾನದ ಅವಕಾಶ ಕೊಡುವ ಪ್ರಕ್ರಿಯೆ ಇದಾಗಿದೆ. ದಾಖಲೆ ಕೊಡದವರಿಗೆ ಭಾರತೀಯರೆಂದು ದಾಖಲೆ ಕೊಡುವಂತೆ ನೋಟಿಸ್ ಕೊಡಲಾಗುತ್ತದೆ ಎಂದರು. ವಿದೇಶದಿಂದ ಬಂದು ಅಕ್ರಮವಾಗಿ ನೆಲೆಸಿದವರು, ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆ ತರುವವರಿಗೆ ಮತ ನಿರಾಕರಿಸುವುದು ಇದರ ಮೂಲ ಉದ್ದೇಶಗಳಲ್ಲಿ ಒಂದು. ಕಾಂಗ್ರೆಸ್ಸಿಗರು ಎಸ್‌ಐಆರ್ ಅನ್ನು ಸ್ವಾಗತಿಸಬೇಕು. ಅಪಪ್ರಚಾರ ಮಾಡಬಾರದು. ಎಸ್‌ಐಆರ್ ಜಾರಿಗೆ ಸಹಕರಿಸಿ ಎಂದು ಮನವಿ ಮಾಡಿದರು. ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆ ವಿರುದ್ಧ ಕಾಂಗ್ರೆಸ್ ಟೀಕೆ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ಸಿದ್ದರಾಮಯ್ಯ ಅವರು ಪ್ರಧಾನಿ ಮೋದಿ ಅವರನ್ನು ಟೀಕಿಸಲು ಏನು ಸಿಗುತ್ತದೆ ಎಂದು ಹುಡುಕುತ್ತಿರುತ್ತಾರೆ ಎಂದರು.

943 ಕೋಟಿ ರೂ. ವೆಚ್ಚದಲ್ಲಿ ಅಂತಾರಾಷ್ಟ್ರೀಯ ಕ್ರೀಡಾಂಗಣ: ಸಿಎಂ

ಆರ್ಥಿಕ ಬೆಳವಣಿಗೆಗೆ ಸಹಕಾರಿ

• **ಆನೇಕಲ್:** ಸೂರ್ಯನಗರದಲ್ಲಿ ಕ್ರೀಡಾಂಗಣ ನಿರ್ಮಾಣವಾಗುತ್ತಿರುವುದು ಈ ಪ್ರದೇಶದಲ್ಲಿ ಪ್ರವಾಸೋದ್ಯಮ, ಉದ್ಯೋಗ ಸೃಷ್ಟಿ ಮತ್ತು ಆರ್ಥಿಕ ಬೆಳವಣಿಗೆಗೆ ಚಾಲನೆ ನೀಡುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಇದೇ ವೇಳೆ ಮುಖ್ಯಮಂತ್ರಿಗಳು ಸರ್ಕಾರದ 'ನಮ್ಮ ಮನೆ' ವಸತಿ ಯೋಜನೆ, ಸೂರ್ಯ ಶೈನ್ ಮತ್ತು ಸೂರ್ಯ ಡಿವೈನ್ ವಸತಿ ಸಂಕೀರ್ಣಗಳಿಗೆ ಶಿಲಾನ್ಯಾಸ , ವಸತಿ ಯೋಜನೆಗೆ ಭೂಮಿಯನ್ನು ಒದಗಿಸಿದ ಭೂಮಾಲೀಕರಿಗೆ ಸ್ಥಳಗಳ ಸಾಂಕೇತಿಕ ಹಂಚಿಕೆಯನ್ನು ಉದ್ಘಾಟಿಸಿದ ಬಳಿಕ ಮಾತನಾಡಿ, ಇಲ್ಲಿಯವರೆಗೆ ಬೆಂಗಳೂರು ನಗರ ಮತ್ತು ರಾಜ್ಯವು ಅಂತಾರಾಷ್ಟ್ರೀಯ ಗುಣಮಟ್ಟದ ಕ್ರಿಕೆಟ್ ಕ್ರೀಡಾಂಗಣವನ್ನು ಹೊಂದಿರಲಿಲ್ಲ. ಇಂದು, ಸುಮಾರು 943 ಕೋಟಿ ರೂ. ಅಂದಾಜು ವೆಚ್ಚದಲ್ಲಿ, ರಾಜ್ಯ ಸರ್ಕಾರವು ಆನೇಕಲ್ ತಾಲ್ಲೂಕಿನ ಸೂರ್ಯನಗರ ಲೇಔಟ್‌ನಲ್ಲಿ ಅಂತಾರಾಷ್ಟ್ರೀಯ ಗುಣಮಟ್ಟದ ಕ್ರಿಕೆಟ್ ಕ್ರೀಡಾಂಗಣವನ್ನು ನಿರ್ಮಿಸುತ್ತಿದೆ ಎಂದರು.

ಈ ಕ್ರೀಡಾಂಗಣ ಯೋಜನೆಯನ್ನು ವಸತಿ ಇಲಾಖೆ ಮತ್ತು ಕರ್ನಾಟಕ ವಸತಿ ಮಂಡಳಿ (ಕೆಎಚ್‌ಬಿ) ಜಂಟಿಯಾಗಿ ಕೈಗೆತ್ತಿಕೊಳ್ಳುತ್ತಿದ್ದು, ಸುಮಾರು 80 ಸಾವಿರ ಆಸನ ಸಾಮರ್ಥ್ಯವನ್ನು ಹೊಂದುವ ನಿರೀಕ್ಷೆಯಿದೆ, ಇದು ಗುಜರಾತ್‌ನ ನಂತರ ದೇಶದ ಎರಡನೇ ಅತಿದೊಡ್ಡ ಕ್ರಿಕೆಟ್ ಕ್ರೀಡಾಂಗಣವಾಗಿದೆಂದು ಹೇಳಿದರು. ಚಿನ್ನಸ್ವಾಮಿ ಕ್ರೀಡಾಂಗಣದ ಬಗ್ಗೆ ನಿಮಗೆ ತಿಳಿದಿದೆ. ಒಂದು ವರ್ಷದ ಹಿಂದೆ ಅಲ್ಲಿ ಒಂದು ದುರಂತ ಸಂಭವಿಸಿತ್ತು. ಆನಂತರ ರಾಜ್ಯದಲ್ಲಿ ಒಂದು ಗುಣಮಟ್ಟದ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣವನ್ನು ನಿರ್ಮಿಸುವುದು ಅತ್ಯಗತ್ಯ ಎಂದು ನಾನು ಅರಿತುಕೊಂಡೆ ಎಂದು ಹೇಳಿದರು.



ಸಮಗ್ರ ಅಭಿವೃದ್ಧಿಗೆ ಸರ್ಕಾರ ಬದ್ಧ: ಸಿದ್ದರಾಮಯ್ಯ

ಸೂರ್ಯನಗರದಲ್ಲಿ ಅಂತಾರಾಷ್ಟ್ರೀಯ ಗುಣಮಟ್ಟದ ಕ್ರೀಡಾಂಗಣ ನಿರ್ಮಾಣಕ್ಕೆ ಮುಂದಾಗುವ ಮೂಲಕ ಕ್ರೀಡೆ, ಪ್ರವಾಸೋದ್ಯಮ, ಉದ್ಯೋಗ ಸೃಷ್ಟಿ, ಆರ್ಥಿಕ ಬೆಳವಣಿಗೆ ಸೇರಿ ಎಲ್ಲಾ ದೃಷ್ಟಿಯಿಂದ ಈ ಭಾಗದ ಸಮಗ್ರ ಅಭಿವೃದ್ಧಿಗೆ ನಾವು ಮುಂದಡಿ ಇಟ್ಟಿದ್ದೇವೆ. ಇಲ್ಲಿಯವರೆಗೂ ಕೇವಲ ವಸತಿ ನಿರ್ಮಾಣ ಮಾಡುತ್ತಿದ್ದ ವಸತಿ ಇಲಾಖೆ ಮತ್ತು ಕೆಹೆಚ್‌ಬಿ ಈಗ 80 ಸಾವಿರ ಆಸನ ವ್ಯವಸ್ಥೆಯ ಕ್ರೀಡಾಂಗಣ ನಿರ್ಮಾಣಕ್ಕೆ ಮುಂದಾಗಿರುವುದು ದೂರದೃಷ್ಟಿ ಹೆಜ್ಜೆಯಾಗಿದೆ. ಗುಜರಾತ್ ನಲ್ಲಿರುವ ಕ್ರೀಡಾಂಗಣ 90 ಸಾವಿರ ಆಸನ ವ್ಯವಸ್ಥೆ ಇರುವಂಥದ್ದು. ನಮ್ಮ ರಾಜ್ಯದ್ದು ಎರಡನೇ ದೊಡ್ಡ ಕ್ರೀಡಾಂಗಣವಾಗಿದೆ.

ಇಂತಹ ಅಂತಾರಾಷ್ಟ್ರೀಯ ಗುಣಮಟ್ಟದ ಕ್ರೀಡಾಂಗಣದ ನಿರ್ಮಾಣದೊಂದಿಗೆ, ಈ ಪ್ರದೇಶದಲ್ಲಿ ಪ್ರವಾಸೋದ್ಯಮ ಬೆಳೆಯುತ್ತದೆ. ಸುತ್ತಮುತ್ತಲಿನ ಹಳ್ಳಿಗಳ ಆರ್ಥಿಕತೆಯೂ ಸುಧಾರಿಸುತ್ತದೆ ಎಂದರು. ಈ ಹಿಂದೆ ಪ್ರತಿ ಚದರ ಅಡಿಗೆ ಸುಮಾರು 1,500 ರೂ.ಗಳಷ್ಟಿದ್ದ ಭೂಮಿಯ ಬೆಲೆಗಳು ಈಗ ಪ್ರತಿ ಚದರ ಅಡಿಗೆ 4,000–5,000 ರೂ.ಗಳಿಗೇರಿದೆ ಎಂದು ನಿಮ್ಮ ಹಳ್ಳಿಯ ಜನರು ನನಗೆ ಹೇಳಿದರು. ಏಕೆಂದರೆ ಅಂತರರಾಷ್ಟ್ರೀಯ ಕ್ರೀಡಾಂಗಣ ಬರುತ್ತಿದೆ ಎಂದು ಸಿದ್ದರಾಮಯ್ಯ ಹೇಳಿದರು.

ಈ ಯೋಜನೆಯನ್ನು ಸರ್ಕಾರದ ಆರ್ಥಿಕ ಸಹಾಯವಿಲ್ಲದೆ ಸಂಪೂರ್ಣವಾಗಿ ಕೆಎಚ್‌ಬಿ ನಿಧಿಯನ್ನು ಬಳಸಿಕೊಂಡು ನಿರ್ಮಿಸಲಾಗುವುದು ಎಂದು ಸಿಎಂ ಹೇಳಿದರು. ಖಾಲಿ ನಿವೇಶನಗಳನ್ನು ಹರಾಜು ಮಾಡುವ ಮೂಲಕ ವಸತಿ ಮಂಡಳಿಯು 20,000 ಕೋಟಿ ರೂ.ಗಳನ್ನು ಗಳಿಸುವ ನಿರೀಕ್ಷೆಯಿದೆ ಎಂದರು. ವಸತಿ ಮಂಡಳಿ ಮತ್ತು ವಸತಿ ಇಲಾಖೆಯು ವಸತಿ ಯೋಜನೆಗಳು ಮತ್ತು ಸಂಬಂಧಿತ ಯೋಜನೆಗಳಿಗಾಗಿ ಇಲ್ಲಿಯವರೆಗೆ ರೂ. 7,800 ಕೋಟಿ ಖರ್ಚು ಮಾಡಿದೆ ಎಂದು ಸಿಎಂ ಹೇಳಿದರು.

ಅಲ್ಪಸಂಖ್ಯಾತರ ಓಲೈಕೆ ಸಲ್ಲ: ಬಿವೈವಿ

• **ಬೆಂಗಳೂರು:** ರಾಜ್ಯದಲ್ಲಿ ಹಿಂದುಗಳ ಮೇಲೆ ನಿರಂತರ ದೌರ್ಜನ್ಯ ನಡೆಸುವ ರಾಜ್ಯ ಸರ್ಕಾರ ಅಲ್ಪಸಂಖ್ಯಾತರನ್ನು



ಓಲೈಸಲು ಯಾವ ಮಟ್ಟಕ್ಕಾದರೂ ಇಳಿಯಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪಿಸಿದ್ದಾರೆ.

ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ಆಳಂದ ಗಲಭೆ ಪ್ರಕರಣವನ್ನು ಕೈ ಬಿಡಲು ಸಚಿವ ಸಂಪುಟ ತೀರ್ಮಾನ ಕೈಗೊಂಡಿದೆ. ದೇಶದ್ರೋಹಿಗಳ ವಿರುದ್ಧ, ಕಾನೂನು ಹಾಳು ಮಾಡುವವರ ವಿರುದ್ಧ ಕ್ರಮ ಕೈಗೊಳ್ಳದೆ ಸರ್ಕಾರ ಹಾಗೂ ಕಾಂಗ್ರೆಸ್ ತಮ್ಮ ಓಟ್ ಬ್ಯಾಂಕ್ ಸುಭದ್ರ ಮಾಡಿಕೊಳ್ಳುತ್ತಿದೆ ಎಂದು ದೂರಿದರು.

ರಾಜ್ಯದಲ್ಲಿನ ಕಾಂಗ್ರೆಸ್ ಸರ್ಕಾರ ಅಧಿಕಾರ ಬಂದಾಗಿನಿಂದ ತುಷ್ಟೀಕರಣದ ಎಲ್ಲ ಮಿತಿಗಳನ್ನು ದಾಟಿ ಅಲ್ಪಸಂಖ್ಯಾತರ ಓಲೈಕೆ ಮಾಡುತ್ತಿದೆ. ಹಿಂದುಗಳಿಗೆ ಪದೇ ಪದೇ ಅಪಮಾನ ಮಾಡುತ್ತಿರುವ ಕಾಂಗ್ರೆಸ್ ನೀತಿಯನ್ನು ರಾಜ್ಯದ ಜನ ಗಮನಿಸಿದ್ದಾರೆ. ಪ್ರತಿಪಕ್ಷವಾಗಿ ನಾವೂ ಹೋರಾಟ ಮಾಡುತ್ತೇವೆ. ಹಿಂದು ವಿರೋಧ ನೀತಿ ಅನುಸರಿಸುತ್ತಿರುವುದರ ವಿರುದ್ಧ ಬೀದಿಗಿಳಿದು ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

> ರಾಜ್ಯದಲ್ಲಿ ವಿನಾಕಾರಣ ದೊಂಬಿ ಸೃಷ್ಟಿ, ಪೊಲೀಸ್ ಠಾಣೆಗೆ ಬೆಂಕಿ ಹಾಕುವವರು, ಶಿವಲಿಂಗ ಇರುವ ದೇವಸ್ಥಾನದಲ್ಲಿ ಭಕ್ತರಿಗೆ ಅಪಮಾನ ಮಾಡಿ ಭಕ್ತೆಯರಿಗೆ ಬೆದರಿಸುವುದು – ಇಂಥ ಸಮಾಜದ್ರೋಹಿಗಳ ವಿರುದ್ಧದ ಪ್ರಕರಣ ವಾಪಸ್ ಪಡೆದಿದ್ದಾರೆ. ಸಮಾಜದ್ರೋಹಿಗಳ ವಿರುದ್ಧದ ಪ್ರಕರಣಗಳನ್ನು ರದ್ದು ಮಾಡಿರುವ ರಾಜ್ಯ ಸರ್ಕಾರದ ಕ್ರಮ ಸರಿಯಲ್ಲ.
> ■ ಕೋಟ ಶ್ರೀನಿವಾಸ ಪೂಜಾರಿ, ಸಂಸದ

ಪ್ರಕರಣ ಹಿಂಪಡೆತ ರಾಜ್ಯದ ಭದ್ರತೆಗೆ ಅಪಾಯ: ಕಲಬುರಗಿಯಲ್ಲಿ ಕೋಮುಗಲಭೆ ಮಾಡಿದ ಆರೋಪಿಗಳ ವಿರುದ್ಧದ ಪ್ರಕರಣಗಳನ್ನು ಹಿಂಪಡೆಯುವ ಮೂಲಕ ಕಾಂಗ್ರೆಸ್ ಸರ್ಕಾರ ಮತ್ತೆ ಮತಬ್ಯಾಂಕ್ ರಾಜಕಾರಣ ಮಾಡಿದೆ. ಇದು ರಾಜ್ಯದ ಭದ್ರತೆಗೆ ಅಪಾಯ ತಂದೊಡ್ಡಿದೆ. ಪೊಲೀಸರ ಮೇಲೆ ಹಲ್ಲೆ ಮಾಡಿದವರ ಮೇಲಿನ, ಕೇಂದ್ರ ಸಚಿವರ ಕಾರು ಒಡೆದವರ ಮೇಲಿನ ಪ್ರಕರಣ ಕೈ ಬಿಟ್ಟಿದ್ದಾರೆ. ಕೋಮುಗಲಭೆ ಸೃಷ್ಟಿಸುವವರ ಮೇಲಿನ ಕೇಸ್ ವಾಪಸ್ ಪಡೆದಿರುವುದು ಸರಿಯಲ್ಲ ಎಂದು ಪ್ರತಿಪಕ್ಷದ ನಾಯಕ ಆರ್. ಅಶೋಕ ಆರೋಪಿಸಿದ್ದಾರೆ.

ಬೆಳಗಾವಿಯಲ್ಲಿ ಮಳೆಗಾಲದ ಅಧಿವೇಶನ ನಡೆಸಲು ಚಿಂತನೆ

• **ಬೆಂಗಳೂರು:** ಕುಂದಾನಗರಿ ಬೆಳಗಾವಿಯಲ್ಲಿ ಈ ಬಾರಿ ಮಳೆಗಾಲದ ಅಧಿವೇಶನವನ್ನು ನಡೆಸುವುದಕ್ಕೆ ರಾಜ್ಯ ಸರ್ಕಾರ ಗಂಭೀರ ಚಿಂತನೆ ನಡೆಸುತ್ತಿದೆ. ಅಲ್ಲದೇ ವಿಧಾನಸೌಧ ಸಚಿವಾಲಯ ಕೂಡ ತನ್ನ ಸಿದ್ಧತೆಗಳನ್ನು ಆರಂಭಿಸಿದೆ.



ಎಲ್ಲವೂ ಯೋಜಿಸಿದಂತೆ ನಡೆದರೆ ಬೆಳಗಾವಿಯ ಬೆಳಗಾವಿಯ ಸುವರ್ಣವಿಧಾನಸೌಧದಲ್ಲಿ ಇದೇ ಮೊದಲ ಬಾರಿಗೆ ಮಳೆಗಾಲದ ಅಧಿವೇಶನ ನಡೆಯಲಿದೆ. 2012ರಲ್ಲಿ ಸುವರ್ಣ ವಿಧಾನಸೌಧ ಉದ್ಘಾಟನೆಯಾದಾಗಿನಿಂದ ಈವರೆಗೆ ಅಲ್ಲಿ 11 ಬಾರಿ ಚಳಿಗಾಲದ ಅಧಿವೇಶನಗಳು ನಡೆದಿವೆ. ಈ ಬಾರಿ ಮಳೆಗಾಲದ ಅಧಿವೇಶನ ನಡೆಸಲು ಚಿಂತನೆ ನಡೆಸುತ್ತಿರುವುದು ಉತ್ತರ ಕರ್ನಾಟಕ ಭಾಗದ ದೃಷ್ಟಿಯಿಂದ ಅತ್ಯಂತ ಮಹತ್ವದ ನಿರ್ಧಾರವಾಗಿದೆ. ವಿಧಾನಸಭೆಯ ಸಭಾಧ್ಯಕ್ಷಯು.ಟಿ. ಖಾದರ್ ಹಾಗೂ ವಿಧಾನಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿ ಅವರು ಜಂಟಿಯಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆಗೆ ಈ ಕುರಿತು ವಿಸ್ತೃತ ಸಮಾಲೋಚನೆ ನಡೆಸಿದ್ದಾರೆ. ಅಧಿವೇಶನವನ್ನು ಬೆಂಗಳೂರಿನ ಬದಲು ಬೆಳಗಾವಿಗೆ ಸ್ಥಳಾಂತರಿಸುವುದರಿಂದ ಆಗುವ ಸಾಧಕ–ಬಾಧಕಗಳ ಬಗ್ಗೆ ಚರ್ಚಿಸಲಾಗಿದೆ.

ಇಡೀ ಆಡಳಿತ ಯಂತ್ರದ ಸ್ಥಳಾಂತರ: ಬೆಳಗಾವಿಯಲ್ಲಿ ಅಧಿವೇಶನ ನಡೆಸುವುದರಿಂದ ಉತ್ತರ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳು, ನೀರಾವರಿ ಯೋಜನೆಗಳು ಹಾಗೂ ಪ್ರಾದೇಶಿಕ ಅಸಮತೋಲನ ನಿವಾರಣೆಯ ಕುರಿತು ಹೆಚ್ಚು ಸಮಯ ವಿನಿಯೋಗಿಸಿ ಚರ್ಚಿಸಲು ಅನುಕೂಲವಾಗುತ್ತದೆ ಎಂಬುದು ಸರ್ಕಾರದ ಆಶಯ. ಆದರೆ, ಅಧಿವೇಶನದ ಹಿನ್ನೆಲೆಯಲ್ಲಿ ಇಡೀ ರಾಜ್ಯ ಸರ್ಕಾರದ ಆಡಳಿತ ಯಂತ್ರ, ಸಚಿವರು, ಮುಖ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಅಧಿಕಾರಿಗಳ ದಂಡು ಕೆಲವು ವಾರಗಳ ಕಾಲ ಬೆಳಗಾವಿಯಲ್ಲೇ ಬೀಡುಬಿಡಬೇಕಾಗುತ್ತದೆ.

ಸಮಸ್ಯೆ ನಿವಾರಿಸಲು ನಿಯಮಗಳಲ್ಲಿ ವರ್ಗೀಕರಣ

ಇ–ಸ್ವತ್ತು 2.0 ತಂತ್ರಾಂಶ ಮಾರ್ಪಾಡು

• **ಬೆಂಗಳೂರು:** ಸಾರ್ವಜನಿಕರು ಇ–ಸ್ವತ್ತು ತಂತ್ರಾಂಶದ ಮೂಲಕ ತಮ್ಮ ಆಸ್ತಿಗೆ ಸಂಬಂಧಿಸಿದಂತೆ ನಮೂನೆಗಳನ್ನು ಪಡೆಯಲು ಅರ್ಜಿಗಳನ್ನು ಸಲ್ಲಿಸುವಾಗ ಎದುರಾಗುತ್ತಿದ್ದ ಸಮಸ್ಯೆಗಳನ್ನು ನಿವಾರಿಸಲು ಹಾಗೂ ನಿಯಮಗಳಲ್ಲಿ ಸೂಕ್ತ ವರ್ಗೀಕರಣ ಮತ್ತು ಪರಿಷ್ಕರಣೆ ಮಾಡುವಂತೆ ಬಂದ ಬೇಡಿಕೆಗಳನ್ನು ಆಧರಿಸಿ ಇ–ಸ್ವತ್ತು 2.0 ತಂತ್ರಾಂಶದಲ್ಲಿ ಮಾರ್ಪಾಡು ತರಲಾಗಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತ್‌ಗಳ ತೆರಿಗೆ, ದರ ಮತ್ತು ಶುಲ್ಕಗಳು) ನಿಯಮಗಳು, 2025 ಅನ್ನು ಅಧಿಸೂಚಿಸಲಾಗಿದ್ದು, ಈ ನಿಯಮಗಳನ್ವಯ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಈ ಹಿಂದೆ ಇದ್ದ ಇ–ಸ್ವತ್ತು ತಂತ್ರಾಂಶವನ್ನು ನಾಗರಿಕ ಸ್ನೇಹಿಯಾಗಿ ಮಾರ್ಪಡಿಸಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ. ಈ ಹಿಂದೆ ಅಧಿಸೂಚಿಸಲಾಗಿದ್ದ ನಿಯಮಗಳಲ್ಲಿ ಕೆಲವೊಂದು ಮಾರ್ಪಾಡುಗಳನ್ನು ಮಾಡಲಾಗಿದ್ದು, ಕಂದಾಯ ಇಲಾಖೆಯಿಂದ ಕರ್ನಾಟಕ ಭೂ– ಕಂದಾಯ ಅಧಿನಿಯಮದಡಿ ವಿತರಿಸಲಾಗಿದ್ದ ಹಕ್ಕು ಪತ್ರಗಳು, ಮನೆದಳ ಮತ್ತು ಕಣಮನೆ ಪ್ರಮಾಣ ಪತ್ರಗಳ ಅನ್ವಯ ನಮೂನೆಗಳನ್ನು ಪಡೆಯಲು ಅವಕಾಶ ಕಲ್ಪಿಸಲಾಗುತ್ತದೆ.

ಸ್ವಯಂ ಚಾಲಿತ ಅನುಮೋದನೆ ಸಾರ್ವಜನಿಕರು ನಮೂನೆಗಳನ್ನು ಪಡೆಯಲು ಸಲ್ಲಿಸುವ ಅರ್ಜಿಗಳನ್ನು ನಿಗದಿತ ಸಮಯದೊಳಗೆ ಇತ್ಯರ್ಥ ಪಡಿಸಲು ಎಲ್ಲಾ ಹಂತದಲ್ಲಿಯೂ ಕಾಲಮಿತಿಯನ್ನು ನಿಗದಿ ಪಡಿಸಲಾಗುವುದು.ಒಂದು ವೇಳೆ ನಿಗದಿತ ಅವಧಿಯಲ್ಲಿ ಇತ್ಯರ್ಥವಾಗದಿದ್ದಲ್ಲಿ, ಸ್ವಯಂ ಚಾಲಿತ ಅನುಮೋದನೆ ಪ್ರಕ್ರಿಯೆಯನ್ನು ಜಾರಿಗೊಳಿಸಲಾಗುತ್ತದೆ. ಸಾರ್ವಜನಿಕರು ತಮ್ಮ ಆಸ್ತಿಗೆ ಹೊಸದಾಗಿ ನಮೂನೆ–11ಬಿ ಪಡೆಯಲು ನಿಗದಿ ಪಡಿಸಲಾಗಿದ್ದ ಮೇಲ್ಮನವಿ ಅವಧಿಯನ್ನು ಸೆಪ್ಟೆಂಬರ್ 30ರವರೆಗೆ ವಿಸ್ತರಿಸಲಾಗುತ್ತಿದೆ.

ತೆರಿಗೆ ವ್ಯಾಪ್ತಿಗೆ ಸೇರ್ಪಡೆ

ಕೃಷಿ ಭೂಮಿಯಲ್ಲಿ ವಾಸ ಅಥವಾ ಕೃಷಿ ಉದ್ದೇಶಕ್ಕೆ ಮೂಲ ಮಾಲೀಕರು ಕಟ್ಟಿರುವ ಕಟ್ಟಡಗಳು, ವಸತಿ ಯೋಜನೆಯಡಿ ಕೃಷಿ ಭೂಮಿಯಲ್ಲಿ ಸೃಜನೆಯಾಗಿರುವ ಕಟ್ಟಡಗಳು, ಗ್ರಾಮ ಠಾಣಾದಲ್ಲಿ ನೋಂದಾಯಿತ ದಾಖಲೆಗಳಿಲ್ಲದ ಕಟ್ಟಡಗಳು ಹಾಗೂ ಅರಣ್ಯ ಹಕ್ಕು ಕಾಯ್ದೆಯಡಿ ಮಂಜೂರಾಗಿರುವ ಆಸ್ತಿಗಳನ್ನು ಇ–ಸ್ವತ್ತು 2.0 ತಂತ್ರಾಂಶದ ಮೂಲಕ ನಮೂನೆಗಳನ್ನು ವಿತರಿಸುವ ಮೂಲಕ ಗ್ರಾಮ ಪಂಚಾಯತ್‌ನ ತೆರಿಗೆ ವ್ಯಾಪ್ತಿಗೆ ಒಳಪಡಿಸಲು ಅವಕಾಶ ಕಲ್ಪಿಸುವ ಬಗ್ಗೆ ಚರ್ಚಿಸಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

ಭೀಕರ ಅಪಘಾತ: ಐವರ ಸಾವು

• **ಕಲಬುರಗಿ:** ಜಿಲ್ಲೆಯ ಚಿತ್ತಾಪುರ ತಾಲೂಕಿನ ವಾಡಿ ಸಮೀಪದ ರಾಷ್ಟ್ರೀಯ ಹೆದ್ದಾರಿ–150 ರಲ್ಲಿ ಶುಕ್ರವಾರ ತಡರಾತ್ರಿ ಕ್ರೂಸರ್ ಹಾಗೂ ತಮಿಳುನಾಡು ಮೂಲದ ಲಾರಿ ನಡುವೆ ಸಂಭವಿಸಿದ ಮುಖಾಮುಖಿ ಡಿಕ್ಕಿಯಲ್ಲಿ ಕ್ರೂಸರ್ ಚಾಲಕ ಸೇರಿದಂತೆ ಒಂದೇ ಕುಟುಂಬದ ನಾಲ್ವರು ಸ್ಥಳದಲ್ಲೇ ಭೀಕರ ವಾಗಿ ಮೃತಪಟ್ಟಿದ್ದಾರೆ.



ಮೃತರನ್ನು ಚಿತ್ತಾಪುರ ತಾಲೂಕಿನ ಇಂಗಳಗಿ ಗ್ರಾಮದ ನಿವಾಸಿಗಳಾದ ಕ್ರೂಸರ್ ಚಾಲಕ ತೋಲ ಭಾಷಾ ಮಶಾಕ (30), ಒಂದೇ ಕುಟುಂಬದ ಸದಸ್ಯರಾದ ಮಹ್ಮದ್ ಹುಸೇನ್ ಇಮಾಮಸಾಬ ಶಾಪುರ (48), ಫಾತಿಮಾ ಮಹೆಬೂಬ್ ಅಲಿ (40), ರಸೂಲ್ ಬೀ ಮುಹಮ್ಮದ್ ಇಸ್ಮಾಯಿಲ್ (40) ಮತ್ತು ಮಹೆಬೂಬ್ ಅಲಿ (45) ಎಂದು ಗುರುತಿಸಲಾಗಿದೆ.

ದುರಂತದ ಹಿನ್ನೆಲೆ: ಪಾರ್ಶ್ವವಾಯುವಿಗೆ ತುತ್ತಾಗಿದ್ದ ಯುವಕನೋರ್ವನನ್ನು ಯಾದಗಿರಿ ನಗರದ ಆಸ್ಪತ್ರೆಗೆ ದಾಖಲಿಸಲು ಇಂಗಳಗಿ ಗ್ರಾಮದ ಒಂಬತ್ತು ಜನರು ಕ್ರೂಸರ್ ವಾಹನದಲ್ಲಿ ತೆರಳಿದ್ದರು. ರೋಗಿಯನ್ನು ಆಸ್ಪತ್ರೆಗೆ ದಾಖಲಿಸಿ, ನಾಲ್ವರು ಅಲ್ಲಿಯೇ ನೆರವಿಗಾಗಿ ಉಳಿದುಕೊಂಡಿದ್ದರು. ಇನ್ನುಳಿದ ಐವರು ಕ್ರೂಸರ್‌ನಲ್ಲಿ ಮರಳಿ ಊರಿಗೆ ಬರುತ್ತಿದ್ದಾಗ ರಾತ್ರಿ 11:40 ರ ಸುಮಾರಿಗೆ ಲಾಡ್ಲಾಪುರ ಸಮೀಪ ಈ ಭೀಕರ ಅಪಘಾತ ಸಂಭವಿಸಿದೆ. ಡಿಕ್ಕಿ ರಭಸಕ್ಕೆ ಕ್ರೂಸರ್ ವಾಹನ ಸಂಪೂರ್ಣ ನಜ್ಜುಗುಜ್ಜಾಗಿದ್ದು, ವಾಹನದಲ್ಲಿದ್ದ ಐವರೂ ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ. ಈ ಕುರಿತು ವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಿವಮೊಗ್ಗ–ಶೃಂಗೇರಿ–ಮಂಗಳೂರು ಹೊಸ ರೈಲು ಮಾರ್ಗ ಸಮೀಕ್ಷೆ ಪೂರ್ಣ: ಸೋಮಣ್ಣ

ಬೆಂಗಳೂರು–ಮಂಗಳೂರು ವಂದೇ ಭಾರತ್ ರೈಲು

• **ಮಂಗಳೂರು:** ಕುಕ್ಕೆ ಸುಬ್ರಹ್ಮಣ್ಯ– ಸಕಲೇಶಪುರ ನಡುವೆ ರೈಲ್ವೆ ವಿದ್ಯುದ್ದೀಕರಣ ನಡೆಸಲಾಗಿದ್ದು,ಶೀಘ್ರ ಬೆಂಗಳೂರು–ಮಂಗಳೂರು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಆರಂಭಕ್ಕೆ



ಪ್ರಧಾನಿ ಸೂಚನೆ ನೀಡಿದ್ದಾರೆ ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದರು.

ಮಂಗಳೂರು ಜಂಕ್ಷನ್ ರೈಲು ನಿಲ್ದಾಣಕ್ಕೆ ಶನಿವಾರ ಭೇಟಿ ನೀಡಿದ ವೇಳೆ ಅವರು ಅಮೃತ ಭಾರತ್‌ಯೋಜನೆಯಡಿ ಇಲ್ಲಿನ ರೈಲು ನಿಲ್ದಾಣದ ಅಭಿವೃದ್ಧಿ ಕಾಮಗಾರಿಯ ಪರಿಶೀಲನೆ ನಡೆಸಿದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು. ಮಂಗಳೂರು–ಬೆಂಗಳೂರು ನಡುವೆ ಬಹು ನಿರೀಕ್ಷಿತ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಜೂನ್ ತಿಂಗಳಲ್ಲಿ ಸಂಚಾರ ಆರಂಭಿಸಲಿದೆ. ಪ್ರಧಾನಿ ಮೋದಿ ಮಂಗಳೂರು ಸೇರಿದಂತೆ ದೇಶದ ವಿವಿಧ ಕಡೆಗಳಲ್ಲಿ ಹೊಸ ರೈಲು ಸಂಚಾರಗಳಿಗೆ ಚಾಲನೆ ನೀಡಲಿದ್ದಾರೆ. ಸಕಲೇಶಪುರ–ಕುಕ್ಕೆ ಸುಬ್ರಹ್ಮಣ್ಯ ಮಾರ್ಗವರೆಗೆ 55 ಕಿ.ಮೀ. ದೂರ ವಿದ್ಯುದೀಕರಣ ಕಾಮಗಾರಿ ಮುಕ್ತಾಯಗೊಂಡಿದೆ. ಹೀಗಾಗಿ ಬೆಂಗಳೂರು– ಮಂಗಳೂರು ನಡುವೆ ಪೂರ್ತಿಯಾಗಿ ವಿದ್ಯುದೀಕರಣವಾಗಿದ್ದು, ಹೆಚ್ಚುವರಿ ರೈಲು ಸಂಚಾರಕ್ಕೆ ಅವಕಾಶಗಳು ತೆರೆದುಕೊಂಡಿವೆ ಎಂದರು.

ಬೆಂಗಳೂರು–ಕಾರವಾರ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಬೇಡಿಕೆ ಬಗ್ಗೆ ಮಾತನಾಡಿದ ಸಚಿವರು, ಕರಾವಳಿಯ ಮೂರು ಜಿಲ್ಲೆಗಳಲ್ಲಿ ಬಿಜೆಪಿ ಸಂಸದರು ಇದ್ದಾರೆ. ಅವರ ಬೇಡಿಕೆಯನ್ನು ಪರಿಶೀಲಿಸಬೇಕಾಗುತ್ತದೆ ಎಂದರು.

ಶಿವಮೊಗ್ಗ–ಶೃಂಗೇರಿ–ಮಂಗಳೂರು ಹೊಸ ರೈಲು ಮಾರ್ಗ ರಚನೆ ಬಗ್ಗೆ ಸಮೀಕ್ಷೆ ಪೂರ್ಣಗೊಂಡಿದ್ದು, ಟೆಂಡರ್ ಬಾಕಿ ಇದೆ. ಪ್ರಸ್ತಾವಿತ ಶಿವಮೊಗ್ಗ–ಮಂಗಳೂರು ರೈಲು ಮಾರ್ಗ 332 ಕಿ.ಮೀ. ಇರಲಿದ್ದು, 3,300 ಕೋಟಿ ರೂ. ಯೋಜನಾ ವೆಚ್ಚ ಅಂದಾಜಿಸಲಾಗಿದೆ. ಈ ಮಾರ್ಗದ ಎಫ್‌ಎಲ್‌ಸಿ ನಡೆದು ಅನುಮೋದನೆಗೊಂಡಿದ್ದು, ಶೀಘ್ರವೇ ಟೆಂಡರ್ ಕರೆಯಲಾಗುವುದು ಎಂದರು.

ರಾಜ್ಯ ಸರ್ಕಾರ ನಿಂತ ನೀರಾಗಿದೆ: ಕೇಂದ್ರ ಸಚಿವ ಆರೋಪ

ರಾಜ್ಯದಲ್ಲಿ ಸರ್ಕಾರ ಇದೆ ಎಂಬುದನ್ನು ನಿರೀಕ್ಷೆ ಮಾಡುತ್ತೀರಾ. ಇದೊಂದು ತೊಗಲುಗೊಂಬೆ ಸರ್ಕಾರ. ಯಾವಾಗ ತೊಲಗುತ್ತದೆಯೋ ಗೊತ್ತಿಲ್ಲ. ಈ ಸರ್ಕಾರ ನಿಂತ ನೀರಾಗಿದೆ. ಈ ಸರ್ಕಾರದಲ್ಲಿ ಇಚ್ಛಾಶಕ್ತಿ ಕೊರತೆ ಇದೆ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಟೀಕಿಸಿದ್ದಾರೆ. ಇಂತಹ ನಿರ್ಲಿಪ್ತ ಸರ್ಕಾವನ್ನು ನಾನು ಇದುವರೆಗೆ ನೋಡಿಲ್ಲ. ಬಡವರನ್ನು, ಸಾಮಾನ್ಯ ಜನರನ್ನು ಅವರದ್ದೇ ಆದ ಟಾಸ್ಕ್‌ಗಳನ್ನು ಹಾಕಿಕೊಂಡು ಸಂದಿಗ್ಧ ಪರಿಸ್ಥಿತಿಯಲ್ಲೂ ದಾರಿತಪ್ಪಿಸುತ್ತಿದೆ ಎಂದರು. ರಾಜ್ಯ ಸರ್ಕಾರ 55 ಕೇಸ್ ವಾಪಸ್ ಪಡೆದ ವಿಚಾರಕ್ಕೆ ಪ್ರತಿಕ್ರಿಯಿಸಿ, ರಾಜ್ಯ ಸರ್ಕಾರದ ತಲೆಯಲ್ಲಿ ಏನಿದೆಯೋ ಗೊತ್ತಿಲ್ಲ. ಡಿಕೆ ಶಿವಕುಮಾರ್ ತಲೆಯಲ್ಲಿರುವ ಭಾವನೆಗಳು ಏನು ಗೊತ್ತಿಲ್ಲ. ಜನ ಉತ್ತರ ಕೊಡುವ ಕಾಲ ಹತ್ತಿರ ಬರುತ್ತಿದೆ. ಅವರು ಮಾಡುತ್ತಿರುವ ಪಾಪದ ವ್ಯವಸ್ಥೆಗಳು ಪ್ರಪಂಚಕ್ಕೆ ಗೊತ್ತಿದೆ. ಪಾಪಕ್ಕೆ ಪ್ರಾಯಶ್ಚಿತವಾಗುತ್ತೆ, ಯಾರ ಯಾರ ಓಲೈಕೆ ಮಾಡುತ್ತಿದ್ದಾರೆ ಅನ್ನೊದಕ್ಕಿಂತ ಹೆಚ್ಚಾಗಿ ಅವರು ಮಾಡುತ್ತಿರುವ ಪಾಪದ ವ್ಯವಸ್ಥೆಗಳು ಪ್ರಪಂಚಕ್ಕೆ ಗೊತ್ತಾಗುತ್ತಿದೆ. ಪಾಪದ ವ್ಯವಸ್ಥೆಗೆ ಪ್ರಾಯಶ್ಚಿತ ಕೂಡ ಆಗುತ್ತದೆ. ರಾಜ್ಯದ ಜನರನ್ನು ಸಾಲದ ಕೂಪಕ್ಕೆ ತಳ್ಳಿದ್ದಾರೆ. ಇನ್ನೊಂದೆಡೆ ರಾಜ್ಯದ ಜನರನ್ನು ಕೂಪಮಂಡೂಕ ಮಾಡಿದ್ದಾರೆ. ಅದಕ್ಕೆ ತಕ್ಕುದಾದ ಪ್ರತಿಫಲ ರಾಜ್ಯದ ಜನ ನೀಡಲಿದ್ದಾರೆ ಎಂದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸೂಚನೆ

ಎಬೋಲಾ ಸೋಂಕು ತಡೆಗೆ ಜಾಗೃತಿ

• **ಬೆಂಗಳೂರು:** ಎಬೋಲಾ ಸೋಂಕು ಕುರಿತು ಸಾರ್ವಜನಿಕರು ಆತಂಕಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ. ಆದರೆ, ಜಾಗೃತಿಯಿಂದಿರಬೇಕು ಎಂದು ಆರೋಗ್ಯ ಸಚಿವ ದಿನೇಶ್



ಗುಂಡೂರಾವ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆರೋಗ್ಯ ಇಲಾಖೆ ಅಧಿಕಾರಿಗಳು ಕೇಂದ್ರ ಸರ್ಕಾರದ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಪರಿಸ್ಥಿತಿಯನ್ನು ಸಮೀಕ್ಷೆ ಮಾಡುತ್ತಿದ್ದಾರೆ ಎಂದು ಹೇಳಿದರು.

ದೇಶದಲ್ಲಿ ಈವರೆಗೆ ಎಬೋಲಾ ಪ್ರಕರಣ ದಾಖಲಾಗಿಲ್ಲ. ಆದರೂ ಮುನ್ನೆಚ್ಚರಿಕಾ ಕ್ರಮವಾಗಿ ಆಫ್ರಿಕಾದ ಉಗಾಂಡಾ, ಕಾಂಗೋ ಮುಂತಾದ ದೇಶಗಳಿಂದ ರಾಜ್ಯಕ್ಕೆ ಆಗಮಿಸುವವರನ್ನು 21 ದಿನಗಳ ಕಾಲ ನಿಗಾದಲ್ಲಿಡಲಾಗುವುದು ಎಂದು ವಿವರಿಸಿದರು. ಯಾರಿಗಾದರೂ ರೋಗಲಕ್ಷಣಗಳು ಕಂಡುಬಂದಲ್ಲಿ ತಕ್ಷಣ ಆರೋಗ್ಯ ಇಲಾಖೆಗೆ ಮಾಹಿತಿ ನೀಡುವಂತೆ ಸೂಚಿಸಲಾಗಿದೆ. ಸಾರ್ವಜನಿಕರು ವದಂತಿಗಳಿಗೆ ಕಿವಿಗೊಡಬಾರದು. ರಾಜ್ಯ ಸರ್ಕಾರ ಎಲ್ಲ ರೀತಿಯ ಮುಂಜಾಗೃತಾ ಕ್ರಮಗಳನ್ನು ಕೈಗೊಂಡಿದ್ದು, ಕೇಂದ್ರ ಸರ್ಕಾರವೂ ಮಾರ್ಗಸೂಚಿಯನ್ನು ಬಿಡುಗಡೆ ಮಾಡಿದೆ ಎಂದು ತಿಳಿಸಿದರು.

ಪೆಟ್ರೋಲ್ ದರ ಏರಿಕೆ ವಿರುದ್ಧ ವಾಗ್ದಾಳಿ

ಕೇಂದ್ರ ಸರ್ಕಾರದ ಆರ್ಥಿಕ ನೀತಿಗಳಿಂದ ದೇಶ ದೊಡ್ಡ ಸಂಕಷ್ಟಕ್ಕೆ ಸಿಲುಕುವ ಪರಿಸ್ಥಿತಿ ನಿರ್ಮಾಣವಾಗಿದೆ. ಅನಗತ್ಯ ಯುದ್ಧ ಪರಿಸ್ಥಿತಿಗಳ ಪರಿಣಾಮವಾಗಿ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲದರ ಏರಿಕೆಯಾಗಿದೆ. ಹಿಂದೆ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ಅವಧಿಯಲ್ಲಿ ಕಚ್ಚಾ ತೈಲದ ದರ ಬ್ಯಾರಲ್‌ಗೆ 120 ರೂ. ಡಾಲರ್ ತಲುಪಿದ್ದರೂ, ಜನರಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲಾಗಿತ್ತು. ಆದರೆ, ಈಗ ಕಡಿಮೆ ದರದ ಅವಧಿಯಲ್ಲಿಯೂ ಕೇಂದ್ರ ಸರ್ಕಾರ ತೈಲದರ ಇಳಿಸದೆ ಲಾಭ ಮಾಡಿಕೊಂಡಿದ್ದು, ಈಗ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ದರ ಏರಿದ ಬಳಿಕವೂ ತೆರಿಗೆ ಕಡಿತಗೊಳಿಸಿ ಜನರಿಗೆ ನೆರವಾಗುವ ಬದಲು ನಿರಂತರವಾಗಿ ದರ ಹೆಚ್ಚಿಸುತ್ತಿದೆ ಎಂದು ಟೀಕಿಸಿದರು.

ಪ್ರಶ್ನೋತ್ತರ ರತ್ನಮಾಲಿಕೆ

◆ ವಿದ್ವಾನ್ ನರಸಿಂಹ ಭಟ್

ಎಲ್ಲಿ ವಾಸ ಮಾಡಬೇಕು?

▶ ಸಜ್ಜನರ ಸನಿಹ ಅಥವಾ ಕಾಶಿಯಲ್ಲಿ.

ಈ ಪ್ರಶ್ನೆಯನ್ನು ಅರ್ಥ ಮಾಡಿಕೊಳ್ಳಬೇಕಾದರೆ ನಾವು ಏಕೆ ಬದುಕಬೇಕು ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಈ ಬದುಕು ಎಂಬುದು ಜನನ ಮತ್ತು ಮರಣದ ನಡುವಿನ ವ್ಯಾಪಾರ ಎಂಬುದಾಗಿ ನಾವು ತಿಳಿದಿದ್ದೇವೆ. ಆದರೆ ಈ ಅರಿವು ಬದಲಾಗಬೇಕಾಗಿದೆ. ಭಾರತೀಯರ ಜೀವನ ಎಂದರೆ ಕೇವಲ ಹುಟ್ಟು ಸಾವುಗಳ ನಡುವಿನ ವ್ಯಾಪಾರ ಅಲ್ಲ. ಜೀವಭಾವ ಎಲ್ಲಿಂದ ಆರಂಭವಾಗುತ್ತದೆಯೋ ಮತ್ತು ಆ ಜೀವಭಾವ ಯಾವಾಗ ಮುಕ್ತಾಯವಾಗುತ್ತದೆಯೋ ಅವೆರಡರ ನಡುವಿನ ವ್ಯಾಪಾರವನ್ನೇ 'ಜೀವನ' ಎಂಬುದಾಗಿ ಕರೆಯಬೇಕು ಎಂಬುದಾಗಿ ಶ್ರೀರಂಗ ಮಹಾಗುರುಗಳ ಆಶಯವಾಗಿತ್ತು. ಹಾಗಾದರೆ ಈ ಜೀವಭಾಗವೂ ಕಳೆಯುವುದು ಎಂದರೇನು? ಜೀವಭಾವವು ಕಳೆಯಲು ಯಾವ ಉಪಾಯವನ್ನು ಮಾಡಬೇಕು ಎಂಬುದು ಇಲ್ಲಿನ ವಿಷಯವಾಗಿದೆ. ಜೀವಭಾವ ಕಳೆಯುವುದನ್ನೇ 'ಮೋಕ್ಷ' ಎಂಬುದಾಗಿ ಕರೆಯಲಾಗಿದೆ. ಸಂಸಾರ ಭಾವವು ಕಳೆಯಬೇಕು. ಸಂಸಾರದಿಂದ ಮುಕ್ತಿಯಾಗಿ ಮತ್ತೆ ಜನ್ಮ ಎಂಬ ಹೊಸತನವನ್ನು ಪಡೆದುಕೊಳ್ಳದೇ ಇರುವಂತಾಗಬೇಕು. ಇದನ್ನೇ ಮಾನವಜೀವನ ಎಂಬುದಾಗಿ ಕರೆದಿದ್ದಾರೆ. ಇಂತಹ ಉತ್ಕೃಷ್ಟವಾದ ಮಾನವಜನ್ಮ ಸಾರ್ಥಕವಾಗಬೇಕಾದರೆ ಅದಕ್ಕೆ ಇರುವ ಅತ್ಯಂತ ಶ್ರೇಷ್ಠವಾದ ಸಾಧನ ಎಂದರೆ ಸಜ್ಜನರ ಸಾನ್ನಿಧ್ಯ. ನಾವು ಎಷ್ಟೆಷ್ಟು ಸುಜನರ ಸಂಬಂಧವನ್ನು ಬೆಳೆಸಿಕೊಳ್ಳುತ್ತೇವೋ ಅಷ್ಟಷ್ಟು ನಮ್ಮ ಜೀವನ ಸುಲಭವಾಗುತ್ತದೆ. ಏಕೆಂದರೆ ಆ ಸಜ್ಜನರು ಜೀವನದ ಸಾರ್ಥಕ್ಯವನ್ನು ಪಡೆಯುವುದು ಹೇಗೆ ಎಂಬುದನ್ನು ಅವರು ತಮ್ಮ ಜೀವನದುದ್ದಕ್ಕೂ ಸಾಧಿಸಿ ತೋರಿಸಿದವರು. ಹಾಗಾಗಿ ಅವರು ನಡೆದ ಹಾದಿಯಲ್ಲಿ ನಡೆದರೆ ನಮಗೆ ಗಮ್ಯವೂ ಅತ್ಯಂತ ಸುಲಭವಾಗಿ ಲಭಿಸುತ್ತದೆ ಎಂಬುದು ಇದರ ತಾತ್ಪರ್ಯ. ಹಾಗಾಗಿ ಸಜ್ಜನರ ಸಂಬಂಧ ಅತ್ಯಂತ ಅಗತ್ಯವಾದ್ದು. ಹಾಗಾದರೆ ಸಜ್ಜನರು ಯಾರು? ಯಾವ ನಿತ್ಯವಾದ ಸಚ್ಚಿದಾನಂದ ರೂಪವಾದ ಯಾವ ಪರಬ್ರಹ್ಮ ಇದೆಯೋ, ಅದನ್ನೇ 'ಸತ್' ಎಂದು ಕರೆದು ಆ ಸತ್ತಿನಲ್ಲೇ ಯಾವಾಗಲೂ ತಮ್ಮ ಮನಸ್ಸನ್ನು ಇಡುವವರು ಸಜ್ಜನರು. ಅವರ ನಡೆ ನುಡಿ ಯಾವಾಗಲೂ ಆ ಪರಬ್ರಹ್ಮದ ಕಡೆಗೆ ಇರುತ್ತದೆ. ಹಾಗಾಗಿ ಎಲ್ಲೂ ಅವರು ಚ್ಯುತರಾಗುವುದಿಲ್ಲ ಅಂತಹ ಜೀವನಕ್ರಮ ಅವರದ್ದಾಗಿರುತ್ತದೆ.

ಈ ಪ್ರಶ್ನೆಯ ಇನ್ನೊಂದು ಭಾಗ ಕಾಶಿಯಲ್ಲಿ ವಾಸ ಮಾಡಬೇಕು ಎಂಬುದಾಗಿ. ಈಗ ನಾವು ಯಾವ ಭಾರತದ ಭೂಗೋಳದಲ್ಲಿ ಕಾಶಿ ಎಂಬ ನಗರವನ್ನು ನೋಡುತ್ತೇವೋ ಅದರಲ್ಲಿ ವಾಸ ಮಾಡಬೇಕು ಎಂಬ ಅರ್ಥದಲ್ಲಿ ಈ ವಾಕ್ಯ ಬಂದಿದ್ದಲ್ಲ. ಸನಾತನ ಭಾರತದ ಮಹರ್ಷಿಗಳು ಯಾವ ಯಾವ ಭ್ರೂಮಧ್ಯದಲ್ಲಿ ಇರುವ 'ಕಾಶೀ' ಎಂಬ ಭಾಗವಿದೆಯೋ, ಅಲ್ಲಿ ಯಾವ ವಿಶ್ವನಾಥನನ್ನು ದರುಶನವನ್ನು ಮಾಡಿದರೋ, ಅಂತಹ ದರ್ಶನಕ್ಕೆ ಯೋಗ್ಯವಾದ ಕ್ಷೇತ್ರ ಯಾವುದೋ, ಅದೂ ಕೂಡ ಭಾರತದ ಉತ್ತರ ಭಾಗದಲ್ಲಿರುವ ಕಾಶಿ ಎಂಬುದಾಗಿ ಅವರು ಉದ್ಘೋಷಿಸಿದರು. 'ಕಾಶ್ಯಾಂ ತು ಮರಣಾತ್ ಮುಕ್ತಿಃ' ಎಂಬುದಾಗಿ ಅಂದರೆ ಮುಕ್ತಿ ಪಡೆಯಬೇಕಾದರೆ ಕಾಶಿಯಲ್ಲಿ ಮರಣವನ್ನು ಹೊಂದಬೇಕು. ಅಂದರೆ ಜೀವನದಲ್ಲಿ ತನ್ನ ಪ್ರಾಣವನ್ನು ಅಲ್ಲಿ ಲಯಗೊಳಿಸಿಕೊಂಡರೆ ಆಗ ಜೀವಭಾವವು ನಷ್ಟವಾಗುತ್ತದೆ; ದೇವಭಾವವು ಪ್ರಾಪ್ತವಾಗುತ್ತದೆ. ಇದರಿಂದಲೇ ಅವನ ಜನ್ಮ ಸಾರ್ಥಕ ಎಂಬ ಅರ್ಥದಲ್ಲಿ ಈ ಪ್ರಶ್ನೋತ್ತರವನ್ನು ನಾವು ಗಮನಿಸಬೇಕಾಗಿದೆ.

ವ್ಯಾಸ ವೀಕ್ಷಿತ

◆ ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ

ಪಾಂಡವರ ದಿಗ್ವಿಜಯ

ಕೃಷ್ಣ-ಭೀಮಾರ್ಜುನರು ಜರಾಸಂಧವಧಾನಂತರ ಹಿಂತಿರುಗಿ ಬಂದರಷ್ಟೆ. ಅತ್ತ ಕೃಷ್ಣನೂ ಹೊರಟಮೇಲೆ ಪಾಂಡವರಲ್ಲೇ ಮಾತುಕತೆಗಳಾದವು.

ಶ್ರೇಷ್ಠವಾದ ಧನುಸ್ಸನ್ನೂ ಅಕ್ಷಯವಾದ ಬತ್ತಳಿಕೆಗಳನ್ನೂ ದಿವ್ಯವೆನಿಸುವ ರಥ-ಧ್ವಜಗಳನ್ನೂ ಅದ್ಭುತವಾದ ಸಭೆಯನ್ನೂ ಪಡೆದವನಾಗಿದ್ದ ಅರ್ಜುನನು ಯುಧಿಷ್ಠಿರನನ್ನು ಕುರಿತು ಹೀಗೆ ಹೇಳಿದನು: ರಾಜನೇ ಬಹಳ ವಿಶೇಷವಾದ ಧನುಸ್ಸು, ಅಸ್ತ್ರ, ಬಾಣ, ಪರಾಕ್ರಮ, ಕೃಷ್ಣನಂತಹ ಜೊತೆಗಾರ, ರಾಜ್ಯ ಹಾಗೂ ಇಂದ್ರಪ್ರಸ್ಥಭೂಮಿ, ಯಶಸ್ಸು ಹಾಗೂ ಸೈನ್ಯ-ಹೀಗೆ ನನಗೆ ಏನೇನು ಬಹಳವಾಗಿ ಅಪೇಕ್ಷೆಯಾಗಿತ್ತೋ ಹಾಗೂ ಪಡೆಯಲು ಸುಲಭವಲ್ಲವೋ ಅದೆಲ್ಲವೂ ಈಗ ದೊರೆತಿದೆ. ನಮ್ಮ ಈಗಿನ ಕರ್ತವ್ಯವೆಂದರೆ ಕೋಶದ ಪರಿವರ್ಧನೆಯೆಂಬುದೇ ನನ್ನ ಅಭಿಪ್ರಾಯ. ಆದ್ದರಿಂದ ರಾಜರೆಲ್ಲರೂ ಕರವನ್ನೊಪ್ಪಿಸುವಂತೆ ಮಾಡಿಬಿಡುವೆ. ಅದಕ್ಕಾಗಿ ನಾನು ಮೊದಲು ಕುಬೇರ ದಿಕ್ಕಿಗೆ ಹೊರಡಲಿರುವೆ. ಅದಕ್ಕಾಗಿ ಅಭಿಪೂಜಿತವಾದ ತಿಥಿಮುಹೂರ್ತಗಳಲ್ಲಿ ಹಾಗೂ ಅಭಿಪೂಜಿತವಾದ ನಕ್ಷತ್ರದಲ್ಲಿ ಹೊರಡುವೆ.

ಇದನ್ನು ಕೇಳಿ ಧರ್ಮರಾಜನು ಸಂತುಷ್ಟನಾದನು. ತಮ್ಮಂದಿರು, ಮಂತ್ರಿಗಳು ಇವರೊಂದಿಗೆ, ವ್ಯಾಸರನ್ನೂ ಧೌಮ್ಯರನ್ನೂ ಕಾಣಲು ಹೊರಟನು. ಆಗ ಮಹಾಬುದ್ಧಿಶಾಲಿಗಳಾದ ವ್ಯಾಸರು ಅರ್ಜುನನನ್ನು ಕುರಿತು ಹೀಗೆ ಹೇಳಿದರು: ಭೇಷ್ ಅರ್ಜುನ, ನಿನಗೆ ಇಂತಹ ಬುದ್ಧಿ ಬಂದುದೇ ಶ್ಲಾಘ್ಯ. ಏಕೆಂದರೆ ಅಖಂಡ ಭೂಮಂಡಲವನ್ನೇ ನೀನು ಜಯಿಸಲು ಸಂಕಲ್ಪಿಸಿರುವೆ. ಪಾಂಡು ಮಹಾರಾಜನೇ ಧನ್ಯ. ಏಕೆಂದರೆ ಆತನ ಪುತ್ರನಾದ ನೀನು ಇಂತಹವನಾಗಿರುವೆ! ನಿನ್ನ ವೀರ್ಯದಿಂದಾಗಿ ಆ ಧರ್ಮಾತ್ಮನು ಸಾರ್ವಭೌಮ ಪದವಿಯನ್ನು ಹೊಂದಲಿರುವನು. ನಿನ್ನ ಬಾಹುಬಲವನ್ನು ಆಶ್ರಯಿಸಿ ಆತನು ರಾಜಸೂಯವನ್ನು ನೆರವೇರಿಸುವನು. ಶ್ರೀಕೃಷ್ಣನ ನೀತಿ, ಭೀಮ-ಅರ್ಜುನರ ಬಲ ಹಾಗೂ ನಕುಲ-ಸಹದೇವರ ವೀರ್ಯಗಳಿಂದಾಗಿ ಧರ್ಮರಾಜನು ಎಲ್ಲವನ್ನೂ ಹೊಂದುವನು.

ಆದ್ದರಿಂದ ಅರ್ಜುನನೇ, ದೇವತೆಗಳು ಕಾಪಾಡಿರುವ ಉತ್ತರ ದಿಕ್ಕಿಗೆ ನೀನು ಹೊರಡು, ಫಾಲ್ಗುನ! ನೀನು ದೇವತೆಗಳನ್ನೂ ಜಯಿಸಿ ಬಲಪ್ರಯೋಗದಿಂದ ರತ್ನಗಳನ್ನು ತರಲು ಸಮರ್ಥನೇ ಸರಿ.

ಬಲವನ್ನು ಮೆಚ್ಚುವ ಭೀಮಸೇನನು ಪೂರ್ವದಿಕ್ಕಿಗೆ ಹೋಗಲಿ. ಮಹಾರಥನಾದ ಸಹದೇವನು ಯಮನ ದಿಕ್ಕಿಗೆ ಹೋಗಲಿ. ವರುಣರಕ್ಷಿತವಾದ ಪಶ್ಚಿಮಕ್ಕೆ ನಕುಲನು ಹೋಗಲಿ. ನನ್ನ ಬುದ್ಧಿ ಹೀಗೆ ನಿಶ್ಚಯಿಸಿದೆ. ಭರತವಂಶದ ಶ್ರೇಷ್ಠರಾದ ಪಾಂಡವರೇ, ಇದನ್ನು ಕಾರ್ಯಗತಗೊಳಿಸಿರಿ. ವ್ಯಾಸರ ಈ ಮಾತುಗಳನ್ನು ಕೇಳಿ ಪಾಂಡವರು ಸಂತೋಷಗೊಂಡರು. ಅರ್ಜುನನು ಮೊದಲಾಡಿದ ಮಾತಿಗೆ ಯುಧಿಷ್ಠಿರನು ಪ್ರತಿಭಾಷಣವನ್ನು ಮಾಡಿದನು. ಆತನ ಮಾತು ಸ್ನಿಗ್ಧವೂ ಗಂಭೀರವೂ ಆಗಿತ್ತು. ಅರ್ಜುನನೇ, ಸ್ವಸ್ತಿವಾಚನ ಮಾಡತಕ್ಕ ಬ್ರಾಹ್ಮಣರಲ್ಲಿಗೆ ಮೊದಲು ಹೋಗು. ನಿನ್ನ ಜೈತ್ರಯಾತ್ರೆಯೆಂಬುದು ನಮ್ಮ ಬಗ್ಗೆ ದ್ವೇಷವಿರತಕ್ಕವರಿಗೆ ಶೋಕವನ್ನೂ, ನಮ್ಮ ಮಿತ್ರರಿಗೆ ಸಂತೋಷವನ್ನೂ ಉಂಟುಮಾಡಲಿ. ಪಾರ್ಥನೇ, ನಿನಗೆ ವಿಜಯವೆಂಬುದು ಸಿದ್ಧವೇ ಸರಿ. ನಿನಗೆ ಅಭೀಷ್ಟವಾದದ್ದನ್ನು ಪಡೆದೇ ಪಡೆಯುತ್ತೀಯೇ.

ಈ ಮಾತುಗಳನ್ನು ಕೇಳಿದ ಬಳಿಕ ದೊಡ್ಡ ಸೈನ್ಯದೊಂದಿಗೆ ಅರ್ಜುನನು ಹೊರಟನು. ಆತನ ರಥವು ಅದ್ಭುತವಾದ ಕರ್ಮವನ್ನು ಮಾಡುವುದಾಗಿತ್ತು. ಎಷ್ಟಾದರೂ ಅದು ಅಗ್ನಿದತ್ತವಾದುದಲ್ಲವೇ? ಅವನು ಮಾತ್ರವಲ್ಲದೆ ಧರ್ಮರಾಜನಿಂದ ಸಂಮಾನಿತರಾದ ಭೀಮನೂ, ನಕುಲ-ಸಹದೇವರೂ ಸೈನ್ಯಸಮೇತರಾಗಿ ಹೊರಟುಬಂದರು.

ಸ್ಕ್ರೀನನು ಕೊಂಡೀರಾ

ವಕ್ರದೃಷ್ಟಿ

◆ ಎನ್. ರಾಮನಾಥ್
anakuramanath@gmail.com

'ಮಿಕ್ಕಿದ್ದೆಲ್ಲ ಆಯ್ತು. ಸ್ಕ್ರೀನಿಂಗ್ ಒಂದು ಬಾಕಿ' ಎಂದೆ.

'ಸ್ಕ್ರೀನಿಂಗ್? ಯಾವ ಫಿಲ್ಮ್ ಅಪ್ಪ?' ಎಂದಳು ಮಗಳು.

'ಏನಾಯ್ತಪ್ಪ? ಯಾವ ಸ್ಕ್ಯಾನ್ ಆಗಬೇಕು? ಸಿಟಿ ಸ್ಕ್ಯಾನೋ, ಕ್ಯಾಟ್ ಸ್ಕ್ಯಾನೋ? ಇಂಷುರೆನ್ಸ್ ಪ್ರೀಮಿಯಮ್ ಅಪ್ ಟು ಡೇಟ್ ಇದೆಯಾ?' ಆತಂಕದಿಂದ ಕೇಳಿದ ಮಗ.

'ಫಿಲ್ಮ್‌ದೂ ಅಲ್ಲ, ರೋಗದ್ದೂ ಅಲ್ಲ, ಮನೆಯದು. ಮನೆಯ ಕಿಟಕಿಗಳಿಗೆ ಸ್ಕ್ರೀನ್ ತರಬೇಕು. The act of providing screensಗೆ ನಾನು ಸ್ಕ್ರೀನಿಂಗ್ ಅನ್ನೋ ಪದವನ್ನ ಹುಟ್ಟುಹಾಕಿದೆ ಅಷ್ಟೆ' ಎಂದೆ.

'ಅಂಗಡಿಗೆ ಹೋದಾಗಲೂ ನಿನ್ನ 'ಪದಜನಕತನ'ವನ್ನ ಬದಿಗಿಟ್ಟು ಪರದೆ ಆರಿಸಿಕೊಂಡು ಬಾ' ಎಂದಳು ಮಗಳು.

ಮಡದಿಯೊಡನೆ 'ಹೈಡ್ ಅಂಡ್ ಸೀಕ್' ಸ್ಕ್ರೀನ್ ಶಾಪ್‌ಗೆ ಹೋದೆ. ಬಳಿ ಸಾರಿದ ಅಂಗಡಿಯವನನ್ನು ಕುರಿತು 'ತೆರೆ ಬೇಕು' ಎಂದೆ.

'ಅದು ಎರಡು ವಾಕ್ಯಗಳೋ, ಒಂದೋ?' ಎಂದನವ.

'ಇದು ಎರಡು ಪದಗಳ ವಾಕ್ಯವಲ್ಲವೆ?' ಮಾತಾಡಿದ ನನಗೇ ಸಂಶಯ ಮೂಡುವ ಸ್ಥಿತಿ!

'ಇದ್ದೀತು. ಒಂದೊಂದು ಪದಗಳ ಎರಡು ವಾಕ್ಯವೂ ಆದೀತು. ತೆರೆ ಬೇಕು ಎಂದರೆ ಪರದೆ ಬೇಕು ಎಂದಾಗುತ್ತದೆ. ತೆರೆ ಎಂದರೆ ತೆರವುಗೊಳಿಸು, ಮುಸುಕು ಸರಿಸು ಎಂದಾಗುತ್ತದೆ, ಬೇಕು ಎಂಬುದು ಬೇಡಿಕೆಯನ್ನು ಸಲ್ಲಿಸಿದಂತಾಗುತ್ತದೆ. ನಿಮಗೆ ಇರುವ ಪರದೆಯ ಸರಿಸುವಿಕೆ ಆಗಬೇಕೋ ಅಥವಾ ಪರದೆಯ ಆವಶ್ಯಕತೆಯೋ?'

'ಇದ್ಯಾವುದೋ ಶುದ್ಧಕನ್ನಡದ ಶನಿ ಒಕ್ಕರಿಸಿತು' ಎಂದು ಮನದಲ್ಲೇ ಹಳಿಯುತ್ತಾ 'ನಿಮ್ಮ ಲವ್ ಆಫ್ ಲಾಂಗ್ವೇಜ್ ನನಗೆ ವೆರಿ ಮಚ್ ಲೈಕ್ ಆಯ್ತು' ಎಂದೆ. 'ವಿಚ್ ಸ್ಕ್ರೀನ್ ಡು ಯೂ ವಾಂಟ್ ಸರ್?' ಎನ್ನುತ್ತಾ ಶುದ್ಧಕನ್ನಡಿಗನು ಕೈಲಾಸಂ ವ್ಯಾಖ್ಯಾನ ನೀಡಿದ ಕನ್ನಡಿಗನಾದ. ಅವರವರೊಡನೆ ಅವರವರ ಭಾಷೆಯಲ್ಲಿ ಮಾತನಾಡಿ ಕನ್ನಡಿಗನೊಡನೆ ಇಂಗ್ಲಿಷ್‌ನಲ್ಲಿ ಮಾತನಾಡುವವನೇ ಕನ್ನಡಿಗನೆಂದು ಕೈಲಾಸಂ ನುಡಿದಿದ್ದರು.

'ನಮ್ಮ ಮನೆಗೆ ಮಾಟಗಾತಿಯರೇನೂ ಬರುವುದಿಲ್ಲವಾದ್ದರಿಂದ witch screen ಆವಶ್ಯವಿಲ್ಲ' ಎಂದು ನುಡಿಯೇಟಿಗೆ ನುಡಿಯೇಟು ಬೀರಿದೆ.

'ಗುಡ್. ಇಲ್ಲಿ ಸ್ಕ್ರೀನ್‌ಗಳ ಡಿಸ್‌ಪ್ಲೇ ಇದೆ. ನೋಡಿ ಸೆಲೆಕ್ಟ್ ಮಾಡಿ' ಎಂದನವ.

'ಅವರಿಗೇನೂ ಗೊತ್ತಾಗಲ್ಲ. ನೀವೇ ಸೂಟೆಬಲ್ಲಾದ್ದನ್ನ ಸೆಲೆಕ್ಟ್ ಮಾಡಿಕೊಡಿ' ಎಂದಳು ಮಡದಿ. ಪುರುಷನ ಅಹಂಕಾರದ ಬಲೂನಿಗೆ ಸತ್ಯದ ಸೂಜಿಯಿಂದ ಚುಚ್ಚುವವಳೇ ಮಡದಿ! 'ನಿಮ್ಮ ಫರ್ನೀಚರ್ ಕಲರ್ ಯಾವುದು?' ಎಂದ ಮಾರಪ್ಪ. ಆಂಗ್ಲದ ಸೇಲ್ಸ್‌ಮೆನ್‌ಗೆ ಕನ್ನಡದ 'ಮಾರಪ್ಪ' ಸರಿಯಾದ ಪದ!

'ಎಂತು ಪೇಳ್ವುದು? ನನ್ನ ಮೇಜಿನ ಬಣ್ಣ ಕಪ್ಪು; ಕುರ್ಚಿಗಳದು ತೇಗದ ಬಣ್ಣ, ಹಾಂ! ತೇಗುವ ಬಣ್ಣವೂ ಇದೆಯೇ ಎಂದು ಕೇಳಬೇಡಿ' ಎಂದೆ.

'ನೀವು ಟೀಕ್ ವುಡ್ ಎಂದಿದ್ದರೂ 'ಗಲತ್' ವುಡ್ ಇರತ್ತಾ ಅಂತ ಕೇಳಬಹುದಾಗಿತ್ತು. ಟೀಕ್ ಎಂದರೆ ಸರಿ, ಗಲತ್ ಎಂದರೆ ತಪ್ಪು ಅಂತ ಅರ್ಥಗಳಿವೆಯಲ್ಲ ಹಿಂದಿಯಲ್ಲಿ. ಪನ್ ಅತ್ತ ಬಿಟ್ಟು ಮಾ ಪನಿ ಚೂಸ್ತಾಮಾ (ನಮ್ಮ ಕೆಲಸ ನೋಡೋಣವೇ)?' ಎಂದನವ. ಮಡದಿಯ ಗೋಣು ಸಮ್ಮತಿ ಸೂಚಿಸಿತು.

'ಸ್ಕ್ರೀನ್ ಪ್ಲೇನೋ ಪ್ಲೀಟೆಡ್ಡೋ?'

'ಏನು ವ್ಯತ್ಯಾಸ?'

'ಪ್ಲೇನ್ ಆದರೆ ಹೊರಗಿನದು ಸ್ಪಷ್ಟವಾಗಿ ಕಾಣತ್ತೆ. ನೆರಿಗೆ ಇರುವುದಾದರೆ ಕಾಣಲ್ಲ.'

'ಪ್ಲೇನೇ ಇರಲಿ' ಎಂದೆ.

'ಪ್ಲೀಟೆಡ್ಡೇ ಇರಲಿ. ಪ್ಲೇನ್ ಆದರೆ ಹೋಗಿಬರುವವರಿಗೆಲ್ಲ ನಮ್ಮ ಮನೆ ಪೀಪಿಂಗ್ ಪ್ಲೇಸ್ ಆಗತ್ತೆ' ಎಂದಳು ಮಡದಿ.

'ಓಲ್ಡನ್ ಡೇಸಲ್ಲಿ ಹಾಗಿತ್ತು ಮೇಡಂ. ಈಗ ಯಾರಂದ್ರೆ ಯಾರೂ ನಿಮ್ಮ ಮನೆಯೊಳಕ್ಕೆ ಇಣುಕುವುದಿಲ್ಲ' ಮಾರಪ್ಪ ಉವಾಚ.

'ಅದು ಹೇಗೆ ಅಷ್ಟು ಖಚಿತವಾಗಿ ಹೇಳುತ್ತೀರಿ?'

'ಈಗಿನವರು ತಲೆ ತಗ್ಗಿಸಿಯೇ ನಡೆಯುವ ಮೊಬೈಲಾಕ್ಷರು. ಮಳೆ ಬರುತ್ತಿದೆ ಎಂದು ಅವರಿಗೆ ತಿಳಿಯಬೇಕಾದರೂ ಮೊಬೈಲಲ್ಲಿ ವೆದರ್ ರಿಪೋರ್ಟ್ ನೋಡಿದಾಗಲೇ' ಎಂದನವ.

'ಮಾಮೂಲಿ ಜನರು ಹಾಗಿದ್ದಾರು. ಮನೆಗಳ್ಳರು?'

'ಹ್ಯಾಗೋ ಮನೆಯಲ್ಲಿ ಸೇರಿ ಕದಿಯುವುದಕ್ಕಿಂತ ಕುಳಿತಲ್ಲೇ ಹ್ಯಾಕ್ ಮಾಡಿ ಕದಿಯೋದು ಸುಲಭ ಅಂತ ಕಂಡ್ಹಿಡ್ಕೊಂಡಿದಾರೆ. ತೆರೆ ತೆರೆದಿದ್ದರೂ ಜನರ ದೃಷ್ಟಿ ಒಳಕ್ಕೆ ಸರಿಯುವುದಿಲ್ಲ.'

'ಮನೆಯಲ್ಲಿ ಟೀನೇಜ್ಡ್ ಡಾಟರ್ ಇದ್ದಾಳೆ.'

'ಓಹ್! ಹಾಗಿದ್ದರೆ ಇಣುಕುವೀರರು ಇದ್ದಾರು. ಮೊಬೈಲ್ ಸ್ಕ್ರೀನಿನಿಂದ ಮನೆಯ ಸ್ಕ್ರೀನಿನ ಕಡೆಗೆ ಗಮನ ಸೆಳೆಯಲು ಟೀನೇಜಿಗೆ ಮಾತ್ರ ಸಾಧ್ಯ.'

ನನಗೆ ಈ ಮಾತು ಸರಿಕಾಣಲಿಲ್ಲ. ಹೋದವಾರ ನಮ್ಮ ಮನೆಯಲ್ಲಿ ಟೀನೇಜರ್ಸ್ ಫೋರಂ ಸೇರಿತ್ತು. ಆರು ಜನರು ಆರು ಮೊಬೈಲುಗಳಲ್ಲಿ ಆರು ಗಂಟೆಗಳ ಕಾಲ ತಮ್ಮ ಕತ್ತನ್ನು ಹುದುಗಿಸಿ ಕುಳಿತಿದ್ದರು. ಆಗಾಗ್ಗೆ ಓಹ್! ಆಹ್! ಎಂಬ ಉದ್ಗಾರಗಳು ಹೊರಟರೂ ಅವು ಸ್ಕ್ರೀನ್ ರಿಲೇಟೆಡ್ಡೇ ಆಗಿದ್ದ ಸ್ಕ್ರೀಮುಗಳಾಗಿದ್ದವು. ಪರಸ್ಪರರು ಮಾತನಾಡಿದ್ದು ವಾಟ್ಸಪ್ ಸಂದೇಶಗಳ ಮೂಲಕ! 'ಡಾಟರ್ ತಲೆ ತಗ್ಗಿಸಿಯೇ ಕುಳಿತಿರುತ್ತಾಳೆ. ಮೊಗ ತೋರದ ಹುಡುಗಿಯನ್ನು ನೋಡಲು ಯಾವ ಹುಡುಗರೂ ಕ್ಯೂ ನಿಲ್ಲುವುದಿಲ್ಲ. ಪ್ಲೇನ್ ಪರದೆಯೇ ಇರಲಿ' ಎಂದೆ ನಾನು. 'ಪ್ಲೀಟೆಡ್' ಎಂದಳು ಮಡದಿ.

'ಕಾಂಬೋ ಇರಲಿ. ಒಂದು ಶೀರ್ (ತೆಳು), ಒಂದು ಪ್ಲೀಟ್ ಹಾಕಿಕೊಳ್ಳಿ. ಈಗ ಡಬಲ್ ಕರ್ಟನ್ನೇ ಫ್ಯಾಶನ್' ಎಂದ ಮಾರಪ್ಪ. ಆ ಒಂದು ವಾಕ್ಯದಿಂದ ನನ್ನ ಬ್ಯಾಂಕ್ ಅಕೌಂಟ್‌ಗೆ ತಗಲುವ ಕ್ಷಯದ ತೀವ್ರತೆ ದುಪ್ಪಟ್ಟಾಯಿತು.

ನನ್ನಜ್ಜನ ಕಾಲದ ಪರದೆಗಳು ಮನಃಪಟಲದಲ್ಲಿ ಮೈದೋರಿದವು. ಬಾಗಿಲುಗಳಿಗೆ ಗೌನಿನಂತೆ ಅಷ್ಟುದ್ದವೂ ಇರುತ್ತಿದ್ದ ಪರದೆಗಳು ಕಿಟಕಿಯ ವಿಷಯದಲ್ಲಿ ಸ್ಕರ್ಟ್‌ಗಳಂತೆ ಇದ್ದು, ಜೋರುಗಾಳಿ ಬೀಸಿದಾಗ ಮರ್ಲಿನ್ ಮನ್ರೋಳ ಸ್ಕರ್ಟಿನಂತೆಯೇ ಹಾರಾಡುತ್ತಿದ್ದವು. ಆಗಿನ ಪರದೆಗಳದು ಕೇವಲ ನೋಟನಿರೋಧಕ ಕಾಯಕವಲ್ಲ, ಕಿಟಕಿಯ ಗೂಡಿನಲ್ಲಿರಿಸಿದ ಎಂಜಲು ಲೋಟಗಳು, ಪೆನ್ಸಿಲ್ಲಿನ ಹೆರೆದ ತುಣುಕುಗಳು, ತುಂಡಾದ ಹೇರ್ ಕ್ಲಿಪ್ ಮೊದಲಾದವು ಇತರರಿಗೆ ಕಾಣದಂತಾಗಿಸುವ ಮರೆಗಳೂ ಆಗಿದ್ದವು. ಕೆಲವೊಮ್ಮೆ ತಳದಲ್ಲಿಷ್ಟು ಕಾಫಿಯನ್ನು ಬಿಟ್ಟು, ಅಂತಹ ಲೋಟವು ಗೂಡಿನಲ್ಲಿದ್ದು, ಗಾಳಿಗೆ ತೆರೆಯ ಚುಂಗು ಕಾಫಿಲೋಟದ ತಳಕ್ಕೆ ಮುತ್ತಿಕ್ಕಿ, ತೆರೆಗೆ ವಿಶೇಷ ಕರೆಗಳು ಮೂಡಿ, ಮಾಮೂಲಿ ಪರದೆಗಳು 'ಕಲಾಪರದೆ'ಗಳಾಗುತ್ತಿದ್ದವು. ಈಗಿನ ಕಿಟಕಿಗಳ ಬುಡದಲ್ಲಿನ ಜಾಗವು ಎರಡು ಇಂಚಿಗಿಂತ ಕಡಿಮೆ ಇರುವುದರಿಂದ ಆ 'ಮರುತಚಾಲಿತ ಕಲಾವಂತಿಕೆ'ಯ ಭಾಗ್ಯವು ಇಂದಿನ ಪರದೆಗಳಿಗೆ ದೊರಕುವುದಿಲ್ಲ.

'ಮನೆಗೆ ಟೂ ಟ್ರ್ಯಾಕ್ ಕರ್ಟನ್ ರಾಡ್ ಹಾಕ್ಸಿದೀವಿ' ಎಂದಳು ಮಡದಿ. ನನ್ನ ಹಣಕ್ಕೆ ಖೆಡ್ಡಾವನ್ನು ಮೊದಲೇ ತೋಡಿದ್ದದ್ದು ನನ್ನ ಗಮನಕ್ಕೆ ಬಂದದ್ದು ಆಗಲೇ. ಡಬಲ್ ಕರ್ಟನ್ ಖರೀದಿಗೆ ಸಮ್ಮತಿಸಿದ್ದರಿಂದ ನನ್ನ ಉಳಿತಾಯಬುದ್ಧಿಗೆ ತೆರೆ ಎಳೆದಂತಾಯಿತು. ಮಾರಪ್ಪ ತನ್ನ ಮಾರು-ವೇಷವನ್ನು ಪ್ರದರ್ಶಿಸಲಾರಂಭಿಸಿದ.

'ಸ್ಕ್ರೀನ್ ಕ್ಲಾತ್ ಕಾಟನ್ ಫೀಲ್ ಇರಲೀನೋ, ಫ್ಯಾಬ್ರಿಕ್ ಫೀಲ್ ಇರಲೀನೋ?'

ನಾನು ಆವರೆಗೆ ಕಾಟನ್ ಸಹ ಫ್ಯಾಬ್ರಿಕ್ ಎಂದೇ ತಿಳಿದಿದ್ದೆ.

'ಫ್ಯಾಬ್ರಿಕ್' ಎಂದಳು ಮಡದಿ.

'ಒರಟು ಫೀಲ್ ಇರಲೀನೋ, ಸಾಫ್ಟೋ?'

'ನೋಡಕ್ಕೆ ಒರಟು, ಮುಟ್ಟಕ್ಕೆ ಸಾಫ್ಟು.'

'ಸೌಂಡ್ ಪ್ರೂಫೋ, ಸೌಂಡ್ ಫ್ರೆಂಡ್ಲೀನೋ?'

'ಸೌಂಡ್ ಪ್ರೂಫ್.'

ನನಗೆ ಒಳಗೇ ತಳಮಳ. ಮಡದಿ ಸೀರಿಯಲ್ ನೋಡುವಾಗ ಪಕ್ಕದ ಮನೆಯವನು ನೋಡುವ ಐಪಿಎಲ್‌ನ ಸೌಂಡನ್ನಾದರೂ ಕೇಳಿ ಸ್ಕೋರ್ ತಿಳಿಯುವ ಅವಕಾಶವು ಕರ್ಟನ್ ಸೌಂಡೂಪ್ರೂಫ್ ಆದರೆ ತಪ್ಪಿಹೋಗುವುದಲ್ಲ!

'ಕರ್ಟನ್ ಫುಲ್ ಲೆಂತ್ ಇರಲಿ.'

'ಇರಲಿ.'

'ಛೆ! ಬಟ್ಟೆ ದಂಡವಷ್ಟೆ. ಕಿಟಕಿಯಿಂದ ಒಂದು ಅಡಿ ಕೆಳಗಿದ್ದರೆ ಸಾಕು' ಎಂದೆ.

'ಛಿ! ಸುಮ್ಮನಿರ್ರಿ! ಅಷ್ಟು ಪುಟ್ಟದಾದ ವಸ್ತ್ರಗಳನ್ನು ತೊಡಕ್ಕೆ ಕಿಟಕಿಗಳೇನು ಟೀನೇಜರ್ಸಾ?' ಗುಡುಗಿದಳು ಮಡದಿ.

ಮಾರಪ್ಪ ವಿವಿಧ ಪರದೆಗಳ ತುಣುಕುಗಳಿರುವ ಬೃಹತ್ ಆಲ್ಬಮ್ ಅನ್ನು ಮುಂದಿರಿಸಿದ. ಮಡದಿಯು ಪ್ರತಿಯೊಂದನ್ನೂ ಮುಟ್ಟಿ, ಸವರಿ, ನೇವರಿಸಿ, ಪ್ರತಿಯೊಂದಕ್ಕೂ 'ಇದು ತುಂಬಾ ಸಾಫ್ಟು', 'ಇದು ಸೂಪರ್ ಫೀಲ್, ಬಟ್ ನೋಡಕ್ಕೆ ಅಗ್ಲಿ', 'ಇದು ಓಕೆ; ಆದರೆ ಕಲರ್ ನನ್ನ ಹತ್ತಿರ ಇರುವ ಯಾವ ಡ್ರೆಸ್‌ಗೂ ಮ್ಯಾಚ್ ಆಗಲ್ಲ' ಎನ್ನುತ್ತಾ ಸಾಗಿ, ಕಡೆಗೆ ಎರಡು ವಿಧದ ಪರದೆಗಳನ್ನು ಆಯ್ಕೆ ಮಾಡಿದಳು.

ಮಾರಪ್ಪ ಅವುಗಳ ಬೆಲೆ ಹೇಳಿದ. ನಾನು ಹೌಹಾರಿದೆ. ಮಡದಿಯ ಮುಖ ಉಬ್ಬಿತು. ಮಗನಿಗೆ ಫೋನ್ ಹೋಯಿತು.

'ಅಮ್ಮ ಹೇಳಿದ್ದನ್ನ ತೊಗೊ' ಎಂದ ಮಗ.

'ಅಪ್ಪ ಹೇಳೋದನ್ನ ಕೇಳು' ಎಂದಳು ಮಗಳು.

'ನೀವಿಬ್ಬರೂ ಸ್ಕ್ರೀನಿಂಗ್ ಕಮಿಟಿ ಆಗಕ್ಕೆ ನಾಲಾಯಕ್ಕು. ನಿಮ್ಮ ಮಕ್ಕಳನ್ನು ಕಳುಹಿಸಿ' ಎಂದ ಮಾರಪ್ಪ. ಅವನು ಹೇಳಿದ್ದು ನಮಗೆ ವೇದವಾಕ್ಯವಾಯಿತು. ◈

ಪ್ರಧಾನಿ ಮನವಿಯ ಹಿಂದಿನ ಕಾರಣಗಳು

▶ ಪ್ರಸನ್ನ ಕಂಬದಮನೆ

ಪ್ರಧಾನಮಂತ್ರಿಗಳು ಇತ್ತೀಚೆಗೆ ದೇಶದ ಜನರಿಗೆ ಒಂದು ವರ್ಷದ ಕಾಲ ಚಿನ್ನ ಖರೀದಿಸಬೇಡಿ, ವಿದೇಶಿ ಪ್ರವಾಸಗಳನ್ನು ಕಡಿಮೆ ಮಾಡಿ, ಸಾಧ್ಯವಾದರೆ ಮನೆಯಿಂದಲೇ ಕೆಲಸ ಮಾಡಿ ಮತ್ತು ಇಂಧನ ಉಳಿಸುವ ಕ್ರಮಗಳನ್ನು ಅನುಸರಿಸಿ ಎಂದು ಮನವಿ ಮಾಡಿದರು. ಸಾಮಾನ್ಯವಾಗಿ ಸರ್ಕಾರಗಳು ಜನರಿಗೆ ನೇರವಾಗಿ ಇಂತಹ ಸಲಹೆಗಳನ್ನು ನೀಡುವುದಿಲ್ಲ. ಅದರಲ್ಲೂ ದೇಶದಲ್ಲಿ ಆಗುತ್ತಿರುವ ಆರ್ಥಿಕ ಬದಲಾವಣೆಗೆ ಸಂಬಂಧಿಸಿ 'ಪ್ರಧಾನಿ'ಯವರೇ ಸಂದೇಶ ನೀಡುವುದು ವಿರಳಾತಿ ವಿರಳ. ವಿಶೇಷವಾಗಿ ಜಗತ್ತಿನ ದೊಡ್ಡ ಆರ್ಥಿಕತೆಗಳಲ್ಲಿ ಒಂದಾದ ಭಾರತದಲ್ಲಿ ಇಂತಹ ಮನವಿಗಳು ಕೇಳಿಬಂದಾಗ, ಅದರ ಹಿಂದೆ ಕೇವಲ ರಾಜಕೀಯ ಸಂದೇಶವಷ್ಟೇ ಅಲ್ಲ, ಆರ್ಥಿಕ ಹೊಣೆಗಾರಿಕೆಯೂ ಅಡಗಿದೆ ಎಂಬುದು ಸ್ಪಷ್ಟವಾಗುತ್ತದೆ.

ಕಳೆದ ಕೆಲವು ತಿಂಗಳಿಂದ ದೇಶದಲ್ಲಿ ನಡೆಯುತ್ತಿರುವ ಆರ್ಥಿಕ ಚರ್ಚೆಗಳಲ್ಲಿ "ರೂಪಾಯಿ ಮೌಲ್ಯ ಕುಸಿತ", "ತೈಲ ಬೆಲೆ ಏರಿಕೆ", "ಜಾಗತಿಕ ಯುದ್ಧದ ಪರಿಣಾಮ" ಎಂಬ ಪದಗಳು ಹೆಚ್ಚಾಗಿ ಕೇಳಿಬರುತ್ತಿವೆ. ಆದರೆ ಈ ಘಟನೆಗಳನ್ನು ಪ್ರತ್ಯೇಕವಾಗಿ ನೋಡುವುದಕ್ಕಿಂತ, ಅವುಗಳ ನಡುವೆ ಇರುವ ಸಂಬಂಧವನ್ನು ಅರ್ಥಮಾಡಿಕೊಳ್ಳುವುದು ಹೆಚ್ಚು ಮುಖ್ಯ. ಮಧ್ಯಪ್ರಾಚ್ಯದಲ್ಲಿ ಉಂಟಾದ ಉದ್ವಿಗ್ನತೆ, ಹೋರ್ಮುಜ್ ಜಲ ಮಾರ್ಗದಲ್ಲಿನ ಅಸ್ಥಿರತೆ, ಜಾಗತಿಕ ತೈಲ ಸರಬರಾಜಿನ ವ್ಯತ್ಯಯ, ಭಾರತದ ಹೆಚ್ಚುತ್ತಿರುವ ಆಮದು ವೆಚ್ಚ, ರೂಪಾಯಿ ಮೇಲಿನ ಒತ್ತಡ ಮತ್ತು ಸರ್ಕಾರದ ಕ್ರಮಗಳು ಇವೆಲ್ಲವೂ ಒಂದೇ ಆರ್ಥಿಕ ಸರಪಳಿಯ ವಿಭಿನ್ನ ಹಂತಗಳಾಗಿವೆ. ಮೊದಲು ಸರ್ಕಾರಗಳು ಆರ್ಥಿಕ ನೀತಿಗಳ ಮೂಲಕ ಇಂತಹ ಸಮಸ್ಯೆಗಳನ್ನು ಸರಿ ಮಾಡಲು ಪ್ರಯತ್ನಿಸುತ್ತವೆ. ನಂತರ ಆಡಳಿತಾತ್ಮಕವಾಗಿ ಪ್ರಯತ್ನ ಮಾಡುತ್ತವೆ. ಮುಂದುವರೆದು ಜನರ ಬಳಿ ವಿನಂತಿ ಮಾಡಲು ಪ್ರಯತ್ನಿಸುತ್ತದೆ ಮತ್ತು ಇವೆಲ್ಲವೂ ಆದ ನಂತರ ಕೊನೆಯದಾಗಿ ಒಂದಿಷ್ಟು ಕಠಿಣ ನಿಯಮಗಳು ಜಾರಿ ಆದರೆ ಅಚ್ಚರಿಯಿಲ್ಲ.



ಜಗತ್ತಿನ ಒಟ್ಟು ಕಚ್ಚಾ ತೈಲ ಸಾಗಣೆಯ ಸುಮಾರು 20 ಶೇಕಡಾ ಹೊರ್ಮುಜ್ ಜಲಸಂಧಿಯ ಮೂಲಕ ಸಾಗುತ್ತದೆ. 2026ರ ಫೆಬ್ರವರಿ ಕೊನೆಯಲ್ಲಿ ಇರಾನ್, ಅಮೆರಿಕಾ ಮತ್ತು ಕೆಲವು ದೇಶಗಳ ನಡುವೆ ಉಂಟಾದ ಯುದ್ಧದ ಉದ್ವಿಗ್ನತೆ ಈ ಮಾರ್ಗವನ್ನು ಅಸ್ಥಿರಗೊಳಿಸಿತು. ಅನೇಕ ವಾಣಿಜ್ಯ ಹಡಗುಗಳಿಗೆ ಭದ್ರತಾ ಆತಂಕ ಎದುರಾಯಿತು. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಸರಬರಾಜಿನ ಬಗ್ಗೆ ಭಯ ಹೆಚ್ಚಾಯಿತು. ಪರಿಣಾಮವಾಗಿ 2025ರಲ್ಲಿ ಸುಮಾರು 70 ರಿಂದ 80 ಡಾಲರ್ ನಡುವೆ ಸ್ಥಿರವಾಗಿದ್ದ ಬ್ರೆಂಟ್ ಕ್ರೂಡ್ ಬೆಲೆ ಕೆಲವೇ ವಾರಗಳಲ್ಲಿ 100 ರಿಂದ 115 ಡಾಲರ್ ಮಟ್ಟಕ್ಕೆ ಏರಿತು.

ಈ ಬೆಳವಣಿಗೆಗಳು ಭಾರತಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿದವು. ಭಾರತ ತನ್ನ ಅಗತ್ಯದ ಸುಮಾರು 85 ಶೇಕಡಾ ಕಚ್ಚಾ ತೈಲವನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳುತ್ತದೆ. ಅದರಲ್ಲಿ ಅರ್ಧದಷ್ಟು ತೈಲ ಹೋರ್ಮುಜ್ ಮಾರ್ಗದ ಮೂಲಕವೇ ಬರುತ್ತದೆ. 2025.26 ಹಣಕಾಸು ವರ್ಷದಲ್ಲಿ ಭಾರತ ಸುಮಾರು 174.9 ಬಿಲಿಯನ್ ಡಾಲರ್ ಮೌಲ್ಯದ ತೈಲ ಮತ್ತು ಪೆಟ್ರೋಲಿಯಂ ಉತ್ಪನ್ನಗಳನ್ನು ಆಮದು ಮಾಡಿತ್ತು. ಇದು ದೇಶದ ಒಟ್ಟು ಆಮದು ವೆಚ್ಚದ ಸುಮಾರು 22 ಶೇಕಡಾ. ತೈಲದ ಬೆಲೆ ಪ್ರತಿ 10 ಡಾಲರ್ ಏರಿದಾಗ ಭಾರತದ ವಾರ್ಷಿಕ ಆಮದು ಬಿಲ್ ಸುಮಾರು 15 ರಿಂದ 20 ಬಿಲಿಯನ್ ಡಾಲರ್ ಹೆಚ್ಚಾಗುತ್ತದೆ ಎಂದು ಅಂದಾಜಿಸಲಾಗಿದೆ. ಅಂದರೆ ಜಾಗತಿಕ ಮಾರುಕಟ್ಟೆಯ ಅಸ್ಥಿರತೆ ನೇರವಾಗಿ ಭಾರತದ ಹಣಕಾಸಿನ ಮೇಲೆ ಪರಿಣಾಮ ಬೀರುತ್ತದೆ.

ತೈಲದ ಬೆಲೆ ಏರಿದಂತೆ ಭಾರತಕ್ಕೆ ಹೆಚ್ಚು ಡಾಲರ್ ಅಗತ್ಯವಾಗುತ್ತದೆ. ತೈಲ ಖರೀದಿಸಲು ಭಾರತೀಯ ಕಂಪನಿಗಳು ಜಾಗತಿಕ ಮಾರುಕಟ್ಟೆಯಲ್ಲಿ ಹೆಚ್ಚು ಡಾಲರ್ ಖರೀದಿಸಬೇಕಾಗುತ್ತದೆ. ಡಾಲರ್‌ಗೆ ಬೇಡಿಕೆ ಹೆಚ್ಚಿದಂತೆ ರೂಪಾಯಿ ಮೌಲ್ಯ ಕುಸಿಯುವುದು ಸಹಜ. 2026ರ ಆರಂಭದಲ್ಲಿ ಒಂದು ಡಾಲರ್‌ಗೆ ಸುಮಾರು 85.64 ರೂಪಾಯಿ ಇದ್ದ ಮೌಲ್ಯ, ಮಾರ್ಚ್ ವೇಳೆಗೆ 90 ದಾಟಿ, ತಿಂಗಳ ಅಂತ್ಯದ ವೇಳೆಗೆ 95.22 ಎಂಬ ಐತಿಹಾಸಿಕ ಕನಿಷ್ಠ ಮಟ್ಟವನ್ನು ತಲುಪಿತು. ಪ್ರಸ್ತುತ ರೂಪಾಯಿ ಸುಮಾರು 95ರ ಮಟ್ಟದಲ್ಲಿ ವಹಿವಾಟು ನಡೆಸುತ್ತಿದೆ. ಕೇವಲ ಐದು ತಿಂಗಳಲ್ಲಿ ಸುಮಾರು 6.5 ಶೇಕಡಾ ಮೌಲ್ಯ ಕುಸಿತ ಕಂಡಿರುವುದು ಏಷ್ಯಾದ ಪ್ರಮುಖ ಕರೆನ್ಸಿಗಳಲ್ಲಿ ಅತ್ಯಂತ ದುರ್ಬಲ ಪ್ರದರ್ಶನವಾಗಿದೆ. ಹೋಲಿಕೆಗೆ ಥಾಯ್ಲೆಂಡ್‌ನ ಬಾಟ್ ಕೇವಲ 3.5 ಶೇಕಡಾ ಕುಸಿದರೆ, ಚೀನಾದ ಯುವಾನ್ ಮೌಲ್ಯದಲ್ಲಿ ಸ್ವಲ್ಪ ಏರಿಕೆಯೇ ಕಂಡಿದೆ.

ರೂಪಾಯಿ ಕುಸಿತ ಎಂದರೆ ಕೇವಲ ಕರೆನ್ಸಿ ಮೌಲ್ಯದ ಪ್ರಶ್ನೆಯಲ್ಲ. ಅದರ ಪರಿಣಾಮ ಸಾಮಾನ್ಯ ಜನರ ದೈನಂದಿನ ಜೀವನದ ಮೇಲೆ ಬೀಳುತ್ತದೆ. ಪೆಟ್ರೋಲ್ ಮತ್ತು ಡೀಸೆಲ್ ದುಬಾರಿಯಾಗುತ್ತದೆ. ಆಮದು ಮಾಡಿಕೊಂಡ ಎಲೆಕ್ಟ್ರಾನಿಕ್ಸ್ ಉತ್ಪನ್ನಗಳ ಬೆಲೆ ಏರಿಕೆಯಾಗುತ್ತದೆ. ವಿದೇಶಿ ಶಿಕ್ಷಣ ಮತ್ತು ಪ್ರವಾಸ ವೆಚ್ಚ ಹೆಚ್ಚುತ್ತದೆ. ರೂಪಾಯಿ ಕುಸಿತವನ್ನು ನಿಯಂತ್ರಿಸಲು ಭಾರತೀಯ ರಿಸರ್ವ್ ಬ್ಯಾಂಕ್ ತನ್ನ ವಿದೇಶಿ ವಿನಿಮಯ ಸಂಗ್ರಹವನ್ನು ಬಳಸತೊಡಗಿತು. ಆರ್‌ಬಿಐ ಮಾರುಕಟ್ಟೆಯಲ್ಲಿ ಡಾಲರ್ ಮಾರಾಟ ಮಾಡಿ ರೂಪಾಯಿಯನ್ನು ಸಪೋರ್ಟ್ ಮಾಡುತ್ತಿದೆ. 2026ರ ಫೆಬ್ರವರಿ 27ರಂದು ಭಾರತದ ವಿದೇಶಿ ವಿನಿಮಯ ಸಂಗ್ರಹ 728.5 ಬಿಲಿಯನ್ ಡಾಲರ್ ಮಟ್ಟದಲ್ಲಿತ್ತು. ಆದರೆ ಮೇ 1ರ ವೇಳೆಗೆ ಅದು 690.7 ಬಿಲಿಯನ್ ಡಾಲರ್‌ಗೆ ಇಳಿದಿದೆ. ಅಂದರೆ ಕೇವಲ ಒಂಬತ್ತು ವಾರಗಳಲ್ಲಿ ಸುಮಾರು 38 ಬಿಲಿಯನ್ ಡಾಲರ್ ಸಂಗ್ರಹ ಕಡಿಮೆಯಾಗಿದೆ. ಮೇ 1ರಂದು ಕೊನೆಯಾದ ವಾರದಲ್ಲೊಂದರಲ್ಲೇ 7.79 ಬಿಲಿಯನ್ ಡಾಲರ್ ಕುಸಿತ ದಾಖಲಾಗಿದೆ.

ಈಗಿನ ಪರಿಸ್ಥಿತಿಯನ್ನು ಕೆಲವರು 1991ರ ಆರ್ಥಿಕ ಬಿಕ್ಕಟ್ಟಿನೊಂದಿಗೆ ಹೋಲಿಸುತ್ತಿದ್ದರೂ, ವಾಸ್ತವದಲ್ಲಿ ಪರಿಸ್ಥಿತಿ ಅದಕ್ಕಿಂತ ಭಿನ್ನವಾಗಿದೆ. 1991ರಲ್ಲಿ ಭಾರತದ ಬಳಿ ಕೇವಲ ಮೂರು ವಾರಗಳ ಆಮದಿಗೆ ಸಾಕಾಗುವಷ್ಟು ಮಾತ್ರ ವಿದೇಶಿ ವಿನಿಮಯ ಸಂಗ್ರಹ ಇತ್ತು. ಆದರೆ ಈಗಲೂ ಭಾರತಕ್ಕೆ ಸುಮಾರು 10 ರಿಂದ 11 ತಿಂಗಳ imports cover ಇದೆ. ಹೀಗಾಗಿ ಇದು ತಕ್ಷಣದ SOlvency crisis ಅಲ್ಲ. ಆದರೆ ಸಮಸ್ಯೆ ಸಂಗ್ರಹದ ಪ್ರಮಾಣದಲ್ಲಲ್ಲ; ಅದು ಕಡಿಮೆಯಾಗುತ್ತಿರುವ ವೇಗದಲ್ಲಿದೆ. ಆರ್‌ಬಿಐ ನಿರಂತರವಾಗಿ ವಾರಕ್ಕೆ 5 ರಿಂದ 8 ಬಿಲಿಯನ್ ಡಾಲರ್ ಬಳಸಬೇಕಾದರೆ, ಸರ್ಕಾರ ಮತ್ತು ಹಣಕಾಸು ವ್ಯವಸ್ಥೆಯ ಮೇಲೆ ಒತ್ತಡ ಹೆಚ್ಚಾಗುವುದು ಅನಿವಾರ್ಯ.

ಈ ಒತ್ತಡದ ಹಿನ್ನೆಲೆಯಲ್ಲಿ ಸರ್ಕಾರ ಕ್ರಮೇಣ ತನ್ನ ನೀತಿಗಳನ್ನು ಗಟ್ಟಿಗೊಳಿಸುತ್ತಿದೆ. ಮೊದಲ ಹಂತದಲ್ಲಿ ಆರ್‌ಬಿಐ ಮಾರುಕಟ್ಟೆಯಲ್ಲಿ ಹಸ್ತಕ್ಷೇಪ ನಡೆಸಿತು. ನಂತರ ಬ್ಯಾಂಕ್‌ಗಳ foreign exchange positions ಮೇಲೆ ನಿಯಂತ್ರಣ ತರಲಾಯಿತು. ರಫ್ತುದಾರರು ತಮ್ಮ ಡಾಲರ್ ಆದಾಯವನ್ನು ತಕ್ಷಣ ಭಾರತಕ್ಕೆ ತರಬೇಕು ಎಂಬ ಚರ್ಚೆಗಳು ಆರಂಭವಾದವು. ಈಗ ಸರ್ಕಾರ ಜನರ ಮಟ್ಟಕ್ಕೆ ಸಂದೇಶ ಕಳುಹಿಸುತ್ತಿದೆ. ಚಿನ್ನ ಖರೀದಿ ಕಡಿಮೆ ಮಾಡಿ, ವಿದೇಶ ಪ್ರವಾಸ ತಪ್ಪಿಸಿ, ಇಂಧನ ಉಳಿಸಿ ಎಂಬ ಮನವಿಗಳು ಇದೇ ಭಾಗ. ಈ ಪರಿಸ್ಥಿತಿಯ ಪರಿಣಾಮ ವಿವಿಧ ಕ್ಷೇತ್ರಗಳ ಮೇಲೆ ವಿಭಿನ್ನ ರೀತಿಯಲ್ಲಿ ಕಾಣಿಸಿಕೊಳ್ಳುತ್ತಿದೆ. ಭಾರತವು ಜಗತ್ತಿನ ಅತಿದೊಡ್ಡ ಚಿನ್ನ ಬಳಕೆದಾರ ರಾಷ್ಟ್ರಗಳಲ್ಲಿ ಒಂದಾಗಿರುವುದರಿಂದ, ಚಿನ್ನದ ಆಮದು ಕಡಿಮೆ ಮಾಡುವ ಸರ್ಕಾರದ ಪ್ರಯತ್ನ ಮಾರುಕಟ್ಟೆಯ ಮೇಲೆ ಪರಿಣಾಮ ಬೀರುತ್ತಿದೆ. ಎಲೆಕ್ಟ್ರಾನಿಕ್ಸ್ ಕ್ಷೇತ್ರದಲ್ಲೂ ಅನಿಶ್ಚಿತತೆ ಹೆಚ್ಚಾಗಿದೆ. ಭಾರತದಲ್ಲಿ assemble ಆಗುವ ಅನೇಕ ಮೊಬೈಲ್, ಲ್ಯಾಪ್‌ಟಾಪ್ ಮತ್ತು ಟಿವಿಗಳು port restrictions ಮೇಲೆ ಅವಲಂಬಿತವಾಗಿವೆ. ಸರ್ಕಾರ import restrictions ತಂದರೆ ಉತ್ಪಾದನಾ ವೆಚ್ಚ ಮತ್ತು ಮಾರುಕಟ್ಟೆ ಬೆಲೆ ಎರಡೂ ಏರಬಹುದು. ಆದರೆ ಪ್ರತಿಯೊಂದು ಕ್ಷೇತ್ರಕ್ಕೂ ಈ ಪರಿಸ್ಥಿತಿ ಒಂದೇ ರೀತಿಯ ಪರಿಣಾಮ ಬೀರುವುದಿಲ್ಲ. ಭಾರತೀಯ ಐಟಿ ಕಂಪನಿಗಳಿಗೆ ದುರ್ಬಲ ರೂಪಾಯಿ ಕೆಲ ಮಟ್ಟಿಗೆ ಲಾಭಕರವಾಗಬಹುದು. ಏಕೆಂದರೆ ಅವರ ಆದಾಯದ ಬಹುಪಾಲು ಡಾಲರ್‌ನಲ್ಲಿ ಬರುತ್ತದೆ, ಆದರೆ ವೆಚ್ಚಗಳು ರೂಪಾಯಿಯಲ್ಲಿ ಇರುತ್ತವೆ. ಹೀಗಾಗಿ ರೂಪಾಯಿ ಕುಸಿತದಿಂದ ಅವರ operating margins ಹೆಚ್ಚಾಗುವ ಸಾಧ್ಯತೆ ಇದೆ.

ಮುಂದಿನ ಕೆಲವು ವಾರಗಳು ಮತ್ತು ತಿಂಗಳುಗಳು ಭಾರತದ ಆರ್ಥಿಕತೆಗೆ ಅತ್ಯಂತ ಮಹತ್ವದ್ದಾಗಿರಬಹುದು. ಪರಿಸ್ಥಿತಿ ಸುಧಾರಿಸಬೇಕಾದರೆ ಮಧ್ಯಪ್ರಾಚ್ಯದ ಉದ್ವಿಗ್ನತೆ ಕಡಿಮೆಯಾಗಬೇಕು ಮತ್ತು ಹೋರ್ಮುಜ್ ಮಾರ್ಗ ಪುನಃ ಸ್ಥಿರವಾಗಬೇಕು. ಒಂದು ವೇಳೆ ತೈಲದ ಬೆಲೆ 90 ಡಾಲರ್‌ಗಿಂತ ಕೆಳಗೆ ಇಳಿದರೆ ರೂಪಾಯಿ ಸ್ಥಿರವಾಗಬಹುದು ಮತ್ತು ಸರ್ಕಾರದ ಕಠಿಣ ಕ್ರಮಗಳ ಅಗತ್ಯವೂ ಕಡಿಮೆಯಾಗಬಹುದು. ಆದರೆ ತೈಲದ ಬೆಲೆ 110 ಡಾಲರ್ ಮೇಲಾಗಿಯೇ ಉಳಿದರೆ ಸರ್ಕಾರ ಚಿನ್ನ ಮತ್ತು ಎಲೆಕ್ಟ್ರಾನಿಕ್ ಆಮದಿನ ಮೇಲೆ ಗಟ್ಟಿಯಾದ ನಿಯಂತ್ರಣ ತರಬಹುದು. ಇಂಧನ ಬೆಲೆ ಏರಿಕೆ ಮತ್ತು ವಿದೇಶಿ ವಿನಿಮಯ ನಿಯಂತ್ರಣಗಳ ಸಾಧ್ಯತೆಯನ್ನೂ ತಳ್ಳಿಹಾಕಲು ಸಾಧ್ಯವಿಲ್ಲ. ಭಾರತ ಇಂದು 1991ರಂತಿಲ್ಲ. ದೇಶದ IT exports, banking system, domestic consumption ಎಲ್ಲವೂ ಬಹಳ ಬಲಿಷ್ಠವಾಗಿವೆ. ಆದರೆ ಇದೊಂದು ಸಾಮಾನ್ಯ ಪರಿಸ್ಥಿತಿ ಕೂಡ ಅಲ್ಲ. ಇದು ಜಾಗತಿಕ ರಾಜಕೀಯ ಸಂಘರ್ಷದಿಂದ ಭಾರತದ ಆರ್ಥಿಕತೆಯ ಮೇಲೆ ಬಂದಿರುವ ದೊಡ್ಡ ಒತ್ತಡ ಪರೀಕ್ಷೆ ಅಷ್ಟೆ. ಈ ಸಂದರ್ಭದಲ್ಲಿ ಅತ್ಯಂತ ಮುಖ್ಯವಾದುದು ಬ್ರೇಕಿಂಗ್ ನ್ಯೂಸ್ ನೋಡಿ ಆತಂಕಪಡುವುದಲ್ಲ; ಬದಲಾಗಿ ಆರ್ಥಿಕ ಸಂಕೇತಗಳನ್ನು ಗಮನಿಸುವುದು ಬಹಳ ಮುಖ್ಯ. ಏಕೆಂದರೆ ಆರ್ಥಿಕತೆಯ ನಿಜವಾದ ಕಥೆ ಯಾವಾಗಲೂ ಸುದ್ದಿಶೀರ್ಷಿಕೆಗಳಲ್ಲಿ ಕಾಣಿಸಿಕೊಳ್ಳುವುದಿಲ್ಲ. ಅದು ಅಂಕಿ ಸಂಖ್ಯೆಗಳ ಒಳಗೆ ಅಡಗಿರುತ್ತದೆ.

ಮೋದಿಯವರ ಈ ಮನವಿಯನ್ನು ಕೆಲವರು ಬೇರೆ ದೃಷ್ಟಿಕೋನದಲ್ಲಿ ವಿಶ್ಲೇಷಿಸಲು ಶುರು ಮಾಡಿಯಾಗಿದೆ. ಭಾರತವನ್ನು 'ದುರ್ಬಲ ದೇಶ' ಎಂದು ಬಿಂಬಿಸುವ ಕೆಲಸವೂ ನಡೆದಿದೆ. ಸರ್ಕಾರ ಯಾವುದಾದರೂ ಇರಲಿ, ದೇಶದ ನಾಗರಿಕನಿಗೆ ತನ್ನ ದೇಶದ ಮೇಲೆ 'ನಂಬಿಕೆ' ಮತ್ತು ಪ್ರೀತಿ ಎರಡೂ ಇರಬೇಕು, ಅಷ್ಟೇ! ◈

ಸೈದ್ಧಾಂತಿಕ ಶೂನ್ಯದಲ್ಲಿ ಮೇಲೆದ್ದು ಬಂದ ವಿಜಯ್

▶ ಪೂರ್ಣಿಮಾ

ವಿಜಯ್ ಈಗ ತಮಿಳ್ನಾಡು ರಾಜಕೀಯದ ಕೇಂದ್ರ ಬಿಂದುವಾಗಿದ್ದಾರೆ. ಆಡಳಿತ ವಿರೋಧಿ ರಾಜಕೀಯ ಮತ್ತು ನವಪೀಳಿಗೆಯ ಆಕ್ರೋಶದ ಸಂಕೇತವಾಗಿದ್ದಾರೆ. ಆದರೆ ಅವರ ಏಳಿಗೆಯು ರಾಜಕೀಯ ಶೂನ್ಯವೊಂದನ್ನೂ ತೋರಿಸುತ್ತಿದೆ. ಹಳೆಯ ದ್ರಾವಿಡ ವ್ಯವಸ್ಥೆಯು ವಿಶ್ವಾಸ ಕಳೆಕೊಳ್ಳುತ್ತಿದೆ. ಇದೇವೇಳೆ, ನೂತನ ಪರ್ಯಾಯ ವ್ಯವಸ್ಥೆಯು ಇನ್ನೂ ಅನನುಭವಿಯಾಗಿ ಮತ್ತು ಸಂಘಟನಾತ್ಮಕವಾಗಿ ದುರ್ಬಲವಾಗಿ ಕಂಡುಬರುತ್ತಿದೆ.

ಜೋಸೆಫ್ ವಿಜಯ್ ಈಗ ಸಿನಿಮೀಯ ಕಲ್ಪನೆಗಿಂತಲೂ ಕಠಿಣವಾದ ವಾಸ್ತವಿಕತೆಯೆಗೆ ಕಣ್ಣು ತೆರೆಯುತ್ತಿದ್ದಾರೆ. ತಮಿಳ್ನಾಡು ರಾಜ್ಯವು ಹೀರೋ ಒಬ್ಬನ ಪ್ರವೇಶಕ್ಕೆ ತೆರವಾಗಿ ನಿಂತ ಥಿಯೇಟರ್ ಅಲ್ಲ. ತಮಿಳ್ನಾಡು ದೇಶದ ಅತ್ಯಂತ ರಾಜಕೀಯ ಸೂಕ್ಷ್ಮತೆಯ ರಾಜ್ಯವೂ ಹೌದು. ದಶಕಗಳ ಕಾಲದ ಸೈದ್ಧಾಂತಿಕ ಸಂಘರ್ಷಗಳು, ಭಾಷಾಭಿಮಾನ ಮುಂತಾದವು ಅದನ್ನು ರೂಪಿಸಿದೆ. ವಿಜಯ್ ಚುನಾವಣೆ ಗೆದ್ದಿರಬಹುದು, ಆದರೆ ಆಡಳಿತ ಯಂತ್ರವನ್ನು ಸುಗಮವಾಗಿ ನಡೆಸುವುದು ಅವರಿಗೆ ಸವಾಲು ಒಡ್ಡಲಿದೆ.

ತಮಿಳ್ನಾಡು ಈಗ ಐತಿಹಾಸಿಕ ಕವಲುದಾರಿಯಲ್ಲಿದೆ. ಆರು ದಶಕಗಳ ಕಾಲ ರಾಜ್ಯವನ್ನು ಪ್ರಭಾವಿಸಿದ ದ್ರಾವಿಡ ವ್ಯವಸ್ಥೆಯು ಈಗ ದುರ್ಬಲಗೊಳ್ಳುತ್ತಿದೆ. ಹಾಗೆಂದು ಅದಕ್ಕೆ ಪ್ರಭಾವಿ ಪರ್ಯಾಯ ವ್ಯವಸ್ಥೆಯೂ ಬೆಳೆದಿಲ್ಲ. ಸಂಘಟನಾ ಶಕ್ತಿ ಇನ್ನೂ ಡಿಎಂಕೆಯಲ್ಲೇ ಉಳಿದಿದೆ. ಎಐಎಡಿಎಂಕೆ ಪಕ್ಷವು ಎಂಜಿಆರ್, ಜಯಲಲಿತಾ ಕಾಲದ ನಿಷ್ಠಾವಂತರನ್ನು ಮತ್ತು ಜಾತಿ ಸಮೀಕರಣವನ್ನು ನಂಬಿಕೊಂಡು ಉಳಿದಿದೆ. ಆದರೆ ಇವೆರಡೂ ಪಕ್ಷಗಳು ಸೈದ್ಧಾಂತಿಕವಾಗಿ ಬಸವಳಿದಿವೆ. ಸಾಮಾಜಿಕ ನ್ಯಾಯ, ಗಣರಾಜ್ಯ ವ್ಯವಸ್ಥೆ, ತಮಿಳು ಅಸ್ಮಿತೆ ಮುಂತಾಗಿ ಅವು ಮಾತನಾಡುತ್ತಲೇ ಇರುತ್ತವಾದರೂ ಅವುಗಳ ರಾಜಕೀಯವು ಬಹುವಾಗಿ ಅಧಿಕಾರಶಾಹಿ ಮ್ಯಾನೇಜ್‌ಮೆಂಟ್‌ನಂತೆ ಕಾಣುತ್ತದೆಯೇ ಹೊರತು ಜನರನ್ನು ಒಳಗೊಳ್ಳುವ ನೀತಿಯಾಗಿ ಅಲ್ಲ. ಈ ಶೂನ್ಯದ ಕಾರಣದಿಂದಲೇ ವಿಜಯ್ ಎದ್ದುಬರುವಂತಾದುದು.

ತಮಿಳ್ನಾಡು ಸಿನಿಮಾ ರಾಜಕೀಯಕ್ಕೆ ಅಂಟಿಕೊಂಡಿದೆ ಎಂಬುದಾಗಿ ರಾಷ್ಟ್ರೀಯ ರಾಜಕೀಯ ವಿಶ್ಲೇಷಕರು ಹೇಳುವುದಿದೆ. ಆದರೆ ಈ ವ್ಯಾಖ್ಯಾನವು ಆಳವಾದ ಐತಿಹಾಸಿಕ ಸತ್ಯವನ್ನು ಮರೆಮಾಚುತ್ತದೆ. ಎಂಜಿಆರ್ ಮತ್ತು ಜಯಲಲಿತಾ ತಾವು ಸಿನಿಮಾ ತಾರೆಯರೆಂಬ ಕಾರಣಕ್ಕಷ್ಟೇ ಯಶಸ್ಸು ಕಂಡುದಲ್ಲ. ದ್ರಾವಿಡ ಆಂದೋಲನವು ರೂಪಿಸಿದ ಭಾವನಾತ್ಮಕ ಮತ್ತು ಸೈದ್ಧಾಂತಿಕ ಚೌಕಟ್ಟಿನೊಳಗೆ ತಮ್ಮನ್ನು ತೊಡಗಿಸಿಕೊಂಡ ಕಾರಣಕ್ಕಾಗಿ ಕೂಡಾ ಅವರು ಯಶಸ್ಸು ಕಂಡರು. ತಮಿಳ್ನಾಡಿನಲ್ಲಿ ಸಿನಿಮಾಗಳು ರಾಜಕೀಯ ಪ್ರತಿರೂಪಗಳಾಗಿವೆ. ಸಿನಿಮಾ ಡೈಲಾಗ್‌ಗಳು ರಾಜಕೀಯ ಸಂದೇಶ ಸಾರುತ್ತವೆ. ಸಾಮಾನ್ಯ ಜನರ ಆಶೋತ್ತರಗಳನ್ನು ಭಾವನೆಗಳನ್ನು ಬಿಂಬಿಸಿದಾಗಲಷ್ಟೇ ಯಾವುದೇ ನಟನ 'ತಾರಾಗಿರಿ'ಗೆ ಅರ್ಥ ಬರುತ್ತದೆ. ಅದನ್ನು ಸಮರ್ಥವಾಗಿ ಬಳಸಿಕೊಂಡವರು ಮಾತ್ರ ರಾಜಕೀಯದಲ್ಲೂ ಮಿಂಚುತ್ತಾರೆ.



ಜನಪರ ಕಲ್ಯಾಣ ಕಾರ್ಯಕ್ರಗಳನ್ನು ಅಳವಡಿಸುವಲ್ಲಿ ತಮಿಳ್ನಾಡು ಯಾವತ್ತೂ ಮುಂದೆ. ಕಾಮರಾಜ್ ಆರಂಭಿಸಿದ ಮಧ್ಯಾಹ್ನದೂಟ ಯೋಜನೆ ಇದಕ್ಕೆ ನಿದರ್ಶನ. ಅದನ್ನು ಎಂಜಿಆರ್ ಇನ್ನಷ್ಟು ಪರಿಣಾಮಕಾರಿಯಾಗಿ ಜಾರಿಗೆ ತಂದರು.

ಕರುಣಾನಿಧಿ ಮತ್ತು ಬಳಿಕ ಅವರ ಪುತ್ರ ಸ್ಟಾಲಿನ್ ಅವಧಿಯಲ್ಲಿ ಡಿಎಂಕೆ ಪಕ್ಷವು ಆಡಳಿತ ವ್ಯವಸ್ಥೆಯಲ್ಲೇನೂ ಹಿಂದೆ ಬೀಳಲಿಲ್ಲ. ಕಲ್ಯಾಣ ಕಾರ್ಯಕ್ರಮಗಳನ್ನು ಅದೂ ಜಾರಿಗೆ ತಂದ ನಿದರ್ಶನಗಳಿವೆ. ಆಡಳಿತ ವೈಫಲ್ಯಕ್ಕಿಂತಲೂ ಹೆಚ್ಚಾಗಿ ಡಿಎಂಕೆಯ ಭಾವನಾತ್ಮಕ ಮತ್ತು ಸೈದ್ಧಾಂತಿಕ ದಿವಾಳಿತನವು ಅದರ ಪತನಕ್ಕೆ ಕಾರಣವಾಯಿತು. ಯುವ ಪೀಳಿಗೆಯ ಜನರನ್ನು ದ್ರಾವಿಡ ರಾಜಕೀಯ ಸೆಳೆಯುವುದಿಲ್ಲ. ಅವರಿಗೆ ಅದರಲ್ಲಿ ಆಸಕ್ತಿಯೂ ಮೂಡುವುದಿಲ್ಲ. ಐಟಿ ಜಗತ್ತಿನಲ್ಲಿ ಬದುಕುವ ಝೆನ್-ಜಿ ಮಂದಿಗೆ ಬ್ರಾಹ್ಮಣ ವಿರೋಧಿ ಹೇಳಿಕೆಗಳು ರೋಮಾಂಚಕವೆನಿಸುವುದಿಲ್ಲ. ನಿರುದ್ಯೋಗ ಸಮಸ್ಯೆ ಎದುರಿಸುತ್ತಿರುವ ಯುವಕರಿಗೂ ಬ್ರಾಹ್ಮಣ ವಿರೋಧಿ, ಹಿಂದಿ ವಿರೋಧಿ, ಸನಾತನ ವಿರೋಧಿ ಭಾವಕ್ಕಿಂತಲೂ ವಾಸ್ತವಿಕ ಜೀವನ ಹೆಚ್ಚು ಮುಖ್ಯವಾಗುತ್ತದೆ. ಹಾಗಾಗಿ ಡಿಎಂಕೆ, ಎಐಎಡಿಎಂಕೆಗಳನ್ನು ತಿರಸ್ಕರಿಸಲು ಜನರು ಕಾದಿದ್ದರು. ಅವರಿಗೆ ಪರ್ಯಾಯವಾಗಿ ವಿಜಯ್ ಒದಗಿದರು ಅಷ್ಟೆ.

ಚಿತ್ರನಟ ಕಮಲಹಾಸನ್ ರಾಜಕೀಯ ಪಕ್ಷ ಕಟ್ಟಿದರೂ ಅವರು ರಾಜಕೀಯದಲ್ಲಿ ಯಶಸ್ವಿಯಾಗಲಿಲ್ಲವೇಕೆಂದರೆ ಅವರು ರಾಜ್ಯದ ಜನರ ಭಾವನಾತ್ಮಕ ಮಿಡಿತ ಅರಿಯಲಿಲ್ಲ. ಅವರು ಸಿದ್ಧಾಂತವಾದಿಯಾಗಿ ವರ್ತಿಸಿದರು. ವಿಜಯ್ ಭಾವನಾತ್ಮಕ ಜನಪ್ರಿಯತೆಗೆ ಆದ್ಯತೆ ನೀಡಿದರು. ವಿಜಯ್ ದೊಡ್ಡ ಸಿದ್ಧಾಂತಗಳನ್ನು ಮಂಡಿಸಲಿಲ್ಲ. ಅವರು ಜನರ ಆವಶ್ಯಕತೆಗಳನ್ನು ಪೂರೈಸುವ ಮಾತನಾಡಿದರು. ವಂಶ ರಾಜಕೀಯ ವಿರೋಧಿಸುವ, ಭ್ರಷ್ಟಾಚಾರ ಕಿತ್ತೊಗೆಯುವ ಮಾತನಾಡಿದರು. ಅವರು ದ್ರಾವಿಡ ಸಿದ್ಧಾಂತವನ್ನೆ ಮುಂದುವರಿಸುವ ಮಾತನಾಡಲಿಲ್ಲ.

ವಿಜಯ್‌ರ ರಾಜಕೀಯ ಅನುಭವದ ಕೊರತೆಯು ಸರಕಾರ ರಚನೆಯ ಪ್ರಕ್ರಿಯೆಯಲ್ಲಿ ಎದ್ದು ಕಂಡಿತು. ಸಿನಿಮಾ ವರ್ಚಸ್ಸು ಬೇರೆ, ರಾಜಕೀಯದ ಹೊಂದಾಣಿಕೆಗಳು ಬೇರೆ ಎಂಬುದು ಅವರ ಅರಿವಿಗೆ ಈಗಾಗಲೆ ಬಂದಿರಬಹುದು.

ಒಟ್ಟಿನಲ್ಲಿ ವಿಜಯ್ ರಾಜಕೀಯ ಪ್ರಗತಿಯು ಪವಾಡಸದೃಶವೂ ಅಲ್ಲ, ಆಕಸ್ಮಿಕವೂ ಅಲ್ಲ. ತಮಿಳ್ನಾಡಲ್ಲಿ ಉಂಟಾದ ಸೈದ್ಧಾಂತಿಕ ಶೂನ್ಯದಿಂದಾಗಿ ಅವರ ಪಕ್ಷವು ಹಠಾತ್ತನೆ ಮೇಲೇಳುವಂತಾಯಿತು. ಹಳೆಯ ಸ್ಲೋಗನ್‌ಗಳಿಂದ ರೋಸಿ ಹೋದ ಸಮಾಜವು ಹೊಸ ಸಿದ್ಧಾಂತಗಳನ್ನು ಕಂಡುಕೊಳ್ಳದಾಗ ಹೀಗೆ ಯಾವುದಾದರೊಂದು ಹೊಸ ವ್ಯವಸ್ಥೆಯನ್ನು ಅಧಿಕಾರಕ್ಕೇರಿಸುವುದಿದೆ. ಅಪಾಯವೇನೆಂದರೆ ತಮಿಳ್ನಾಡು ಮತ್ತೆ ವ್ಯಕ್ತಿ ಕೇಂದ್ರಿತ ರಾಜಕೀಯದೆಡೆಗೆ ಹೊರಳುವ ಸಾಧ್ಯತೆಯಿದೆ. ಆಗ ಸಿದ್ಧಾಂತ ಮರೆಗೆ ಸರಿಯುತ್ತದೆ. ಅದು ಕೂಡಾ ರಾಜಕೀಯಕ್ಕೆ ಒಳಿತೇನಲ್ಲ. ◈

ಭವಿಷ್ಯದ ಸಂಘರ್ಷಗಳಿಗೆ ಸಜ್ಜು: ಸಿಡಿಎಸ್

ಯುದ್ಧದ ತಂತ್ರಗಳಲ್ಲಿ ವೇಗದ ಬದಲಾವಣೆ

ತಂತ್ರಜ್ಞಾನವೇ ಭವಿಷ್ಯದ ಯುದ್ಧಗಳ ಗೆಲುವಿನ ಗುಟ್ಟು: ಜ। ಚೌಹಾಣ್

ಶಿರಡಿ: ಭವಿಷ್ಯದ ಯುದ್ಧಗಳು ಭೂಮಿ, ಸಮುದ್ರ, ವಾಯು, ಸೈಬರ್ ಹಾಗೂ ಕಾಗ್ನಿಟಿವ್ ಕ್ಷೇತ್ರಗಳನ್ನು ಒಳಗೊಂಡ ಬಹುಆಯಾಮದ ಸ್ವರೂಪ ಪಡೆದುಕೊಳ್ಳಲಿದ್ದು, ತಂತ್ರಜ್ಞಾನ, ವೇಗ ಮತ್ತು ನವೀನತೆಯೇ ಯಶಸ್ವಿ ಕಾರ್ಯಾಚರಣೆಗಳ ಪ್ರಮುಖ ಅಂಶಗಳಾಗಲಿವೆ ಎಂದು ರಕ್ಷಣಾ ಪಡೆಗಳ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್ ತಿಳಿಸಿದ್ದಾರೆ.



ಮಹಾರಾಷ್ಟ್ರದ ಅಹಿಲ್ಯಾನಗರ ಜಿಲ್ಲೆಯಲ್ಲಿರುವ ರಕ್ಷಣಾ ಉತ್ಪಾದನಾ ಘಟಕದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಯುದ್ಧ ಮತ್ತು ಯುದ್ಧ ತಂತ್ರಗಳು ವೇಗವಾಗಿ ಬದಲಾಗುತ್ತಿವೆ ಎಂದು ಹೇಳಿದರು. ಆಧುನಿಕ ಯುದ್ಧಗಳು ಕೇವಲ ಮಾನವಬಲ ಅಥವಾ ಸಾಂಪ್ರದಾಯಿಕ ಶಸ್ತ್ರಾಸ್ತ್ರಗಳ ಮೇಲೆ ಅವಲಂಬಿತವಾಗಿರುವುದಿಲ್ಲ. ಕೃತಕ ಬುದ್ಧಿಮತ್ತೆ, ಡ್ರೋನ್‌ಗಳು, ರೋಬೋಟಿಕ್ಸ್, ಸೈಬರ್ ವ್ಯವಸ್ಥೆಗಳು, ಸ್ವಾಯತ್ತ ವೇದಿಕೆಗಳು, ಬಾಹ್ಯಾಕಾಶ ತಂತ್ರಜ್ಞಾನ, ನಿಖರ ದಾಳಿ ಶಸ್ತ್ರಾಸ್ತ್ರಗಳು ಹಾಗೂ ಮಾಹಿತಿ ಪ್ರಾಬಲ್ಯ ಭವಿಷ್ಯದ ಯುದ್ಧಗಳಿಗೆ ನಿರ್ಣಾಯಕ ರೂಪ ನೀಡುತ್ತಿವೆ ಎಂದು ಅವರು ಅಭಿಪ್ರಾಯಪಟ್ಟರು. 'ಮುಂದಿನ ದಿನಗಳಲ್ಲಿ ತಂತ್ರಜ್ಞಾನ, ವೇಗ ಮತ್ತು ನವೀನತೆಯೇ ಯಶಸ್ವಿ ಕಾರ್ಯಾಚರಣೆಗಳ ನಿರ್ಧಾರಕ ಅಂಶಗಳಾಗಲಿವೆ. ಭವಿಷ್ಯದ ಯುದ್ಧಭೂಮಿಗಳು ಕೇವಲ ಭೌಗೋಳಿಕ ಪ್ರದೇಶಗಳಿಗೆ ಸೀಮಿತವಾಗಿರುವುದಿಲ್ಲ. ಮಾಹಿತಿ ಜಾಲಗಳು, ಡಿಜಿಟಲ್ ಪರಿಸರ ಹಾಗೂ ಸೈಬರ್ ಮೂಲಸೌಕರ್ಯಗಳೂ ಯುದ್ಧದ ಭಾಗವಾಗಲಿವೆ' ಎಂದು ಅವರು ಹೇಳಿದರು.

ಯೋಧರ ಧೈರ್ಯ ಮಾತ್ರ ರಾಷ್ಟ್ರದ ಭದ್ರತೆಯನ್ನು ಖಚಿತಪಡಿಸುವುದಿಲ್ಲ. ತಾಂತ್ರಿಕ ಪರಿಸರ, ಕೈಗಾರಿಕಾ ಸಾಮರ್ಥ್ಯ, ಉತ್ಪಾದನಾ ಶಕ್ತಿ ಮತ್ತು ನವೋದ್ಯಮ ಸಾಮರ್ಥ್ಯವೂ ಸಮಾನವಾಗಿ ಅಗತ್ಯವೆಂದು ಅವರು ತಿಳಿಸಿದರು. ವೇಗವಾಗಿ ಉತ್ಪಾದನೆ ಹೆಚ್ಚಿಸುವ ಹಾಗೂ ತ್ವರಿತವಾಗಿ ಬದಲಾವಣೆಗೆ ಹೊಂದಿಕೊಳ್ಳುವ ದೇಶಗಳಿಗೆ ತಂತ್ರಾತ್ಮಕ ಮೇಲುಗೈ ದೊರೆಯಲಿದೆ ಎಂದು ಹೇಳಿದರು.

ರಕ್ಷಣಾ ಕ್ಷೇತ್ರದಲ್ಲಿ ಆತ್ಮನಿರ್ಭರತೆ ಕೇವಲ ಆರ್ಥಿಕ ಗುರಿಯಲ್ಲ, ಅದು ತಂತ್ರಾತ್ಮಕ ಅವಶ್ಯಕತೆಯೂ ಆಗಿದೆ ಎಂದು ಚೌಹಾಣ್ ಹೇಳಿದರು. ದೇಶೀಯ ರಕ್ಷಣಾ ಉತ್ಪಾದನೆ ಸುಮಾರು 1.27 ಲಕ್ಷ ಕೋಟಿ ರೂ.ಗೆ ತಲುಪಿದ್ದು, ರಕ್ಷಣಾ ರಫ್ತು 38 ಸಾವಿರ ಕೋಟಿ ರೂ.ಗಳ ದಾಖಲೆ ಮಟ್ಟ ತಲುಪಿದೆ. 100ಕ್ಕೂ ಹೆಚ್ಚು ದೇಶಗಳಿಗೆ ರಕ್ಷಣಾ ಸಾಮಗ್ರಿಗಳನ್ನು ರಫ್ತು ಮಾಡಲಾಗುತ್ತಿದೆ ಎಂದರು.

ನೈಬ್ ಸಮೂಹದ ಈ ರಕ್ಷಣಾ ಉತ್ಪಾದನಾ ಘಟಕದಲ್ಲಿ ಆರ್ಟಿಲರಿ ಬಾಂಬ್‌ಶೆಲ್‌ಗಳ ತಯಾರಿಕೆ ನಡೆಯಲಿದೆ. 'ಇದುವರೆಗೆ ಶಿರಡಿ ಭಕ್ತಿ ಮತ್ತು ಆಧ್ಯಾತ್ಮಕ್ಕೆ ಪ್ರಸಿದ್ಧವಾಗಿತ್ತು. ಇದೀಗ ರಕ್ಷಣಾ ಉತ್ಪಾದನೆ, ಕೈಗಾರಿಕಾ ಅಭಿವೃದ್ಧಿ, ತಾಂತ್ರಿಕ ನವೀನತೆ ಹಾಗೂ ರಾಷ್ಟ್ರೀಯ ಭದ್ರತೆಯ ಕೇಂದ್ರವಾಗಿಯೂ ಗುರುತಿಸಿಕೊಳ್ಳಲಿದೆ' ಎಂದು ಅವರು ಹೇಳಿದರು.

ರಕ್ಷಣಾ ಕ್ಷೇತ್ರದಲ್ಲಿ ಭಾರತದ ಸಾಧನೆ

- ದೇಶೀಯ ರಕ್ಷಣಾ ಉತ್ಪಾದನೆ 1.27 ಲಕ್ಷ ಕೋಟಿ ರೂ.ಗೆ ಏರಿಕೆ
- ರಕ್ಷಣಾ ರಫ್ತು 38 ಸಾವಿರ ಕೋಟಿ ರೂ. ದಾಖಲೆ ಮಟ್ಟಕ್ಕೆ
- 100ಕ್ಕೂ ಹೆಚ್ಚು ದೇಶಗಳಿಗೆ ರಕ್ಷಣಾ ಸಾಮಗ್ರಿಗಳ ರಫ್ತು
- ನೂತನ ಘಟಕದಲ್ಲಿ ವರ್ಷಕ್ಕೆ 5 ಲಕ್ಷ 155 ಮಿ.ಮೀ. ಆರ್‌ಟಿಲರಿ ಶೆಲ್‌ಗಳ ಉತ್ಪಾದನೆ
- ಆತ್ಮನಿರ್ಭರ ಭಾರತ ಗುರಿಗೆ ಮತ್ತೊಂದು ಬಲಿಷ್ಠ ಹೆಜ್ಜೆ

ಖಾಲಿ ಮಾಡಲು ಜಿಮ್ಖಾನಾಗೆ ಆದೇಶ

ಹೊಸದಿಲ್ಲಿ: ಕೇಂದ್ರ ಸರ್ಕಾರವು ಲುಟ್ಯೆನ್ಸ್ ದಿಲ್ಲಿಯಲ್ಲಿರುವ ದಿಲ್ಲಿ ಜಿಮ್ಖಾನಾ ಕ್ಲಬ್‌ಗೆ ಜೂ.5ರೊಳಗೆ ತನ್ನ ಆವರಣವನ್ನು ಖಾಲಿ ಮಾಡುವಂತೆ ಸೂಚಿಸಿದೆ. 27.3 ಎಕರೆ ವಿಸ್ತೀರ್ಣದ ಈ ಭೂಮಿಯು ರಕ್ಷಣಾ ಮೂಲಸೌಕರ್ಯಗಳನ್ನು ಬಲಪಡಿಸಲು ಮತ್ತು ಸುರಕ್ಷತೆಗಾಗಿ ಅಗತ್ಯವಿದೆ ಎಂದು ತಿಳಿಸಲಾಗಿದೆ. ವಸತಿ ಮತ್ತು ನಗರಾಭಿವೃದ್ಧಿ ಸಚಿವಾಲಯದ ಭೂಮಿ ಮತ್ತು ಅಭಿವೃದ್ಧಿ ಕಚೇರಿ (ಎಲ್ ಆ್ಯಂಡ್ ಡಿಒ) ಈ ಆದೇಶ ಹೊರಡಿಸಿದ್ದು, ಪ್ರಧಾನ ಮಂತ್ರಿಗಳ ನಿವಾಸದ ಸಮೀಪವಿರುವ ಈ ಪ್ರದೇಶವು ಅತ್ಯಂತ ಸೂಕ್ಷ್ಮ ಹಾಗೂ ಆಯಕಟ್ಟಿನ ವಲಯದಲ್ಲಿದೆ ಎಂದು ಹೇಳಿದೆ. ಸಾರ್ವಜನಿಕ ಭದ್ರತೆ ಮತ್ತು ರಕ್ಷಣಾ ಉದ್ದೇಶಗಳಿಗಾಗಿ ಈ ಜಾಗದ ತುರ್ತು ಅಗತ್ಯವಿದೆ ಎಂದು ಸರ್ಕಾರ ತಿಳಿಸಿದೆ. ಲೀಸ್ ಒಪ್ಪಂದದ ನಿಯಮಗಳ ಪ್ರಕಾರ, ರಾಷ್ಟ್ರಪತಿಯವರ ಪರವಾಗಿ ಎಲ್ ಆ್ಯಂಡ್ ಡಿಒ ಈ ಗುತ್ತಿಗೆಯನ್ನು ರದ್ದುಗೊಳಿಸಿದ್ದು, ಜೂ.5 ರಂದು ಭೂಮಿಯನ್ನು ತನ್ನ ವಶಕ್ಕೆ ಪಡೆಯಲಿದೆ. ನಿಗದಿತ ದಿನಾಂಕದೊಳಗೆ ಶಾಂತಿಯುತವಾಗಿ ಜಾಗವನ್ನು ಹಸ್ತಾಂತರಿಸದಿದ್ದರೆ, ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಕ್ಲಬ್‌ಗೆ ಎಚ್ಚರಿಕೆ ನೀಡಲಾಗಿದೆ. ಬ್ರಿಟಿಷರ ಕಾಲದಲ್ಲಿ(1913) ಇಂಪೀರಿಯಲ್ ದಿಲ್ಲಿ ಜಿಮ್ಖಾನಾ ಕ್ಲಬ್ ಆಗಿ ಪ್ರಾರಂಭವಾದ ಇದು, ಸ್ವಾತಂತ್ರ್ಯದ ನಂತರ ದಿಲ್ಲಿ ಜಿಮ್ಖಾನಾ ಕ್ಲಬ್ ಎಂದು ಮರುನಾಮಕರಣಗೊಂಡಿತು.

ಭಾರತದ ಗಡಿಗೆ ಅಭೇದ್ಯ ಕವಚ

ಭಾರತದ ಗಡಿಗಳನ್ನು ಸುರಕ್ಷಿತಗೊಳಿಸಲು ಮತ್ತು ನುಸುಳುವಿಕೆಯನ್ನು ಸಂಪೂರ್ಣವಾಗಿ ತಡೆಯಲು ಕೇಂದ್ರ ಸರ್ಕಾರವು ತಂತ್ರಜ್ಞಾನ ಆಧಾರಿತ ಬೃಹತ್ ಯೋಜನೆಯೊಂದನ್ನು ಸಿದ್ಧಪಡಿಸುತ್ತಿದೆ. ಪಾಕಿಸ್ತಾನ ಮತ್ತು ಬಾಂಗ್ಲಾದೇಶದ ಗಡಿಗಳಲ್ಲಿ ಆಧುನಿಕ ರಡಾರ್‌ಗಳು, ಡ್ರೋನ್‌ಗಳು ಮತ್ತು ಸ್ಮಾರ್ಟ್ ಕ್ಯಾಮೆರಾಗಳನ್ನು ಒಳಗೊಂಡ ಅಭೇದ್ಯ ಭದ್ರತಾ ವ್ಯವಸ್ಥೆಯನ್ನು ನಿರ್ಮಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದ್ದು, ಆ ಕುರಿತ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.



ಸ್ಮಾರ್ಟ್ ಬಾರ್ಡರ್ ಮಿಷನ್: ಪಾಕ್-ಬಾಂಗ್ಲಾ ಗಡಿಗೆ ರಡಾರ್, ಡ್ರೋನ್, ಲೇಸರ್ ಕಣ್ಗಾವಲು

ಸ್ಮಾರ್ಟ್ ಬೇಲಿಯ ಅಗತ್ಯವೇಕೆ?

ಭಾರತವು ಪಾಕಿಸ್ತಾನ ಮತ್ತು ಬಾಂಗ್ಲಾದೇಶದೊಂದಿಗೆ ಹಂಚಿಕೊಂಡಿರುವ ಗಡಿ ರೇಖೆಯುದ್ದಕ್ಕೂ ಸಾಂಪ್ರದಾಯಿಕ ಬೇಲಿಗಳನ್ನು ನಿರ್ಮಿಸುವುದು ಅತ್ಯಂತ ಸವಾಲಿನ ಕೆಲಸವಾಗಿದೆ. ನದಿಗಳು, ಜೌಗು ಪ್ರದೇಶಗಳು, ದಟ್ಟವಾದ ಕಾಡುಗಳು ಮತ್ತು ಬದಲಾಗುತ್ತಿರುವ ಭೌಗೋಳಿಕ ಭೂಪ್ರದೇಶಗಳಿಂದಾಗಿ ಗಡಿಯ ಹಲವು ಭಾಗಗಳು ಮುಕ್ತವಾಗಿ ಉಳಿದುಬಿಡುತ್ತವೆ. ಉದಾಹರಣೆಗೆ, ಅಸ್ಸಾಂನ ಧುಬ್ರಿ ವಲಯದಲ್ಲಿ ಬ್ರಹ್ಮಪುತ್ರ ನದಿಯ ಉಪನದಿಗಳು ಮತ್ತು ಚಾರ್ ಭೂಮಿಗಳು ಇರುವುದರಿಂದ ಮಳೆಗಾಲದಲ್ಲಿ ಸಾಮಾನ್ಯ ಬೇಲಿಗಳು ಕೊಚ್ಚಿಹೋಗುತ್ತವೆ ಅಥವಾ ನಿಷ್ಪ್ರಯೋಜಕವಾಗುತ್ತವೆ. ಇಂತಹ ಪ್ರದೇಶಗಳಲ್ಲಿ ತಂತ್ರಜ್ಞಾನ ಆಧಾರಿತ ಸ್ಮಾರ್ಟ್ ಬೇಲಿಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ಈ ಹಿಂದೆ ಧುಬ್ರಿ ವಲಯದಲ್ಲಿ ಪ್ರಾಯೋಗಿಕವಾಗಿ ಜಾರಿಗೆ ತರಲಾದ ಬೋಲ್ಡ್ ಕ್ವಿಟ್ ಯೋಜನೆಯು ನದಿ ತೀರದ ಗಡಿಗಳನ್ನು ತಂತ್ರಜ್ಞಾನದ ಮೂಲಕ ಯಶಸ್ವಿಯಾಗಿ ಕಾವಲು ಕಾಯಲು ಸಹಾಯ ಮಾಡಿದೆ. ಇದೇ ಮಾದರಿಯನ್ನು ಈಗ ಇತರ ಸೂಕ್ಷ್ಮ ಗಡಿ ಭಾಗಗಳಿಗೂ ವಿಸ್ತರಿಸಲಾಗುತ್ತಿದೆ.

ಏನಿದು ಸ್ಮಾರ್ಟ್ ಬಾರ್ಡರ್ ಯೋಜನೆ ?

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಇತ್ತೀಚಿನ ಪ್ರಕಟಣೆಯ ಪ್ರಕಾರ, ಭಾರತ ಸರ್ಕಾರವು ಮುಂದಿನ ವರ್ಷ ಪಾಕಿಸ್ತಾನ ಮತ್ತು ಬಾಂಗ್ಲಾದೇಶದ ಗಡಿಗಳಲ್ಲಿ ಸ್ಮಾರ್ಟ್ ಬಾರ್ಡರ್ ಯೋಜನೆಯನ್ನು ಪ್ರಾರಂಭಿಸಲಿದೆ. ಈ ಯೋಜನೆಯು ಪ್ರಸ್ತುತ ಇರುವ ಸಮಗ್ರ ಸಂಯೋಜಿತ ಗಡಿ ನಿರ್ವಹಣಾ ವ್ಯವಸ್ಥೆಯನ್ನು (ಸಿಐಬಿಎಂಎಸ್) ಮತ್ತಷ್ಟು ಬಲಪಡಿಸಲಿದೆ. ಇದು ಕೇವಲ ಭೌತಿಕ ಬೇಲಿಗಳಿಗೆ ಸೀಮಿತವಾಗಿರದೆ, ತಂತ್ರಜ್ಞಾನ ಮತ್ತು ಮಾನವ ಸಂಪನ್ಮೂಲವನ್ನು ಸಂಯೋಜಿಸುವ ಒಂದು ಅತ್ಯಾಧುನಿಕ ಗಡಿ ನಿರ್ವಹಣಾ ವ್ಯವಸ್ಥೆಯಾಗಿದೆ. ಈ ಯೋಜನೆಯಲ್ಲಿ ಗಡಿಯಲ್ಲಿ ನಿರಂತರ ನಿಗಾ ವಹಿಸಲು ಥರ್ಮಲ್ ಇಮೇಜರ್‌ಗಳು, ಇನ್‌ಫ್ರಾರೆಡ್ ಮತ್ತು ಲೇಸರ್ ಆಧಾರಿತ ಅಲಾರಮ್‌ಗಳು, ನದಿ ಪ್ರದೇಶಗಳಿಗಾಗಿ ಸೋನಾರ್ ವ್ಯವಸ್ಥೆಗಳು, ಫೈಬರ್-ಆಪ್ಟಿಕ್ ಸೆನ್ಸರ್‌ಗಳು ಮತ್ತು ಹೆಚ್ಚಿನ ರೆಸಲ್ಯೂಶನ್ ಹೊಂದಿರುವ ಕ್ಯಾಮೆರಾಗಳನ್ನು ಬಳಸಲಾಗುತ್ತದೆ. ಇವೆಲ್ಲವೂ ರಿಯಲ್-ಟೈಮ್(ನೈಜ-ಸಮಯದ) ಡೇಟಾವನ್ನು ನಿಯಂತ್ರಣ ಕೊಠಡಿಗಳಿಗೆ ರವಾನಿಸುತ್ತವೆ, ಇದರಿಂದಾಗಿ ಯಾವುದೇ ತುರ್ತು ಸಂದರ್ಭ ಎದುರಾದರೂ ಬಿಎಸ್‌ಎಫ್ ಪಡೆಗಳು ತಕ್ಷಣವೇ ಕಾರ್ಯಪ್ರವೃತ್ತರಾಗಲು ಸಾಧ್ಯವಾಗುತ್ತದೆ.

ಯೋಜನೆಯ ಸಾಧಕ-ಬಾಧಕಗಳು ಮತ್ತು ಸವಾಲುಗಳು

ರಕ್ಷಣಾ ತಜ್ಞರ ಪ್ರಕಾರ, ಈ ಯೋಜನೆಯು ಗಡಿ ಭದ್ರತಾ ಪಡೆಗೆ (ಬಿಎಸ್‌ಎಫ್) ಒಂದು ದೊಡ್ಡ ಶಕ್ತಿಯಾಗಿ ಮೂಡಿಬರಲಿದೆ. ಹಗಲು-ರಾತ್ರಿ ಎನ್ನದೆ ಕಠಿಣ ಪರಿಸ್ಥಿತಿಗಳಲ್ಲಿ ಕಾವಲು ಕಾಯುವ ಸೈನಿಕರ ಮೇಲಿನ ಒತ್ತಡವನ್ನು ತಂತ್ರಜ್ಞಾನವು ಕಡಿಮೆ ಮಾಡುತ್ತದೆ. ಆದರೆ, ಮನೋಹರ್ ಪರಿಕ್ಕರ್ ರಕ್ಷಣಾ ಅಧ್ಯಯನ ಮತ್ತು ವಿಶ್ಲೇಷಣಾ ಸಂಸ್ಥೆಯಂತಹ(ಎಂಪಿ-ಐಡಿಎಸ್‌ಎ) ಸ್ವಾಯತ್ತ ಸಂಸ್ಥೆಗಳು ಕೆಲವು ಎಚ್ಚರಿಕೆಗಳನ್ನು ನೀಡಿವೆ:

1. **ಹವಾಮಾನದ ಸವಾಲು:** ವಿಪರೀತ ಮಳೆ, ದಟ್ಟವಾದ ಮಂಜು ಮತ್ತು ತೀವ್ರ ಹವಾಮಾನ ವೈಪರೀತ್ಯದ ಸಮಯದಲ್ಲಿ ತಾಂತ್ರಿಕ ಉಪಕರಣಗಳು ಮತ್ತು ಸೆನ್ಸರ್‌ಗಳು ಸರಿಯಾಗಿ ಕೆಲಸ ಮಾಡದಿರುವ ಸಾಧ್ಯತೆ ಇರುತ್ತದೆ.
2. **ಸುಳ್ಳು ಎಚ್ಚರಿಕೆಗಳು:** ಅಮೆರಿಕದಂತಹ ಮುಂದುವರಿದ ದೇಶಗಳು ಇಂತಹ ಯೋಜನೆಗಳನ್ನು ಜಾರಿಗೊಳಿಸಿದಾಗ ಫಾಲ್ಸ್ ಅಲಾರಂ(ಸುಳ್ಳು ಎಚ್ಚರಿಕೆಗಳು) ಸಮಸ್ಯೆಗಳನ್ನು ಎದುರಿಸಿದ್ದವು. ಕಾಡು ಪ್ರಾಣಿಗಳ ಚಲನವಲನದಿಂದಲೂ ಸೆನ್ಸರ್‌ಗಳು ಸದ್ದು ಮಾಡಬಹುದು.
3. **ರಾಜತಾಂತ್ರಿಕ ಸಂಘರ್ಷ:** ಅಂತಾರಾಷ್ಟ್ರೀಯ ಗಡಿಯ 150 ಯಾರ್ಡ್‌ಗಳ ಒಳಗೆ ಯಾವುದೇ ನಿರ್ಮಾಣ ಕಾರ್ಯಗಳನ್ನು ಕೈಗೊಳ್ಳಲು ಬಾಂಗ್ಲಾದೇಶವು ಹಲವು ಬಾರಿ ಆಕ್ಷೇಪ ವ್ಯಕ್ತಪಡಿಸಿದೆ. ಭಾರತವು ತಂತಿ ಬೇಲಿಗಳನ್ನು ರಕ್ಷಣಾ ಮೂಲಸೌಕರ್ಯ ಎಂದು ಪರಿಗಣಿಸದಿದ್ದರೂ, ನೆರೆಹೊರೆಯ ದೇಶಗಳ ಭಿನ್ನ ವ್ಯಾಖ್ಯಾನಗಳು ರಾಜತಾಂತ್ರಿಕ ಘರ್ಷಣೆಗೆ ಕಾರಣವಾಗಬಹುದು.

ಯೋಜನೆಯ ಯಶಸ್ಸಿಗೆ ಈ ಅಂಶಗಳೂ ಅಗತ್ಯ

ಭಾರತದ ಸ್ಮಾರ್ಟ್ ಬಾರ್ಡರ್ ಯೋಜನೆಯು ದೇಶದ ಗಡಿ ರಕ್ಷಣೆಯನ್ನು ಅತ್ಯಾಧುನಿಕಗೊಳಿಸುವ ಮಹತ್ವಾಕಾಂಕ್ಷಿ ಹೆಜ್ಜೆಯಾಗಿದೆ. ಆದರೆ, ಗೃಹ ಸಚಿವರು ಹೇಳಿರುವಂತೆ ಗಡಿಯನ್ನು ಸಂಪೂರ್ಣವಾಗಿ ಅಭೇದ್ಯ ಮಾಡುವುದು ಕೇವಲ ತಂತ್ರಜ್ಞಾನದಿಂದ ಮಾತ್ರ ಸಾಧ್ಯವಿಲ್ಲ. ಭೂಪ್ರದೇಶದ ಸವಾಲುಗಳು, ನಿರ್ವಹಣಾ ವೆಚ್ಚ, ವಿವಿಧ ಏಜೆನ್ಸಿಗಳ ನಡುವಿನ ಸಮನ್ವಯ ಮತ್ತು ನೆರೆಹೊರೆಯ ದೇಶಗಳೊಂದಿಗಿನ ರಾಜತಾಂತ್ರಿಕ ಬಾಂಧವ್ಯಗಳನ್ನು ಸಮರ್ಥವಾಗಿ ನಿಭಾಯಿಸುವುದರ ಮೇಲೆ ಈ ಯೋಜನೆಯ ನೈಜ ಯಶಸ್ಸು ನಿರ್ಧಾರವಾಗುತ್ತದೆ.

ಇದು ಹೊಸ ಕಲ್ಪನೆಯೇ?

ಸ್ಮಾರ್ಟ್ ಬಾರ್ಡರ್ ಪರಿಕಲ್ಪನೆಯು ಮೋದಿ ಸರಕಾರ ಬಂದ ಬಳಿಕ ವೇಗ ಪಡೆದಿದೆ. ಕಳೆದ ಹಲವು ವರ್ಷಗಳಿಂದ ಈ ಕುರಿತು ಚರ್ಚೆಗಳು ಮತ್ತು ಸಿದ್ಧತೆಗಳು ನಡೆಯುತ್ತಿವೆ. 2019ರ ಹೊತ್ತಿಗೆ, ಸರ್ಕಾರವು ಸುಮಾರು 71 ಕಿಮೀ ಉದ್ದದ ಎರಡು ಪ್ರಾಯೋಗಿಕ ಸಿಐಬಿಎಂಎಸ್ ಯೋಜನೆಗಳನ್ನು ಪೂರ್ಣಗೊಳಿಸಿತ್ತು. ಇದರಲ್ಲಿ 10 ಕಿಮೀ ಪಾಕಿಸ್ತಾನ ಗಡಿಯಲ್ಲಿ ಮತ್ತು 61 ಕಿಮೀ ಬಾಂಗ್ಲಾದೇಶ ಗಡಿಯಲ್ಲಿ ಅನುಷ್ಠಾನಗೊಳಿಸಲಾಗಿತ್ತು. ಭೌತಿಕ ಬೇಲಿ ನಿರ್ಮಿಸಲು ಸಾಧ್ಯವಿಲ್ಲದ ಸುಮಾರು 1,955 ಕಿಮೀ ಉದ್ದದ ಗಡಿ ಭಾಗವನ್ನು ಈ ಯೋಜನೆಯ ಮುಂದಿನ ಹಂತಗಳಲ್ಲಿ ಸೇರಿಸಿಕೊಳ್ಳಲು ಯೋಜಿಸಲಾಗಿದೆ. ಡಿಸೆಂಬರ್ 2023ರಲ್ಲಿ, ಗೃಹ ಸಚಿವರು ಗಡಿಯ ಕಠಿಣ ಭೂಪ್ರದೇಶಗಳಲ್ಲಿ ಬಾಕಿ ಉಳಿದಿರುವ 60 ಕಿಮೀಗಳಷ್ಟು ಅಂತರವನ್ನು ಭರ್ತಿ ಮಾಡುವ ಕೆಲಸ ನಡೆಯುತ್ತಿದೆ ಎಂದು ತಿಳಿಸಿದ್ದರು. ಆದ್ದರಿಂದ, ಸದ್ಯದ ಪ್ರಕಟಣೆಯು ಕಳೆದ ಒಂದು ದಶಕದಿಂದ ನಡೆಯುತ್ತಿರುವ ಗಡಿ ಆಧುನೀಕರಣ ಪ್ರಕ್ರಿಯೆಯ ಒಂದು ದೊಡ್ಡ ಮುಂದುವರಿದ ಭಾಗವಾಗಿದೆ.



ಕಿರುಸುದ್ದಿ

ತೈಲ ದರ ಹೆಚ್ಚಳ

ಹೊಸದಿಲ್ಲಿ: ಜಾಗತಿಕ ತೈಲ ಬೆಲೆ ಏರಿಕೆಯ ನಡುವೆ ಶನಿವಾರ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳು ಪ್ರತಿ ಲೀಟರ್‌ಗೆ 87ರಿಂದ 91 ಪೈಸೆಗಳಷ್ಟು ಹೆಚ್ಚಾಗಿದ್ದು, ಕಳೆದ 10 ದಿನಗಳಿಗಿಂತಲೂ ಕಡಿಮೆ ಅವಧಿಯಲ್ಲಿ ಒಟ್ಟು ದರ ಏರಿಕೆ ಸುಮಾರು 5 ರೂ.ಗಳಿಗೆ ತಲುಪಿದೆ.ಸಿಎನ್‌ಜಿ ಬೆಲೆಯೂ ಪ್ರತಿ ಕೆಜಿಗೆ 1 ರೂ. ಹೆಚ್ಚಾಗಿದೆ. ಇದರೊಂದಿಗೆ ಒಟ್ಟು ಸಿಎನ್‌ಜಿ ದರ ಏರಿಕೆ 4 ರೂ. ಆಗಿದ್ದು, ದಿಲ್ಲಿಯಲ್ಲಿ ಪ್ರಸ್ತುತ ಸಿಎನ್‌ಜಿ ಬೆಲೆ ಪ್ರತಿ ಕೆಜಿಗೆ 81.09 ರೂ. ಆದಂತಾಗಿದೆ.

ತ.ನಾಡಿನಲ್ಲಿ ಬಾಲಕಿಯ ಮೇಲೆ ದೌರ್ಜನ್ಯ, ಹತ್ಯೆ

ಕೊಯಮತ್ತೂರು: ನಗರದಲ್ಲಿ ಹತ್ತು ವರ್ಷದ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿ ಕೊಲೆ ಮಾಡಲಾಗಿದೆ. ಈ ಸಂಬಂಧ ಸಿಎಂ ವಿಜಯ್, ಕಠಿಣ ಕಾನೂನು ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ. ಕೊಲೆ ಮತ್ತು ಲೈಂಗಿಕ ದೌರ್ಜನ್ಯದ ಆರೋಪದ ಮೇಲೆ 33 ವರ್ಷದ ಕೆ.ಕಾರ್ತಿ ಎಂಬುವವನನ್ನು ಪೋಕ್ಸೊ ಕಾಯ್ದೆಯಲ್ಲಿ ಪೊಲೀಸರು ಬಂಧಿಸಿದ್ದಾರೆ. ಅಪರಾಧ ಸಂಚಿಗೆ ಸಹಕರಿಸಿದ ಆರೋಪದ ಮೇಲೆ ಆತನ ಸಹಚರ ಆರ್. ಮೋಹನ್‌ನನ್ನು ಬಂಧಿಸಲಾಗಿದೆ.

ಬಿಸಿಗಾಳಿಗೆ ಆಂಧ್ರದಲ್ಲಿ ಒಂದೇ ದಿನ 21 ಸಾವು

ಅಮರಾವತಿ: ಆಂಧ್ರಪ್ರದೇಶದಲ್ಲಿ ಮುಂದುವರಿದಿರುವ ತೀವ್ರ ಬಿಸಿಗಾಳಿ ಜನಜೀವನವನ್ನು ಅಸ್ತವ್ಯಸ್ತಗೊಳಿಸಿದ್ದು, ಹೆಚ್ಚಿದ ತಾಪಮಾನಕ್ಕೆ ಒಂದೇ ದಿನದಲ್ಲಿ 21 ಮಂದಿ ಮೃತಪಟ್ಟಿರುವ ಘಟನೆ ಆತಂಕ ಮೂಡಿಸಿದೆ. ಇನ್ನು ಆಂಧ್ರದ ನೆರೆ ರಾಜ್ಯ ತೆಲಂಗಾಣದಲ್ಲಿ ಬಿಸಿಲಿನ ತಾಪಕ್ಕೆ 16 ಜನ ಮೃತಪಟ್ಟಿದ್ದಾರೆ.

ಆಂಧ್ರದ ವಿಜಯವಾಡ ಜಿಲ್ಲೆಯಲ್ಲಿ ಮಾತ್ರವೇ 10 ಮಂದಿ ಬಲಿಯಾಗಿದ್ದು, ಇವರಲ್ಲಿ ಕೆಲವರು ರಸ್ತೆಬದಿಯಲ್ಲಿ ಪ್ರಜ್ಞಾಹೀನ ಸ್ಥಿತಿಯಲ್ಲಿ ಪತ್ತೆಯಾಗಿದ್ದರು. ಆಸ್ಪತ್ರೆಗೆ ಸಾಗಿಸುವಷ್ಟರಲ್ಲಿ ಮೃತಪಟ್ಟಿದ್ದಾರೆ. ಇದಲ್ಲದೆ, ಎಲ್ಲೂರು, ಪಶ್ಚಿಮ ಗೋದಾವರಿ, ಕಾಕಿನಾಡ, ಪಲ್ನಾಡು ಹಾಗೂ ಅನಕಾಪಲ್ಲಿ ಜಿಲ್ಲೆಗಳಲ್ಲೂ ಬಿಸಿಲಿನ ಹೊಡೆತಕ್ಕೆ ಕೆಲವರು ಜೀವ ಕಳೆದುಕೊಂಡಿದ್ದಾರೆ. ಮೃತರಲ್ಲಿ ಕಾರ್ಮಿಕರು, ವೃದ್ಧರು, ಭಿಕ್ಷುಕರು ಹಾಗೂ ಅಪರಿಚಿತರು ಸೇರಿದ್ದಾರೆ. ಕೆಲವು ಪ್ರದೇಶಗಳಲ್ಲಿ ತಾಪಮಾನ 45 ರಿಂದ 46 ಡಿಗ್ರಿ ಸೆಲ್ಸಿಯಸ್ ತಲುಪಿರುವುದರಿಂದ ಜನರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ.

ತೆಲಂಗಾಣದಲ್ಲಿ 16 ಸಾವು:

ತೀವ್ರ ಬಿಸಿಗಾಳಿಯಿಂದ ತೆಲಂಗಾಣದ ಏಳು ಜಿಲ್ಲೆಗಳಲ್ಲಿ 16 ಮಂದಿ ಮೃತಪಟ್ಟಿದ್ದಾರೆ ಎಂದು ಸಚಿವ ಪೊಂಗುಲೇಟಿ ಶ್ರೀನಿವಾಸ ರೆಡ್ಡಿ ಶನಿವಾರ ತಿಳಿಸಿದ್ದಾರೆ. ಮೃತರ ಕುಟುಂಬಸ್ಥರಿಗೆ ತಲಾ 4 ಲಕ್ಷ ರೂ. ಪರಿಹಾರ ಧನ ನೀಡಲಾಗುರುವುದು ಎಂದು ಅವರು ತಿಳಿಸಿದ್ದಾರೆ.

ಅಗತ್ಯವಿಲ್ಲದೆ ಮಧ್ಯಾಹ್ನ ಹೊರಗೆ ಹೋಗಬಾರದು, ಹೆಚ್ಚು ನೀರು ಸೇವಿಸಬೇಕು ಹಾಗೂ ಬಿಸಿಲಿನಿಂದ ಎಚ್ಚರಿಕೆ ವಹಿಸಬೇಕು ಎಂದು ಜನರಿಗೆ ಆರೋಗ್ಯ ಇಲಾಖೆ ಸಲಹೆ ನೀಡಿದೆ.

ಚೀನಾದ ಗಣಿ ಸ್ಫೋಟ, 90 ಕಾರ್ಮಿಕರ ಸಾವು

ಬೀಜಿಂಗ್: ಉತ್ತರ ಚೀನಾದ ಕಲ್ಲಿದ್ದಲು ಗಣಿಯೊಂದರಲ್ಲಿ ಶುಕ್ರವಾರ ಸಂಜೆ ಸಂಭವಿಸಿದ ಅನಿಲ ಸ್ಫೋಟದಲ್ಲಿ 90 ಗಣಿ ಕಾರ್ಮಿಕರು ಮೃತಪಟ್ಟಿದ್ದಾರೆ ಮತ್ತು 201 ಜನರನ್ನು ರಕ್ಷಿಸಲಾಗಿದೆ ಎಂದು ಅಲ್ಲಿನ ಸರ್ಕಾರಿ ಮೂಲಗಳು ವರದಿ ಮಾಡಿವೆ.

ಶಾಂಕ್ಸಿ ಪ್ರಾಂತ್ಯದ ಚಿನ್ಯುವಾನ್ ಕೌಂಟಿಯ ಲಿಯುಶೆನ್ಯು ಕಲ್ಲಿದ್ದಲು ಗಣಿಯಲ್ಲಿ ಈ ಅಪಘಾತ ಸಂಭವಿಸಿದ್ದು, ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ.



ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್, ಸಮಗ್ರ ರಕ್ಷಣಾ ಕಾರ್ಯಾಚರಣೆ, ಗಾಯಾಳುಗಳಿಗೆ ಚಿಕಿತ್ಸೆ ಮತ್ತು ಕಾನೂನುಬದ್ಧ ಹೊಣೆಗಾರಿಕೆಯನ್ನು ಗುರುತಿಸಲು ಘಟನೆಯ ಕುರಿತು ಸಮಗ್ರ ತನಿಖೆಗೆ ಆದೇಶ ಹೊರಡಿಸಿದ್ದಾರೆ. ಉಪ ಪ್ರಧಾನಿ ಜಾಂಗ್ ಗುವೊಚಿಂಗ್, ರಕ್ಷಣಾ ಕಾರ್ಯಗಳ ಮೇಲ್ವಿಚಾರಣೆ ವಹಿಸಿದ್ದು, ಅಪಘಾತದ ಸ್ಥಳಕ್ಕೆ ತಂಡವೊಂದರ ಜತೆ ಧಾವಿಸಿದ್ದಾರೆ.

ಸುರಕ್ಷತಾ ಕ್ರಮಗಳು: ಭವಿಷ್ಯದಲ್ಲಿ ಇಂತಹ ದುರ್ಘಟನೆಗಳನ್ನು ತಡೆಗಟ್ಟಲು ದೇಶಾದ್ಯಂತದ ಅಧಿಕಾರಿಗಳು ಕೆಲಸದ ಸ್ಥಳದ ಸುರಕ್ಷತೆಯ ಬಗ್ಗೆ ಜಾಗರೂಕತೆ ವಹಿಸಬೇಕು ಮತ್ತು ಸಂಭಾವ್ಯ ಅಪಾಯಗಳನ್ನು ನಿವಾರಿಸಬೇಕು ಎಂದು ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಹೇಳಿದ್ದಾರೆ. ಜತೆಗೆ, ಚೀನಾದಲ್ಲಿ ಹಲವೆಡೆ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಹೀಗಾಗಿ ಜೀವ ಮತ್ತು ಆಸ್ತಿಯನ್ನು ರಕ್ಷಿಸಲು ತುರ್ತು ಸಿದ್ಧತೆ ಹಾಗೂ ದೃಢವಾದ ಪ್ರವಾಹ ನಿಯಂತ್ರಣ ಮತ್ತು ವಿಪತ್ತು ಪರಿಹಾರ ಕ್ರಮಗಳಿಗೆ ಅವರು ಕರೆ ನೀಡಿದ್ದಾರೆ

ಕೈ ಮುಖಂಡ ಅಜಯ್ ರೈ ವಿರುದ್ಧ ಬಿಜೆಪಿ ಕಿಡಿ

ಲಖನೌ: ಉತ್ತರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಅಜಯ್ ರೈ ಅವರು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಅವಹೇಳನಕಾರಿ ಪದಗಳನ್ನು ಬಳಸಿರುವುದಾಗಿ ಹೇಳಲಾದ ವಿಡಿಯೋ ಒಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ಕಾಂಗ್ರೆಸ್ ನಾಯಕನ ಹೇಳಿಕೆಯನ್ನು ಬಿಜೆಪಿ ಖಂಡಿಸಿದೆ.

ಮೋದಿ ವಿರುದ್ಧ ಅವಹೇಳನಕಾರಿ ಹೇಳಿಕೆ ಆರೋಪ

ಉತ್ತರ ಪ್ರದೇಶ ಸಿಎಂ ಯೋಗಿ ಆದಿತ್ಯನಾಥ್ ಕಾಂಗ್ರೆಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಅವರು, 'ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಉತ್ತರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಮಾಡಿದ ಅಸಭ್ಯ, ಸಂಸತ್ತೀಯ ಮೌಲ್ಯಗಳಿಗೆ ವಿರುದ್ಧವಾದ ಹಾಗೂ ಕ್ಷಮಿಸಲಾಗದ ಹೇಳಿಕೆ ಕಾಂಗ್ರೆಸ್‌ನ ರಾಜಕೀಯ ಸಂಸ್ಕೃತಿ ಯಾವ ಮಟ್ಟಕ್ಕಿಳಿದಿದೆ ಎಂಬುದನ್ನು ಬಹಿರಂಗಪಡಿಸಿದೆ' ಎಂದು ಟೀಕಿಸಿದ್ದಾರೆ.

ಉತ್ತರ ಪ್ರದೇಶ ಬಿಜೆಪಿ ಅಧ್ಯಕ್ಷ ಹಾಗೂ ಕೇಂದ್ರ ಸಚಿವ ಪಂಕಜ್ ಚೌಧರಿ ಕೂಡ ಅಜಯ್ ರೈ ಹೇಳಿಕೆಯನ್ನು ತೀವ್ರವಾಗಿ ಖಂಡಿಸಿದ್ದಾರೆ. 'ಇದು ಕೇವಲ ಪ್ರಧಾನಿಯವರ ವಿರುದ್ಧದ ಅವಮಾನವಲ್ಲ, 140 ಕೋಟಿ ಭಾರತೀಯರ ಭಾವನೆಗಳಿಗೆ ಮಾಡಿದ ಅವಮಾನ' ಎಂದಿದ್ದಾರೆ.

ಆದರೆ, ಈ ಬಗ್ಗೆ ಸ್ಪಷ್ಟನೆ ನೀಡಿರುವ ಅಜಯ್ ರೈ, ಬಿಜೆಪಿಯೇ ಎಐ ಬಳಸಿ ಈ ವಿಡಿಯೋ ಸೃಷ್ಟಿಸಿದೆ ಎಂದಿದ್ದಾರೆ. ಜತೆಗೆ ದೂರು ದಾಖಲಿಸುವುದಾಗಿ ಹೇಳಿದ್ದಾರೆ. ಇದಕ್ಕೂ ಮುನ್ನವೇ ಬಿಜೆಪಿ ಕಾರ್ಯಕರ್ತರೊಬ್ಬರು ಅಜಯ್ ರೈ ವಿರುದ್ಧ ದೂರು ದಾಖಲಿಸಿದ್ದಾರೆ.

ಕೇರಳ ಸಿಎಸ್ ನೇಮಕ; ವಿಪಕ್ಷ ಟೀಕೆಗೆ ಗುರಿ

ತಿರುವನಂತಪುರಂ: ಮುಖ್ಯಮಂತ್ರಿ ವಿ.ಡಿ. ಸತೀಶನ್ ಅವರ ಕಾರ್ಯದರ್ಶಿಯಾಗಿ ಮುಖ್ಯ ಚುನಾವಣಾಧಿಕಾರಿ ಡಾ.ರತನ್ ಯು. ಕೇಳ್ಕರ್‌ರನ್ನು ನೇಮಕ ಮಾಡಿರುವುದನ್ನು ವಿರೋಧಿಸಿ ಬಿಜೆಪಿ ಮತ್ತು ಸಿಪಿಐ(ಎಂ) ಶನಿವಾರ ಕೇರಳ ಸರ್ಕಾರವನ್ನು ಟೀಕಿಸಿವೆ.


ಇತರ ರಾಜ್ಯಗಳಲ್ಲಿನ ಇಂತಹದೇ ನೇಮಕಾತಿಗಳ ಕುರಿತು ಕಾಂಗ್ರೆಸ್ ಹೊಂದಿರುವ ರಾಷ್ಟ್ರೀಯ ನಿಲುವಿಗೆ ಈ ಕ್ರಮ ವಿರುದ್ಧವಾಗಿದೆ ಎಂದು ವಿಪಕ್ಷಗಳು ಆರೋಪಿಸಿವೆ. 2003ರ ಬ್ಯಾಚ್‌ನ ಐಎಎಸ್ ಅಧಿಕಾರಿಯಾಗಿರುವ ಕೇಳ್ಕರ್, ಇತ್ತೀಚೆಗೆ ರಾಜ್ಯದ ವಿಧಾನಸಭಾ ಚುನಾವಣಾ ಪ್ರಕ್ರಿಯೆಯ ಮೇಲ್ವಿಚಾರಣೆ ನಡೆಸಿದ್ದರು.ಪಶ್ಚಿಮ ಬಂಗಾಳದಲ್ಲಿ ನಡೆದ ಇಂತಹದ್ದೇ ಬೆಳವಣಿಗೆಯನ್ನು ಕಾಂಗ್ರೆಸ್ ಈ ಹಿಂದೆ ಗಂಭೀರ ವಿಷಯ ಎಂದು ಟೀಕಿಸಿದ್ದನ್ನು ಉಲ್ಲೇಖಿಸಿದ ಬಿಜೆಪಿ ನಾಯಕ ಕೆ. ಸುರೇಂದ್ರನ್, ಕಾಂಗ್ರೆಸ್ ಪಕ್ಷದ ದ್ವಿಮುಖ ನಿಲುವನ್ನು ಖಂಡಿಸಿದರು.

ಯಾವುದೇ ಶಕ್ತಿಗೂ ಈ ಸಾಧನೆಯನ್ನು ತಡೆಯಲಾಗದು: ರಾಜನಾಥ್ ಸಿಂಗ್

ವಿಶ್ವದ ಬೃಹತ್ ಶಸ್ತ್ರಾಸ್ತ್ರ ರಫ್ತುದಾರ ಭಾರತ

ಶಿರಡಿ(ಮಹಾರಾಷ್ಟ್ರ): ಒಂದು ಕಾಲಘಟ್ಟದಲ್ಲಿ ಶಸ್ತ್ರಾಸ್ತ್ರಗಳ ಆಮದುದಾರ ರಾಷ್ಟ್ರವೆಂದು ಪರಿಗಣಿತ ಭಾರತವು, ಮುಂದಿನ 25-30 ವರ್ಷಗಳಲ್ಲಿ ಜಗತ್ತಿನ ಬೃಹತ್ ಶಸ್ತ್ರಾಸ್ತ್ರ ರಫ್ತುದಾರ ರಾಷ್ಟ್ರವಾಗಿ ಕಂಗೊಳಿಸಲಿದೆ ಮತ್ತು ಯಾವುದೇ ಶಕ್ತಿಗೂ ಭಾರತದ ಈ ಸಾಧನೆಯನ್ನು ತಡೆಯಲಾಗದು ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಗುಡುಗಿದ್ದಾರೆ. ತನ್ನ ಶಸ್ತ್ರಾಸ್ತ್ರಗಳನ್ನು ಸ್ವಯಂ ತಯಾರಿಸಬಲ್ಲ ರಾಷ್ಟ್ರವು ತನ್ನ ಭವಿಷ್ಯವನ್ನು ಕೂಡ ಸ್ವಯಂ ಬರೆಯಬಲ್ಲುದು ಎಂದು ಸಚಿವರು ಅರ್ಥಗರ್ಭಿತವಾಗಿ ಹೇಳಿದ್ದಾರೆ.

ರಕ್ಷಣಾ ಉತ್ಪಾದನಾ ರಂಗದಲ್ಲಿ ಖಾಸಗಿ ರಂಗದ ಪಾತ್ರ ಕೇವಲ ನಟ್-ಬೋಲ್ಟ್‌ಗಳ ಪೂರೈಕೆಗೆ ಸೀಮಿತವಲ್ಲ, ಇವು ಕೂಡ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಉತ್ಪಾದನೆಗೆ ಹೆಸರುವಾಸಿಯಾಗಿವೆ. ಕೆಲವು ವರ್ಷ ಹಿಂದೆ ರಕ್ಷಣಾ ಉತ್ಪಾದನಾ ರಂಗದಲ್ಲಿ ಖಾಸಗಿ ರಂಗದ ಪಾತ್ರವನ್ನು ಕಡೆಗಣಿಸಲಾಗಿತ್ತು. ಆದರೆ ಇಂದು ರಕ್ಷಣಾ ಉತ್ಪಾದನೆಯಲ್ಲಿ ಖಾಸಗಿ ಕಂಪೆನಿಗಳ ಪಾಲ್ಗೊಳ್ಳುವಿಕೆ ಶೇ. 25ರಿಂದ 30ರಷ್ಟಿದ್ದು, ಇದನ್ನು



ಶೇ.50ಕ್ಕೇರಿಸುವುದು ಸರಕಾರದ ಗುರಿಯಾಗಿದೆ ಎಂದವರು ಶಿರಡಿಯಲ್ಲಿ ಶಸ್ತ್ರಾಸ್ತ್ರ ಉತ್ಪಾದನಾ ಘಟಕ ಉದ್ಘಾಟಿಸಿದ ಬಳಿಕ ನುಡಿದರು.

ಸರ್ಕಾರದ ದೃಷ್ಟಿಕೋನ ಮತ್ತು ಖಾಸಗಿ ರಂಗದ ಆವಿಷ್ಕಾರಗಳು ಸಂಗಮಗೊಂಡಾಗ ರಾಷ್ಟ್ರವು ನವ ಶೃಂಗಗಳಿಗೆ ತಲುಪುವುದು. ಈ ನಿಟ್ಟಿನಲ್ಲಿ ಭಾರತವನ್ನು ಶಸ್ತ್ರಾಸ್ತ್ರ ತಯಾರಿ ಮತ್ತು ಆಟೋಮೇಶನ್ ಕೇಂದ್ರವಾಗಿ ರೂಪಿಸಲು ಎಲ್ಲರೂ ಒಟ್ಟಾಗಿ ಶ್ರಮಿಸಬೇಕೆಂದು ಸಚಿವರು ಕರೆ ನೀಡಿದರು. ರಕ್ಷಣಾ ಉದ್ದಿಮೆಗೆ ಸಂಬಂಧಿಸಿದಂತೆ

> **ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ನೀತಿ ಸಂಬಂಧಿತ ಸುಧಾರಣೆಗಳು ಮತ್ತು ವಿದೇಶಿ ನೇರ ಹೂಡಿಕೆ ನಿಯಮ ಸರಳೀಕರಣಗೊಳಿಸುವ ಮುಖೇನ, ರಕ್ಷಣಾ ರಂಗದಲ್ಲಿ ಖಾಸಗಿ ಪಾಲ್ಗೊಳ್ಳುವಿಕೆ ಹೆಚ್ಚಿಸಲು ತುಂಬು ಉತ್ತೇಜ ನೀಡುತ್ತಿದೆ.**
> ■ ರಾಜನಾಥ್ ಸಿಂಗ್, ರಕ್ಷಣಾ ಸಚಿವ

ಭಾರತದ ಯಾನ ಸುದೀರ್ಘವಾದುದು. ಸ್ವಾತಂತ್ರ್ಯ ಮುನ್ನವೇ ಭಾರತದಲ್ಲಿ ಶಸ್ತ್ರಾಸ್ತ್ರ ಕಾರ್ಖಾನೆಗಳಿದ್ದುವು ಮತ್ತು ರಕ್ಷಣಾ ಕೈಗಾರಿಕೆಗಳು ಕೂಡ ಹಿಂದಿನಿಂದಲೇ ಇದ್ದುವು. ಸ್ವಾತಂತ್ರ್ಯಾನಂತರದಲ್ಲಿ ದೇಶದ ಹಿಂದಿನ ರಕ್ಷಣಾ ಸಾಮರ್ಥ್ಯ ಮತ್ತು ಆಧುನಿಕ ಅವಶ್ಯಕತೆಗಳಿಗೆ ಪರಸ್ಪರ ಹೊಂದಾಣಿಕೆಯಾಗಲಿಲ್ಲ. ಇದಕ್ಕೆ ಮೂಲಕಾರಣ, ರಕ್ಷಣಾ ಉತ್ಪಾದನಾ ರಂಗ ಕೇವಲ ಸಾರ್ವಜನಿಕ ರಂಗದ ಕಂಪೆನಿಗಳು ಮತ್ತು ಶಸ್ತ್ರಾಸ್ತ್ರ ಕಾರ್ಖಾನೆಗಳಿಗೆ ಸೀಮಿತವಾಗಿದ್ದುದು. ರಕ್ಷಣಾ ಉತ್ಪಾದನಾ ರಂಗದಲ್ಲಿ ತೊಡಗಲು ಖಾಸಗಿ ಕಂಪೆನಿಗಳಿಗೆ ಅವಕಾಶ ಇರಲಿಲ್ಲ.

ಬಿಸಿಗಾಳಿಯಿಂದ ಮಕ್ಕಳು, ವೃದ್ಧರಿಗೆ ಹೆಚ್ಚು ತೊಂದರೆ: ತಜ್ಞರ ಎಚ್ಚರಿಕೆ

ಮೆದುಳು, ಕಣ್ಣಿನ ಆರೋಗ್ಯಕ್ಕೆ ಅಪಾಯ

ಹೊಸದಿಲ್ಲಿ: ದೇಶದಲ್ಲಿ ಹೆಚ್ಚುತ್ತಿರುವ ಬಿಸಿಗಾಳಿ, ನರಸಂಬಂಧಿ ಮತ್ತು ಕಣ್ಣಿನ ಆರೋಗ್ಯದ ಸಮಸ್ಯೆಗಳನ್ನು ಉಂಟುಮಾಡುತ್ತಿದೆ ಎಂದು ವೈದ್ಯರು ಎಚ್ಚರಿಸಿದ್ದಾರೆ. ವಿಶೇಷವಾಗಿ ಮಕ್ಕಳು, ಹಿರಿಯ ನಾಗರಿಕರು ಮತ್ತು ಈಗಾಗಲೇ ಆರೋಗ್ಯ ಸಮಸ್ಯೆ ಹೊಂದಿರುವವರಲ್ಲಿ ಈ ತೊಂದರೆಗಳು ಕಾಣಿಸಿಕೊಳ್ಳುತ್ತಿವೆ.

ಹೆಚ್ಚಿನ ತಾಪಮಾನ, ನಿರ್ಜಲೀಕರಣ ಮತ್ತು ಸುದೀರ್ಘ ಅವಧಿಗೆ ಬಿಸಿಲಿಗೆ ಒಡ್ಡಿಕೊಳ್ಳುವುದರಿಂದ ಆಯಾಸ, ತಲೆಸುತ್ತು, ತಲೆನೋವು, ಮೈಗ್ರೇನ್ ಹಾಗೂ



ಹೀಟ್ ಸ್ಟ್ರೋಕ್‌ನಂತಹ ನರಸಂಬಂಧಿ ತೊಂದರೆಗಳು ಉಂಟಾಗಬಹುದು ಎಂದು ತಜ್ಞರು ತಿಳಿಸಿದ್ದಾರೆ. ದಿಲ್ಲಿ-ಎನ್‌ಸಿಆರ್‌ನ ಆಸ್ಪತ್ರೆಗಳಲ್ಲಿ ಇಂತಹ ಪ್ರಕರಣಗಳು ಹೆಚ್ಚುತ್ತಿವೆ. ದಿಲ್ಲಿಯ ಇಂದ್ರಪ್ರಸ್ಥ ಅಪೊಲೊ ಆಸ್ಪತ್ರೆಯ ನರವಿಜ್ಞಾನ ವಿಭಾಗದ ಹಿರಿಯ ಸಮಾಲೋಚಕ ಡಾ. ವಿನೀತ್ ಸೂರಿ, ತೀವ್ರ ತಲೆನೋವು, ತಲೆಸುತ್ತು, ಮೂರ್ಛೆ ಮತ್ತು ತೀವ್ರ ಮೈಗ್ರೇನ್‌ನಿಂದ ಬರುವ ಹೊರರೋಗಿಗಳ ಸಂಖ್ಯೆಯಲ್ಲಿ ಸುಮಾರು ಶೇ.20ರಷ್ಟು ಹೆಚ್ಚಳವಾಗಿದೆ ಎಂದಿದ್ದಾರೆ. ಅತಿಯಾದ ಶಾಖ ಮತ್ತು ನಿರ್ಜಲೀಕರಣ ಮೆದುಳಿಗೆ ರಕ್ತದ ಹರಿವನ್ನು ಕಡಿಮೆ ಮಾಡುತ್ತದೆ, ಎಲೆಕ್ಟ್ರೋಲೈಟ್ ಸಮತೋಲನವನ್ನು ಏರುಪೇರು ಮಾಡುತ್ತದೆ ಮತ್ತು ನರಮಂಡಲದ ಮೇಲೆ ಒತ್ತಡ ಉಂಟುಮಾಡುತ್ತದೆ. ನಿರಂತರ ಗೊಂದಲ, ಅಸ್ಪಷ್ಟ ಮಾತು, ಅಸಾಮಾನ್ಯ ಅರೆನಿದ್ರಾವಸ್ಥೆ, ಫಿಟ್ಸ್ ಅಥವಾ ಪ್ರಜ್ಞೆ ತಪ್ಪುವಂತಹ ಲಕ್ಷಣಗಳು ಕಂಡುಬಂದರೆ ತಕ್ಷಣ ವೈದ್ಯಕೀಯ ನೆರವು ಪಡೆಯಲು ಸಲಹೆ ನೀಡಲಾಗಿದೆ.

ಉರಿಬಿಸಿಲು ತಪ್ಪಿಸಲು ವೈದ್ಯರ ಸಲಹೆ

ಮಧ್ಯಾಹ್ನದ ಉರಿಬಿಸಿಲಿನ ಅವಧಿಯಲ್ಲಿ ಹೊರಾಂಗಣ ಚಟುವಟಿಕೆಗಳನ್ನು ತಪ್ಪಿಸಲು ವೈದ್ಯರು ಸಲಹೆ ನೀಡಿದ್ದಾರೆ. ಕನಿಷ್ಠ ಪಕ್ಷ ಹೊರಗೆ ಹೋಗುವಾಗ ಕೊಡೆ, ಯುವಿ ಕಿರಣಗಳಿಂದ ರಕ್ಷಿಸುವ ಸನ್‌ಗ್ಲಾಸ್ ಬಳಕೆ, ಕಣ್ಣಿನ ಡ್ರಾಪ್‌ಗಳ ಬಳಕೆ ಮತ್ತು ಎಲೆಕ್ಟ್ರೋಲೈಟ್ ಯುಕ್ತ ಪಾನೀಯಗಳಾದ ಎಳನೀರು, ಮಜ್ಜಿಗೆ ಮತ್ತು ಹಣ್ಣಿನ ರಸಗಳ ಸೇವನೆ, ಜತೆಗೆ ಅಗತ್ಯವಿರುವಷ್ಟು ನೀರು ಕುಡಿಯುವುದು, ಕಣ್ಣಿನ ಡ್ರಾಪ್‌ಗಳ ಬಳಕೆ ಉತ್ತಮ ಎಂದು ಹೇಳಿದ್ದಾರೆ.

ಕಣ್ಣಿನ ಆರೋಗ್ಯ ಕಾಪಾಡಿಕೊಳ್ಳಿ

ಸೂರ್ಯನ ಬೆಳಕು, ಬಿಸಿಗಾಳಿ, ಧೂಳು ಮತ್ತು ನಿರ್ಜಲೀಕರಣ, ಕಣ್ಣು ಒಣಗುವುದು, ಕೆಂಪಾಗುವುದು, ಉರಿ, ಕಣ್ಣು ಬೇನೆ ಮತ್ತು ಕಾರ್ನಿಯಾ ಉರಿಗೆ ಕಾರಣವಾಗುತ್ತದೆ. ಹವಾನಿಯಂತ್ರಣ ಬಳಕೆ ಮತ್ತು ಕಂಪ್ಯೂಟರ್/ಮೊಬೈಲ್ ಪರದೆಗಳನ್ನು ಹೆಚ್ಚು ನೋಡುವುದು, ಒಳಾಂಗಣದಲ್ಲೂ ಕಣ್ಣು ಒಣಗುವ(ಡ್ರೈ ಐ) ಪ್ರಕರಣಗಳನ್ನು ಹೆಚ್ಚಿಸುತ್ತದೆ ಎಂದು ದಿಲ್ಲಿಯ ಡಾ. ಆರ್.ಪಿ. ಸೆಂಟರ್ ಫಾರ್ ಆಪ್ತಾಲ್ಮಿಕ್ ಸೈನ್ಸ್‌ನ ಡಾ. ನಮ್ರತಾ ಶರ್ಮಾ ಹೇಳಿದ್ದಾರೆ.

ಬಸವನಗುಡಿಯಲ್ಲಿ ಶ್ರೀ ಪುತ್ತಿಗೆ ವಿದ್ಯಾಪೀಠ ಉದ್ಘಾಟಿಸಿದ ಶ್ರೀಗಳು

ಆಧುನಿಕ ವಿದ್ಯೆಗಿಂತ ಆಧ್ಯಾತ್ಮಿಕ ವಿದ್ಯೆ ಅಧಿಕ

ಉಡುಪಿ: ಇಂದಿನ ಜನತೆಯು ಹಿಂದೆಂದಿಗಿಂತಲೂ ಬಹಿರ್ಮುಖಿವಾಗುತ್ತಿದ್ದು, ಆಂತರಿಕವಾಗಿ ಕುಂಠಿತವಾಗಿ ಕುಬ್ಜವಾಗುತ್ತಿದೆ. ಜೀವನದ ಪರಿಪೂರ್ಣತೆಗೆ ಆಧ್ಯಾತ್ಮಿಕತೆಯೇ ಪೂರ್ಣಕುಂಭವೆನಿಸಿದೆ. ಈ ನಿಟ್ಟಿನಲ್ಲಿ ಸಮಾಜದಲ್ಲಿ ಆಧ್ಯಾತ್ಮಿಕತೆಗೆ ಉನ್ನತ ಸ್ಥಾನವನ್ನು ನೀಡಲು ಇಂತಹ ವಿದ್ಯಾಪೀಠಗಳು ಅತ್ಯಂತ ಅವಶ್ಯವೆನಿಸಿವೆ ಎಂದು ಉಡುಪಿ ಶ್ರೀ ಪುತ್ತಿಗೆ ಮಠದ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು ಪ್ರತಿಪಾದಿಸಿದರು.

ಬೆಂಗಳೂರಿನ ಬಸವನಗುಡಿಯ ಶ್ರೀ ಗೋವರ್ಧನ ಕ್ಷೇತ್ರ – ಉಡುಪಿ ಶ್ರೀ ಪುತ್ತಿಗೆ ಮಠದ ಶಾಖೆಯಲ್ಲಿ ತ್ರಿಮತಸ್ಥ ವಿಪ್ರ ಸಮುದಾಯದ ಮಕ್ಕಳಿಗಾಗಿ 'ಶ್ರೀ ಪುತ್ತಿಗೆ ಸುಗುಣ ಸ್ಕೂಲ್', ಮಹಿಳೆಯರಿಗಾಗಿ 'ಶ್ರೀ ಪುತ್ತಿಗೆ ಮಹಿಳಾ ವಿದ್ಯಾಪೀಠ' ಹಾಗೂ ಪುರುಷರಿಗಾಗಿ 'ಶ್ರೀ ಪುತ್ತಿಗೆ ಸಂಧ್ಯಾ ವಿದ್ಯಾಪೀಠ'ಗಳನ್ನು ತಮ್ಮ ದಿವ್ಯ ಸಾನಿಧ್ಯದಲ್ಲಿ ಉದ್ಘಾಟಿಸಿ ಅವರು ಆಶೀರ್ವಚನ ನೀಡಿದರು.

ಈಗಾಗಲೇ ಚೆನ್ನೈ, ಕೋಲ್ಕತ್ತಾ ಹಾಗೂ ಉಡುಪಿ ಮೊದಲಾದೆಡೆ ಈ ಪುತ್ತಿಗೆ ವಿದ್ಯಾಪೀಠಗಳು ಅತ್ಯುತ್ತಮ ಸೇವೆ ಸಲ್ಲಿಸುತ್ತಾ ಪ್ರಸಿದ್ಧವಾಗಿವೆ ಎಂದು ಶ್ರೀಗಳು ಇದೇ ವೇಳೆ ತಿಳಿಸಿದರು.



ಮಹಿಳಾ ವಿದ್ಯಾಪೀಠ ಒಂದು ಕ್ರಾಂತಿಕಾರಿ ಚಿಂತನೆ

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಭಂಡಾರಕೇರಿ ಮಠದ ಪರಮ ಪೂಜ್ಯ ಶ್ರೀ ವಿದ್ಯೇಶತೀರ್ಥ ಶ್ರೀಪಾದಂಗಳವರು ಮಾತನಾಡಿ, ರಾಷ್ಟ್ರ ನಿರ್ಮಾಣದ ಮಹತ್ ಕಾರ್ಯವಾಗಬೇಕಾದರೆ ಸನಾತನ ಧರ್ಮದ ರೀತಿಯಲ್ಲಿ ಕುಟುಂಬ ನಿರ್ವಹಣೆ ಅತ್ಯಗತ್ಯ. ಈ ಮಹತ್ತರ ಕಾರ್ಯದಲ್ಲಿ ಮಹಿಳೆಯರ ಪಾತ್ರ ದೊಡ್ಡದಾಗಿದ್ದು, ಶ್ರೀ ಪುತ್ತಿಗೆ ಮಹಿಳಾ ವಿದ್ಯಾಪೀಠದ ಸ್ಥಾಪನೆ ಒಂದು ಕ್ರಾಂತಿಕಾರಿ ಚಿಂತನೆಯಾಗಿದೆ ಎಂದು ಶ್ಲಾಘಿಸಿದರು.

ಭವಿಷ್ಯದಲ್ಲಿ ಶೇ. 40ರಷ್ಟು ಜನರು ವಿವಾಹ ವಿಮುಖರಾಗುವ ಆತಂಕ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಅಹಲ್ಯಾ ಶರ್ಮಾ ಅವರು ಮಾತನಾಡಿ, ಒಂದು ಅಂದಾಜಿನ ಪ್ರಕಾರ ಭವಿಷ್ಯದಲ್ಲಿ ಶೇಕಡಾ 40 ರಷ್ಟು ಜನರು ವಿವಾಹದಿಂದ ವಿಮುಖರಾಗುವ ಆತಂಕ ತಲೆದೋರಿದೆ. ಈ ನಿಟ್ಟಿನಲ್ಲಿ ಸಮಾಜವು ಎಚ್ಚೆತ್ತು ಈಗಿಂದೀಗಲೇ ಕಾರ್ಯಪ್ರವೃತ್ತರಾಗಬೇಕಾದ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಸಗೋಡು ಜಯಸಿಂಹ ಹಾಗೂ ಡಾ. ಕೆ.ಪಿ. ಪುತ್ತೂರಾಯ ಅವರು ಪುತ್ತಿಗೆ ಶ್ರೀಗಳ ಸಾಮಾಜಿಕ ಕಳಕಳಿ ಮತ್ತು ದೂರದೃಷ್ಟಿಯ ಯೋಜನೆಗಳನ್ನು ಕೊಂಡಾಡಿದರು.

ಸಂಪರ್ಕ ಮಾಹಿತಿ

ಶ್ರೀ ಪುತ್ತಿಗೆ ವಿದ್ಯಾಪೀಠಕ್ಕೆ ಸೇರ ಬಯಸುವ ಆಸಕ್ತರು ಬೆಂಗಳೂರಿನ ಬಸವನಗುಡಿ ಗೋವರ್ಧನದ ಕಾರ್ಯಾಲಯವನ್ನು ಈ ಮೊಬೈಲ್ ಸಂಖ್ಯೆಗಳ ಮೂಲಕ ಸಂಪರ್ಕಿಸಬಹುದಾಗಿದೆ: +91 9880491323, +91 97432 92161, +91 99451 00948.

ಬಸವನಮೂಲೆ: ವೇದಪಾಠ ಶಿಬಿರ ಸಂಪನ್ನ

ಸುಬ್ರಹ್ಮಣ್ಯ: ಶ್ರೀ ದೇವಳದಲ್ಲಿ ನಡೆಯುವಂತಹ ಸಂಸ್ಕಾರ ಶಿಬಿರಗಳಿಗೆ ದೇವಳದ ಆಡಳಿತವು ನಿರಂತರ ಪ್ರೋತ್ಸಾಹ ನೀಡುತ್ತದೆ. ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಬಲ್ಲ ಕಾರ್ಯಕ್ರಮಗಳಿಗೆ ಸದಾ ಬೆಂಬಲವಿದೆ. ವೇದ ಶಿಬಿರ, ಸಂಸ್ಕಾರ ಶಿಬಿರ, ಭಜನಾ ಶಿಬಿರ ಇತ್ಯಾದಿ ಕಾರ್ಯಕ್ರಮಗಳು ನಿರಂತರವಾಗಿ ದೇವಳದಲ್ಲಿ ನಡೆಯಬೇಕು ಎಂದು ಕುಲ್ಕುಂದ ಬಸವನಮೂಲೆ ಶ್ರೀ ಬಸವೇಶ್ವರ ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ಗಿರಿಧರ ಸ್ಕಂದ ಹೇಳಿದರು.

ಕುಲ್ಕುಂದ ಬಸವನಮೂಲೆ ಶ್ರೀ ಬಸವೇಶ್ವರ ದೇವಸ್ಥಾನದ ವತಿಯಿಂದ ನಡೆದ 9ನೇ ವರ್ಷದ ವಸಂತ ವೇದ ಪಾಠ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ದೇವಳದ ಪ್ರಧಾನ ಅರ್ಚಕರು ಹಾಗೂ ಮುಖ್ಯ ಗುರು ಗಣೇಶ ದೀಕ್ಷಿತ್ ಅಧ್ಯಯನ, ಅಧ್ಯಾಪನ, ದಾನ ಹಾಗೂ ಪ್ರತಿಗ್ರಹಣ ಕುರಿತು ಮಾಹಿತಿ ನೀಡಿದರು. ಶಿಬಿರದ ಸಂಚಾಲಕ ಎಂ. ಕೃಷ್ಣ ಭಟ್ ಉಪಸ್ಥಿತರಿದ್ದರು.



ವಿದ್ಯಾರ್ಥಿಗಳಾದ ಅರುಣ, ವರುಣ, ಆಶ್ರಿತ್ ಮತ್ತು ಮನು ಅನಿಸಿಕೆ ವ್ಯಕ್ತಪಡಿಸಿದರು.

ಪ್ರಪ್ರಥಮ ಅಂಗಾಂಗ ದಾನ ಪ್ರಕ್ರಿಯೆಗೆ ಸಾಕ್ಷಿಯಾದ ಮಡಿಕೇರಿಯ ಜಿಲ್ಲಾಸ್ಪತ್ರೆ

ಸಾವಿನಲ್ಲೂ ಮಾನವೀಯತೆ ಮೆರೆದ ಡಾಲು ಕುಟುಂಬ

ಮಡಿಕೇರಿ: ಕೊಡಗು ಮೆಡಿಕಲ್ ಕಾಲೇಜು ಅಧೀನದ ಮಡಿಕೇರಿಯ ಜಿಲ್ಲಾಸ್ಪತ್ರೆ ಪ್ರಪ್ರಥಮ ಅಂಗಾಂಗ ಸಂಗ್ರಹ ಪ್ರಕ್ರಿಯೆಗೆ ಸಾಕ್ಷಿಯಾಯಿತು. ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮಡಿಕೇರಿಯಲ್ಲಿ ಮೊದಲ ಬಾರಿಗೆ ಮೃತ ದಾನಿಯಿಂದ ಅಂಗಾಂಗ ಸಂಗ್ರಹಣೆ ಯಶಸ್ವಿಯಾಗಿ ನೆರವೇರಿದ್ದು, ಕೊಡಗು ಜಿಲ್ಲೆಯ ವೈದ್ಯಕೀಯ ಇತಿಹಾಸದಲ್ಲಿ ಮಹತ್ವದ ಮೈಲುಗಲ್ಲಾಗಿದೆ.

ಗೋಣಿಕೊಪ್ಪ ಸಮೀಪದ ಅರವತ್ತೊಕ್ಲು ಗ್ರಾಮದ 46 ವರ್ಷದ ಡಾಲು ಅವರು ಅಪಘಾತದಲ್ಲಿ ತಲೆಗೆ ತೀವ್ರ ಗಾಯಗೊಂಡು ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಆಸ್ಪತ್ರೆಗೆ ದಾಖಲಾಗಿದ್ದರು. ಚಿಕಿತ್ಸೆ ಫಲಕಾರಿಯಾಗದೆ ವೈದ್ಯರು ಬ್ರೇನ್‌ಸ್ಟೆಮ್ ಡೆತ್ ಶಂಕೆ ವ್ಯಕ್ತಪಡಿಸಿದರು. ಭಾರತೀಯ ಕಾನೂನು ಪ್ರಕಾರ ಎರಡು ಹಂತಗಳಲ್ಲಿ ವೈದ್ಯಕೀಯ ಸಮಿತಿಯಿಂದ ಪರೀಕ್ಷೆ ನಡೆಸಿ, 48 ಗಂಟೆಗಳ ವೀಕ್ಷಣೆಯ ಬಳಿಕ ಬ್ರೇನ್‌ಸ್ಟೆಮ್ ಡೆತ್ ದೃಢಪಡಿಸಲಾಯಿತು.

ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಡೀನ್ ಮತ್ತು ನಿರ್ದೇಶಕ ಡಾ. ಲೋಕೇಶ್ ಎ.ಜೆ., ಜಿಲ್ಲಾ ಆಸ್ಪತ್ರೆಯ ಅಧೀಕ್ಷಕ ಡಾ. ಸೋಮಶೇಖರ್ ಹಾಗೂ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ನಂಜುಂಡಯ್ಯ ಅವರ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಯಿತು. ಐಸಿಯು ತಂಡದ ಡಾ. ನಿಶೀದ್ ಜೋಸೆಫ್ ಹಾಗೂ ನರ್ಸಿಂಗ್ ಅಧಿಕಾರಿ ಪವನ್ ಅವರು ರೋಗಿಯ ದೇಹದ ಸ್ಥಿತಿಯನ್ನು ಸ್ಥಿರವಾಗಿಟ್ಟುಕೊಳ್ಳಲು ನಿರಂತರ ಶ್ರಮಿಸಿದರು. ಬೆಳಗಿನ ಜಾವ 2 ಗಂಟೆಗೆ ಆರಂಭವಾದ ಶಸ್ತ್ರಚಿಕಿತ್ಸೆಯಲ್ಲಿ ಎರಡು ಮೂತ್ರಪಿಂಡಗಳು, ಹೃದಯ ಕವಾಟಗಳು ಮತ್ತು ಕಣ್ಣುಗಳ ಕಾರ್ನಿಯಾಗಳನ್ನು ಯಶಸ್ವಿಯಾಗಿ ಸಂಗ್ರಹಿಸಲಾಯಿತು.



ಕೊಡಗು ಜಿಲ್ಲೆಯ ವೈದ್ಯಕೀಯ ಇತಿಹಾಸದಲ್ಲಿ ಮಹತ್ವದ ಮೈಲುಗಲ್ಲು

ಮೈಸೂರಿನಿಂದ ಆಗಮಿಸಿದ ಯೂರೋ ಸರ್ಜನ್‌ಗಳಾದ ಡಾ. ಸಚಿನ್ ಧಾರವಾಡ್ಕರ್ ಮತ್ತು ಡಾ. ವಿಜಯಕುಮಾರ್ ಮೂತ್ರಪಿಂಡ ಸಂಗ್ರಹಣೆ ನಡೆಸಿದರು. ಡಾ. ಅಭಿನಂದನ್ ಮತ್ತು ಡಾ. ಚಂದ್ರಶೇಖರ್ ಹೃದಯ ಕವಾಟಗಳನ್ನು, ಡಾ. ಶ್ರುತಿ ಮತ್ತು ತಂಡ ಕಾರ್ನಿಯಾಗಳನ್ನು ಸಂಗ್ರಹಿಸಿದರು.

ನರ್ಸಿಂಗ್ ಸಿಬ್ಬಂದಿಯಾದ ಜಯಶ್ರೀ, ಅನಿಲ್ ಮತ್ತು ಮಂಜುನಾಥ್ ಹಾಗೂ ಹಿರಿಯ ನರ್ಸಿಂಗ್ ಅಧಿಕಾರಿಗಳಾದ ವಸಂತ್ ಮತ್ತು ಮಹೇಶ್ ಈ ಕಾರ್ಯವನ್ನು ಸಮರ್ಥವಾಗಿ ನಿರ್ವಹಿಸಿದರು.

ಜಿಲ್ಲಾಕಾರಿ ಹಾಗೂ ಪೊಲೀಸ್ ಅಧೀಕ್ಷಕರು ಅಂಗಾಂಗ ಸಾಗಣೆಗೆ ಅಗತ್ಯ ವ್ಯವಸ್ಥೆ ಕಲ್ಪಿಸಿದರು.

ಅಂಗಾಂಗ ದಾನಕ್ಕೆ ನಿರ್ಧಾರ

ಈ ಸಂದರ್ಭದಲ್ಲಿ ಡಾಲು ಅವರ ಪತ್ನಿ ರಾಜೇಶ್ವರಿ ಹಾಗೂ ಕುಟುಂಬ ಸದಸ್ಯರು ಮಹತ್ವದ ಮಾನವೀಯ ನಿರ್ಧಾರ ಕೈಗೊಂಡು ಅಂಗಾಂಗ ದಾನಕ್ಕೆ ಒಪ್ಪಿಗೆ ನೀಡಿದರು. ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯು ಈಗಾಗಲೇ ಖಣಖಖಣ ಹಾಗೂ ಘೆಣಖಖಣ ಮಾನ್ಯತೆ ಪಡೆದಿರುವ ಹಿನ್ನೆಲೆಯಲ್ಲಿ ಪ್ರಕರಣವನ್ನು ರಾಜ್ಯ ಅಂಗಾಂಗ ಮತ್ತು ಖಣಖಖಣಗೆ ವರದಿ ಮಾಡಲಾಯಿತು. ಘೆಣಖಖಣ ಮಾರ್ಗದರ್ಶನದಲ್ಲಿ ಅಂಗಾಂಗ ಸಂಗ್ರಹಣೆಯ ಪ್ರಕ್ರಿಯೆ ಕೈಗೊಳ್ಳಲಾಯಿತು.

ಸ್ಥಳೀಯ ಜನಪ್ರತಿನಿಧಿಗಳಾದ ಶಾಸಕ ಮಂಥರ್ ಗೌಡ ಮತ್ತು ಎ.ಎಸ್. ಪೊನ್ನಣ್ಣ ಅವರು ಈ ಕಾರ್ಯಕ್ಕೆ ಸಂಪೂರ್ಣ ಬೆಂಬಲ ನೀಡಿದರು.

ನಂತರ ಡಾಲು ಅವರ ಪಾರ್ಥಿವ ಶರೀರವನ್ನು 'ವಾಕ್ ಆಫ್ ಆನರ್' ಮೂಲಕ ಕುಟುಂಬಕ್ಕೆ ಹಸ್ತಾಂತರಿಸಲಾಯಿತು. ಆಸ್ಪತ್ರೆಯ ವೈದ್ಯರು, ಸಿಬ್ಬಂದಿ ಹಾಗೂ ನರ್ಸಿಂಗ್ ತಂಡ ದಾನಿಯ ಸೇವೆಯನ್ನು ಗೌರವಿಸಿ, ಕುಟುಂಬವದವರನ್ನು ಸನ್ಮಾನಿಸಿದರು.

IN THE COURT OF THE SENIOR CIVIL JUDGE AT MANGALORE D.K.
G&W.C.No. 30/2026

Between:
In the matter of immoveable property Of Minor: **Arjav Ajith**
Aged about 14 year.
...Minor.

1. Smt. Padmalatha.
2. Miss. Atmika Ajith.
3. Arjiv Ajith.

...Petitioners.

The Petitioner No. 1 is the Wife and Petitioner No. 2 and 3 are the Children of Ajith H., No.3 is the Minor. All are residing at Door No.15-20-1188, 3rd Cross Road, Lower Bendoor, Mangalore 575 002.

TO WHOM SO EVER IT MAY CONCERN.

Take notice that above named Petitioners have filed the above petition for grant of permission to sell the properties of the Minor. The Petitioner No.1 is the Mother and natural guardian of the minor. Interested persons who intend to challenge the same may appear before the Hon'ble Court on 12-6-26 at 11-00 A.M. failing which matter will be decided on merits.

PETITION SCHEDULE PROPERTY.

Converted Immoveable property situated at Kavoor Village of Mangalore Taluk comprised in:

Old Survey Number.	New Survey Number.	Extent. A. C.
61/17C(P)	61/17C3	00-06

Boundaries: North: Road. South: Survey Line. East: Sub Division Line. West: Sub Division Line.

Given under my hand & seal on this 22nd day of April 2026.

Sd/- **Chief Ministerial Officer,**
The Court of Senior Civil Judge, Mangalore.
Sd/- **Ganesha Sundar K.G.**
Advocate for the Petitioners.

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ವಿಷು ಬಂಪರ್ (ನಂ.BR-109) ಡ್ರಾ ಮೇ 23ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.12,00,00,000/- [12 Crore]
VB 135452 (KARUNAGAPPALLY)

Consolation Prize Rs.1,00,000/-
VA 135452 VC 135452 VD 135452
VE 135452 VG 135452

2nd Prize Rs.1,00,00,000/- [1 Crore]
VA 616453 (PALAKKAD) VD 252972 (GURUVAYOOR)
VB 327020 (KANHANGAD) VE 649598 (CHITTUR)
VC 348224 (PATHANAMTHITTA) VG 367998 (WAYANADU)

3rd Prize Rs.10,00,000/- [10 Lakhs]
VA 238131 (KATTAPPANA) VD 575123 (CHITTUR)
VB 149470 (PALAKKAD) VE 363410 (KOLLAM)
VC 133511 (MOOVATTUPUZHA) VG 480536 (THIRUR)

4th Prize Rs.5,00,000/- [5 Lakh]
VA 818975 (THAMARASSERY) VD 123033 (NEYYATTINKARA)
VB 749053 (VAIKKOM) VE 448421 (THAMARASSERY)
VC 777708 (THRISSUR) VG 823578 (CHITTUR)

FOR THE TICKETS ENDING WITH THE FOLLOWING NUMBERS

5th Prize Rs.5,000/-
0891 1678 1729 2053 2548 2659 2840 3065 3333 3658
3989 4122 4644 4670 4742 5294 5328 5730 5790 5995
6522 6597 7185 7785 8261 8344 8480 8520 9566 9793

6th Prize Rs.2,000/-
0094 0363 0547 0560 0696 0862 1240 2216 2825 2889
3669 3731 3812 4483 4654 4952 6193 6279 6555 7431
7760 8241 8573 8884

7th Prize Rs.1,000/-
0281 0613 0705 1295 1334 1693 1801 1815 2279 2532
2588 2654 2940 3129 3406 3591 4019 4053 4327 4472
4547 4563 4977 5016 5148 5458 5551 5571 5925 6097
6143 6361 6704 7109 7357 7614 7621 7833 7898 8124
8402 8511 8512 8545 8629 8808 8866 8918 9170 9260
9339 9344 9474 9998


8th Prize Rs.500/-
0004 0100 0104 0140 0155 0190 0211 0216 0233 0242
0293 0326 0380 0409 0429 0453 0534 0679 0714 0722
0752 0805 0816 0904 0907 0930 1072 1076 1087 1092
1129 1143 1147 1244 1302 1313 1410 1445 1558 1594
1607 1709 1722 1772 1832 1884 1901 1905 1956 1958
1971 2034 2043 2138 2164 2172 2385 2446 2508 2518
2530 2540 2544 2620 2722 2733 2773 2810 2812 2830
2839 2841 2888 2891 3022 3025 3077 3078 3090 3120
3147 3220 3389 3401 3408 3417 3439 3459 3483 3534
3541 3548 3713 3787 3788 3797 3819 3840 3905 3907
3954 4012 4046 4136 4192 4231 4272 4313 4330 4378
4391 4399 4408 4418 4419 4430 4498 4641 4684 4719
4799 4851 4854 4887 4895 4937 4940 4944 4960 5012
5031 5179 5191 5199 5280 5289 5339 5358 5379 5397
5406 5413 5464 5487 5520 5616 5676 5683 5731 5849
5967 5994 6019 6028 6033 6075 6089 6119 6244 6290
6298 6304 6312 6387 6417 6464 6546 6603 6635 6645
6658 6666 6723 6800 6813 6852 6869 6879 6927 6942
6944 6979 6994 7024 7055 7093 7099 7103 7114 7118
7125 7144 7153 7191 7341 7416 7433 7501 7576 7606
7625 7628 7643 7660 7672 7714 7742 7795 7895 7935
7949 7960 8034 8036 8094 8100 8129 8160 8296 8363
8370 8437 8504 8606 8682 8725 8727 8810 8818 9037
9057 9076 9150 9161 9211 9230 9292 9321 9343 9352
9357 9419 9435 9505 9551 9644 9749 9807 9825 9856
9870 9957 9962 9988

9th Prize Rs.300/-
0040 0044 0048 0054 0058 0079 0083 0085 0112 0144
0192 0241 0271 0289 0302 0314 0365 0393 0402 0441
0443 0455 0490 0510 0515 0539 0545 0561 0571 0598
0599 0625 0680 0692 0694 0744 0750 0760 0776 0784
0797 0817 0877 0892 0917 0927 0936 0962 0987 1024
1025 1033 1040 1071 1084 1100 1126 1181 1304 1319
1346 1407 1424 1453 1472 1489 1502 1515 1520 1530
1547 1562 1567 1615 1634 1671 1773 1804 1808 1824
1850 1872 1904 1942 1984 2014 2026 2040 2060 2064
2085 2110 2120 2136 2177 2200 2313 2317 2331 2391
2412 2434 2531 2545 2593 2598 2633 2643 2687 2699
2716 2746 2800 2808 2826 2828 2832 2836 2854 2856
2879 2910 2919 2925 3004 3037 3050 3081 3106 3130
3239 3266 3279 3294 3340 3360 3364 3383 3445 3560
3570 3576 3639 3644 3665 3730 3806 3828 3851 3856
3909 3914 3974 3982 3995 4077 4085 4092 4134 4139
4162 4238 4244 4246 4269 4293 4303 4417 4469 4473
4476 4582 4637 4639 4669 4709 4755 4761 4763 4865
4908 4975 4979 4998 5029 5054 5072 5075 5105 5172
5175 5223 5274 5277 5322 5326 5361 5378 5411 5490
5515 5525 5530 5556 5638 5678 5703 5759 5784 5853
5896 5902 5976 6006 6046 6055 6071 6077 6079 6090
6093 6123 6156 6159 6233 6240 6253 6256 6296 6315
6322 6414 6528 6536 6539 6550 6657 6691 6761 6766
6854 6877 6916 6951 6971 7013 7018 7020 7046 7069
7137 7183 7221 7231 7232 7323 7329 7352 7359 7363
7385 7448 7461 7476 7480 7497 7513 7520 7578 7593
7604 7629 7729 7772 7775 7812 7820 7831 7859 7910
7977 8046 8051 8067 8070 8076 8097 8109 8110 8126
8128 8176 8206 8233 8294 8341 8415 8500 8510 8542
8564 8585 8618 8708 8745 8750 8754 8786 8857 8996
9001 9035 9067 9089 9151 9166 9172 9242 9268 9309
9310 9330 9333 9356 9408 9418 9423 9510 9543 9581
9583 9612 9649 9684 9692 9702 9710 9723 9884 9885
9909 9936

ವಿಶ್ವಪ್ರಸಿದ್ಧ ಮಟ್ಟು ಗುಳ್ಳದ ಆಕರ್ಷಕ ಮಾದರಿ ಧ್ವಂಸ; ಕಿಡಿಗೇಡಿಗಳ ಕೃತ್ಯಕ್ಕೆ ತೀವ್ರ ಆಕ್ರೋಶ

ಉಡುಪಿ: ಕಟಪಾಡಿ ಮಟ್ಟುವಿನಲ್ಲಿ ಪ್ರವಾಸಿಗರ ಹಾಗೂ ಸ್ಥಳೀಯರ ಪ್ರಮುಖ ಆಕರ್ಷಣೆಯಾಗಿ ನಿರ್ಮಿಸಲಾಗಿದ್ದ ವಿಶ್ವಪ್ರಸಿದ್ಧ 'ಮಟ್ಟು ಗುಳ್ಳ'ದ ಭವ್ಯ ಮಾದರಿಯನ್ನು ರಾತ್ರಿ ಕಿಡಿಗೇಡಿಗಳು ಧ್ವಂಸಗೊಳಿಸಿರುವ ಘಟನೆ ಬೆಳಕಿಗೆ ಬಂದಿದೆ.

ಪ್ರಾದೇಶಿಕ ತಳಿಯಾದ ಮಟ್ಟು ಗುಳ್ಳದ ಮೇಲಿನ ಅಪಾರ ಅಭಿಮಾನ ಮತ್ತು ಪ್ರೀತಿಯಿಂದ ದಾನಿಗಳಾದ ಸುಭಾಷ್ ಎಂ. ಸಾಲ್ಯಾನ್ ನೆಲ್ಲಿಕಟ್ಟೆ ಎಂಬವರು 'ಐ ಲವ್ ಮಟ್ಟು' ಎಂಬ ವಿಶೇಷ ವಿನ್ಯಾಸದೊಂದಿಗೆ ಈ ಆಕರ್ಷಕ ಕಲಾಕೃತಿಯನ್ನು ನಿರ್ಮಿಸಿ ಮಟ್ಟು ಗ್ರಾಮಕ್ಕೆ ಸಮರ್ಪಿಸಿದ್ದರು. ಮಟ್ಟು ಗ್ರಾಮಕ್ಕೆ ಭೇಟಿ ನೀಡುವ ಪ್ರವಾಸಿಗರು ಹಾಗೂ ಯುವಜನತೆಗೆ ಈ ವಿನ್ಯಾಸವು ಒಂದು ಸುಂದರ ಸೆಲ್ಫಿ ಸ್ಪಾಟ್ ಮತ್ತು ಗ್ರಾಮದ ಹೆಮ್ಮೆಯ ಗುರುತಾಗಿ ಪರಿಣಮಿಸಿತ್ತು.



ಆಕರ್ಷಕ ಮಾದರಿಯನ್ನು ಉದ್ದೇಶಪೂರ್ವಕವಾಗಿ ಪುಡಿಪುಡಿ ಮಾಡಿ ವಿಕೃತಿ ಮೆರೆದಿದ್ದಾರೆ. ಈ ಘಟನೆಯ ಕುರಿತು ತೀವ್ರ ಆಕ್ರೋಶ ವ್ಯಕ್ತಪಡಿಸಿರುವ ಮಟ್ಟು ಗುಳ್ಳ ಬೆಳೆಗಾರರ ಸಂಘದ ಅಧ್ಯಕ್ಷ ಸುನಿಲ್ ಡಿ. ಬಂಗೇರ ಅವರು, 'ಇದು ಕೇವಲ ಒಂದು ಕಲಾಕೃತಿಯ ಮೇಲಿನ ದಾಳಿಯಲ್ಲ. ಬದಲಿಗೆ ಇಡೀ ಮಟ್ಟು ಗ್ರಾಮದ ಗೌರವ, ಹಗಲಿರುಳು ಶ್ರಮಿಸುವ ನಮ್ಮ ರೈತರ ಭಾವನೆಗಳು ಮತ್ತು ವಿಶ್ವಪ್ರಸಿದ್ಧ ಮಟ್ಟು ಗುಳ್ಳದ ಅಸ್ತಿತ್ವಕ್ಕೆ ಕಿಡಿಗೇಡಿಗಳು ಮಾಡಿರುವ ಅಪಮಾನಕರ ಕೃತ್ಯವಾಗಿದೆ ಎಂದು ಕಿಡಿಕಾರಿದ್ದಾರೆ.

ಮಟ್ಟು ಗುಳ್ಳ ಬೆಳೆಗಾರರ ಸಂಘವು ಈ ಹೇಯ ಕೃತ್ಯವನ್ನು ಅತ್ಯಂತ ತೀವ್ರವಾಗಿ ಖಂಡಿಸಿದೆ. ಅಪರಾಧಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ಅವರು ಬಲವಾಗಿ ಆಗ್ರಹಿಸಿದ್ದಾರೆ.

ಕೊಡಗಿನಲ್ಲಿ ಮುಂದುವರೆದ ವನ್ಯಜೀವಿ–ಮಾನವ ಸಂಘರ್ಷ

ಕುಟ್ಟಂದಿಯಲ್ಲಿ ಹುಲಿ ದಾಳಿಗೆ ಕರು ಬಲಿ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ವನ್ಯಜೀವಿ–ಮಾನವ ಸಂಘರ್ಷ ಮತ್ತೆ ಮುಂದುವರೆದಿದೆ. ದಕ್ಷಿಣ ಕೊಡಗಿನ ಕುಟ್ಟಂದಿ ಗ್ರಾಮದಲ್ಲಿ ಹುಲಿ ದಾಳಿಗೆ ಕರುವೊಂದು ಬಲಿಯಾಗಿದೆ.

ಬಿ.ಶೆಟ್ಟಿಗೇರಿ ಪಂ. ವ್ಯಾಪ್ತಿಯ ಕುಟ್ಟಂದಿಯ ಬಲ್ಲಡಿಚಂಡ ವಿಜು ಕುಶಾಲಪ್ಪ ಅವರಿಗೆ ಸೇರಿದ ಕರುವೊಂದನ್ನು ಹುಲಿ ಸಾಯಿಸಿದ್ದು, ಗ್ರಾಮದಲ್ಲಿ ಆತಂಕ ಸೃಷ್ಟಿಸಿದೆ. ಈ ಭಾಗದಲ್ಲಿ ಇತ್ತೀಚೆಗೆ ಹುಲಿ ಓಡಾಡಿದ್ದನ್ನು ಸ್ಥಳೀಯರು ಕಂಡಿದ್ದು, ಈ ಬಗ್ಗೆ ಅರಣ್ಯ ಇಲಾಖೆಗೂ ಮಾಹಿತಿ ನೀಡಿದ್ದರು. ಆದರೆ ಇಲಾಖೆ ಯಾವುದೇ ಕ್ರಮ ಕೈಗೊಳ್ಳದಿರುವುದರಿಂದ ಕರು ಬಲಿಯಾಗಿದೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇಂದಿನ ಕಾಲದಲ್ಲಿ ಜಾನುವಾರುಗಳನ್ನು ಸಾಕುವುದೇ ಕಷ್ಟ. ಹೀಗಿರುವಾಗ ವನ್ಯಪ್ರಾಣಿಗಳು ದಾಳಿ ನಡೆಸಿ ಅವುಗಳನ್ನು ಕೊಂದು ಹಾಕಿದರೆ ಹೇಗೆ ಎಂದು ಪ್ರಶ್ನಿಸಿರುವ ಸಾರ್ವಜನಿಕರು, ಅರಣ್ಯ ಇಲಾಖೆಯವರು ತಕ್ಷಣವೇ ಹುಲಿಯನ್ನು ಹಿಡಿದು ಬೇರೆಡೆಗೆ ಸ್ಥಳಾಂತರ ಮಾಡಬೇಕು. ಅಲ್ಲದೆ ವನ್ಯಪ್ರಾಣಿಗಳಿಂದ ಜಾನುವಾರು ಕಳೆದುಕೊಂಡವರಿಗೆ ಸೂಕ್ತ ಪರಿಹಾರ ನೀಡುವಂತಾಗಬೇಕು ಎಂದು ಆಗ್ರಹಿಸಿದ್ದಾರೆ.



ಅಧಿಕಾರಿಗಳು ತರಾಟೆಗೆ

ಸ್ಥಳಕ್ಕೆ ಸ್ಥಳೀಯ ಬಿ.ಜೆ.ಪಿ ಪ್ರಮುಖರು ಭೇಟಿ ನೀಡಿ ಅರಣ್ಯ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಈ ಸಂದರ್ಭ ಮಾತನಾಡಿದ ಜಿಲ್ಲಾ ಬಿ.ಜೆ.ಪಿ ಕೃಷಿ ಮೋರ್ಚಾ ಅಧ್ಯಕ್ಷ ರಂಜಿ ಪೂಣಚ್ಚ ಅವರು, ಈ ಭಾಗದಲ್ಲಿ ಆನೆ ಮತ್ತು ಹುಲಿಗಳ ದಾಳಿ ಅಧಿಕಗೊಂಡಿದ್ದು, ಇದನ್ನು ನಿಯಂತ್ರಿಸಲು ಅರಣ್ಯ ಇಲಾಖೆ ಸಂಪೂರ್ಣ ವಿಫಲವಾಗಿದೆ ಎಂದು ಆರೋಪಿಸಿದರಲ್ಲದೆ, ಸೂಕ್ತ ಕ್ರಮ ಕೈಗೊಳ್ಳುವಂತೆ ಅರಣ್ಯ ಇಲಾಖೆ ಮತ್ತು ಸರ್ಕಾರವನ್ನು ಆಗ್ರಹಿಸಿದರು.

ಸ್ಥಳೀಯ ಮುಖಂಡ ಲಾಲ ಭೀಮಯ್ಯ ಮಾತನಾಡಿ, ಇತ್ತೀಚೆಗೆ ಈ ಭಾಗದಲ್ಲಿ ಹುಲಿಯ ಚಲನವಲನ ಇರುವ ಬಗ್ಗೆ ಮಾಹಿತಿ ನೀಡಿದ್ದರೂ, ಸಂಬಂಧಿಸಿದ ಇಲಾಖೆ ನಿರ್ಲಕ್ಷ್ಯ ವಹಿಸಿರುವುದು ಈ ಘಟನೆಗೆ ಕಾರಣ ಎಂದು ದೂರಿದರು.

ವನ್ಯಜೀವಿ ಹಾವಳಿ ತಡೆಗೆ ಶಾಶ್ವತ ಪರಿಹಾರ ಕಲ್ಪಿಸಲಾಗುವುದೆಂದು ಸರಕಾರ ಹೇಳುತ್ತಿದೆಯಾದರೂ, ಯಾವುದನ್ನೂ ಕಾರ್ಯ ರೂಪಕ್ಕೆ ತರುತ್ತಿಲ್ಲ. ಕೂಡಲೇ ಅರಣ್ಯ ಇಲಾಖೆ ಕ್ಯಾಮರಾಗಳನ್ನು ಅಳವಡಿಸಿ, ಕೂಂಬಿಂಗ್ ಕಾರ್ಯ ನಡೆಸಿ ಹುಲಿಯನ್ನು ಸೆರೆ ಹಿಡಿಯಬೇಕು ಎಂದು ಅವರು ಒತ್ತಾಯಿಸಿದರು.

ಈ ಸಂದರ್ಭ ವಿಜು ಕುಶಾಲಪ್ಪ, ಗ್ರಾಮ ಪಂಚಾಯತ್ ಮಾಜಿ ಉಪಾಧ್ಯಕ್ಷ ಮದ್ರೀರ ಗಿರೀಶ್, ಕೊಲ್ಲೀರ ಸಂಜು, ಕುಪ್ಪಂಡ ದಿಲನ್ ಹಾಜರಿದ್ದರು.

IN THE COURT OF THE PRL SENIOR CIVIL JUDGE AT MANGALORE D.K.
G&W.C.No.14/2026

Between:
In the matter of immoveable property Of Minor:
Miss. Keya Keshava Huderi,
Aged about 12 year.
... Minor.

1. **Smt. Tara Keshava Huderi**
   Aged about 51 years,
2. **Miss. Tanvi Keshava Huderi.**
   Aged about 18 years,

The Petitioner No. 1 is the Widow and Petitioner No. 2 and Minor are the The Children of Late Keshava Huderi, All are residing at Room No.C-405, Plot No.12A, Shree Shanthiniketan "C" CHS, Sector-8, Kharghar, Navi Mumbai, Raigad - 410 210.

...Petitioners.

TO WHOM SO EVER IT MAY CONCERN.

Take notice that above named Petitioner has filed the above petition for grant of permission to mortgage the properties of the Minors. The Petitioner is the Mother and natural guardian of the minors. Interested persons who intend to challenge the same may appear before the Hon'ble Court on 15-6-2026 at 11-00 A.M. failing which matter will be decided as exparte.

Petition Schedule property.

Item No.1.
Converted Immoveable property situated at Alape Village of Mangalore Taluk comprised in:

Sur.No.	Kissam.	Extent. A-C	Portion.
131-2BP1	Converted.	00-05	North Western.

Boundaries: North: Property of Mrs. Leena D' Souza. South: Road. East: Property retained by the Vendor. West: Property of Donold Lobo.

Item No.2.
Converted Immoveable property situated at 85B of Jappinamogaru Village of Mangalore Taluk comprised in:

Sur.No.	Kissam.	Extent. A-C
8/3A1.	Converted	00-05.95

Boundaries: North: Portion of the same Survey Number. South: Sub Division line. East: Road and portion of the same Survey Number. West: Property of the same Survey Number.

Given under my hand & seal on this 25th day of March 2026.

Sd/- Chief Ministerial Officer,
In the Court of Senior Civil Judge, Mangalore.
Sd/- Ganesha Sundar K.G.
Advocate for the Petitioners.

ಪುತ್ತೂರು ಮಾರುಕಟ್ಟೆ ಧಾರಣೆ
23-05-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	415 - 455	ಹಳೆ ಕರಿಗೋಟು	255 - 285
ಚೋಲ್ ಅಡಿಕೆ	510 - 535	ಹಸಿ ಕೊಕ್ಕೋ	70 - 105
ಡಬಲ್ ಚೋಲ್	510 - 535	ಒಣ ಕೊಕ್ಕೋ	270 - 320
ಹೊಸ ಪಟೋರ	340 - 390	**ಕಾಳುಮೆಣಸು ಧಾರಣೆ**	
ಹಳೆ ಪಟೋರ	360 - 390	ಕಾಳುಮೆಣಸು	450 - 665
ಹೊಸ ಉಳ್ಳಿ	140 - 290	**ರಬ್ಬರ್ ಧಾರಣೆ : ಗ್ರೇಡ್**	
ಹಳೆ ಉಳ್ಳಿ	130 - 290	ಆರ್‌ಎಸ್‌ಎಸ್ 1	246.00
ಹೊಸ ಕೋಕಾ	315 - 335	ಆರ್‌ಎಸ್‌ಎಸ್ 2	211.00
ಹಳೆ ಕೋಕಾ	315 - 335	ಸ್ಕ್ರಾಪ್ 1	143.00
ಹೊಸ ಕರಿಗೋಟು	255 - 285	ಸ್ಕ್ರಾಪ್ 2	140.00

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚಳ್ಳಕೆರೆ. ಚಿತ್ರದುರ್ಗ (ಜಿ)
Ph No: 08195-222228 E-Mail:- apmcchallakeresec@gmail.com

ಪತ್ರ ಸಂ:ಕೃಉಮಾಸ(ಚ):ಇ-ಟೆಂಡರ್/ಸ್ವಚ್ಛತಾ/ಭದ್ರತಾ/105/2026-27
ದಿನಾಂಕ:20-05-2026

ಟೆಂಡರ್ ಪ್ರಕಟಣೆ

1) ಪ್ರಾಂಗಣ ಸ್ವಚ್ಛತಾ ಸಿಬ್ಬಂದಿ ಇಂಡೆಂಟ್ ಸಂಖ್ಯೆ: APMC/2026-27/SE0853
2) ಭದ್ರತಾ ಸಿಬ್ಬಂದಿ ಇಂಡೆಂಟ್ ಸಂಖ್ಯೆ: APMC/2026-27/SE0854
3) ಇ-ಟೆಂಡರ್ ಸಿಬ್ಬಂದಿ ಇಂಡೆಂಟ್ ಸಂಖ್ಯೆ: APMC/2026-27/SE0855

2026-27ನೇ ಸಾಲಿಗೆ ಚಳ್ಳಕೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವತಿಯಿಂದ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ನಡೆಯುತ್ತಿರುವ ಇ-ಟೆಂಡರ್ ಪ್ರಕ್ರಿಯೆಗೆ ಒಬ್ಬ "ಸಿಸ್ಟಮ್ ಅಡ್ಮಿನಿಸ್ಟ್ರೇಟರ್" ಹಾಗೂ 3 ಜನ "ಡಾಟಾ ಎಂಟ್ರಿ ಆಪರೇಟರ್ಸ್" ಒಟ್ಟು 4 ಜನ ಇ-ಟೆಂಡರ್ ಸಿಬ್ಬಂದಿ ಹಾಗೂ ಚಳ್ಳಕೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮಾರುಕಟ್ಟೆ ಪ್ರಾಂಗಣದ ಸ್ಥಿರ ಮತ್ತು ಚರಾಸ್ತಿಗಳ ರಕ್ಷಣೆ, ಭದ್ರತೆ, ತನಿಖಾಠಾಣೆಯಲ್ಲಿ ಸಂಚಾರ ನಿಯಂತ್ರಣ, ಕಛೇರಿಕಾರ್ಯನಿರ್ವಹಣೆಗೆ 06 ಜನ ಭದ್ರತಾ ಸಿಬ್ಬಂದಿ (ಒಬ್ಬ ಎಲೆಕ್ಟ್ರೀಷಿಯನ್ ಒಳಗೊಂಡಂತೆ) ಹಾಗೂ ಒಬ್ಬ ವಾಹನ ಚಾಲಕರು ಮತ್ತು ಕಂಪ್ಯೂಟರ್ ಅನುಭವವುಳ್ಳ ಒಬ್ಬ ಬೆರಳಚ್ಚುಗಾರು ಒಟ್ಟು 08 ಜನ ಹಾಗೂ ಈ ಸಮಿತಿಯ ವತಿಯಿಂದ ರಾಂಪುರ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಒಬ್ಬ ಭದ್ರತಾ ಸಿಬ್ಬಂದಿ ಮತ್ತು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮಾಅಯೋ, ಚಿತ್ರದುರ್ಗರವರ ಕಛೇರಿಗೆ ಒಬ್ಬ ಕಂಪ್ಯೂಟರ್ ಅನುಭವವುಳ್ಳ ಬೆರಳಚ್ಚುಗಾರರು ಸೇರಿ ಒಟ್ಟು 10 ಜನ ಭದ್ರತಾ ಸಿಬ್ಬಂದಿಯವರ ಸೇವೆ ಹಾಗೂ ಪ್ರಾಂಗಣದ ಸ್ವಚ್ಛತೆಗೆ 07 ಜನ ಸ್ವಚ್ಛತಾ ಸಿಬ್ಬಂದಿ ಸೇವೆಯನ್ನು ಒದಗಿಸಲು ಕಾರ್ಮಿಕ ಇಲಾಖೆಯಿಂದ ಮಾನ್ಯತೆ ಪಡೆದ ಏಜೆನ್ಸಿಯವರಿಂದ 2026-27ನೇ ಸಾಲಿನ (ಕಾರ್ಯಾದೇಶ ನೀಡಿದ ದಿನಾಂಕದಿಂದ ದಿನಾಂಕ: 31-05-2027ರವರೆಗೆ) ಅವಧಿಗೆ ಗುತ್ತಿಗೆ ಆಧಾರದ ಮೇಲೆ ಸಮಿತಿಯು ನಿಗಧಿಪಡಿಸಿರುವ ಕರಾರುಗಳಿಗೆ ಒಳಪಟ್ಟು ಭದ್ರತಾ/ಸ್ವಚ್ಛತಾಏಜೆನ್ಸಿ ಹಾಗೂ ಖಾಸಗಿ ಸಂಘ ಸಂಸ್ಥೆಗಳಿಂದ ಇ-ಟೆಂಡರ್, ಭದ್ರತಾ ಹಾಗೂ ಸ್ವಚ್ಛತಾ ಟೆಂಡರುಗಳನ್ನು ಪ್ರತ್ಯೇಕವಾಗಿ ದ್ವಿ-ಲಕೋಟೆ ಮೂಲಕ ಶೇಕಡವಾರು ಟೆಂಡರ್ ಪದ್ಧತಿಯಲ್ಲಿ ಆಹ್ವಾನಿಸಲಾಗಿರುತ್ತದೆ. ಇ.ಎಂ.ಡಿ ನ್ನು ಇ-ಪೇಮೆಂಟ್ ಮೂಲಕ ಇ-ಪ್ರಕ್ಯೂರಮೆಂಟ್ ಇವರಿಗೆ ಪಾವತಿಸತಕ್ಕದ್ದು ಸದರಿ ಹಣವನ್ನು ಪಾವತಿಸದೇ ಇರುವ ಏಜೆನ್ಸಿರವರ ತಾಂತ್ರಿಕ/ಆರ್ಥಿಕ ಬಿಡ್ಡನ್ನು ತೆರೆಯಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ನಮ್ಮ ಕಛೇರಿಯಿಂದ ಅಥವಾ ಸರ್ಕಾರಿ ವೆಬ್‌ಸೈಟ್ https://kppp.karnataka.gov.inನಲ್ಲಿ ಪಡೆಯಬಹುದಾಗಿದೆ 1) ಟೆಂಡರ್ Queries / Clarifications ಸಲ್ಲಿಸಲು ಕೊನೆಯ ದಿನಾಂಕ:27-05-2026 ಸಂಜೆ 4.00 ರವರೆಗೆ 2)ಇ-ಟೆಂಡರ್ ಮೂಲಕ ಟೆಂಡರ್‌ನ್ನು ಭರ್ತಿ ಮಾಡಿ ಸಲ್ಲಿಸುವ ಅಂತಿಮ ದಿನಾಂಕ: 08-06-2026 ಸಂಜೆ 4.00ಗಂಟೆರವರೆಗೆ 3)ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ:10-06-2026 ಬೆಳಗ್ಗೆ 11.00ಗಂಟೆ ತೆರೆಯಲಾಗುವುದು 4) ಟೆಂಡರ್‌ನ ಆರ್ಥಿಕ ಬಿಡ್‌ನ್ನು ಸಾಧ್ಯವಾದಲ್ಲಿ ದಿನಾಂಕ:12-06-2026 ಬೆಳಗ್ಗೆ 11.30ಗಂಟೆಗೆ ತೆರೆಯಲಾಗುವುದು 5) ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೇ ಸ್ವೀಕರಿಸುವ ಹಾಗೂ ತಿರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿರುತ್ತದೆ. 6) ಸಮಿತಿಗೆ ನೇಮಿಸಿಕೊಳ್ಳುವ ಇ-ಟೆಂಡರ್/ಭದ್ರತಾ / ಸ್ವಚ್ಛತಾ ಸಿಬ್ಬಂದಿಗಳ ಸಂಖ್ಯೆಯನ್ನು ಮಂಜೂರಾತಿಗೆ ಅನುಗುಣವಾಗಿ ಮತ್ತು ಸಮಿತಿಯ ಆದಾಯದ ಅನುಗುಣವಾಗಿ ಕಡಿತಗೊಳಿಸುವ/ ಹೆಚ್ಚಿಸುವ ಅಧಿಕಾರವನ್ನು ಸಮಿತಿಯುವ ಹೊಂದಿದ್ದು, ಈ ಬಗ್ಗೆ ಸಮಿತಿಯ ಸೂಚನೆಗೆ ಭದ್ರತಾ ಏಜೆನ್ಸೀಯು ಬದ್ಧರಾಗಿರತಕ್ಕದ್ದು. 7) ಆರ್ಥಿಕ ಬಿಡ್‌ನಲ್ಲಿ ಅರ್ಹತೆ ಹೊಂದಿದ ಎಲ್-1 ಬಿಡ್‌ದಾರರು 01 ಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿದ್ದಲ್ಲಿ ಲಾಟರಿ ಮೂಲಕ ಆಯ್ಕೆ ಮಾಡಲಾಗುವುದು.

ಸಹಿ/- ಕಾರ್ಯದರ್ಶಿ,
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚಳ್ಳಕೆರೆ.

ಸಹಿ/- ಆಡಳಿತಾಧಿಕಾರಿಗಳು,
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚಳ್ಳಕೆರೆ.
DIPR/CTA/KSMCA/119/2026-27

ಕಿರುಸುದ್ದಿ

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಪ್ರವಾಸ

ಮಂಗಳೂರು: ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ ಪುರುಷೋತ್ತಮ ಬಿಳಿಮಲೆ ಮೇ 26ರಂದು ದಕ್ಷಿಣ ಕನ್ನಡ ಜಿಲ್ಲೆಗೆ ಆಗಮಿಸಲಿದ್ದಾರೆ. ಮೇ 26ರಂದು ಸಂಜೆ 4 ಗಂಟೆಗೆ ಮಂಗಳೂರು ವಿಮಾನ ನಿಲ್ದಾಣಕ್ಕೆ ಆಗಮನ, ನಗರದಲ್ಲಿ ವಾಸ್ತವ್ಯ. ಮೇ 27ರಂದು ಬೆಳಿಗ್ಗೆ 10 ಗಂಟೆಗೆ ಮಂಗಳೂರು ವಿಶ್ವವಿದ್ಯಾನಿಲಯದ ಪ್ರೊ ಬಿ.ಎ ವಿವೇಕ ರೈ ವೇದಿಕೆಯಲ್ಲಿ ಆನು ಒಲಿದಂತೆ ಹಾಡುವೆ -5 ಕನ್ನಡ ಮನಸ್ಸಿನೊಂದಿಗೆ ಒಂದು ದಿನ (ಪ್ರೊ.ಬಿ. ಎ. ವಿವೇಕ್ ರೈ ಅವರ ಸಮಗ್ರ ಸಾಹಿತ್ಯ ಅವಲೋಕನ ಮತ್ತು ಸಂವಾದ ಕಾರ್ಯಕ್ರಮ). ಮೇ 29 ರಂದು ಬೆಳಿಗ್ಗೆ 11 ಗಂಟೆಗೆ ಮಂಗಳಗಂಗೋತ್ರಿ ಮಂಗಳೂರು ವಿಶ್ವವಿದ್ಯಾನಿಲಯ ಭೇಟಿ, ಮೇ 31ಕ್ಕೆ ಮಂಗಳೂರಿನಿಂದ ಕಾಸರಗೋಡಿಗೆ ತೆರಳಲಿದ್ದಾರೆ. ಜೂನ್ 1 ರಂದು ಬೆಳಿಗ್ಗೆ 10.30ಕ್ಕೆ ಅಧ್ಯಕ್ಷರು ಮಂಗಳೂರಿನಿಂದ ಬೆಂಗಳೂರಿಗೆ ತೆರಳಲಿದ್ದಾರೆ.

ಪತಿ ನಾಪತ್ತೆ: ಪತ್ನಿ ದೂರು

ಕಡಬ: ಕಡಬ ತಾಲೂಕಿನ ಚಾರ್ವಾಕ ಗ್ರಾಮದ ನಾಗಲೋಕ ನಿವಾಸಿ ಮುದರ ಮುಗೇರ (57) ಎಂಬವರು ನಾಪತ್ತೆಯಾಗಿರುವ ಬಗ್ಗೆ ಕಡಬ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮುದರ ಅವರ ಪತ್ನಿ ಹೊನ್ನಮ್ಮ ಅವರು ದೂರು ನೀಡಿ ಮೇ 5ರಂದು ಕಾಣಿಯೂರು ಪೇಟೆಗೆ ಹೋಗಿ ಬರುವುದಾಗಿ ಹೋದ ಮುದರ ಮುಗೇರ ಇನ್ನೂ ವಾಪಸ್ಸಾಗದೆ ನಾಪತ್ತೆಯಗಿದ್ದಾರೆ ಎಂದು ತಿಳಿಸಿದ್ದಾರೆ. ಮುದರ ಮುಗೇರ ಅವರ ಕೂಲಿ ಕಾರ್ಮಿಕನಾಗಿದ್ದು, ಮದ್ಯ ಸೇವನೆಯ ಚಟ ಹೊಂದಿದ್ದಾರೆ. ಅವರು ಇತ್ತೀಚೆಗೆ ಮನೆಯಲ್ಲೇ ಇದ್ದು ಕೆಲಸಕ್ಕೆ ಹೋಗುತ್ತಿರಲಿಲ್ಲ. ಮೇ 5ರಂದು ಬೆಳಿಗ್ಗೆ ಮನೆಯಿಂದ ಹೊರಟು ಕಾಣಿಯೂರು ಪೇಟೆಗೆ ಹೋಗಿ ಬರುವುದಾಗಿ ತಿಳಿಸಿ ಹೋಗಿದ್ದರು. ಸಂಜೆಯಾದರೂ ಮನೆಗೆ ಹಿಂತಿರುಗಿರಲಿಲ್ಲ. ಈ ಹಿಂದೆ ಅವರು ಮನೆಯಲ್ಲಿ ತಿಳಿಸದೆ ಕೆಲಸಕ್ಕೆಂದು ಹೋದರೆ 4-5 ದಿನ ಬಿಟ್ಟು ಮನೆಗೆ ವಾಪಸಾಗುತ್ತಿದ್ದರು. ಆದರೆ ಅವರು ಈ ಬಾರಿ 17 ದಿನಗಳು ಕಳೆದರೂ ಮನೆಗೆ ಬಂದಿರುವುದಿಲ್ಲ. ದೂರದ ಸಂಬಂಧಿಕರಲ್ಲಿ ವಿಚಾರಿಸಿದರೆ ಅಲ್ಲಿಗೆ ಹೋಗಿಲ್ಲ ಎಂದು ತಿಳಿದು ಬಂದಿದೆ. ನಾಪತ್ತೆಯಾಗಿರುವ ನನ್ನ ಗಂಡನನ್ನು ಪತ್ತೆಹಚ್ಚಿಕೊಡಿ ಎಂದು ಹೊನ್ನಮ್ಮ ದೂರಿನಲ್ಲಿ ಮನವಿ ಮಾಡಿದ್ದಾರೆ.



ಪೂಚಕ್ಕಾಡಿನಲ್ಲಿ ರೈಲಿಗೆ ಕಲ್ಲೆಸೆತ: ಮಹಿಳೆಗೆ ಗಾಯ

ಕಾಸರಗೋಡು: ಬೇಕಲ ಪೊಲೀಸ್ ಠಾಣೆ ವ್ಯಾಪ್ತಿಯ ಪಳ್ಳಿಕೆರೆ ಪೂಚಕ್ಕಾಡ್‌ನಲ್ಲಿ ರೈಲಿಗೆ ಕಲ್ಲೆಸೆತ ಉಂಟಾಗಿದೆ. ಜನರಲ್ ಕೋಚ್‌ನಲ್ಲಿ ಪ್ರಯಾಣಿಸುತ್ತಿದ್ದ ಮಹಿಳೆಯ ಕಣ್ಣಿಗೆ ಗಾಯ ಉಂಟಾಗಿದೆ. ಗಾಯಗೊಂಡ ನೀಲೇಶ್ವರ ಅಲಿಂಗೀಲ್ ನಿವಾಸಿ ಪಿ.ವಿ.ಕುಂಞಿಕೃಷ್ಣನ್‌ರ ಪತ್ನಿ ಅನಿತಾ (58) ಅವರನ್ನು ಕಾಞಂಗಾಡು ಖಾಸಗಿ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ಶುಕ್ರವಾರ ಮಧ್ಯಾಹ್ನ ಕೊಯಂಬತ್ತೂರಿಗೆ ತೆರಳುತ್ತಿದ್ದ ಇಂಟರ್ ಸಿಟಿ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್‌ಗೆ ಕಲ್ಲೆಸೆತ ನಡೆದಿದೆ. ಮಹಿಳೆಯು ಮಂಗಳೂರಿನಿಂದ ನೀಲೇಶ್ವರಕ್ಕೆ ಪ್ರಯಾಣಿಸುತ್ತಿದ್ದರು. ಅವರ ಬಲಗಣ್ಣಿಗೆ ಕಲ್ಲೆಸೆತದಿಂದ ಗಾಯಗಳಾಗಿವೆ. ಘಟನೆಯಲ್ಲಿ ಕಾಸರಗೋಡು ರೈಲ್ವೆ ಪೊಲೀಸರು ಕೇಸು ದಾಖಲಿಸಿಕೊಂಡಿದ್ದಾರೆ. ಅಕ್ರಮಿಯೆಂದು ಸಂಶಯಿಸುವ ಓರ್ವನ ದೃಶ್ಯ ಸಿಸಿಟಿವಿಯಲ್ಲಿ ದಾಖಲಾಗಿದೆ. ಇದನ್ನು ಕೇಂದ್ರೀಕರಿಸಿ ಆರೋಪಿಯ ಪತ್ತೆಗೆ ತನಿಖೆ ಚುರುಕುಗೊಳಿಸಲಾಗುವುದು ಎಂದು ಪೊಲೀಸರು ತಿಳಿಸಿದರು.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಸುಹಾಸ್‌ರಾಜ್, 2ನೇ ಬ್ಲಾಕ್, ಅಮೃತ ನಗರ, ತಿರುವೈಲು, ವಾಮಂಜೂರು.
2. ರಾಮಕೃಷ್ಣ, ಪಂಡಿತ್ ಹೌಸ್, ಅಳಿಕೆ ಮಜಲು, ಇಡ್ಕಿದು, ಮಿತ್ತೂರು ವಯಾ ಕಬಕ, ಬಂಟ್ವಾಳ (ತಾ).
3. ಶೋಭ ಶಂಕರ ಬಂಗೇರ, ಬಾಬು ನಿವಾಸ, ಪಾಂಗಾಳ ? ಕದ್ರಿ ಕ್ಷೇತ್ರದ ರಾಜಾಂಗಣದಲ್ಲಿ.
4. ಶಕುಂತಳಾ ಕುಲಾಲ್, 'ಚೇತನಾ ಅರ್ಚನಾ', ಕೆರೆಕಾಡು, ಮೂಲ್ಕಿ.
5. ಹರೀಶ್ ಪ್ರಮೀಳಾ ಶೆಟ್ಟಿ, ಗುತ್ತು, ಪೆರುವಾಯಿ, ಮಾಣಿಲ ಶ್ರೀಧಾಮ ವಠಾರದಲ್ಲಿ.
6. ಪೂರ್ವಿಕ್ ಶೆಟ್ಟಿ, ಬಡಗ ಎಕ್ಕಾರು, ಎಕ್ಕಾರು - ಶ್ರೀ ಕಟೀಲು ಕ್ಷೇತ್ರ ಮಹಾಲಕ್ಷ್ಮೀ ಸದನ.
7. ಕೆ. ದೇವಿ ಪ್ರಸಾದ್ ಶೆಟ್ಟಿ, ಸಂಚಾಲಕರು, ಶ್ರೀ ಕಟೀಲು ಮೇಳಗಳು - ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.

ಶ್ರೀ ಧರ್ಮಸ್ಥಳ ಮೇಳ
ಮುಂಡಾಜೆಯಲ್ಲಿ
ಶ್ರೀ ಕ್ಷೇತ್ರ ಯಕ್ಷಗಾನ ಬಯಲಾಟ ಸಮಿತಿ

ಶ್ರೀ ಪಾವಂಜೆ ಮೇಳ
ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನ, ಅಲಂಗಾರು, ಮೂಡುಬಿದ್ರೆ
ಸಮಗ್ರ ಭೀಷ್ಮ



ಮಂಗಳೂರು ವಿಶ್ವವಿದ್ಯಾನಿಲಯ ಹಾಗೂ ಬ್ರಹ್ಮಾವರದ ಎಸ್‌ಎಂಎಸ್ ಕಾಲೇಜಿನ ಸಂಯುಕ್ತ ಆಶ್ರಯದಲ್ಲಿ ನಡೆದ ಮಂಗಳೂರು ವಿವಿ ಅಂತರ್ ಕಾಲೇಜು ಮಹಿಳಾ ಕ್ರಿಕೆಟ್ ಪಂದ್ಯಾವಳಿಯಲ್ಲಿ ಆಳ್ವಾಸ್ ಕಾಲೇಜಿನ ತಂಡವು ಫೈನಲ್‌ನಲ್ಲಿ ಬ್ರಹ್ಮಾವರದ ಎಸ್‌ಎಂಎಸ್ ಕಾಲೇಜಿನ ತಂಡವನ್ನು ಪರಾಭವಗೊಳಿಸುವ ಮೂಲಕ ಚಾಂಪಿಯನ್ ಪಟ್ಟವನ್ನು ಅಲಂಕರಿಸಿತು. ವಿಜೇತ ತಂಡದ ಪಲ್ಲವಿ ಉತ್ತಮ ಬ್ಯಾಟರ್, ನಳಿನಾಕ್ಷಿ ಉತ್ತಮ ವಿಕೆಟ್ ಕೀಪರ್ ಮತ್ತು ಕೃಪಾ ಉತ್ತಮ ಸವ್ಯಸಾಚಿ ಪ್ರಶಸ್ತಿಯನ್ನು ಪಡೆದುಕೊಂಡರು. ವಿಜೇತ ತಂಡವನ್ನು ಸಂಸ್ಥೆಯ ಅಧ್ಯಕ್ಷ ಡಾ. ಎಂ. ಮೋಹನ ಆಳ್ವ ಅಭಿನಂದಿಸಿದ್ದಾರೆ.

ಹಳೆ ದ್ವೇಷ ಕಾರಣ ಇರಿದು ಕೊಲೆ ಯತ್ನ : ಆರೋಪಿ ಪ್ರಸನ್ನ ಕುಮಾರ್ ಬಂಧನ

ಬೆಳ್ತಂಗಡಿ: ಹಳೆ ದ್ವೇಷವನ್ನು ಇಟ್ಟುಕೊಂಡು ಅತ್ತೆ ಮನೆಗೆ ಹೋಗಿ ಅವಾಚ್ಯ ಶಬ್ದಗಳಿಂದ ಬೈದು ಬಳಿಕ ಕತ್ತಿಯಿಂದ ಕಡಿದು ಕೊಲೆಗೆ ಯತ್ನಿಸಿದ ಪ್ರಕರಣ ಆರಂಬೋಡಿ ಗ್ರಾಮದ ದೇಲೋಡಿಯಲ್ಲಿ ನಡೆದಿದ್ದು ಪ್ರಕರಣದ ಆರೋಪಿ ಪ್ರಸನ್ನ ಕುಮಾರ್ (33) ಎಂಬಾತನನ್ನು ವೇಣೂರು ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಆರೋಪಿ ಪ್ರಸನ್ನ ಕುಮಾರ್ ದೂರುದಾರರಾದ ಸುಜಾತ ಅವರ ಗಂಡನ ತಮ್ಮನಾಗಿದ್ದು ಈತ ಸುಜಾತ ಹಾಗೂ ಆಕೆಯ ತಾಯಿಯರೊಂದಿಗೆ ಪೂರ್ವ ದ್ವೇಷ ಹೊಂದಿದ್ದು ಆಗಾಗ ತಾಯಿ ಮಗಳಿಗೆ ನಿಮ್ಮನ್ನು ಕೊಲೆ ಮಾಡುವುದಾಗಿ ಹೇಳುತ್ತಿದ್ದು. ಇದೇ ವಿಚಾರದಲ್ಲಿ ಪೂರ್ವ ದ್ವೇಷ ಹೊಂದಿ ಮೇ 19 ರಂದು ಮಧ್ಯಾಹ್ನ ಸುಮಾರು 12.45 ಗಂಟೆಯಿಂದ 1 ಗಂಟೆಯ ಅವಧಿಯಲ್ಲಿ ಬೆಳ್ತಂಗಡಿ ತಾಲೂಕು ಆರಂಬೋಡಿ ಗ್ರಾಮದ ದೇಲೋಡಿಯ ದೂರುದಾರರ ಮನೆಗೆ ಅಕ್ರಮ ಪ್ರವೇಶ ಮಾಡಿ ಉದ್ದನೆಯ ಕತ್ತಿ ಹಿಡಿದು ದೂರುದಾರರ ತಾಯಿಯನ್ನು ಉದ್ದೇಶಿಸಿ ಅವಾಚ್ಯ ಶಬ್ದಗಳಿಂದ ಬೈದು ನಿನ್ನನ್ನು ಕೊಲ್ಲದೆ ಬಿಡುವುದಿಲ್ಲ ಎಂದು ಹೇಳಿ ಕತ್ತಿಯಿಂದ ತಲೆಗೆ, ಮುಖಕ್ಕೆ, ಕೈಕಾಲುಗಳಿಗೆ ಕಡಿದು ತೀವ್ರ ಹಲ್ಲೆ ನಡೆಸಿದ್ದಾನೆ. ಗಂಭೀರವಾಗಿ ಗಾಯಗೊಂಡ ಇವರನ್ನು ಮೂಡಬಿದ್ರೆ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ವೇಣೂರು ಪೊಲೀಸ್ ಠಾಣೆಯಲ್ಲಿ ಹಲ್ಲೆಗೊಳಾಗದ ಮಹಿಳೆಯ ಮಗಳು ನೀಡಿದ ದೂರಿನ ಮೇರೆಗೆ ಮೇ 19ರಂದು ಪ್ರಕರಣ ದಾಖಲಿಸಿಕೊಂಡಿದ್ದು ಬೆಳ್ತಂಗಡಿ ಉಪವಿಭಾಗ ಡಿವೈಎಸ್ಪಿ ರೋಹಿನಿ ಸಿ.ಕೆ. ಮಾರ್ಗದರ್ಶನದಲ್ಲಿ ಬೆಳ್ತಂಗಡಿ ವೃತ್ತ ನಿರೀಕ್ಷಕ ರವಿ ಬಿ.ಎಸ್. ನೇತೃತ್ವದ ವೇಣೂರು ಸಬ್ ಇನ್ಸ್‌ಪೆಕ್ಟರ್ ಅಕ್ಷಯ್ ಡವಗಿ ತಂಡ ಆರೋಪಿ ಹೊಸಂಗಡಿ ನಿವಾಸಿ ಪ್ರಸನ್ನ ಕುಮಾರ್ (33) ಎಂಬಾತನನ್ನು ಖಚಿತ ಮಾಹಿತಿ ಮೇರೆಗೆ ವೇಣೂರಿನ ಕುರ್ಲೊಟ್ಟು ಜಂಕ್ಷನ್‌ನಲ್ಲಿ ಮೇ 20 ರಂದು ವಶಕ್ಕೆ ಪಡೆದಿದ್ದು ವಿಚಾರಣೆ ನಡೆಸುತ್ತಿದ್ದಾರೆ.

ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಅವರ ಒಡ್ಡೂರು ಫಾರ್ಮ್‌ಗೆ ಕೇಂದ್ರ ಸಚಿವ ವಿ. ಸೋಮಣ್ಣ ಭೇಟಿ

ರೈಲು ಕುರಿತು ವಿವಿಧ ಬೇಡಿಕೆಗಳ ಮಂಡನೆ

ಬಂಟ್ವಾಳ: ಕೇಂದ್ರ ಜಲಶಕ್ತಿ ಹಾಗೂ ರೈಲ್ವೆ ಖಾತೆಗಳ ರಾಜ್ಯ ಸಚಿವ ವಿ.ಸೋಮಣ್ಣನವರು ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಉಳಿಪ್ಪಾಡಿಗುತ್ತು ಅವರ ಗಂಜಿಮಠದಲ್ಲಿರುವ ಒಡ್ಡೂರು ಫಾರ್ಮ್ ಹೌಸ್‌ಗೆ ಶನಿವಾರ ಬೇಟಿ ನೀಡಿದರು. ಶಾಸಕರು ಸಚಿವರನ್ನು ಶಾಲು ಹೊದಿಸಿ, ಹೂಗುಚ್ಚ ನೀಡಿ ಸ್ವಾಗತಿಸಿದರು.

ಈ ವೇಳೆ ಸಂಸದ ಕ್ಯಾ.ಬ್ರಿಜೇಶ್ ಚೌಟ, ಮಂಗಳೂರು ಉತ್ತರ ಶಾಸಕ ಡಾ.ವೈ ಭರತ್ ಶೆಟ್ಟಿ,ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಉಪಸ್ಥಿತರಿದ್ದರು.

ಈ ಸಂದರ್ಭ ಜಿಲ್ಲೆಯ ಅಭಿವೃದ್ಧಿ ಮತ್ತು ಪಕ್ಷ ಸಂಘಟನೆಯ ಕುರಿತಂತೆ ಶಾಸಕರು, ಸಂಸದರ ಜೊತೆ ಚರ್ಚಿಸಿದ ಸಚಿವ ಸೋಮಣ್ಣ ಅವರು ಮುಂದಿನ ಗ್ರಾ.ಪಂ., ಜಿ.ಪಂ.,ತಾ.ಪಂ., ಹಾಗೂ ವಿಧಾನ ಸಭಾ ಚುನಾವಣೆಗೆ ಸಂಬಂಧಿಸಿಯೂ ಮಾಹಿತಿ ಪಡೆದಕೊಂಡರು.

ಇದೇ ವೇಳೆ ಬಂಟ್ವಾಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ರೈಲ್ವೆ ಇಲಾಖೆಗೆ ಸಂಬಂಧಪಟ್ಟ ಅಭಿವೃದ್ಧಿ ಕಾಮಗಾರಿಗಳನ್ನು ಹಾಗೂ ವಿವಿಧ ಬೇಡಿಕೆಗಳನ್ನು ಆದ್ಯತೆಯ ನೆಲೆಯಲ್ಲಿ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಶಾಸಕರು ಸಚಿವರಿಗೆ ಮನವಿ ಸಲ್ಲಿಸಿದರು.

ಬಂಟ್ವಾಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ರೈಲ್ವೆ ಇಲಾಖೆಗೆ ಸಂಬಂಧಪಟ್ಟ ಅಭಿವೃದ್ಧಿ ಕಾಮ ಗಾರಿಗಳ ಬೇಡಿಕೆ ಕುರಿತು ಶಾಸಕ ರಾಜೇಶ್ ನ್ಯಾಕ್ ಮನವಿ ನೀಡಿದರು. ಮತ್ತು ಬಂಟ್ವಾಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ರೈಲ್ವೆ ಇಲಾಖೆಗೆ ಸಂಬಂಧ ಪಟ್ಟಂತೆ ಸಾರ್ವಜನಿಕರ ಅನೇಕ ಬೇಡಿಕೆಗಳಿದ್ದು ಅವುಗಳನ್ನು ಆದ್ಯತೆ ಮೇರೆಗೆ ಕೈಗೊಳ್ಳಬೇಕೆಂದು ಎಂದು ಮನವಿ ಮಾಡಿದರು.



ಒಡ್ಡೂರು ಫಾರ್ಮ್‌ಗೆ ಕೇಂದ್ರ ಸಚಿವ ಸೋಮಣ್ಣ ಭೇಟಿ

ಮನವಿಯಲ್ಲಿ ಏನೇನಿದೆ..?

ಬಂಟ್ವಾಳ ತಾಲೂಕು ಬಿ.ಮೂಡ ಗ್ರಾಮದ ಅಜ್ಜಿಬೆಟ್ಟು ಶಾಲಾ ಬಳಿಯಿಂದ ದೈವಲ ಸಂಪರ್ಕ ರಸ್ತೆಗೆ ಅಜ್ಜಿಬೆಟ್ಟು ಶಾಲಾ ಬಳಿ ರೈಲ್ವೆ ಬ್ರಿಡ್ಜ್ ನಿರ್ಮಾಣ ಮಾಡುವುದು, ಬಿ.ಮೂಡ ಗ್ರಾಮದ ಕುಂಬೋಧರಿ ಮಠ ದೇವಸ್ಥಾನದಿಂದ ಕುಲಾಲ ಭವನದ ಸಂಪರ್ಕ ರಸ್ತೆಗೆ ಕುಂಭೋಧರಿ ದೇವಸ್ಥಾನ ಬಳಿ ಅಂಡರ್ ಪಾಸ್ ರಚನೆ ಮಾಡುವುದು, ಬಿ.ಮೂಡ ಗ್ರಾಮದ ರೈಲ್ವೆ ನಿಲ್ದಾಣ ಬಳಿ ಹಿಂದೂ ರುದ್ರ ಭೂಮಿ ಮತ್ತು ರೈಲ್ವೆ ವಸತಿ ನಿಲಯ ಸಂಪರ್ಕ ರಸ್ತೆ ಅಭಿವೃದ್ಧಿಗೊಳಿಸುವುದು, ಗೋಳ್ತಮಜಲು ಗ್ರಾಮದ ದೇವಸ್ಯ-ಕುದ್ರೆಮಾರ್- ತೋಟ ಭಾಗಕ್ಕೆ ಸಂಪರ್ಕಿಸಲು ದೇವಸ್ಯ ಕುದ್ರೆಮಾರ್ ಎಂಬಲ್ಲಿ ಅಂಡರ್‌ಪಾಸ್ ನಿರ್ಮಿಸುವುದು, ನೆಟ್ಟಮುಡ್ನರು ಗ್ರಾಮದ ನೇರಳಕಟ್ಟೆ ರೈಲ್ವೆ ನಿಲ್ದಾಣದ ಬಳಿ ಫುಟ್ ಬ್ರಿಡ್ಜ್ ನಿರ್ಮಿಸುವುದು, ನೇರಳಕಟ್ಟೆ ರೈಲ್ವೆ ನಿಲ್ದಾಣದಲ್ಲಿ ರೈಲು ನಿಲುಗಡೆ ಅವಕಾಶ ಕಲ್ಪಿಸುವಂತೆ ಮನವಿಯಲ್ಲಿ ಒತ್ತಾಯಿಸಲಾಗಿದೆ.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಪೂಜಾ ಪೈ, ಮೀನುಗಾರಿಕಾ ನಿಗಮದ ಮಾಜಿ ಅಧ್ಯಕ್ಷ ನಿತಿನ್ ಕುಮಾರ್, ಮಾಜಿ ಮೇಯರ್ ಕವಿತಾ ಸನಿಲ್, ಹಾಸನ ಜಿಲ್ಲೆಯ ಮಾಜಿ ಜಿ.ಪಂ.ಸದಸ್ಯ ಅಮಿತ್ ಶೆಟ್ಟಿ, ಬಂಟ್ವಾಳ ಕ್ಷೇತ್ರ ಬಿಜೆಪಿ ಅಧ್ಯಕ್ಷ ಚೆನ್ನಪ್ಪ ಆರ್.ಕೋಟ್ಯಾನ್, ಪ್ರಧಾನ ಕಾರ್ಯದರ್ಶಿ ಶಿವಪ್ರಸಾದ್ ಶೆಟ್ಟಿ, ಜಿಲ್ಲಾ ಕಾರ್ಯದರ್ಶಿ ದಿನೇಶ್ ಅಮ್ಟೂರು, ಸ್ಕ್ಯಾಡ್ಸ್ ಅಧ್ಯಕ್ಷ ರವೀಂದ್ರ ಕಂಬಳಿ, ಜಿಲ್ಲಾ ಉಪಾಧ್ಯಕ್ಷ ದೇವಪ್ಪ ಪೂಜಾರಿ, ಕೆ.ಎಂ.ಎಫ್ ನಿರ್ದೇಶಕ ನಂದರಾಮ ರೈ, ಸೋಹನ ಅಧಿಕಾರಿ,ಬೂಡ ಮಾಜಿ ಅಧ್ಯಕ್ಷ ದೇವದಾಸ್ ಶೆಟ್ಟಿ ಬಂಟ್ವಾಳ, ಸಚಿನ್ ಅಡಪ, ಗ್ರಾ.ಪಂ.ಮಾಜಿ ಸದಸ್ಯ ಗಣೇಶ್ ರೈ ಮಾಣಿ, ಬಿಜೆಪಿ ಬಂಟ್ವಾಳ ಮಾಧ್ಯಮ ಪ್ರಮುಖ್ ಪುರುಷೋತ್ತಮ ಶೆಟ್ಟಿ ವಾಮದಪದವು, ಪ್ರಮುಖರಾದ ಪ್ರಭಾಕರ್ ಶೆಟ್ಟಿ, ಚಂದ್ರಹಾಸ ಶೆಟ್ಟಿ ನಾರ್ಲ, ಪ್ರಣಾಮ್ ರಾಜ್ ಅಜ್ಜಿಬೆಟ್ಟು ಮತ್ತಿತರರು ಉಪಸ್ಥಿತರಿದ್ದರು.

ಜಂಗಮ ಮಠ ಜೀರ್ಣೋದ್ದಾರ ಕಾಮಗಾರಿ ವೀಕ್ಷಣೆ

ಕೈಕಂಬ: ಕೇಂದ್ರ ವಿ. ಸೋಮಣ್ಣ ಶನಿವಾರ ಗುರುಪುರ ಶ್ರೀ ಜಂಗಮ ಮಠಕ್ಕೆ ಭೇಟಿ ನೀಡಿ ಮಠದ ಜೀರ್ಣೋದ್ದಾರ ಕಾಮಗಾರಿಗಳನ್ನು ವೀಕ್ಷಿಸಿದರು.

ಅಂದಾಜು 5 ಕೋ. ರೂ ವೆಚ್ಚದಲ್ಲಿ ನಡೆಯುತ್ತಿರುವ ಜೀರ್ಣೋದ್ದಾರ ಕಾಮಗಾರಿಗಳನ್ನು ಪರಿಶೀಲಿಸಿದ ಬಳಿಕ ಜೀರ್ಣೋದ್ದಾರಕ್ಕೆ ಸಹಕಾರ ನೀಡುವ ಭರವಸೆ ನೀಡಿದರು.

ಗುರುಪುರ ಜಂಗಮ ಸಂಸ್ಥಾನ ಮಠದ ಶ್ರೀ ರುದ್ರಮುನಿ ಸ್ವಾಮೀಜಿ, ಜೀರ್ಣೋದ್ದಾರ ಸಮಿತಿಯ ಪದಾಧಿಕಾರಿಗಳು ಸಚಿವ ಸೋಮಣ್ಣ ಅವರನ್ನು ಸನ್ಮಾನಿಸಿ, ಮನವಿ ನೀಡಿದರು. ಸಾವಿರಕ್ಕೂ ಹೆಚ್ಚು ವರ್ಷಗಳ ಇತಿಹಾಸವುಳ್ಳ ಗುರುಪುರ ಜಂಗಮ ಮಠದ ಅಭಿವೃದ್ಧಿ (ಜೀರ್ಣೋದ್ದಾರ) ಕಾರ್ಯದಲ್ಲಿ ಊರವರು ಕೈಜೋಡಿಸಿದ್ದು, ದೊಡ್ಡ ಮಟ್ಟದ ಆರ್ಥಿಕ ನೆರವಿನ ಅಗತ್ಯವಿದೆ ಎಂದು ಮನವಿಯಲ್ಲಿ ಸಚಿವರಿಗೆ ಮನವರಿಕೆ ಮಾಡಲಾಯಿತು.

ಇದೇ ವೇಳೆ ಸಚಿವರು ಶ್ರೀ ರುದ್ರಮುನಿ ಸ್ವಾಮೀಜಿ ಹಾಗೂ ಶ್ರೀ ರಾಜಶೇಖರಾನಂದ ಶ್ರೀಪಾದಂಗಳ ವರನ್ನು ಸನ್ಮಾನಿಸಿದರು.

ಸನ್ಮಾನಹಾಗೂಮನವಿಸ್ವೀಕರಿಸಿದ ಸಚಿವ ಸೋಮಣ್ಣ, ವೀರಶೈವ



> ಮಠದ ಸ್ವಾಮೀಜಿ ಹಾಗೂ ಜೀರ್ಣೋದ್ದಾರ ಸಮಿತಿ ಕೈಗೊಂಡಿರುವ ಈ ಕಾರ್ಯಕ್ಕೆ ಅಗತ್ಯ ಸಹಕಾರ ನೀಡುವೆ.

ಮಠವೊಂದರ ಅಭಿವೃದ್ಧಿಯಲ್ಲಿ ಊರವರು ಕೈಜೋಡಿಸಿದ್ದಾರೆ ಎಂಬುದು ಸಂತೋಷದ ಸಂಗತಿ. ಈ ಮಠಕ್ಕೆ ಸಾವಿರಾರು ವರ್ಷಗಳ ಇತಿಹಾಸವಿರುವುದು ನನಗೆ ಗೊತ್ತಿದೆ. ಮಠದ ಸ್ವಾಮೀಜಿ ಹಾಗೂ ಜೀರ್ಣೋದ್ದಾರ ಸಮಿತಿ ಕೈಗೊಂಡಿರುವ ಈ ಕಾರ್ಯಕ್ಕೆ ಅಗತ್ಯ ಸಹಕಾರ ನೀಡುವೆ. ಅತಿ ಶೀಘ್ರದಲ್ಲಿ ಜೀರ್ಣೋದ್ದಾರದ ಕೆಲಸ ಪೂರ್ಣಗೊಳ್ಳಲಿದೆ ಎಂದು ಭರವಸೆ ನೀಡಿದರು.

ದಕ್ಷಿಣ-ಕನ್ನಡ ಸಂಸದ ಕ್ಯಾ. ಬ್ರಿಜೇಶ್ ಚೌಟ, ಮಂಗಳೂರು ಉತ್ತರ ಶಾಸಕ ಡಾ. ಭರತ್ ಶೆಟ್ಟಿ, ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಜಂಗಮ ಮಠದ ಶ್ರೀ ರುದ್ರಮುನಿ ಸ್ವಾಮೀಜಿ, ಶ್ರೀ ವಜ್ರದೇಹಿ ಮಠದ ಶ್ರೀ ರಾಜಶೇಖರಾನಂದ ಶ್ರೀಪಾದರು, ಜೀರ್ಣೋದ್ದಾರ ಸಮಿತಿಯ ಅಧ್ಯಕ್ಷ ಸಚಿನ್ ಅಡಪ, ಸಚಿನ್ ಶೆಟ್ಟಿ ಗುರುಪುರ, ಲಕ್ಷ್ಮಣ್ ಶೆಟ್ಟಿಗಾರ ಗುರುಪುರ, ಗೋಕುಲ್ ವಭು ಹಾಗೂ ಇತರ ಪದಾಧಿಕಾರಿಗಳು, ಸುಧೀರ್ ಕಾಮತ್ ಗುರುಪುರ, ಶ್ರೀಕರ ವಿ. ಶೆಟ್ಟಿ ಗುರುಪುರ, ಸತೀಶ್ ಪೂಜಾರಿ ಬಳ್ಳಾಜೆ, ಸತೀಶ್ ಕುಲಾಲ್, ಹರೀಶ್ ಚಾಮಣಿ, ಗುರುಪುರ ಗ್ರಾಪಂ ಮಾಜಿ ಸದಸ್ಯರಾದ ಜಿ. ಎಂ. ಉದಯ ಭಟ್, ರಾಜೇಶ್ ಸುವರ್ಣ, ಸುನಿಲ್ ಪೂಜಾರಿ ಜಲ್ಲಿಗುಡ್ಡೆ ಹಾಗೂ ಮಠದ ಭಕ್ತರು ಇದ್ದರು.

'ಸಾಮಾಜಿಕ ನ್ಯಾಯ ಮತ್ತು ಭದ್ರತೆ' ವಿಷಯದ ಕುರಿತು ವಿಶೇಷ ಉಪನ್ಯಾಸ

ಕುಂದಾಪುರ : ಕುಂದಾಪುರದ ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ಸಮಾನ ಅವಕಾಶ ಘಟಕದ ಆಶ್ರಯದಲ್ಲಿ 'ಸಾಮಾಜಿಕ ನ್ಯಾಯ ಮತ್ತು ಭದ್ರತೆ' ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ ಕಾಲೇಜಿನ ಎ.ವಿ. ಹಾಲಿನಲ್ಲಿ ಗುರುವಾರ ನಡೆಯಿತು.

ಸಂಪನ್ಮೂಲ ವ್ಯಕ್ತಿ ಕುಂದಾಪುರದ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ರಮೇಶ ಕುಲಾಲ್ ಅವರು ಮಾತನಾಡಿ, ವಿದ್ಯಾರ್ಥಿಗಳಿಗೆ ಸಾಮಾಜಿಕ ನ್ಯಾಯ, ಮೂಲಭೂತ ಹಕ್ಕುಗಳು, ವಿದ್ಯಾರ್ಥಿ ವೇತನಗಳು ಹಾಗೂ ಸಮಾಜ ಕಲ್ಯಾಣ ಇಲಾಖೆಯಿಂದ ದೊರೆಯುವ ವಿವಿಧ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು. ಸರ್ಕಾರಿ ಉದ್ಯೋಗಾವಕಾಶಗಳು, ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆ ಹಾಗೂ ವಿದ್ಯಾರ್ಥಿಗಳು ತಮ್ಮ ಹಕ್ಕುಗಳು ಮತ್ತು ಸೌಲಭ್ಯಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಅಗತ್ಯತೆಯ ಕುರಿತು ಮಾಹಿತಿ ನೀಡಿದರು.



ಅಧ್ಯಕ್ಷತೆ ವಹಿಸಿದ ಕಾಲೇಜಿನ ಉಪ ಪ್ರಾಂಶುಪಾಲ ಡಾ.ಚೇತನ ಶೆಟ್ಟಿ ಕೋವಾಡಿ ಮಾತನಾಡಿದರು. ಸಮಾನ ಅವಕಾಶ ಘಟಕದ ಸಂಯೋಜಕ ಮೇಘಾ ಉಪಸ್ಥಿತರಿದ್ದರು.

ಸಮಾನ ಅವಕಾಶ ಘಟಕದ ಸಂಯೋಜಕ ಮಹೇಶ ನಾಯ್ಕ್ ಸ್ವಾಗತಿಸಿ, ಪ್ರಸ್ತಾವಿಸಿದರು. ವಿದ್ಯಾರ್ಥಿಗಳಾದ ಸುಹಾಸ್ ವಿ. ಮಲ್ಯ ಪ್ರಾರ್ಥಿಸಿ, ಮಿಥಿಲೇಶ್ ಅತಿಥಿಗಳನ್ನು ಪರಿಚಯಿಸಿ, ರಕ್ಷಿತ್ ಶೆಟ್ಟಿ ವಂದಿಸಿದರು. ಸಮರ್ಥ ಕಾರ್ಯಕ್ರಮ ನಿರೂಪಿಸಿದರು.

ಆಳ್ವಾಸ್‌ನಲ್ಲಿ ಯೋಗ ಮಹೋತ್ಸವ -2026

ಮೂಡುಬಿದಿರೆ: ಅಂತಾರಾಷ್ಟ್ರೀಯ ಯೋಗ ದಿನಾಚರಣೆ -2026ರ ಪೂರ್ವಭಾವಿಯಾಗಿ, ಆಳ್ವಾಸ್ ಪ್ರಕೃತಿ ಚಿಕಿತ್ಸಾ ಮತ್ತು ಯೋಗ ವಿಜ್ಞಾನ ಮಹಾವಿದ್ಯಾಲಯ ಹಾಗೂ ಭಾರತ ಸರ್ಕಾರದ ಆಯುಷ್ ಸಚಿವಾಲಯದ ಮೊರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಸಂಸ್ಥೆಯ ಸಹಯೋಗದಲ್ಲಿ ಯೋಗ ಮಹೋತ್ಸವ ಕಾರ್ಯಕ್ರಮವನ್ನು ಮಿಜಾರಿನ ಕಾಲೇಜಿನ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಆಳ್ವಾ ಫಾರ್ಮಸಿಯ ವ್ಯವಸ್ಥಾಪಕ ನಿರ್ದೇಶಕಿ ಡಾ. ಗ್ರೀಷ್ಮಾ ವಿವೇಕ್ ಆಳ್ವ, ಯೋಗ ಮಹೋತ್ಸವದಂತಹ ಕಾರ್ಯ ಕ್ರಮಗಳು ಯೋಗದ ಮಹತ್ವ ಮತ್ತು ಅದರ ಮೌಲ್ಯಗಳನ್ನು ಸಮಾಜಕ್ಕೆ ತಲುಪಿಸುವ ಪರಿಣಾಮಕಾರಿ ವೇದಿಕೆ. ಇಂದಿನ ವೇಗದ ಬದುಕಿನಲ್ಲಿ ಯೋಗದ ಅಭ್ಯಾಸ ಮಾನಸಿಕ ನೆಮ್ಮದಿ, ಆತ್ಮವಿಶ್ವಾಸ ಹಾಗೂ ಆರೋಗ್ಯಕರ ಜೀವನ ಶೈಲಿಯನ್ನು ರೂಪಿಸುವಲ್ಲಿ ಸಹಕಾರಿಯಾಗಿದೆ. ಯುವಜನತೆ ಯೋಗವನ್ನು ದೈನಂದಿನ ಜೀವನದ ಭಾಗವನ್ನಾಗಿ ಮಾಡಿಕೊಂಡರೆ ಆರೋಗ್ಯಕರ ಮತ್ತು ಮೌಲ್ಯಾಧಾರಿತ ಸಮಾಜ ನಿರ್ಮಾಣ ಸಾಧ್ಯ ಎಂದರು.



ಉಪನ್ಯಾಸಕ ಡಾ. ಆಕಾಶ್ ಯೋಗದ ಇತಿಹಾಸ, ಅದರ ವಿಕಾಸ, ಆಧುನಿಕ ಜೀವನದಲ್ಲಿ ಯೋಗದ ಅಳವಡಿಕೆ, ವಿವಿಧ ಯೋಗ ವಿಧಾನಗಳ ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದ ಅಂಗವಾಗಿ ನಡೆದ ಸಂಯೋಜಿತ ಯೋಗ ಅಭ್ಯಾಸ ಕ್ರಮದನ್ವಯ (ಕಾಮನ್ ಯೋಗ ಪ್ರೋಟೋಕಾಲ್) ಯೋಗ ಪ್ರದರ್ಶನದಲ್ಲಿ ಉಪನ್ಯಾಸಕರು ಹಾಗೂ ಸಾರ್ವಜನಿಕರು ಸೇರಿದಂತೆ 500ಕ್ಕೂ ಅಧಿಕ ಮಂದಿ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ವಿವಿಧ ಸ್ಪರ್ಧೆಗಳನ್ನೂ ಆಯೋಜಿಸಲಾಗಿತ್ತು. ಭಗವದ್ಗೀತೆ ಶ್ಲೋಕ ಪಠಣದಲ್ಲಿ ಶ್ರೀನಿಧಿ ಭಟ್ ಪ್ರಥಮ ಹಾಗೂ ದೀಪಿಕಾ ಹೆಗ್ಡೆ ದ್ವಿತೀಯ ಬಹುಮಾನ ಪಡೆದರು. ಶೀರ್ಷಾಸನ ಬ್ಯಾಲೆನ್ಸ್ ಚಾಲೆಂಜ್‌ನಲ್ಲಿ ಪ್ರಜ್ವಲ್ ಮತ್ತು ಮುಕ್ತಾ ಪ್ರಥಮ, ಸಾಗರ್ ಹಾಗೂ ಭೂಮಿಕಾ ಟಿ. ದ್ವಿತೀಯ ಸ್ಥಾನ ಗಳಿಸಿದರು. ಫ್ಯೂಷನ್ ಯೋಗ ಡ್ಯಾನ್ಸ್ ಸ್ಪರ್ಧೆಯಲ್ಲಿ ಮುಕ್ತಾ ಮತ್ತು ತಂಡ ಪ್ರಥಮ, ಪ್ರಣವ್ ಮತ್ತು ತಂಡ ದ್ವಿತೀಯ ಬಹುಮಾನ ಪಡೆದುಕೊಂಡರು.

ಕಾಲೇಜಿನ ಪ್ರಾಚಾರ್ಯ ಡಾ . ವನಿತಾ ಶೆಟ್ಟಿ, ಉಪಪ್ರಾಂಶುಪಾಲೆ ಡಾ. ವಿದ್ಯಾರಾಣಿ, ಪ್ರಾಧ್ಯಪಕಿ ಡಾ. ಅರ್ಚನಾ ಇದ್ದರು. ಅನಂತ ಕೃಷ್ಣ ಕಾ ಕಾರ್ಯಕ್ರಮ ನಿರೂಪಿಸಿದರು.

ಅಧ್ಯಯನ ಪ್ರವಾಸ ಏರ್ಪಡಿಸಿದ ಕಾಸರಗೋಡು ಜಿಲ್ಲಾಡಳಿತ

ಕಾಸರಗೋಡು: ಶಾಲಾ ಪ್ರವಾಸಗಳಲ್ಲಿ ಭಾಗ ವಹಿಸಲು ಸಾಧ್ಯವಾಗದ ಪರಿಶಿಷ್ಟ ಪಂಗಡದ ಮಕ್ಕಳ ನೆರವಿಗೆ ಜಿಲ್ಲಾಡಳಿತವು ಮುಂದಾಗಿದೆ. ಅದರಂತೆ ಪರಿಶಿಷ್ಟ ಪಂಗಡ ಅಭಿವೃದ್ಧಿ ಇಲಾಖೆಯಡಿ ಸಮಾಜ ವಿಜ್ಞಾನ ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾದ ಒಂದು ದಿನದ ಅಧ್ಯಯನ ಪ್ರವಾಸ ಕಾಸರಗೋಡಿನಲ್ಲಿ ಜರಗಿತು. ಸಮಾಜ ಅಧ್ಯಯನ ವಿಭಾಗದ ವಿದ್ಯಾರ್ಥಿಗಳನ್ನು ಒಳಗೊಂಡ ಇಂತಹ ಯೋಜನೆಯನ್ನು ರಾಜ್ಯದಲ್ಲಿ ಜಾರಿಗೆ ತರುತ್ತಿರುವುದು ಇದೇ ಮೊದಲು. ಈ ಪ್ರವಾಸವನ್ನು ಪೆರಿಯದಲ್ಲಿ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಉದ್ಘಾಟಿಸಿದರು.

ಕಾಸರಗೋಡು ಬ್ಲಾಕ್ ಅಭಿವೃದ್ಧಿ ಕಚೇರಿಯ ಅಧೀನದಲ್ಲಿರುವ ಅಧ್ಯಯನ ಕೇಂದ್ರಗಳ 193 ಮಂದಿ ವಿದ್ಯಾರ್ಥಿಗಳು ಮೊದಲ ಹಂತದಲ್ಲಿ ಪ್ರಯಾಣ ಬೆಳೆಸಿದರು. ಅವರಿಗೆ ಕಣ್ಣೂರು ವಿಸ್ಮಯ ಮನೋರಂಜನಾ ಉದ್ಯಾನವನ ಮತ್ತು ಪರಶಿನಿಕಡವು ಸ್ನೇಕ್ ಪಾರ್ಕ್‌ಗೆ ಒಂದು ದಿನದ ಪ್ರವಾಸವನ್ನು ಏರ್ಪಡಿಸಲಾಗಿತ್ತು. ವಿದ್ಯಾರ್ಥಿಗಳ ಸುರಕ್ಷತೆಗಾಗಿ ಪರಿಶಿಷ್ಟ ಪಂಗಡ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು ಮತ್ತು ಅಧ್ಯಯನ ಕೊಠಡಿ ಕೇಂದ್ರದ ಶಿಕ್ಷಕರು ಸೇರಿದಂತೆ 15 ಮಂದಿ ಸಿಬ್ಬಂದಿಗಳಿದ್ದರು.



ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರ ವಿಶೇಷ ಸೂಚನೆಯ ಮೇರೆಗೆ ಪರಿಶಿಷ್ಟ ಪಂಗಡ ಅಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ ಈ ಯೋಜನೆಯನ್ನು ಜಾರಿಗೆ ತರಲಾಗಿದೆ. ಪ್ರವಾಸದ ಸಂಪೂರ್ಣ ವೆಚ್ಚವನ್ನು ಪರಿಶಿಷ್ಟ ಪಂಗಡ ಅಭಿವೃದ್ಧಿ ಇಲಾಖೆಯ ಕಾರ್ಪಸ್ ನಿಧಿಯಿಂದ ಭರಿಸಲಾಯಿತು.

ಜಿಲ್ಲೆಯಲ್ಲಿ ಪ್ರಸ್ತುತ 54 ಸಾಮಾಜಿಕ ಅಧ್ಯಯನ ಕೊಠಡಿಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲಿ 20 ಕಾಸರಗೋಡು ಬ್ಲಾಕ್ ಅಭಿವೃದ್ಧಿ ಕಚೇರಿಯ ವ್ಯಾಪ್ತಿಯಲ್ಲಿವೆ. ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳು ಶಾಲೆ ಬಿಡುವುದನ್ನು ತಡೆಗಟ್ಟುವುದು, ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವುದು, ವಿದ್ಯಾರ್ಥಿಗಳು ಉನ್ನತ ದರ್ಜೆಯ ಬೋರ್ಡ್ ಪರೀಕ್ಷೆಗಳಲ್ಲಿ ಯಶಸ್ವಿಯಾಗಲು ಅನುವು ಮಾಡಿಕೊಡುವುದು ಮತ್ತು ವೃತ್ತಿ ಕೌಶಲ್ಯ ತರಬೇತಿಯನ್ನು ನೀಡುವ ಉದ್ದೇಶಗಳೊಂದಿಗೆ ಸಾಮಾಜಿಕ ಅಧ್ಯಯನ ಕೊಠಡಿ ಯೋಜನೆಯನ್ನು ಜಾರಿಗೆ ತರಲಾಗುತ್ತಿದೆ.

ಶಾಲೆಗಳಲ್ಲಿ ಅಧ್ಯಯನ ಪ್ರವಾಸಗಳನ್ನು ಆಯೋಜಿಸಿದಾಗ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಆರ್ಥಿಕ ತೊಂದರೆಗಳಿಂದ ಭಾಗವಹಿಸಲು ಸಾಧ್ಯವಾಗುವುದಿಲ್ಲ. ಈ ಪರಿಸ್ಥಿತಿಯಲ್ಲಿ ಅವರಿಗೆ ಮಾನಸಿಕ ಉತ್ಸಾಹ ಮತ್ತು ಹೊಸ ಅನುಭವಗಳನ್ನು ಒದಗಿಸಲು ಇಂತಹ ವಿಶೇಷ ಪ್ರವಾಸವನ್ನು ಆಯೋಜಿಸಲಾಗಿದೆ ಎಂದು ಕಾಸರಗೋಡು ಬ್ಲಾಕ್ ಅಭಿವೃದ್ಧಿ ಅಧಿಕಾರಿ ಕೆ.ವಿ.ರಾಘವನ್ ತಿಳಿಸಿದ್ದಾರೆ.

ಕೆರೆ ನವೀಕರಣ ಗ್ರಾಮಾಭಿವೃದ್ಧಿ ಮಹತ್ತರವಾದ ಯೋಜನೆ ಶಾಸಕರಿಂದ ಶ್ಲಾಘನೆ

ಒಡಗಿನ ಶ್ರೀ ನಂದಿಕೇಶ್ವರ ದೇವಸ್ಥಾನದ ಕೆರೆ ಹಸ್ತಾಂತರ

ಕೋಟ: ಧರ್ಮಸ್ಥಳ ಡಾ. ವೀರೇಂದ್ರ ಹೆಗ್ಗಡೆಯ ವರ ಮಹತ್ವಾಕಾಂಕ್ಷೆಯ ಕೆರೆ ನವೀಕರಣ ಯೋಜನೆಯ ಮೂಲಕ ಗ್ರಾಮಗಳಲ್ಲಿ ಕುಡಿಯುವ ನೀರಿನ ಭರವನ್ನು ನೀಗಿಸಲಿದೆ ಎಂದು ಕುಂದಾಪುರ ವಿಧಾನಸಭಾ ಕ್ಷೇತ್ರದ ಶಾಸಕ ಕಿರಣ್ ಕುಮಾರ್ ಕೊಡ್ಗಿ ಹೇಳಿದರು.

ಗುರುವಾರ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಬ್ರಹ್ಮಾವರ ತಾಲೂಕು, ಗ್ರಾಮ ಪಂಚಾಯತ್ ಕೋಟ ಹಾಗೂ ಮಣೂರು ಒಡಗಿನ ಶ್ರೀ ನಂದಿಕೇಶ್ವರ ದೇವಸ್ಥಾನ ಕೆರೆ ಅಭಿವೃದ್ಧಿ ಸಮಿತಿ ಇವುಗಳ ಜಂಟಿ ಆಶ್ರಯದಲ್ಲಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಹಾಗೂ ಮಾತೃಶ್ರೀ ಡಾ. ಹೇಮಾವತಿ ವಿ. ಹೆಗ್ಗಡೆಯವರ ಮಾರ್ಗದರ್ಶನದಲ್ಲಿ 'ನಮ್ಮೂರುನಮ್ಮಕೆರೆಕಾರ್ಯಕ್ರಮದಡಿ



ಪುನಶ್ಚೇತನ ಗೊಳಿಸಲಾದ ಮಣೂರು ಒಡಗಿನ ಶ್ರೀ ನಂದಿಕೇಶ್ವರ ದೇವಸ್ಥಾನದ ಕೆರೆಯ ಹಸ್ತಾಂತರ ಕಾರ್ಯಕ್ರಮದಲ್ಲಿ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಸಭಾ ಕಾರ್ಯಕ್ರಮದ ಉದ್ಘಾಟನೆ

ಬಳಿಕ ನಡೆದ ಸಭಾ ಕಾರ್ಯ ಕ್ರಮದಲ್ಲಿ ಶಾಸಕ ಕಿರಣ್ ಕುಮಾರ್ ಕೊಡ್ಗಿ ಅವರು ಕೋಟ ಪಂಚಾಯತ್ ಕಾರ್ಯದರ್ಶಿ ಜಲಜಾಕ್ಷಿ ಅವರಿಗೆ ಕೆರೆ ನಿರ್ವಹಣಾ ಪತ್ರವನ್ನು ಹಸ್ತಾಂತರಿಸಿದರು. ಅಧ್ಯಕ್ಷತೆಯನ್ನು ಮಣೂರು ಒಡಗಿನ ಶ್ರೀ ನಂದಿಕೇಶ್ವರ ಕೆರೆ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಎಮ್. ಜಯರಾಮ್ ಶೆಟ್ಟಿ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಕರ್ನಾಟಕ ಜನ ಜಾಗೃತಿ ವೇದಿಕೆಯ ಸದಸ್ಯರಾದ ಸುಧಾಕರ ಶೆಟ್ಟಿ,ನಂದಿಕೇಶ್ವರ ದೇವಸ್ಥಾ ನದ ಪಾತ್ರಿ ಪ್ರಕಾಶ್ ಶೆಟ್ಟಿ ಹಾಗೂ ಕೆರೆ ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷರಾದ ಸರ್ವೋತ್ತಮ ಹೆಬ್ಬಾರ್,ಶಿಕ್ಷಕ ಶಶಿಧರ,ಕೋಟ ಪಂಚಾಯತ್ ಮಾಜಿ ಅಧ್ಯಕ್ಷ ಅಜಿತ್ ದೇವಾಡಿಗ ,ಒಕ್ಕೂಟದ ಅಧ್ಯಕ್ಷ ದಿನೇಶ್ ಆಚಾರ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ತಾಲೂಕು ಯೋಜನಾಧಿಕಾರಿ ರಮೇಶ್ ಪಿ.ಕೆ. ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕೋಟ ವಲಯದ ಮೇಲ್ವಿಚಾರಕ ನಾಗೇಶ್ ಸ್ವಾಗತಿಸಿದರು. ಕೃಷಿ ಮೇಲ್ವಿಚಾರಕ ರಾಘವೇಂದ್ರ ನಿರೂಪಿಸಿ, ಸೇವಾಪ್ರತಿನಿಧಿ ಶಾಂತಾ ಆಚಾರ್ ವಂದಿಸಿದರು. ಈ ಮೊದಲು ಒಡಗಿನ ನಂದಿಕೇಶ್ವರ ದೇವರಿಗೆ ಪೂಜೆ ಸಲ್ಲಿಸಲಾಯಿತು.

ಶಾಸಕರು ಕೆರೆಯನ್ನು ವೀಕ್ಷಿಸಿ ನಾಮಫಲಕವನ್ನು ಅನಾವರಣ ಗೊಳಿಸಿದರು.

ಕಿರುಸುದ್ದಿ

'ನೆನಪಿನಂಗಳದಲ್ಲಿ ನಾವಡರು, ಧಾರೇಶ್ವರರು' ಸಂಸ್ಮರಣೆ



ಕೋಟ: ಬಡಗುತಿಟ್ಟಿನ ಯಕ್ಷಗಾನದ ದ್ರುವ ತಾರೆಗಳಾದ ಕಾಳಿಂಗ ನಾವಡ ಹಾಗೂ ಸುಬ್ರಹ್ಮಣ್ಯ ಧಾರೇಶ್ವರ ಕಲಿತ ಗುರುಕುಲ ಪದ್ಧತಿಯ ಯಕ್ಷಗಾನ ಕಲಾಕೇಂದ್ರ ಹಂಗಾರಕಟ್ಟೆ ಐರೋಡಿ ಸದಾನಂದ ರಂಗಮಂಟಪ ಗುಂಡ್ಮಿ ಇಲ್ಲಿ ಮೇ 31ರಂದು ಅಪರಾಹ್ನ 3 ಗಂಟೆಗೆ 'ನೆನಪಿನಂಗಳದಲ್ಲಿ ನಾವಡರು, ಧಾರೇಶ್ವರರು' ಎಂಬ ಉಭಯ ಮೇರು ಭಾಗವತರ ಸಂಸ್ಮರಣೆ ಹಾಗೂ ಖ್ಯಾತ ಮದ್ದಲೆಯ ವಾದಕ ಯಕ್ಷಗುರು ಯಕ್ಷಗಾನ ಅಕಾಡಮಿ ಪುರಸ್ಕೃತ ದೇವದಾಸ್ ರಾವ್ ಕೂಡ್ಲಿ ಅವರಿಗೆ ಸನ್ಮಾನ ಜರಗಲಿದೆ.'ಣ್ಯರಾದ ಪ್ರದೀಪ ಕುಮಾರ್ ಕಲ್ಕೂರ್, ಆನಂದ ಸಿ. ಕುಂದರ್, ದಿವಾಕರ ಆಚಾರ್ಯ ಗೇರುಕಟ್ಟೆ, ಜಿ. ಹರಿಕೃಷ್ಣ ರಾವ್, ಕೆ. ತಾರನಾಥ ಹೊಳ್ಳ ಉಪಸ್ಥಿತಿಯಲ್ಲಿ ಈ ಕಾರ್ಯಕ್ರಮ ಜರಗಲಿದ್ದು, ಜಿಲ್ಲಾ ರಾಜ್ಯೋತ್ಸವ ಪುರಸ್ಕೃತ ಚಾರ ಪ್ರದೀಪ ಹೆಬ್ಬಾರ್ ವಿರಚಿತ 'ಉಲೂಪಿ ಕಲ್ಯಾಣ' ಯಕ್ಷಗಾನ ತಾಳಮದ್ದಲೆ, ಹರಿಹಪುರ ಶಿವಶಂಕರ ಭಟ್, ದೇವದಾಸ್ ರಾವ್ ಕೂಡ್ಲಿ, ರಾಮಕೃಷ್ಣ ಮಂದರ್ತಿಯವರ ಗಜಕಟ್ಟಿ ಹಿಮ್ಮೇಳ, ದಿವಾಕರ ಆಚಾರ್ಯ ಗೇರುಕಟ್ಟೆ, ಆನಂದ ಭಟ್ ಕೆಕ್ಕಾರ್, ಡಾ. ಶಿವಕುಮಾರ್ ಅಳಗೋಡು, ಪ್ರದೀಪ ಹೆಬ್ಬಾರ್ ಚಾರ, ಮುಂತಾದ ಹಿರಿಯ ಕಿರಿಯ ಕಲಾವಿದರ ಯಕ್ಷಗಾನ ತಾಳಮದ್ದಳೆ ಕಾರ್ಯಕ್ರಮ ನಡೆಯಲಿದೆ ಎಂದು ಹಂಗಾರಕಟ್ಟೆ ಕಲಾಕೇಂದ್ರ ಕಾರ್ಯದರ್ಶಿ ರಾಜಶೇಖರ ಹೆಬ್ಬಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಸಿನಿ ಗ್ಯಾಲಕ್ಸಿ ಕೋಸ್ಟಲ್ ಫಿಲ್ಮ್ ಅವಾರ್ಡ್ಸ್

ಮಂಗಳೂರು: ಸ್ಯಾಂಡಿಸ್ ಕಂಪನಿ ವತಿಯಿಂದ ಸಿನಿ ಗ್ಯಾಲಕ್ಸಿ ಕೋಸ್ಟಲ್ ಫಿಲ್ಮ್ ಅವಾರ್ಡ್ಸ್ 5ನೇ ಆವೃತ್ತಿ ಮೇ 24 ರಂದು ಮಧ್ಯಾಹ್ನ 3 ಗಂಟೆಗೆ ಮುಲ್ಕಿ ಕೊಲ್ನಾಡ್ ಸುಂದರರಾಮ ಶೆಟ್ಟಿ ಕನ್ವೆನ್ಷನ್ ಸೆಂಟರ್‌ನಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಸಂಗೀತ ನಿರ್ದೇಶಕ ಗುರುಕಿರಣ್, ನಿರ್ದೇಶಕ ತರುಣ್ ಸುಧೀರ್, ನಟಿ ಸೋನಲ್ ಮೊಂತೇರೊ, ನಿರ್ಮಾಪಕಿ ಶಿಲ್ಪಾ ಗಣೇಶ್, ನಟ ತ್ರಿವಿಕ್ರಮ ಹಾಗೂ ತುಳು ಚಿತ್ರರಂಗದ ದಿಗ್ಗಜ ಕಲಾವಿದರು, ನಿರ್ಮಾಪಕರು, ತಂತ್ರಜ್ಞರು, ಹಿರಿಯ ಮತ್ತು ಕಿರಿಯ ನಟ–ನಟಿಯರು ಮತ್ತು ಮತ್ತಿತರ ಗಣ್ಯರು ಭಾಗವಹಿಸಲಿದ್ದಾರೆ. ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್, ಸಂಸದ ಕ್ಯಾ. ಬ್ರಿಜೇಶ್ ಚೌಟ, ಶಾಸಕ ಉಮಾನಾಥ ಎ. ಕೋಟ್ಯಾನ್, ಮೈಂಡ್ ಮೆಕ್ಯಾನಿಸಂ ಸ್ಥಾಪಕ ಶ್ರೀನಾಥ್ ಶೆಟ್ಟಿ, ಅಸ್ತ್ರ ಗ್ರೂಪ್ ಸ್ಥಾಪಕ ಲಂಚುಲಾಲ್ ಕೆ.ಎಸ್., ಮಾಜಿ ಸಚಿವ ಕೃಷ್ಣ ಜೆ. ಪಾಲೇಮಾರ್ ಪಾಲ್ಗೊಳ್ಳುವರು ಎಂದು ಸ್ಯಾಂಡಿಸ್ ಕಂಪನಿಯ ಮಾಲಕ ಸಂದೇಶ್ ರಾಜ್ ಬಂಗೇರ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ತುಳು ಚಿತ್ರರಂಗದ ನಟ ನಟಿಯರಿಂದ, ಮತ್ತು ಸಿಸಿಲಿಂಗ್ ಗಾಯ್ಸ್ ತಂಡದಿಂದ ನೃತ್ಯ, ರಸಮಂಜರಿ ಹಾಗೂ ಕಾಮಿಡಿ ಕಾರ್ಯಕ್ರಮ ನಡೆಯಲಿದೆ. ಶರ್ಮಿಳಾ ಅಮೀನ್ ಮತ್ತು ವಿನೀತ್ ಕುಮಾರ್ ಕಾರ್ಯಕ್ರಮ ನಿರೂಪಣೆ ಮಾಡಲಿದ್ದಾರೆ. ಸಿನಿಮಾರಂಗದಲ್ಲಿ ಸಾಧನೆಗೈದ ಡಾ. ದೇವದಾಸ್ ಕಾಪಿಕಾಡ್, ಸರೋಜಿನಿ ಶೆಟ್ಟಿ ಅವರನ್ನು ಸನ್ಮಾನಿಸಲಾಗುವುದು. 2025ರಲ್ಲಿ ತೆರೆಕಂಡಿರುವ ಒಟ್ಟು 8 ಸಿನಿಮಾಗಳು ಸ್ಪರ್ಧೆಗೆ ಬಂದಿವೆ. ಒಟ್ಟು 30 ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ. ಈ ಕಾರ್ಯಕ್ರಮಕ್ಕೆ ಉಚಿತ ಪ್ರವೇಶ ಇರಲಿದೆ ಎಂದು ವಿವರಿಸಿದರು. ನಿರ್ದೇಶಕ ವಿಜಯ್ ಕುಮಾರ್ ಕೊಡಿಯಾಲ್‌ಬೈಲ್, ಸಚಿನ್ ಉಪ್ಪಿನಂಗಡಿ, ಸಾತ್ವಿಕ್ ಹಾಗೂ ಯಶ್ ರಾಜ್ ಉಪಸ್ಥಿತರಿದ್ದರು.

ಜೂನ್ 1ರಂದು ಶಾಲಾ ತರಗತಿಗಳು ಪುನರಾರಂಭ

ಕಾಸರಗೋಡು: 2026–27ನೇ ಶೈಕ್ಷಣಿಕ ವರ್ಷದ ಶಾಲಾ ತರಗತಿಗಳು ಜೂನ್ 1ರಂದು ಪುನರಾರಂಭಗೊಳ್ಳಲಿವೆ. ಕೇರಳ ರಾಜ್ಯ ಮಟ್ಟದ ಶಾಲಾ ಪ್ರವೇಶೋತ್ಸವವು ತಿರುವನಂತಪುರ ಸರಕಾರಿ ಗರ್ಲ್ಸ್ ಎಚ್ ಎಸ್‌ನಲ್ಲಿ ಜೂನ್ 1ರಂದು ಬೆಳಗ್ಗೆ 9.30ಕ್ಕೆ ಜರಗಲಿದೆ. ಈ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ವಿ.ಡಿ.ಸತೀಶನ್, ಶಿಕ್ಷಣ ಇಲಾಖೆ ಸಚಿವ ಎನ್.ಶಂಸುದ್ದೀನ್ ಸೇರಿದಂತೆ ಹಲವಾರು ಮಂದಿ ಗಣ್ಯರು ಭಾಗವಹಿಸುವರು. ಕಾಸರಗೋಡು ಸಹಿತ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಅದೇ ದಿನ ಶಾಲಾ ಪ್ರವೇಶೋತ್ಸವ ಕಾರ್ಯಕ್ರಮಗಳು ಸಂಭ್ರಮ ಸಡಗರದಿಂದ ನೆರವೇರಲಿವೆ. 1ನೇ ತರಗತಿಗೆ ಪ್ರವೇಶಿಸುವ ಪುಟ್ಟ ಮಕ್ಕಳಿಗೆ ವಿವಿಧ ಉಡುಗೊರೆಗಳನ್ನು ನೀಡಿ ಅವರನ್ನು ಶಾಲೆಗೆ ಆಹ್ವಾನಿಸಲಾಗುವುದು. ಈ ಹಿನ್ನೆಲೆಯಲ್ಲಿ ಅಗತ್ಯದ ಪೂರ್ವಸಿದ್ಧತೆಗಳನ್ನು ಈಗಾಗಲೇ ಆರಂಭಿಸಲಾಗಿದೆ. ಈ ಮಧ್ಯೆ ಶಾಲಾ ತರಗತಿಗಳು ಪುನರಾರಂಭಗೊಳ್ಳುವ ಮೊದಲು ಶಾಲಾ ಕಟ್ಟಡಗಳ ದೃಢತೆಯನ್ನು ಖಾತರಿಪಡಿಸಿದ ಫಿಟ್‌ನೆಸ್ ಸರ್ಟಿಫಿಕೇಟ್ ಪಡೆಯಬೇಕೆಂದು ಎಲ್ಲಾ ಶಾಲೆಗಳಿಗೆ ಶಿಕ್ಷಣ ಸಚಿವರು ಈಗಾಗಲೇ ನಿರ್ದೇಶನ ನೀಡಿದ್ದಾರೆ. ಶಾಲೆಗಳಿಗೆ ಅಗತ್ಯವಿರುವ ಪಠ್ಯಪುಸ್ತಕಗಳನ್ನು ಮೇ 30ರೊಳಗಾಗಿ ಪೂರೈಸುವ ಕ್ರಮಗಳು ನಡೆಯುತ್ತಿವೆ.



ಶ್ರೀ ಜಗದ್ಗುರು ಆನೆಗುಂದಿ ಮಹಾಸಂಸ್ಥಾನ ಸರಸ್ವತೀ ಪೀಠಾಧೀಶ್ವರ ಶ್ರೀ ಅನಂತವಿಭೂಷಿತ ಕಾಳಹಸ್ತೇಂದ್ರ ಸರಸ್ವತೀ ಮಹಾಸ್ವಾಮಿಗಳ ಪಟ್ಟಾಭಿಷೇಕ ಮಹೋತ್ಸವ ಹಾಗೂ 16ನೇ ವರ್ಷದ ವರ್ಧಂತ್ಯುತ್ಸವದ ಅಂಗವಾಗಿ ಪಡುಕುತ್ಯಾರು ಶ್ರೀಮತ್ ಜಗದ್ಗುರು ಆನೆಗುಂದಿ ಮಹಾಸಂಸ್ಥಾನದಲ್ಲಿ ಜರಗಿದ ಕಾರ್ಯಕ್ರಮದಲ್ಲಿ ಖ್ಯಾತ ಜ್ಯೋತಿಷ್ಯ ವಿದ್ವಾಂಸರಾದ ಸಿ.ವಿ.ಪೊದುವಾಳ್ ಅವರನ್ನು ಸ್ವಾಮೀಜಿಯವರು ಆನೆಗುಂದಿಶ್ರೀ ಪ್ರಶಸ್ತಿ ನೀಡಿ ಅನುಗ್ರಹಿಸಿದರು.

ಪುತ್ತೂರಿನ ವೈದ್ಯರ ಮನೆಯಲ್ಲಿ ಎರಡು ಬಾರಿ ಕಳ್ಳತನ : ಓರ್ವ ಆರೋಪಿ ಬಂಧನ

ಪುತ್ತೂರು: ನಗರದ ವೈದ್ಯರೊಬ್ಬರ ಮನೆಯಿಂದ ಕಳ್ಳತನ ಮಾಡಿದ ಆರೋಪಿಯನ್ನು ಪುತ್ತೂರು ನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಬಪ್ಪಳಿಗೆ ಸಿಂಗಾಣಿ ನಿವಾಸಿ ಸುರೇಶ್ (47) ಬಂಧಿತ ಆರೋಪಿ.

ಮೈಸೂರಿನಲ್ಲಿ ಕ್ಲಿನಿಕ್ ಹೊಂದಿರುವ ಡಾ. ವೆಂಕಟರಮಣ ಭಟ್ ಅವರ ಪುತ್ತೂರು ಉರ್ಲಾಂಡಿ ಕಸಬಾ ಗ್ರಾಮದ ಸುಶ್ರುತ ಆಸ್ಪತ್ರೆಯ ಬಳಿಯಲ್ಲಿರುವ ಮನೆಯ ಹೆಂಚು ತೆಗೆದು ಒಳ ನುಗ್ಗಿ ನಗದು ಕಳ್ಳತನ ನಡೆಸಿದ ಆರೋಪಿಯನ್ನು ಸಿಸಿ ಕ್ಯಾಮರಾ ಪರಿಶೀಲಿಸಿದ ಆಧಾರದಲ್ಲಿ ಬಂಧಿಸಿದ್ದಾರೆ.

ವೈದ್ಯರ ಮನೆಯಲ್ಲಿ 2025ರ ಡಿಸೆಂಬರ್ ತಿಂಗಳಲ್ಲಿ ನಗದು ಮತ್ತು ಬೆಳ್ಳಿಯ ಮೂರ್ತಿ ಕಳವಾಗಿತ್ತು. ಇದೀಗ 2026ರ ಏಪ್ರಿಲ್ ತಿಂಗಳಲ್ಲಿ ಮತ್ತೊಮ್ಮೆ ನಗದು ಕಳವಾಗಿತ್ತು. ಡಾ. ವೆಂಕಟರಮಣ ಭಟ್ ಅವರು ಒಬ್ಬರೇ ಮನೆಯಲ್ಲಿ ವಾಸವಾಗಿದ್ದು, ಅವರು ವೃತ್ತಿಗಾಗಿ ಮೈಸೂರಿಗೆ ಹೋಗಿ ಬರುತ್ತಿದ್ದರು. ಈ ವೇಳೆ ಅವರ ಸಂಬಂಧಿಕರಾದ ಪಾಣಾಜೆ ಗ್ರಾಮದ ಗಿಳಿಯಾಲು ಬಿ.ಕೆ. ಅವಿನಾಶ್ ಅವರು ಮನೆಯನ್ನು ನೋಡಿಕೊಳ್ಳುತ್ತಿದ್ದರು.

ಏ.4ರಂದು ಬೆಳಗ್ಗೆ ಡಾ. ವೆಂಕಟರಮಣ ಭಟ್ ಅವರು ಮೈಸೂರಿಗೆ ಹೋಗಿದ್ದರು. ಈ ಬಗ್ಗೆ ಅವರು ಸಂಬಂಧಿಕ ಅವಿನಾಶ್ ಅವರಿಗೆ ತಿಳಿಸಿದ್ದರು. ಮೇ 19ರಂದು ಡಾ.ವೆಂಕಟರಮಣ ಭಟ್ ಅವರು ತನ್ನ ಮನೆಗೆ ಬಂದಾಗ ಅವರು ಮಲಗುವ ಹಾಸಿಗೆಯ ತಲೆ ದಿಂಬಿನ ಅಡಿಯಲ್ಲಿ ಇಟ್ಟಿದ್ದ 45 ಸಾವಿರ ಕಳವು ಆಗಿರುವುದು ಕಂಡು ಬಂದಿದೆ. ಈ ವಿಚಾರವನ್ನು ಅವರು ಅವಿನಾಶ್‌ಗೆ ಕರೆ ಮಾಡಿ ತಿಳಿಸಿದ್ದರು. ಅವಿನಾಶ್ ಅವರು ಮನೆಗೆ ಹೋಗಿ ನೋಡಿದಾಗ ಡಾ. ವೆಂಕಟರಮಣ ಭಟ್ ಅವರ ಮನೆಯ ಹೆಂಚು ತೆಗೆದು ಮನೆಯ ಒಳಗಡೆ ಪ್ರವೇಶಿಸಿ ಹಣವನ್ನು ಕಳ್ಳತನ ಮಾಡಿರುವುದು ಬೆಳಕಿಗೆ ಬಂದಿದೆ.

ಘಟನೆ ಕುರಿತು ಅವಿನಾಶ್ ಅವರು ನೀಡಿದ ದೂರಿನಂತೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ್ದರು. ಎರಡು ಬಾರಿ ಕಳ್ಳತನದ ಪೈಕಿ ಒಂದು ಬಾರಿ ಕಳ್ಳತನ ಪ್ರಕರಣದ ಆರೋಪಿಯಾಗಿ ಸುರೇಶ್ ಬಂಧಿತನಾಗಿದ್ದು, ನ್ಯಾಯಾಲಯ ಆರೋಪಿಗೆ ನ್ಯಾಯಾಂಗ ಬಂಧನ ವಿಧಿಸಿದೆ.

ಸಹ್ಯಾದ್ರಿ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜಿನಲ್ಲಿ ಸಮಗ್ರ ಕೈಗಾರಿಕಾ ಕಾರ್ಯಕ್ಷೇತ್ರ ಉದ್ಘಾಟನೆ

ಉದ್ಯೋಗ ಪಡೆಯಲು ಕೌಶಲ್ಯ ಅಗತ್ಯ

ಮಂಗಳೂರು: ಅಡ್ಯಾರ್‌ನ ಸಹ್ಯಾದ್ರಿ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜಿನಲ್ಲಿಶನಿವಾರಕೃತಕಬುದ್ಧಿಮತ್ತೆ, ಫಿನ್‌ಟೆಕ್, ಲಾಜಿಸ್ಟಿಕ್ಸ್, ಆರೋಗ್ಯ ರಕ್ಷಣ, ತಂತ್ರಜ್ಞಾನ, ಡೇಟಾ ಸಾಯನ್ಸ್ ಮತ್ತು ಡಿಜಿಟಲ್ ರೂಪಾಂತರದಂತಹ ಉದಯೋನ್ಮುಖ ವಲಯಗಳ ಪ್ರಮುಖ ಕಂಪನಿಗಳ ಸಹಯೋಗದೊಂದಿಗೆ ಅಭಿವೃದ್ಧಿಪಡಿಸಲಾದ ಸಮಗ್ರ ಕೈಗಾರಿಕಾ ಕಾರ್ಯಕ್ಷೇತ್ರ ಉದ್ಘಾಟನೆಗೊಂಡಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿದ್ದ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿ ಸಚಿವ ಡಾ. ಶರಣಪ್ರಕಾಶ್ ಆರ್. ಪಾಟೀಲ್ ಮಾತನಾಡಿ, ದೇಶದಲ್ಲಿ ನಿರುದ್ಯೋಗ ಸಮಸ್ಯೆ ಬಹುದೊಡ್ಡ ಸಮಸ್ಯೆಯಾಗಿ ಕಾಡುತ್ತಿದ್ದು, ಉದ್ಯೋಗ ಪಡೆಯಲು ಪದವಿ ಜತೆಗೆ ಕೌಶಲ್ಯ ಇಂದಿನ ದಿನಗಳಲ್ಲಿ ಅತೀ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜಿನ ಸಮಗ್ರ ಕೈಗಾರಿಕಾ ಕಾರ್ಯಕ್ಷೇತ್ರ ದಿಟ್ಟ ಹೆಜ್ಜೆ ಎಂದು ಹೇಳಿದರು.

ನಿರುದ್ಯೋಗ ಸಮಸ್ಯೆ ನೀಗಲು ಕೌಶಲ್ಯಾಭಿವೃದ್ಧಿ ಅಗತ್ಯ

ಅಪಾರ ಸಂಖ್ಯೆಯ ಪ್ರತಿಭೆಗಳು ಪ್ರತಿ ವರ್ಷ ಕಾಲೇಜುಗಳಿಂದ ಪದವಿಯೊಂದಿಗೆ ಹೊರಬರುತ್ತವೆಯಾದರೂ, ಅವರಿಗೆ ಅಗತ್ಯವಾದ ಉದ್ಯಮ ಕೌಶಲ್ಯದ ಕೊರತೆ ಇದೆ. ಅದರಲ್ಲೂ ಮುಖ್ಯವಾಗಿ ಇಂಜಿನಿಯರ್ ಕಾಲೇಜುಗಳ ಪದವೀಧರರಲ್ಲಿ ಈ ಕೌಶಲ್ಯದ ಕೊರತೆ ಬಹಳಷ್ಟಿದೆ. ಈ ನಿಟ್ಟಿನಲ್ಲಿ ಸರಕಾರವು ಕೌಶಲ್ಯ ಸಮಿತಿಯನ್ನು ರಚಿಸಿದ್ದು, ಈ ಸಮಿತಿಯು ಮುಂದಿನ ಐದು ವರ್ಷಗಳಲ್ಲಿ ಅಗತ್ಯವಿರುವ ಕೌಶಲ್ಯಗಳ ಬಗ್ಗೆ ಸಲಹೆ ನೀಡಿದೆ. ಇದರ ಜತೆಯಲ್ಲೇ ಈ ಉದ್ಯಮ ಸಿದ್ಧ ಉದ್ಯೋಗಿಗಳ ಸೃಷ್ಟಿಗೆ ಪೂರಕವಾಗಿ ಪಠ್ಯಕ್ರಮವನ್ನು ಪುನರ್‌ರಚಿಸುವಂತೆ ಎಐಸಿಟಿಗೆ ನಾನು, ಉನ್ನತ ಶಿಕ್ಷಣ ಸಚಿವ ಸುಧಾಕರ್ ಹಾಗೂ ಐಟಿ ಬಿಟಿ ಸಚಿವ ಪ್ರಿಯಾಂಕ ಖರ್ಗೆಯವರು ಸಲಹೆ ನೀಡಿದ್ದೇವೆ ಎಂದರು.

ಈ ನಡುವೆ ಮಂಜುನಾಥ ಭಂಡಾರಿಯವರು ತಮ್ಮ ಕಾಲೇಜಿನಲ್ಲಿ ಸಮಗ್ರ ಕೈಗಾರಿಕಾ ಕಾರ್ಯಕ್ಷೇತ್ರವನ್ನು ಆರಂಭಿಸುವ ಮೂಲಕ ದಿಟ್ಟ ಹೆಜ್ಜೆ ಇರಿಸಿದ್ದಾರೆ. ಹೊಸತನಕ್ಕೆ ಒತ್ತು ನೀಡುವ ನಿಟ್ಟಿನಲ್ಲಿ ಕಾಲೇಜಿನಲ್ಲಿ ಅವರು ನಡೆಸುತ್ತಿರುವ ಕ್ರಮಗಳು ಅಭಿನಂದನೀಯ ಎಂದು ಸಚಿವ ಡಾ. ಶರಣಪ್ರಕಾಶ್ ಹೇಳಿದರು.

ಕಾರ್ಯಕ್ಷೇತ್ರ ಉದ್ಘಾಟಿಸಿದ ಆಲ್ ಕಾರ್ಗೋ ಲಾಜಿಸ್ಟಿಕ್ಸ್‌ನ ಸಂಸ್ಥಾಪಕ ಮತ್ತು ಅಧ್ಯಕ್ಷ ಶಶಿ ಕಿರಣ್ ಶೆಟ್ಟಿ ಮಾತನಾಡಿ, ಉದ್ಯಮ ಕ್ಷೇತ್ರವಿಂದು ಸಾಕಷ್ಟು ರೀತಿಯ ಒತ್ತಡ, ಸವಾಲುಗಳಿಗೆ ಸಿಲುಕಿದೆ. ಎಐ ಕೂಡಾ ಉದ್ಯಮ ಕ್ಷೇತ್ರಕ್ಕೆ ಆತಂಕವನ್ನು ಹಬ್ಬಿಸಿದ್ದು, ಮಾನವೀಯತೆಯ ಮೂಲಕ ಈ ಅಡ್ಡಿ ಆತಂಕಗಳನ್ನು ಮೆಟ್ಟಿ ನಿಲ್ಲಬೇಕಾಗಿದೆ ಎಂದರು.

ಮುಖ್ಯ ಅತಿಥಿಗಳಾಗಿ ಮುಂಬೈನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಡಸ್ಟ್ರಿಯಲ್ ಇಂಜಿನಿಯರಿಂಗ್‌ನ ಪ್ರೊ. ವಿವೇಕಾನಂದ ಕಾನಾಪುರಿ, ಆಲ್‌ಕಾರ್ಗೋ ಲಾಜಿಸ್ಟಿಕ್ಸ್‌ನ ಪ್ರಮುಖ ಅಧಿಕಾರಿ ಇಂದ್ರಾಣಿ ಚಾಟರ್ಜಿ, ಡೀನ್ ಪ್ರೊ. ಬಾಲಕೃಷ್ಣ, ಸಹ್ಯಾದ್ರಿ ಕಾಲೇಜಿನ ಪ್ರಾಂಶುಪಾಲ ಎಸ್.ಎಸ್. ಇಂಜಗನೇರಿ ಉಪಸ್ಥಿತರಿದ್ದರು.

ಸಭಾ ಕಾರ್ಯಕ್ರಮಕ್ಕೂ ಮೊದಲು ಸಮಗ್ರ ಕೈಗಾರಿಕಾ ಕಾರ್ಯಕ್ಷೇತ್ರದ ಫಲಕ ಅನಾವರಣಗೊಳಿಸಲಾಯಿತು. ಬಳಿಕ ಡಿಸ್ಕವರ್ ಡಾಲರ್ ಸಿಇಒ ಸುಬ್ರಹ್ಮಣ್ಯ ರಾವ್, ಜಿಂಥೋರಾ ಎಐನ ಮುಖ್ಯಸ್ಥ ಅಕ್ಷಯ್ ಶೆಟ್ಟಿ, ಡಾಟಾವೆಕ್ಸ್ ಎಐನ ಸಿಇಒ ರಾಜೇಶ್ ಕೋಟ್ಯಾನ್, ಎಂಆರ್ ರೆಸಲ್ಟ್ ಟೆಕ್ನಾಲಜೀಸ್ ಪ್ರೈ. ಲಿ.ನ ಉಪಾಧ್ಯಕ್ಷೆ ಪದ್ಮಶ್ರೀ ಆಳ್ವ, ಶ್ರೇಯಸ್ ಕೋಟ್ಯಾನ್ ಅವರು ತಮ್ಮ ಸಂಸ್ಥೆಗಳ ನಾವೀನ್ಯತೆಗಳ ಕುರಿತು ಮಾಹಿತಿ ನೀಡಿದರು.

ಪ್ರಾಧ್ಯಾಪಕಿ ಅಕ್ಷತಾ ಪಿ. ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿ ವಂದಿಸಿದರು.



ಸಹ್ಯಾದ್ರಿ ಕಾಲೇಜಿನಲ್ಲಿ ಸಚಿವ ಡಾ. ಶರಣ ಪ್ರಕಾಶ್ ಅವರಿಂದ ಸಮಗ್ರ ಕೈಗಾರಿಕಾ ಕಾರ್ಯಕ್ಷೇತ್ರ ಉದ್ಘಾಟನೆ

ಇನ್ನಷ್ಟು ಅನುಕೂಲ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಹ್ಯಾದ್ರಿ ಸಮೂಹ ಸಂಸ್ಥೆಗಳ ಅಧ್ಯಕ್ಷ ಡಾ. ಮಂಜುನಾಥ ಭಂಡಾರಿ ಮಾತನಾಡಿ, ಶೈಕ್ಷಣಿಕ ಹಾಗೂ ಉದ್ಯಮ ಸಂಸ್ಥೆಗಳ ನಡುವಿನ ಅಂತರವನ್ನು ತುಂಬಿಸುವ ನಿಟ್ಟಿನಲ್ಲಿ, ಪದವಿ ಜತೆ ವಿದ್ಯಾರ್ಥಿಗಳಿಗೆ ಕೈಗಾರಿಕಾ ಕೌಶಲ್ಯವನ್ನು ಒದಗಿಸುವ ನಿಟ್ಟಿನಲ್ಲಿ ಈ ಕಾರ್ಯಕ್ಷೇತ್ರವನ್ನು ಕಾಲೇಜಿನಲ್ಲಿ ಆರಂಭಿಸಲಾಗಿದೆ. ಮೆಡಿಕಲ್ ಕಾಲೇಜುಗಳಂತೆ ಇಂಜಿನಿಯರಿಂಗ್ ಕಾಲೇಜುಗಳಲ್ಲಿಯೂ ಕೌಶಲ್ಯ ಪ್ರಯೋಗಾಲಯಗಳನ್ನು ಕಡ್ಡಾಯಗೊಳಿಸಬೇಕಾಗಿದೆ. ಈ ಮೂಲಕ ಉದ್ಯಮ ಕ್ಷೇತ್ರಕ್ಕೆ ಸಿದ್ಧ ಉದ್ಯೋಗಿಗಳನ್ನು, ಉದ್ಯೋಗದಾತರನ್ನು ಒದಗಿಸಲು ಸಾಧ್ಯವಾಗಲಿದೆ ಎಂದು ಹೇಳಿದರು.

ಉದ್ದಿನಹಿತ್ಲು ಬಳಿ ಬಾವಿ ಮಣ್ಣು ಕುಸಿತದ ದುರಂತ 7 ಗಂಟೆ ಕಾರ್ಯಾಚರಣೆ ಬಳಿಕ ಶವ ಪತ್ತೆ

ಉಡುಪಿ: ಮಲ್ಪೆ ಕೊಡವೂರು ಸಮೀಪದ ಉದ್ದಿನಹಿತ್ಲು ಎಂಬಲ್ಲಿ ಶುಕ್ರವಾರ ಸಂಜೆ ನಿರ್ಮಾಣ ಹಂತದ ಬಾವಿಯ ಮಣ್ಣು ಕುಸಿದು ಒಳಗಡೆ ಸಿಲುಕಿದ್ದ ಕೊಪ್ಪಳ ಮೂಲದ ಕಾರ್ಮಿಕ ರಮೇಶ್ (25) ಅವರ ಮೃತದೇಹ ಸತತ ಏಳು ಗಂಟೆಗಳ ಜಂಟಿ ಕಾರ್ಯಾಚರಣೆಯ ಬಳಿಕ ಮಧ್ಯರಾತ್ರಿ ಪತ್ತೆಯಾಗಿದೆ.

ಮಧ್ವನಗರದ ಚೇತನ್ ಎಂಬವರ ಜಾಗದಲ್ಲಿ ಹೊಸ ಬಾವಿ ನಿರ್ಮಾಣಕ್ಕಾಗಿ ಗುತ್ತಿಗೆದಾರ ಪ್ರಭಾತ್ ಶೆಟ್ಟಿ ಅವರು ಕೊಪ್ಪಳದ ಐದು ಜನ ಕಾರ್ಮಿಕರನ್ನು ಕರೆತಂದಿದ್ದರು. ಮೇ 22ರ ಸಂಜೆ ಕೆಲಸ ಮುಗಿಸುವ ವೇಳೆ ರಮೇಶ್ ಬಾವಿಯೊಳಗೆ ಮಣ್ಣು ತೆಗೆಯುತ್ತಿದ್ದಾಗ, ಮೇಲ್ಭಾಗದ ದಂಡೆಯ ಮಣ್ಣು ಒಮ್ಮೆಲೇ ಕುಸಿದು ಬಿದ್ದಿದೆ. ಈ ವೇಳೆ ಬಾವಿಯಲ್ಲಿದ್ದ ಇನ್ನೋರ್ವ ಕಾರ್ಮಿಕ ತಕ್ಷಣ ಮೇಲೆ ಬಂದು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಸುಮಾರು ಐದು ಅಡಿ ಆಳದಲ್ಲಿ ಸಿಲುಕಿದ್ದ ರಮೇಶ್ ರಕ್ಷಣೆಗಾಗಿ ಮಲ್ಪೆ ಪೊಲೀಸರು ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು. ಆದರೆ, ಪದೇ ಪದೇ ಮಣ್ಣು ಕುಸಿಯುತ್ತಿದ್ದರಿಂದ ಶೋಧ ಕಾರ್ಯಕ್ಕೆ ತೀವ್ರ ಅಡ್ಡಿಯಾಯಿತು. ಅಂತಿಮವಾಗಿ ಮಧ್ಯರಾತ್ರಿ ವೇಳೆ ಮೃತದೇಹವನ್ನುಹೊರತೆಗೆಯಲಾಗಿದ್ದು, ಮಲ್ಪೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಮೇ 26: ಮಾತಮಂಗಲಂನಲ್ಲಿ ಕ್ಯಾಂಪ್ಕೋ ಶಾಖೆ ಉದ್ಘಾಟನೆ

ಕಾಸರಗೋಡು: ಕಣ್ಣೂರು ಜಿಲ್ಲೆಯ ಪಯ್ಯನ್ನೂರು ತಾಲೂಕು ಮಾತಮಂಗಲಂ ಎಂಬಲ್ಲಿ ಪ್ರತಿಷ್ಠಿತ ಕ್ಯಾಂಪ್ಕೋ ನಿಯಮಿತ ಸಂಸ್ಥೆಯ ಶಾಖೆಯು ಮೇ26ರಂದು ಬೆಳಗ್ಗೆ 10.30ಕ್ಕೆ ಉದ್ಘಾಟನೆಯಾಗಲಿದೆ. ಹಿರಿಯ ಕೃಷಿಕ ಸದಸ್ಯರು ದೀಪಪ್ರಜ್ವಲನೆಗೊಳಿಸಿ ಚಾಲನೆ ನೀಡುವರು. ಪಯ್ಯನ್ನೂರು ವಿಧಾನಸಭಾಕ್ಷೇತ್ರದಶಾಸಕಪಿ.ಕುಂಞಿಕೃಷ್ಣನ್ ಉದ್ಘಾಟಿಸುವರು. ಕ್ಯಾಂಪ್ಕೋ ಅಧ್ಯಕ್ಷ ಎಸ್.ಆರ್.ಸತೀಶ್ಚಂದ್ರ ಅಧ್ಯಕ್ಷತೆ ವಹಿಸಲಿದ್ದಾರೆ. ವ್ಯವಸ್ಥಾಪಕ ನಿರ್ದೇಶಕ ಡಾ.ಬಿ.ವಿ.ಸತ್ಯನಾರಾಯಣ, ಎರಮಂ ಕುಟ್ಟೂರು ಗ್ರಾಮ ಪಂಚಾಯತ್ ಅಧ್ಯಕ್ಷೆ ಪ್ರೀತ ಕೆ., ವಾರ್ಡ್ ಸದಸ್ಯೆ ಬಿಂದು ಪಿ.ವಿ. ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿರುವರು. ಸಂಸ್ಥೆಯ ನಿರ್ದೇಶಕ ರಾಧಾಕೃಷ್ಣನ್ ಕರಿಂಜಾಲ್, ಉಪಾಧ್ಯಕ್ಷ ಪದ್ಮರಾಜ ಪಟ್ಟಾಜೆ ಮುಂತಾದವರು ಪಾಲ್ಗೊಳ್ಳುವರು.

ರೈಲ್ವೆ ಸಮಸ್ಯೆಗಳ ಬಗ್ಗೆ ಕೇಂದ್ರ ಸಚಿವರಿಗೆ ಜೆಡಿಎಸ್ ಮನವಿ

ಅಗತ್ಯ ಕ್ರಮ ಕೈಗೊಳ್ಳುವ ಭರವಸೆ

ಮಂಗಳೂರು: ಜನತಾದಳ (ಜಾತ್ಯತೀತ) ಪಕ್ಷದ ದಕ್ಷಿಣ ಕನ್ನಡ ಜಿಲ್ಲಾ ಯುವ ಘಟಕದ ಜಿಲ್ಲಾಧ್ಯಕ್ಷ ಅಕ್ಷಿತ್ ಸುವರ್ಣ ನೇತೃತ್ವದ ನಿಯೋಗವು ಶನಿವಾರ ಮಂಗಳೂರಿನಲ್ಲಿ ಕೇಂದ್ರ ರೈಲ್ವೆ ಹಾಗೂ ಜಲಶಕ್ತಿ ರಾಜ್ಯ ಸಚಿವ ವಿ. ಸೋಮಣ್ಣ ಅವರನ್ನು ಭೇಟಿ ಮಾಡಿ, ಮಂಗಳೂರು ಮತ್ತು ಕರಾವಳಿ ಕರ್ನಾಟಕ ಭಾಗದ ಬಹುಕಾಲದ ಪ್ರಮುಖ ರೈಲ್ವೆ ಸಮಸ್ಯೆಗಳ ಕುರಿತು ಸಮಗ್ರ ಮನವಿಪತ್ರ ಸಲ್ಲಿಸಿತು.

ಕರಾವಳಿ ಭಾಗದ ಜನರ ಬಹುಕಾಲದ ಬೇಡಿಕೆಯಾದ ಪ್ರತ್ಯೇಕ 'ಮಂಗಳೂರು ರೈಲ್ವೆ ವಿಭಾಗ' ರಚನೆಗೆ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿತು. ಪ್ರಸ್ತುತ ಮಂಗಳೂರು ಪಾಲಕ್ಕಾಡ್ ರೈಲ್ವೆ ವಿಭಾಗದ ಅಧೀನದಲ್ಲಿರುವುದರಿಂದ ಆಡಳಿತಾತ್ಮಕ ವಿಳಂಬಗಳು ಉಂಟಾಗುತ್ತಿದ್ದು, ಕರಾವಳಿ ಭಾಗದ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ಹಾಗೂ ಪ್ರಯಾಣಿಕರ ಅಗತ್ಯತೆಗಳಿಗೆ ಸಮರ್ಪಕ ಆದ್ಯತೆ ಸಿಗುತ್ತಿಲ್ಲ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಮಂಗಳೂರಿನ ಪಾಂಡೇಶ್ವರ ರೈಲ್ವೆ ಲೆವೆಲ್ ಕ್ರಾಸಿಂಗ್‌ನಿಂದ ಉಂಟಾಗುತ್ತಿರುವ ಭಾರೀ ಟ್ರಾಫಿಕ್ ದಟ್ಟಣೆ ಸಮಸ್ಯೆಯನ್ನು ಸಚಿವರ ಗಮನಕ್ಕೆ ತರಲಾಯಿತು. ಈ ಸಮಸ್ಯೆಗೆ ಶಾಶ್ವತ ಪರಿಹಾರವಾಗಿ ಮೇಲ್ಸೇತುವೆ ಅಥವಾ ಅಂಡರ್‌ಪಾಸ್ ನಿರ್ಮಾಣಕ್ಕೆ ತಕ್ಷಣ ಅನುಮೋದನೆ ನೀಡುವಂತೆ ಮನವಿ ಮಾಡಲಾಯಿತು.

ಬೆಂಗಳೂರು– ಮಂಗಳೂರು ರೈಲ್ವೆ ಸಂಪರ್ಕದ ಸುಧಾರಣೆಯ ಅಗತ್ಯತೆಯನ್ನೂ ನಿಯೋಗ ಒತ್ತಿ ಹೇಳಿತು.

ಬೆಂಗಳೂರು ಮತ್ತು ಮಂಗಳೂರು ನಡುವೆ ಇನ್ನಷ್ಟು ನೇರ, ವೇಗದ ಹಾಗೂ ಪ್ರಯಾಣಿಕ ಸ್ನೇಹಿ ಸಮಯದ ರೈಲು ಸೇವೆಗಳನ್ನು ಆರಂಭಿಸುವಂತೆ ಕೂಡ ಸಚಿವರಿಗೆ ಮನವಿ ಸಲ್ಲಿಸಲಾಯಿತು. ಇತ್ತೀಚೆಗೆ ಆರಂಭವಾದ ಕೆಲವು ವೇಗದ ರೈಲುಸೇವೆಗಳುಮಂಗಳೂರಿಗೆಸಮರ್ಪಕವಾಗಿ ಸಂಪರ್ಕ ಕಲ್ಪಿಸದಿರುವುದು ಕರಾವಳಿ ಭಾಗದ ಜನರಲ್ಲಿ ನಿರಾಸೆ ಮೂಡಿಸಿದೆ ಎಂದು ನಿಯೋಗ ತಿಳಿಸಿತು.

ಮನವಿಯನ್ನು ಸ್ವೀಕರಿಸಿದ ಸಚಿವ ವಿ. ಸೋಮಣ್ಣ ಅವರು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳುವ ಭರವಸೆ ನೀಡಿದರು. ಸಂಸದ ಕ್ಯಾ.ಬ್ರಿಜೇಶ್ ಚೌಟ ಉಪಸ್ಥಿತರಿದ್ದರು.

ನಿಯೋಗದಲ್ಲಿ ರಾಜ್ಯ ಮೀನುಗಾರ ಘಟಕ ಅಧ್ಯಕ್ಷ ರತ್ನಾಕರ್ ಸುವರ್ಣ, ಜಿಲ್ಲಾ ಕಾರ್ಯಧ್ಯಕ್ಷ ವಸಂತ್ ಪೂಜಾರಿ, ಇಕ್ಬಾಲ್ ಅಹಮದ್ ಮುಲ್ಕಿ, ಜಿಲ್ಲಾ ಮಹಾ ಪ್ರಧಾನ ಕಾರ್ಯದರ್ಶಿ ಯೋಗಿಶ್ ಶೆಟ್ಟಿ ಜಪ್ಪು, ಸೇವಾ ದಳ ಮಾಜಿ ಅಧ್ಯಕ್ಷ ನಜೀರ್ ಸಾಮಾನಿಗೆ, ಯುವ ಘಟಕ ಪ್ರಧಾನ ಕಾರ್ಯದರ್ಶಿ ಹಿತೇಶ್ ರೈ , ಯುವ ಮುಖಂಡ ಸುಷಂತ್ , ಪ್ರಶಾಂತ್ ಭಟ್ ಕಡಬ ಮತ್ತಿತರರು ಉಪಸ್ಥಿತರಿದ್ದರು.



ಕೆಜಿಟಿಟಿಐ ನೂತನ ಕಟ್ಟಡ ಉದ್ಘಾಟಿಸಿ ಸಚಿವ ಡಾ. ಶರಣ್‌ಪ್ರಕಾಶ್ ಪಾಟೀಲ್ ಭರವಸೆ

ಮಂಗಳೂರಿನಲ್ಲಿ ಬೃಹತ್ ಉದ್ಯೋಗ ಮೇಳ

ಮಂಗಳೂರು: ನಗರದಲ್ಲಿ ಶೀಘ್ರದಲ್ಲೇ ಬೃಹತ್ ಉದ್ಯೋಗ ಮೇಳವನ್ನು ರಾಜ್ಯ ಸರಕಾರವು ಆಯೋಜಿಸಲಿದೆ ಎಂದು ಕೌಶಲ್ಯಾಭಿವೃದ್ಧಿ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ್ ಪ್ರಕಾಶ್ ಪಾಟೀಲ್ ತಿಳಿಸಿದ್ದಾರೆ.

ಅವರು ಶನಿವಾರ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಜರ್ಮನ್ ಮಲ್ಟಿ ಸ್ಕಿಲ್ ಡೆವಲಪ್‌ಮೆಂಟ್ ಸೆಂಟರ್ (ಕೆಜಿಎಂಎಸ್‌ಡಿಸಿ) ಸೊಸೈಟಿ, ಕರ್ನಾಟಕ ಜರ್ಮನ್ ತಾಂತ್ರಿಕ ತರಬೇತಿ ಸಂಸ್ಥೆ (ಕೆಜಿಟಿಟಿಐ) ಮಂಗಳೂರು ಇದರ ನೂತನ ಕಟ್ಟಡ ಉದ್ಘಾಟಿಸಿ ಮಾತನಾಡಿದರು. ಕರಾವಳಿ ಕರ್ನಾಟಕದ 3 ಜಿಲ್ಲೆಗಳ ಯುವಜನರನ್ನು ಕೇಂದ್ರೀಕರಿಸಿ ಈ ಉದ್ಯೋಗ ಮೇಳ ನಡೆಯಲಿದೆ. ಇದುವರೆಗೆ ರಾಜ್ಯದ ವಿವಿಧೆಡೆ ನಡೆದ ಉದ್ಯೋಗ ಮೇಳಗಳಿಂದ 30 ಸಾವಿರಕ್ಕೂ ಅಧಿಕ ಮಂದಿಗೆ ಉದ್ಯೋಗ ದೊರಕಿದೆ ಎಂದು ಅವರು ಹೇಳಿದರು.



ಕೌಶಲ್ಯ ಭರಿತ ವಿದ್ಯಾವಂತರನ್ನು ಸೃಷ್ಟಿಸಲು ರಾಜ್ಯದ 8 ಕಡೆ ಹೊಸದಾಗಿ ಕೆಜಿಟಿಟಿ ಐ ಕೇಂದ್ರಗಳನ್ನು ಮಂಜೂರುಗೊಳಿಸಲಾಗಿದೆ. ಇಲ್ಲಿ ರೆಫ್ರಿಜರೇಷನ್ ಮತ್ತು ಎಸಿ ತಾಂತ್ರಿಕತೆ ತರಬೇತಿಯ ಕೋರ್ಸುಗಳನ್ನು ಪ್ರಾರಂಭಿಸಲಾಗುವುದು. ಪ್ರಸ್ತುತ ಇಲ್ಲಿ 1 ದೀರ್ಘಾವಧಿ ಮತ್ತು 31 ಅಲ್ಪಾವಧಿ ತರಬೇತಿ ನೀಡಲಾಗುತ್ತಿದೆ ಎಂದು ಸಚಿವರು ತಿಳಿಸಿದರು.

ಕೌಶಲ್ಯ ಶಿಕ್ಷಣ ಹೆಚ್ಚು ಮಂದಿಗೆ ದೊರಕಿಸುವ ನಿಟ್ಟಿನಲ್ಲಿ ಸರಕಾರಿ ಉಪಕರಣಾಗಾರ ಸಂಸ್ಥೆಗಳಲ್ಲಿ (ಜಿ ಟಿ ಟಿ ಸಿ)ಪ್ರವೇಶಾತಿ ಮಿತಿಯನ್ನು 2500 ರಿಂದ ಪ್ರವೇಶಾತಿ 6000 ಕ್ಕೆ ಏರಿಸಲಾಗಿದೆ. ಇದಲ್ಲದೆ ರಾಜ್ಯದಲ್ಲಿ 20 ಹೊಸ ಜಿಟಿಟಿಸಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಎಂದು ಸಚಿವರು ಹೇಳಿದರು. ಜಿಟಿಟಿಸಿ ಶಿಕ್ಷಣವು ಶೇ. 100 ರಷ್ಟು ಉದ್ಯೋಗಾವಕಾಶ ಇರುವ ತರಬೇತಿ ಆಗಿದ್ದು, ಮುಂದಿನ ದಿನಗಳಲ್ಲಿ ವಾರ್ಷಿಕ 10000 ಮಂದಿಗೆ ಜಿಟಿಟಿಸಿ ಅಡ್ಮಿಶನ್ ನೀಡಲು ಯೋಜನೆ ರೂಪಿಸಲಾಗುತ್ತಿದೆ ಎಂದರು.

ವಿಧಾನಪರಿಷತ್ ಸದಸ್ಯರಾದ ಐವನ್ ಡಿಸೋಜ, ಮಂಜುನಾಥ್ ಭಂಡಾರಿ, ಕನಿಷ್ಠ ವೇತನ ಸಲಹಾ ಮಂಡಳಿ ಅಧ್ಯಕ್ಷ ಟಿ. ಎಂ. ಶಹೀದ್ ಮಾತನಾಡಿದರು.

ಕರಾವಳಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಂ. ಎ. ಗಫೂರ್, ಉದ್ಯೋಗ ತರಬೇತಿ ಇಲಾಖೆ ಆಯುಕ್ತೆ ಶಿಲ್ಪಾ, ಮಾಜಿ ಕಾರ್ಪೊರೇಟರ್ ಶಕೀಲಾ ಕಾವ, ಕೆಜಿಟಿಟಿಐ ಜಂಟಿ ಕಾರ್ಯದರ್ಶಿ ವಿ. ಎಸ್. ರಘುಪತಿ ಮತ್ತಿತರರು ಉಪಸ್ಥಿತರಿದ್ದರು.

ಸಿಇಟಿ ಮೂಲಕವೇ ಆಯ್ಕೆ : ಕೈ ಬೇಡಿಕೆ

ಮಂಗಳೂರು: ರಾಜ್ಯದಲ್ಲಿ ಈ ಹಿಂದಿನಂತೆ ಸಿಇಟಿ ಮೂಲಕ ಮೆಡಿಕಲ್ ಸೀಟುಗಳ ಆಯ್ಕೆಯಾಗಲಿ ಎಂದು ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ, ಜಿಲ್ಲಾ ಕಾಂಗ್ರೆಸ್ ವಕ್ತಾರ ಅಭಿಷೇಕ್ ಉಳ್ಳಾಲ್ ಹೇಳಿದರು.

ಆಯಾಯ ರಾಜ್ಯಗಳು 2014ಕ್ಕಿಂತ ಮೊದಲು ಅವರದೇ ಆದ ಸಿಇಟಿ ಪರೀಕ್ಷೆ ಮುಖಾಂತರ ಮೆಡಿಕಲ್ ಸೇರಿದಂತೆ ಇತರ ಸೀಟುಗಳನ್ನು ಹಂಚಿಕೆ ಮಾಡುತ್ತಿದ್ದವು. ನರೇಂದ್ರ ಮೋದಿ ಸರಕಾರ ಬಂದ ಬಳಿಕ ನೀಟ್ ಜಾರಿ ಮಾಡಿ ಮೆಡಿಕಲ್ ಸೀಟುಗಳನ್ನು ಹಂಚಿಕೆ ಮಾಡುವ ಹೊಸ ಪದ್ಧತಿ ಜಾರಿಗೆ ತಂದಿತ್ತು. ಈ ವ್ಯವಸ್ಥೆಯಲ್ಲಿ ಕಳೆದ 10ವರ್ಷಗಳಲ್ಲಿ 5 ಬಾರಿ ನೀಟ್ ಪ್ರಶ್ನಾ ಪತ್ರಿಕೆ ಸೋರಿಕೆಯಾಗಿದೆ. ಇದು ಕೇಂದ್ರ ಸರಕಾರ ಹಾಗೂ ಪರೀಕ್ಷಾ ಮಂಡಳಿಯ ವೈಫಲ್ಯವಾಗಿದೆ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು ಆರೋಪಿಸಿದರು.


ದೇಶಾದ್ಯಂತ ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿ, ಫಲಿತಾಂಶವೇ ರದ್ದುಗೊಳಿಸಿದ ಕಾರಣ ಲಕ್ಷಾಂತರ ವಿದ್ಯಾರ್ಥಿಗಳು ಕಂಗಾಲಾಗಿದ್ದಾರೆ. ಆದರೆ ಈ ಬಗ್ಗೆ ಧ್ವನಿ ಎತ್ತಬೇಕಾದ ಎಬಿವಿಪಿ ಮೌನವಹಿಸಿರುವುದು ನಿಜಕ್ಕೂ ಖೇದಕರ. ವಿದ್ಯಾರ್ಥಿಗಳ ಪರವಾಗಿ ಧ್ವನಿ ಎತ್ತಬೇಕಾದ ವಿದ್ಯಾರ್ಥಿ ಸಂಘಟನೆ ಕ್ಷುಲ್ಲಕ ಕಾರಣಕ್ಕೆ ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿತ್ತು. ಆದರೆ ನೀಟ್ ವಿಚಾರದಲ್ಲಿ ಯಾವುದೇ ಪ್ರತಿಕ್ರಿಯೆ ನೀಡದಿರುವುದು ಅನುಮಾನಕ್ಕೆ ಕಾರಣವಾಗಿದೆ. ನೀಟ್ ಪರೀಕ್ಷೆ ಫಲಿತಾಂಶ ತಡೆಹಿಡಿದ ಕಾರಣ ದೇಶಾದ್ಯಂತ 4ಕ್ಕೂ ಅಧಿಕ ವಿದ್ಯಾರ್ಥಿಗಳು ನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಬಗ್ಗೆ ಎಬಿವಿಪಿ ಅಥವಾ ಬಿಜೆಪಿ ನಾಯಕರಾರು ತುಟಿ ಬಿಚ್ಚುತ್ತಿಲ್ಲ. ಕೇಂದ್ರ ಸರಕಾರ ಕೂಡಲೇ ಆ ವಿದ್ಯಾರ್ಥಿಗಳ ಪೋಷಕರಿಗೆ ಪರಿಹಾರ ಘೋಷಿಸಬೇಕು ಎಂದು ಅವರು ಹೇಳಿದರು.

ಕೇಂದ್ರ ಸರಕಾರ ಹಾಗೂ ಪರೀಕ್ಷಾ ಮಂಡಳಿ ಬೇಜವಾಬ್ದಾರಿಯಿಂದ ವಿದ್ಯಾರ್ಥಿಗಳು, ಪೋಷಕರು ಶಿಕ್ಷೆ ಅನುಭವಿಸುವಂತಾಗಿದೆ. ರಾಜಸ್ಥಾನದ ಬಿಜೆಪಿ ಯುವಮೋರ್ಚಾ ನಾಯಕ ದಿನೇಶ್ ಈ ಪ್ರಶ್ನೆ ಪತ್ರಿಕೆ ಸೋರಿಕೆ ಹಗರಣದ ಹಿಂದೆ ಇರುವುದು ಬಹಿರಂಗವಾಗಿದೆ. ಆತನ ವಿರುದ್ಧ ಈಗಾಗಲೇ ಕೇಸು ದಾಖಲಾಗಿ ತನಿಖೆ ನಡೆಯುತ್ತಿದೆ. ಶಿಸ್ತಿನ ಬಗ್ಗೆ ಮಾತನಾಡುವ ಬಿಜೆಪಿಯವರು ಈ ಬಗ್ಗೆ ಏನನ್ನುತ್ತಾರೆ? ಎಂದು ಪ್ರಶ್ನಿಸಿದರು.

ದಕ್ಷಿಣ ಕನ್ನಡ ಜಿಲ್ಲಾ ಎನ್‌ಎಸ್‌ಯುಐ ಅಧ್ಯಕ್ಷ ಸುಹಾನ್ ಆಳ್ವ, ಉಪಾಧ್ಯಕ್ಷ ಪ್ರೀತಮ್ ಗೌಡ, ಮಂಗಳೂರು ವಿಧಾನಸಭಾ ಕ್ಷೇತ್ರದ ಎನ್‌ಎಸ್‌ಯುಐ ಅಧ್ಯಕ್ಷ ಸಾಹಿಲ್, ಪ್ರಧಾನ ಕಾರ್ಯದರ್ಶಿ ಯು.ಟಿ. ಫರೀದ್ ಇಫ್ತಿಕಾರ್, ಸೋಹಾನ್ ಜೋಶುವಾ, ಜಿಲ್ಲಾ ಕಾರ್ಯದರ್ಶಿ ಸಂತೋಷ್ ಸುಳ್ಯ ಉಪಸ್ಥಿತರಿದ್ದರು.

ಆರೆಂಜ್ ಕ್ಯಾಪ್ | ಪರ್ಪಲ್ ಕ್ಯಾಪ್

ಸುದರ್ಶನ್ (ಗುಜರಾತ್) 638 ರನ್ | ಭುವನೇಶ್ವರ್ (ಬೆಂಗಳೂರು) 24 ವಿಕೆಟ್



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಆರ್‌ಸಿಬಿ (Q)	14	9	5	0	18	+0.783
ಗುಜರಾತ್ (Q)	14	9	5	0	18	+0.695
ಹೈದರಾಬಾದ್(Q)	14	9	5	0	18	+0.524
ರಾಜಸ್ಥಾನ	13	7	6	0	14	+0.083
ಪಂಜಾಬ್	13	6	6	1	13	+0.227
ಕೆಕೆಆರ್	13	6	6	1	13	+0.011
ಚೆನ್ನೈ	14	6	8	0	12	-0.345
ದಿಲ್ಲಿ	13	6	7	0	12	-0.871
ಮುಂಬೈ	13	4	9	0	8	-0.510
ಲಖನೌ	13	4	9	0	8	-0.702


ಇಂದು ಮುಂಬೈ-ರಾಜಸ್ಥಾನ, ದಿಲ್ಲಿ-ಕೆಕೆಆರ್ ಪಂದ್ಯ | ಲೀಗ್ ಹಂತದ ಕೊನೆಯ ದಿನ | ನಾಲ್ಕನೇ ತಂಡದ ಬಗ್ಗೆ ನಿರ್ಧಾರ

ಹೈದರಾಬಾದ್ VS ?

ಮುಂಬೈ: 19ನೇ ಆವೃತ್ತಿಯ ಐಪಿಎಲ್‌ನ ಲೀಗ್ ಹಂತದ ಕೊನೆಯ ಪಂದ್ಯಗಳಲ್ಲಿ ರಾಜಸ್ಥಾನ-ಮುಂಬೈ, ಕೆಕೆಆರ್-ದಿಲ್ಲಿ ತಂಡಗಳು ಭಾನುವಾರದಂದು ಮುಖಾಮುಖಿಯಾಗಲಿವೆ. ಪ್ಲೇಆಫ್‌ಗೇರುವ ನಾಲ್ಕನೇ ತಂಡದ ಬಗ್ಗೆ ಇನ್ನೂ ಅನಿಶ್ಚಿತತೆ ಇರುವುದು ಭಾರೀ ಕುತೂಹಲ ಮೂಡಿಸಿದೆ. ಭಾನುವಾರದ ಕೊನೆಯ ಪಂದ್ಯದಲ್ಲಿ ನಾಲ್ಕನೇ ಸ್ಥಾನದ ಬಗ್ಗೆ ನಿರ್ಧಾರವಾಗಲಿದೆ. ಮೊದಲನೇ ಸ್ಥಾನದಲ್ಲಿ ಬೆಂಗಳೂರು, ಎರಡನೇ ಸ್ಥಾನದಲ್ಲಿ ಗುಜರಾತ್, ಮೂರನೇ ಸ್ಥಾನದಲ್ಲಿ ಹೈದರಾಬಾದ್ ತಮ್ಮ ಸ್ಥಾನಗಳನ್ನು ಪಡೆದಿವೆ. ನಾಲ್ಕನೇ ಸ್ಥಾನದಲ್ಲಿ ಸದ್ಯ ರಾಜಸ್ಥಾನ ತಂಡವಿದ್ದು, ಪ್ಲೇಆಫ್‌ಗೇರಲು ಎಲ್ಲರಿಗಿಂತಲೂ ಹೆಚ್ಚಿನ ಅವಕಾಶವನ್ನು ಹೊಂದಿದೆ.

ಮಧ್ಯಾಹ್ನದ ಪಂದ್ಯದಲ್ಲಿ ರಾಜಸ್ಥಾನವು ಮುಂಬೈ ತಂಡವನ್ನು ಎದುರಿಸಲಿದೆ. ಈ ಪಂದ್ಯದಲ್ಲಿ ರಾಜಸ್ಥಾನ ಗೆದ್ದುಬಿಟ್ಟರೆ ನಾಲ್ಕನೇ ಸ್ಥಾನಕ್ಕೇರುವುದು ಖಚಿತ. ಹೀಗಾಗಿಬಿಟ್ಟರೆ ರಾತ್ರಿ ನಡೆಯುವ ದಿಲ್ಲಿ-ಕೆಕೆಆರ್ ಪಂದ್ಯ ಔಪಚಾರಿಕವಾಗಲಿದೆ. ರಾಜಸ್ಥಾನಕ್ಕೆ ತಡೆಯೊಡ್ಡುವ ಅವಕಾಶ ಮುಂಬೈಗಿದೆ. ಗೆಲುವಿನ ಅಂತ್ಯಕ್ಕೆ ಅಣಿಯಾಗುತ್ತಿರುವ ಮುಂಬೈ ಪಂದ್ಯಾವಳಿಯಲ್ಲಿ ದೊಡ್ಡ ಬದಲಾವಣೆಯನ್ನೇ ತರಬಹುದು. ಅತ್ತ ರಾಜಸ್ಥಾನ ಪಂದ್ಯವನ್ನು ಗೆದ್ದು ಪ್ಲೇಆಫ್‌ಗೇರಲು ಸಿದ್ಧವಾಗಿದೆ. ಪಂದ್ಯ ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯಲಿದೆ.

ಎರಡನೇ ಪಂದ್ಯದಲ್ಲಿ ದಿಲ್ಲಿ ಹಾಗೂ ಕೆಕೆಆರ್ ಪಂದ್ಯ ನಡೆಯಲಿದೆ. ದಿಲ್ಲಿ ಅಧಿಕೃತವಾಗಿ ಹೊರಬಿದ್ದಿಲ್ಲ. ಕೆಕೆಆರ್ ವಿರುದ್ಧ ರನ್‌ರೇಟ್‌ನೊಂದಿಗೆ ಗೆದ್ದರೆ ಅವಕಾಶ ಪಡೆಯಬಹುದು. ಇತ್ತ ಕೆಕೆಆರ್ ಗೆಲುವು ಸಾಧಿಸಿದರೆ, 15 ಅಂಕಗಳೊಂದಿಗೆ ನಾಲ್ಕನೇ ಸ್ಥಾನಕ್ಕೇರುವ ಅವಕಾಶವನ್ನು ಹೊಂದಲಿದೆ. ಎರಡನೇ ಪಂದ್ಯವು ಕೋಲ್ಕತ್ತಾದ ಈಡನ್ ಗಾರ್ಡನ್ಸ್‌ನಲ್ಲಿ ನಡೆಯಲಿದೆ.



ಲೆಕ್ಕಾಚಾರವೇನು?

ರಾಜಸ್ಥಾನ ಗೆದ್ದರೆ: ನಾಲ್ಕನೇ ಸ್ಥಾನದಲ್ಲಿರುವ ರಾಜಸ್ಥಾನ 14 ಅಂಕಗಳನ್ನು ಹೊಂದಿದೆ. ಹೀಗಾಗಿ ಒಂದು ವೇಳೆ ರಾಜಸ್ಥಾನ ಗೆದ್ದರೆ ಇನ್ನುಳಿದ ಮೂರೂ ತಂಡಗಳಿಗಿಂತ ಹೆಚ್ಚಿನ ಅವಕಾಶ ಪಡೆಯಲಿದೆ. ಗೆದ್ದರೆ ರಾಜಸ್ಥಾನ 16 ಅಂಕಗಳೊಂದಿಗೆ ನೇರವಾಗಿ ಪ್ಲೇಆಫ್‌ಗೇರುತ್ತದೆ.
ರಾಜಸ್ಥಾನ ಸೋತರೆ: ಒಂದು ವೇಳೆ ರಾಜಸ್ಥಾನ ಪಂದ್ಯವನ್ನು ಸೋತರೆ ದಿಲ್ಲಿ, ಕೆಕೆಆರ್ ಪಂದ್ಯವೂ ನಿರ್ಣಾಯಕ ಪಾತ್ರ ವಹಿಸುತ್ತದೆ. ರಾಜಸ್ಥಾನ 14 ಅಂಕಗಳೊಂದಿಗೆ ಅಭಿಯಾನ ಮುಗಿಸುತ್ತದೆ. ಒಂದು ವೇಳೆ ಲಖನೌ ವಿರುದ್ಧ ಪಂಜಾಬ್ ಗೆದ್ದರೆ, ಐದನೇ ಸ್ಥಾನಕ್ಕೆ ಇಳಿಯುವ ರಾಜಸ್ಥಾನ ಹೊರಬೀಳುತ್ತದೆ. ಕೆಕೆಆರ್ ಕೂಡ 15 ಅಂಕಗಳನ್ನು ಗಳಿಸಬಹುದು. ಹಾಗಾಗಿ ಪಂಜಾಬ್ ತಂಡಕ್ಕಿಂತ ಹೆಚ್ಚಿನ ರನ್‌ರೇಟ್ ಹೊಂದುವುದು ಅನಿವಾರ್ಯ.
ರಾಜಸ್ಥಾನ, ಕೆಕೆಆರ್ ಸೋತರೆ?: ಕೆಕೆಆರ್, ಪಂಜಾಬ್ ಹಾಗೂ ರಾಜಸ್ಥಾನ ಸೋತರೆ, ಅಂಕಪಟ್ಟಿಯಲ್ಲಿ 14 ಅಂಕ ಗಳಿಸುವವರೆ ನಾಲ್ಕನೇ ಸ್ಥಾನಕ್ಕೇರುತ್ತಾರೆ. ಹಾಗಾದಲ್ಲಿ ದಿಲ್ಲಿಗೊಂದು ಅವಕಾಶ ಹುಟ್ಟುತ್ತದೆ. ಒಂದು ವೇಳೆ ಸದ್ಯ ರಾಜಸ್ಥಾನ ದಿಲ್ಲಿಗಿಂತಲೂ ಹೆಚ್ಚಿನ ರನ್‌ರೇಟ್ ಹೊಂದಿದ್ದು ದಿಲ್ಲಿ ಹೆಚ್ಚಿನ ರನ್‌ರೇಟ್‌ನಿಂದ ಗೆದ್ದರೆ ಅವಕಾಶ ಪಡೆಯಬಹುದು.
ಹೈದರಾಬಾದ್‌ನೊಂದಿಗೆ ಯಾರು? : ಮೂರನೇ ಸ್ಥಾನದಲ್ಲಿರುವ ಹೈದರಾಬಾದ್ ನಾಲ್ಕನೇ ಸ್ಥಾನ ಪಡೆಯುವ ತಂಡವನ್ನು ಎಲಿಮಿನೇಟರ್ ಪಂದ್ಯದಲ್ಲಿ ಎದುರಿಸಲಿದೆ. ಸದ್ಯ ನಾಲ್ಕನೇ ಸ್ಥಾನಕ್ಕೇರುವ ಅವಕಾಶವನ್ನು ರಾಜಸ್ಥಾನ, ಪಂಜಾಬ್, ಕೆಕೆಆರ್ ಮತ್ತು ದಿಲ್ಲಿ ತಂಡಗಳು ಹೊಂದಿವೆ. ಐಪಿಎಲ್ ನಿಯಮದ ಪ್ರಕಾರ ಎಲಿಮಿನೇಟರ್ ಪಂದ್ಯದಲ್ಲಿ ಮೂರು ಮತ್ತು ನಾಲ್ಕನೇ ಸ್ಥಾನದ ತಂಡಗಳು ಮುಖಾಮುಖಿಯಾಗುತ್ತವೆ.

ಲಖನೌ 196/6



ಲಖನೌ: ಜೋಶ್ ಇಂಗ್ಲಿಸ್(72), ಆಯುಷ್ ಬದೋನಿ(43) ಕಟ್ಟಿದ ಇನ್ನಿಂಗ್ಸ್‌ಗೆ ಅಬ್ದುಲ್ ಸಮದ್(37★) ಫಿನಿಶಿಂಗ್ ಟಚ್ ಕೊಟ್ಟ ನಂತರ ಲಖನೌ ಸೂಪರ್ ಜೇಂಟ್ಸ್ ಪಂಜಾಬ್‌ಗೆ ಕಠಿಣ ಗುರಿ ನೀಡಿದೆ.

ಪಂದ್ಯಾವಳಿಯಲ್ಲಿ ಅಳಿವು ಉಳಿವಿನ ಸವಾಲು ಎದುರಿಸಿರುವ ಪಂಜಾಬ್ ಕಿಂಗ್ಸ್ ಕೊನೆಯ ಲೀಗ್ ಪಂದ್ಯದಲ್ಲಿ 197 ರನ್ ಬಾರಿಸಬೇಕಿದೆ. ಪಂದ್ಯದಲ್ಲಿ ಬ್ಯಾಟಿಂಗ್‌ಗಿಳಿದ ಲಖನೌ ಆರಂಭದಲ್ಲಿ ರನ್ ಮಾಡಿದ್ದರೂ, ವಿಕೆಟ್‌ಗಳನ್ನು ಕಳೆದುಕೊಂಡಿತು. ಆರಂಭಿಕ ಇಂಗ್ಲಿಸ್, ಬದೋನಿ ಮಿಂಚಿದರು. ಕೊನೆಯಲ್ಲಿ ಅಬ್ದುಲ್ ಸ್ಕೋರ್ ಹಿಗ್ಗಿಸಿದರು. ಪರಿಣಾಮ ಲಖನೌ 20 ಓವರ್‌ಗಳಲ್ಲಿ 196 ರನ್ ಗಳಿಸಿದೆ. ಪಂಜಾಬ್ 6 ವಿಕೆಟ್ ಕಿತ್ತಿದೆ.

ಬದೋನಿ-ಇಂಗ್ಲಿಸ್ ಮಿಂಚಿನಾಟ: ಟಾಸ್ ಗೆದ್ದ ಲಖನೌ ಸೂಪರ್ ಜೇಂಟ್ಸ್ ಬ್ಯಾಟಿಂಗ್‌ಗಿಳಿಯಿತು. ಮೊದಲನೇ ಓವರ್‌ನಿಂದಲೇ ಜೋಶ್ ಇಂಗ್ಲಿಸ್ ಸ್ಫೋಟಕ ಬ್ಯಾಟಿಂಗ್ ಮಾಡಲಾರಂಭಿಸಿದರು. ಆದರೆ ಎರಡನೇ ಓವರ್‌ನಲ್ಲಿ ಅರ್ಶಿಣ್ ಕುಲಕರ್ಣಿ ಮೊದಲ ಬಾಲ್‌ನಲ್ಲೇ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬಂದ ಪೂರಣ್ ಹೆಚ್ಚಿನ ಕೊಡುಗೆ ನೀಡಲಿಲ್ಲ. 2 ರನ್ ಗಳಿಸಿ ಅವರೂ ವಿಕೆಟ್ ಒಪ್ಪಿಸಿದರು. ಮಧ್ಯಮ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗಿಳಿದ ಆಯುಷ್ ಬದೋನಿ ಮೊದಲಿನ ಬಾಲ್‌ಗಳಲ್ಲಿ ನಿಂತು ಆಡಿ ನಂತರ ದಂಡಿಸುವ ಆಟಕ್ಕಿಳಿದರು. ಸ್ಫೋಟಕ ಬೌಂಡರಿ, ಬಾನೆತ್ತರದ ಸಿಕ್ಸರ್‌ಗಳ ಮೂಲಕ ಅವರು 43 ರನ್ ಗಳಿಸಿದರು. ಪವರ್‌ಪ್ಲೇ ಅಂತ್ಯಕ್ಕೆ ಲಖನೌ 66 ರನ್‌ಗೆ 2 ವಿಕೆಟ್ ಕಳೆದುಕೊಂಡಿತ್ತು.

ಮಧ್ಯಮ ಓವರ್: 7ನೇ ಓವರ್‌ನಲ್ಲೇ ಬದೋನಿ ವಿಕೆಟ್ ಒಪ್ಪಿಸಿದರು. 18 ಬಾಲ್ ಮಾತ್ರದಲ್ಲಿ ಅವರು 3 ಸಿಕ್ಸ್, 5 ಬೌಂಡರಿಗಳೊಂದಿಗೆ 43 ರನ್ ಚಚ್ಚಿದರು. ಬಳಿಕ ಬಂದ ಪಂತ್ ಇಂಗ್ಲಿಸ್‌ಗೆ ಸ್ಟ್ರೈಕ್ ಕೊಡುತ್ತಾ ಬಂದರು. 28 ಬಾಲ್‌ಗಳಲ್ಲಿ 50 ರನ್ ಗಳಿಸಿದರು. ದಂಡಿಸುವ ಆಟ ಮುಂದುವರಿಸಿದರು. ಪಂತ್ ಒಂದೆರಡು ಬೌಂಡರಿ ಬಾರಿಸಿದರೂ 26 ರನ್‌ಗೆ ವಿಕೆಟ್ ಒಪ್ಪಿಸಿದರು. ಮಧ್ಯಮ ಓವರ್‌ಗಳಲ್ಲಿ ಲಖನೌ 91 ರನ್ ಗಳಿಸಿತು. ಇಂಗ್ಲಿಸ್ 72 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಅವರ ಇನ್ನಿಂಗ್ಸ್‌ನಲ್ಲಿ 9 ಬೌಂಡರಿ 2 ಸಿಕ್ಸರ್ ಸೇರಿವೆ. ಡೆತ್‌ನಲ್ಲಿ ಅಬ್ದುಲ್ ಸಮದ್ ಮಿಂಚಿದರು. ಮುಖೇಷ್ ಬರುತ್ತಲೇ ಪೆವಿಲಿಯನ್ ಹೊರಟರು. ಕೊನೆಯ ಓವರ್‌ಗಳ 20 ಬಾಲ್ ಎದುರಿಸಿದ ಅಬ್ದುಲ್ 3 ಬೌಂಡರಿ, 3 ಸಿಕ್ಸರ್‌ನೊಂದಿಗೆ 37★ ರನ್ ಗಳಿಸಿದರು. ಇದರೊಂದಿಗೆ ಲಖನೌ 6 ವಿಕೆಟ್ ನಷ್ಟಕ್ಕೆ 196 ರನ್ ಗಳಿಸಿದರು. ಪಂಜಾಬ್ ಪರ ಮಾರ್ಕೊ ಯಾನ್ಸನ್, ಚಹಲ್ ತಲಾ 2 ವಿಕೆಟ್ ಕಿತ್ತರು.

ಕಿರುಸುದ್ದಿ

ಒಂದೇ ಟೆಸ್ಟ್ ಪಂದ್ಯದಲ್ಲಿ ವಿಭಿನ್ನ ಬಣ್ಣದ ಬಾಲ್?

ಮುಂಬೈ: ಒಂದೇ ಟೆಸ್ಟ್ ಪಂದ್ಯದಲ್ಲಿ ಎರಡು ಬಣ್ಣದ ಬಾಲ್‌ಗಳನ್ನು ಬಳಸಲು ಪ್ರಸ್ತಾಪಿಸಲಾಗಿದ್ದು, ಅಂತಾರಾಷ್ಟ್ರೀಯ ಕ್ರಿಕೆಟ್ ಸಂಸ್ಥೆ ಈ ಬಗ್ಗೆ ಶೀಘ್ರವೇ ನಿರ್ಧಾರ ಕೈಗೊಳ್ಳಲಿದೆ. ಟೆಸ್ಟ್ ಪಂದ್ಯಗಳನ್ನು ಕೆಂಪು ಮತ್ತು ಪಿಂಕ್ ಬಾಲ್‌ಗಳಲ್ಲಿ ಆಡಿಸಲಾಗುತ್ತದೆ. ಆದರೆ ಒಂದೇ ಪಂದ್ಯದಲ್ಲಿ ಎರಡು ಬಣ್ಣಗಳ ಬಾಲ್‌ಗಳನ್ನು ಬಳಸಲಾಗಲ್ಲ. ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಐಸಿಸಿ ನಿರ್ಧಾರ ಕೈಗೊಳ್ಳಲಿದ್ದು, ಒಂದೇ ಪಂದ್ಯದಲ್ಲಿ ಎರಡು ವಿಭಿನ್ನ ಬಣ್ಣದ ಬಾಲ್‌ಗಳನ್ನು ಬಳಸಲು ಚಿಂತನೆ ನಡೆಸಿದೆ. ಇಷ್ಟೇ ಅಲ್ಲದೆ, ಬಿಳಿ ಬಾಲಿನ ಪಂದ್ಯಗಳಲ್ಲೂ ಇದನ್ನು ಅಳವಡಿಕೆ ಮಾಡಲು ಯೋಚಿಸುತ್ತಿದೆ ಎಂದು ವರದಿಯಾಗಿದೆ. ಅಹಮದಾಬಾದ್‌ನಲ್ಲಿ ನಡೆಯಲಿರುವ ಐಸಿಸಿ ಸಭೆಯಲ್ಲಿ ಈ ಬಗ್ಗೆ ಚರ್ಚೆಗಳು ನಡೆಯಲಿವೆ.ಇನ್ನಷ್ಟು ಬದಲಾವಣೆಗಳಲ್ಲಿ ಮುಖ್ಯ ತರಬೇತುದಾರರಿಗೆ ಬ್ರೇಕ್ ಸಮಯದಲ್ಲಿ ಮೈದಾನ ಪ್ರವೇಶಿಸಲು ಅನುವು ಮಾಡಿಕೊಡಲಾಗುವುದು. ಆದರೆ ಕಡ್ಡಾಯವಾಗಿ ಜೆರ್ಸಿಯೊಂದಿಗೆ ಬರಬೇಕು ಎನ್ನಲಾಗಿದೆ. ಇದಲ್ಲದೆ ಟಿ20 ಕ್ರಿಕೆಟ್‌ನಲ್ಲಿ ಇನ್ನಿಂಗ್ಸ್ ಬ್ರೇಕ್ ಅನ್ನು 15 ನಿಮಿಷಕ್ಕೆ ಇಳಿಸುವ ಬಗ್ಗೆಯೂ ಹೇಳಲಾಗಿದೆ.

ಏಷ್ಯಾ ಜೂ. ಪಿಕಲ್‌ಬಾಲ್ ಓಪನ್‌ನಲ್ಲಿ 8 ಕನ್ನಡಿಗರು

ಬೆಂಗಳೂರು: ಥೈಲ್ಯಾಂಡ್‌ನಲ್ಲಿ ನಡೆಯಲಿರುವ ಏಷ್ಯಾ ಜೂನಿಯರ್ ಪಿಕಲ್‌ಬಾಲ್ ಓಪನ್ ಚಾಂಪಿಯನ್‌ಶಿಪ್‌ಗೆ ಕರ್ನಾಟಕ ರಾಜ್ಯ ಪಿಕಲ್ ಬಾಲ್ ಅಸೋಸಿಯೇಷನ್ ತನ್ನ 8 ಸದಸ್ಯರ ತಂಡ ಪ್ರಕಟಿಸಿದೆ. ಹಿತ್ವಿಕ್, ಶ್ರೇಷ್ಠಾ, ಐದಿನ್ ಫರೀದ್, ಶ್ರೀಹರಿ, ಕರ್ತಿ, ಲಿಖಿತಾ, ಖುಷಿ ಮತ್ತು ಜಶನ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಈ ಆಟಗಾರರ ಹೆಸರುಗಳನ್ನು ಆಲ್ ಇಂಡಿಯಾ ಪಿಕಲ್‌ಬಾಲ್ ಅಸೋಸಿಯೇಷನ್‌ಗೆ ಶಿಫಾರಸು ಮಾಡಲಾಗುತ್ತಿದ್ದು, ಇವರೆಲ್ಲರೂ ಮುಂದಿನ ತಿಂಗಳು ಮುಂಬೈನಲ್ಲಿ ನಡೆಯಲಿರುವ ರಾಷ್ಟ್ರೀಯ ತರಬೇತಿ ಶಿಬಿರದಲ್ಲಿ ಪಾಲ್ಗೊಳ್ಳಲಿದ್ದಾರೆ.

ಇಂದು ಹಾಫ್ ಮ್ಯಾರಥಾನ್

ಬೆಂಗಳೂರು: ಬೆಂಗಳೂರಿನ ಓಟಗಾರರ ಸಮೂಹ ರೋಮಾಂಚಕ ಫಿಟ್ನೆಸ್ ಸಂಭ್ರಮಕ್ಕೆ ಸಜ್ಜಾಗುತ್ತಿದೆ. ಫ್ರೀಡಂ ಬೆಂಗಳೂರು ಹಾಫ್ ಮ್ಯಾರಥಾನ್ ಭಾನುವಾರದಂದು ನಡೆಯಲಿದೆ. ಈಗಾಗಲೇ 6000ಕ್ಕೂ ಹೆಚ್ಚು ಸ್ಪರ್ಧಿಗಳು ನೋಂದಾಯಿಸಿಕೊಂಡಿದ್ದಾರೆ. ಬೆಂಗಳೂರಿನ ಐತಿಹಾಸಿಕ ನೈಸ್ ರಸ್ತೆ ಮಾರ್ಗದಲ್ಲಿ ನಡೆಯಲಿರುವ ಈ ಕ್ರೀಡಾಕೂಟವು ಅಥ್ಲೀಟ್‌ಗಳು, ಫಿಟ್ನೆಸ್ ಪ್ರೇಮಿಗಳು, ಕಾರ್ಪೊರೇಟ್ ತಂಡಗಳು, ರನ್ನಿಂಗ್ ಕ್ಲಬ್‌ಗಳು ಮತ್ತು ಮೊದಲ ಬಾರಿಗೆ ಭಾಗವಹಿಸುತ್ತಿರುವ ಓಟಗಾರರಿಗೆ ವಿಶ್ವದರ್ಜೆಯ ಅನುಭವವನ್ನು ನೀಡಲಿದೆ. ಸ್ಪರ್ಧಿಗಳು ವೃತ್ತಿಪರ ಟೈಮಿಂಗ್ ಹೊಂದಿರುವ 21.1 ಕಿ.ಮೀ ಹಾಫ್ ಮ್ಯಾರಥಾನ್, 10 ಕಿ.ಮೀ ಮತ್ತು 5 ಕಿ.ಮೀ ಓಟದ ವಿಭಾಗಗಳನ್ನು ಆಯ್ದುಕೊಳ್ಳಬಹುದಾಗಿದೆ. ಕಲ್ಕಿ ಸ್ಪೋರ್ಟ್ಸ್ ಇಂಡಿಯಾ ಪ್ರೀಮಿಯಂ ರೇಸ್-ಡೇ ಅನುಭವವನ್ನು ನೀಡುವ ಜೊತೆಗೆ ಫಿಟ್ನೆಸ್, ಸಹಿಷ್ಣುತೆ ಮತ್ತು ಸಮುದಾಯದ ಮನೋಭಾವವನ್ನು ಒಟ್ಟುಗೂಡಿಸುವ ಗುರಿಯನ್ನು ಹೊಂದಿದೆ. ಈ ಈವೆಂಟ್ ಕೇವಲ ಒಂದು ಓಟದ ಸ್ಪರ್ಧೆಯಷ್ಟೇ ಅಲ್ಲದೆ, ಸಂಪೂರ್ಣ ಫಿಟ್ನೆಸ್ ಮತ್ತು ಜೀವನಶೈಲಿಯ ಸಂಭ್ರಮಾಚರಣೆಯಾಗಿ ಮೂಡಿಬರಲಿದೆ.

ಪ್ಲೇಆಫ್‌ಗಿಲ್ಲ ಜೇಕಬ್ ಬೆಥಲ್

ಬೆಂಗಳೂರು: ಇಂಗ್ಲೆಂಡ್ ಬ್ಯಾಟರ್ ಜೇಕಬ್ ಬೆಥಲ್ ಗಾಯಗೊಂಡಿದ್ದು, ಐಪಿಎಲ್ ಪ್ಲೇಆಫ್‌ಗೆ ಲಭ್ಯವಿಲ್ಲ ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಿಳಿಸಿದೆ. ಪಂಜಾಬ್ ವಿರುದ್ಧ ನಡೆದ ಪಂದ್ಯದ ವೇಳೆ ಅವರ ಬೆರಳಿಗೆ ಗಂಭೀರ ಗಾಯವಾಗಿದೆ. ಚಿಕಿತ್ಸೆಗಾಗಿ ಇಂಗ್ಲೆಂಡ್‌ಗೆ ಮರಳಿದ್ದು, ಪ್ಲೇಆಫ್‌ನಲ್ಲಿ ಭಾಗವಹಿಸುತ್ತಿಲ್ಲ ಎಂದು ಆರ್‌ಸಿಬಿ ಶನಿವಾರ ತಿಳಿಸಿದೆ. ಈ ಹಿಂದೆ ಸಾಲ್ಟ್ ಅವರೂ ಗಾಯಗೊಂಡು ಹೊರನಡೆದಿದ್ದರು. ಪ್ಲೇಆಫ್‌ನಲ್ಲಿ ಅವರು ಆಡುವ ಬಗ್ಗೆ ಇನ್ನೂ ಖಚಿತತೆ ಇಲ್ಲ. ಈ ನಡುವೆ ವೆಂಕಟೇಶ್ ಅಯ್ಯರ್ ಆರಂಭಿಕರಾಗಿ ಕಣಕ್ಕಿಳಿದಿದ್ದರು. ಮುಂದಿನ ಪಂದ್ಯದಲ್ಲೂ ಅವರೇ ಆರಂಭಿಕರಾಗಿ ಆಡುವ ಸಾಧ್ಯತೆಗಳಿವೆ.

ಸೋತರೂ ಆರ್‌ಸಿಬಿ ನಂಬರ್ 1

ಹೈದರಾಬಾದ್: ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮೊದಲ ಸ್ಥಾನದಲ್ಲೇ ಉಳಿದಿದ್ದು, ಮೊದಲ ಕ್ವಾಲಿಫೈಯರ್ ಪಂದ್ಯದಲ್ಲಿ ಗುಜರಾತ್ ಟೈಟಾನ್ಸ್ ತಂಡವನ್ನು ಎದುರಿಸಲಿದೆ. ತನ್ನ ಕೊನೆಯ ಲೀಗ್ ಪಂದ್ಯದಲ್ಲಿ ಆರ್‌ಸಿಬಿ ತಂಡವನ್ನು 55ರನ್‌ಗಳಿಂದ ಮಣಿಸಿರುವ ಹೈದರಾಬಾದ್ ತಂಡವು, 3ನೇ ಸ್ಥಾನದಲ್ಲೇ ಉಳಿದಿದೆ.

ಶುಕ್ರವಾರ ನಡೆದ ಪಂದ್ಯವು ಅಗ್ರ ಎರಡು ಸ್ಥಾನದ ನಿರ್ಧಾರ ಮಾಡಲಿತ್ತು. ಪಂದ್ಯದಲ್ಲಿ ಟಾಸ್ ಗೆದ್ದ ಹೈದರಾಬಾದ್ ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಭುವನೇಶ್ವರ್ ಕುಮಾರ್ ಸೇರಿದಂತೆ ವಿವಿಧ ಬೌಲರ್‌ಗಳನ್ನು ದಂಡಿಸುತ್ತಲೇ ಬಂದ ಸನ್ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 255 ರನ್ ಗಳಿಸಿತು. ಇಶಾನ್ ಕಿಶನ್(79), ಅಭಿಷೇಕ್(56) ಮತ್ತು ಕ್ಲಾಸೆನ್(51) ಮಿಂಚಿದರು. ಬೆಂಗಳೂರು ಪರ ರಸೀಖ್ 2 ವಿಕೆಟ್ ಪಡೆದುಕೊಂಡರು. ಗುರಿ ಬೆನ್ನತ್ತಿದ ಆರ್‌ಸಿಬಿ 200 ರನ್ ಮಾತ್ರವಷ್ಟೇ ಗಳಿಸಿತು. ವೆಂಕಟೇಶ್(44), ಪಾಟಿದಾರ್(56), ಕೃಣಾಲ್(41★) ರನ್ ಗಳಿಸಿ ಹೋರಾಡಿದರು. ಹೈದರಾಬಾದ್ ಪರ ಇಶಾನ್ ಮಾಲಿಂಗಾ 2 ವಿಕೆಟ್ ಕಿತ್ತರು.

ಆರ್‌ಸಿಬಿ ಹೋರಾಟಕ್ಕಿಲ್ಲ ಜಯ: ವೆಂಕಟೇಶ್ ಅಯ್ಯರ್ ಸ್ಫೋಟಕ ಆರಂಭ ಕೊಟ್ಟರು. 19 ಬಾಲ್‌ಗಳಲ್ಲಿ 44 ರನ್ ಬಾರಿಸಿದ ಅವರು, ಭದ್ರ ಬುನಾದಿ ಹಾಕಿಕೊಟ್ಟರು. ಆದರೆ ಅವರ ವಿಕೆಟ್ ಬಿದ್ದ ನಂತರ ಕೊಹ್ಲಿ(15), ಪಡಿಕ್ಕಲ್(21) ಹೆಚ್ಚಿನ ಕೊಡುಗೆ ನೀಡಲಿಲ್ಲ. ಮಧ್ಯಮ ಕ್ರಮಾಂಕದಲ್ಲಿ ರಜತ್ ಪಾಟಿದಾರ್ ಗಟ್ಟಿಯಾಗಿ ನಿಂತುಕೊಂಡರು. 39 ಬಾಲ್‌ಗಳನ್ನು ಎದುರಿಸಿದ ಅವರು, 6 ಬೌಂಡರಿ, 1 ಸಿಕ್ಸರ್‌ನೊಂದಿಗೆ 56 ರನ್ ಗಳಿಸಿದರು. ಅಂತಿಮವರೆಗೂ ವಿಕೆಟ್ ಉಳಿಸಿ ಆಡಿದ ಕೃಣಾಲ್ 41 ರನ್ ಗಳಿಸಿದರು. ಆರ್‌ಸಿಬಿ ಹೋರಾಟ ಮುಗಿಯಿತು. ವಿಕೆಟ್ ಕಳೆದುಕೊಂಡ ತಂಡ 200 ರನ್ ಅಷ್ಟೇ ಗಳಿಸಿತು.



ಹೆಡ್ ಜತೆ ಕೈಕುಲುಕದ ಕೊಹ್ಲಿ

ಪಂದ್ಯದ ವೇಳೆ ಆಸ್ಟ್ರೇಲಿಯಾ ಆಟಗಾರ, ಹೈದರಾಬಾದ್ ತಂಡದ ಆರಂಭಿಕ ಟ್ರಾವಿಸ್ ಹೆಡ್ ಹಾಗೂ ಆರ್‌ಸಿಬಿ ತಂಡದ ಪ್ರಮುಖ ಆಟಗಾರ ವಿರಾಟ್ ಕೊಹ್ಲಿ ನಡುವೆ ವಾಗ್ವಾದಗಳು ನಡೆದವು. ಕೊಹ್ಲಿ ಬ್ಯಾಟಿಂಗ್ ಮಾಡುವಾಗ ಹೆಡ್ ಜತೆ ಸಂಭಾಷಣೆ ಮಾಡುತ್ತಾ ಇದ್ದರು. ಪಂದ್ಯ ಮುಗಿದ ನಂತರ ವಾಡಿಕೆ ಪ್ರಕಾರ ಎಲ್ಲಾ ಆಟಗಾರರನ್ನು ಕೈಕುಲುಕಿದ ಕೊಹ್ಲಿ ಟ್ರಾವಿಸ್ ಹೆಡ್ ಜತೆ ಕೈಕುಲುಕಲೇ ಇಲ್ಲ. ಮುಂದೆ ಬಂದು ಕೈ ಮುಂದೆ ಮಾಡಿದರೂ, ಹಾಗೇ ಹೊರಟ ಕೊಹ್ಲಿ ವಿವಾದ ಹುಟ್ಟುಹಾಕಿದ್ದಾರೆ.

ಸಂಕ್ಷಿಪ್ತ ಸ್ಕೋರ್

ಹೈದರಾಬಾದ್ 20 ಓವರ್‌ಗಳಲ್ಲಿ 255/4: ಕಿಶನ್ 79, ಅಭಿಷೇಕ್ 56, ಕ್ಲಾಸೆನ್ 51; ರಸೀಖ್ 51/2
ಆರ್‌ಸಿಬಿ 20 ಓವರ್‌ಗಳಲ್ಲಿ 200/4: ಪಾಟಿದಾರ್ 56, ವೆಂಕಟೇಶ್ 44, ಕೃಣಾಲ್ 41★; ಇಶಾನ್ 33/2

ಟೆನಿಸ್: ಭಾರತ ಜೋಡಿಗೆ ಕಿರೀಟ

ಬೆಂಗಳೂರು: ಎಸ್.ಎಂ. ಕೃಷ್ಣ ಮೆಮೋರಿಯಲ್ ಓಪನ್ ಟೆನಿಸ್ ಟೂರ್ನಿಯಲ್ಲಿ ನಾಲ್ಕನೇ ಶ್ರೇಯಾಂಕಿತ ಪೆಟರ್ ಬಾರ್ ಬಿರಿಯುಕೊವ್ ಪುರುಷರ ಸಿಂಗಲ್ಸ್ ಪ್ರಶಸ್ತಿ ಗೆದ್ದರೆ, ಭಾರತದ ಆದಿಲ್ ಕಲ್ಯಾಣಪುರ ಮತ್ತು ಮುಕುಂದ್ ಶಶಿಕುಮಾರ್ ಜೋಡಿ ಡಬಲ್ಸ್ ಚಾಂಪಿಯನ್ ಆಗಿ ಮಿಂಚಿತು.

ಶನಿವಾರ ನಡೆದ ಸಿಂಗಲ್ಸ್ ಫೈನಲ್‌ನಲ್ಲಿ ಬಿರಿಯುಕೊವ್, ಮಾಜಿ ವಿಶ್ವ ನಂ. 40 ಆಟಗಾರ ಇಲ್ಯಾ ಇವಾಶ್ಕಾ ವಿರುದ್ಧ 7-6 (0), 4-6, 6-4 ಅಂತರದಲ್ಲಿ ಗೆದ್ದು ಚಾಂಪಿಯನ್ ಪಟ್ಟ ಅಲಂಕರಿಸಿದರು. ಈ ಗೆಲುವಿನೊಂದಿಗೆ ಬಿರಿಯುಕೊವ್ ತಮ್ಮ ವೃತ್ತಿಜೀವನದ ಮೊದಲ ಎಟಿಪಿ ಚಾಲೆಂಜರ್ ಪ್ರಶಸ್ತಿ ಗೆದ್ದರು. ಅವರಿಗೆ 9,500 ಅಮೆರಿಕನ್ ಡಾಲರ್ ಬಹುಮಾನ ಹಾಗೂ 50 ಎಟಿಪಿ ಅಂಕಗಳು ಲಭಿಸಿದವು.

ಡಬಲ್ಸ್‌ನಲ್ಲಿ ಭಾರತ ಕಿಂಗ್: ನಂತರ ನಡೆದ ಡಬಲ್ಸ್ ಫೈನಲ್‌ನಲ್ಲಿ ಆದಿಲ್ ಕಲ್ಯಾಣಪುರ ಮತ್ತು ಮುಕುಂದ್ ಶಶಿಕುಮಾರ್ ಜೋಡಿ, ಬಿರಿಯುಕೊವ್ ಹಾಗೂ ಕಝಕಿಸ್ತಾನದ ಗ್ರಿಗೊರಿಯ್ ಲೊಮಾಕಿನ್ ವಿರುದ್ಧ 6-7 (3), 6-4, 10-3 ಅಂತರದಲ್ಲಿ ಭರ್ಜರಿ ಗೆಲುವು ದಾಖಲಿಸಿತು. ಇದು ಆದಿಲ್ ಮತ್ತು ಮುಕುಂದ್ ಅವರ ಮೊದಲ ಎಟಿಪಿ ಚಾಲೆಂಜರ್ ಡಬಲ್ಸ್ ಪ್ರಶಸ್ತಿಯಾಗಿದೆ.



ಮೊದಲ ದಿನವೇ ನೋವಾಕ್ ಜೋಕೊವಿಚ್ ಕಣಕ್ಕೆ

ಇಂದಿನಿಂದ ಫ್ರೆಂಚ್ ಓಪನ್



ಪ್ಯಾರಿಸ್: ಟೆನಿಸ್ ಲೋಕದ ಪ್ರಮುಖ ಪಂದ್ಯಾವಳಿಗಳಲ್ಲಿ ಒಂದಾದ, ಗ್ರ್ಯಾಂಡ್ ಸ್ಲಾಮ್ ಫ್ರೆಂಚ್ ಓಪನ್ ಅಲಿಯಾಸ್ ರೋಲ್ಯಾಂಡ್ ಗ್ಯಾರೋಸ್ ಭಾನುವಾರದಿಂದ ಶುರುವಾಗಲಿದೆ. ತೀವ್ರ ಪೈಪೋಟಿಯಿಂದ ಕೂಡಿರುವ ಪಂದ್ಯಾವಳಿಯ ಮೊದಲ ದಿನವೇ ಪ್ರಮುಖ ಟೆನಿಸ್ ಪಟುಗಳು ಕಣಕ್ಕಿಳಿಯಲಿದ್ದಾರೆ. ಭಾನುವಾರದಂದು ಮುಖ್ಯ ಡ್ರಾ ಮೊದಲ ಪಂದ್ಯ ನಡೆಯಲಿದೆ. ಜೂನ್ 7ರಂದು ನಡೆಯಲಿರುವ ಪುರುಷರ ಸಿಂಗಲ್ಸ್ ಫೈನಲ್‌ನೊಂದಿಗೆ ಪಂದ್ಯಾವಳಿಗೆ ತೆರೆ ಬೀಳಲಿದೆ.

ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ನಡೆಯುವ ಈ ಕೂಟವು ಐದು ವಿಭಾಗಗಳಲ್ಲಿ ನಡೆಯುತ್ತದೆ. ಪಂದ್ಯಾವಳಿಯ ವಿಜೇತರಿಗೆ ವಿಶೇಷ ಬಹುಮಾನದ ಜತೆಗೆ 200 ಎಟಿಪಿ ಅಂಕಗಳು ಸಿಗಲಿವೆ. ಅರ್ಹತಾ ಸುತ್ತಿನ ಪಂದ್ಯಗಳು ಶನಿವಾರದಂದು ಪೂರ್ಣಗೊಂಡಿದ್ದು, ಮುಖ್ಯ ಡ್ರಾನ ಮೊದಲ ಪಂದ್ಯದಲ್ಲಿ ಅಲೆಜಾಂಡ್ರೊ ಡೇವಿಡೋವಿಚ್ ಹಾಗೂ ದಾಮಿರ್ ವಿರುದ್ಧ ನಡೆಯಲಿದೆ. ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಲೂಸಿಯಾ ಬ್ರೊಂಜೆಟ್ಟಿ, ಮಾರೀ ಬೌಜ್ಕೋವಾ ವಿರುದ್ಧ ನಡೆಯಲಿದೆ.

ದಿನದ ಪ್ರಮುಖ ಪಂದ್ಯಗಳು:

ಬೊಂಜಿ-ಜ್ವೇರೆವ್: ವಿಶ್ವದ ಅಗ್ರ ಶ್ರೇಯಾಂಕಿತ ಆಟಗಾರರಲ್ಲಿ ಒಬ್ಬರಾದ ಬೆಂಜಾಮಿನ್ ಬೊಂಜಿ ಮತ್ತು ಅಲೆಕ್ಸಾಂಡರ್ ಜ್ವೇರೆವ್ ಭಾನುವಾರದ ಪಂದ್ಯದಲ್ಲಿ ಮುಖಾಮುಖಿಯಾಗಲಿದ್ದಾರೆ. ಸಂಜೆ 4:40ಕ್ಕೆ ಈ ಪಂದ್ಯ ನಡೆಯಲಿದೆ. ಹಿಂದಿನ ಕೂಟಗಳಲ್ಲಿ ಉತ್ತಮ ಪ್ರದರ್ಶನ ನೀಡಿರುವ ಜ್ವೇರೆವ್ ಗೆಲುವಿನ ಆರಂಭದ ವಿಶ್ವಾಸದಲ್ಲಿದ್ದಾರೆ.

ಟೇಲರ್ ಫ್ರಿಟ್ಜ್-ನಿಶೇಶ್ ಬಸವರೆಡ್ಡಿ: ಅಮೆರಿಕದ ಟೇಲರ್ ಫ್ರಿಡ್ಜ್ ಸ್ವದೇಶದ ಬಸವರೆಡ್ಡಿ ಅವರನ್ನು ಎದುರಿಸಲಿದ್ದಾರೆ. ವಿಶ್ವ ಶ್ರೇಯಾಂಕದಲ್ಲಿ ಉತ್ತಮ ಪ್ರದರ್ಶನ ನೀಡಿರುವ ಫ್ರಿಟ್ಜ್ ನಿರೀಕ್ಷೆಗಳೊಂದಿಗೆ ಪಂದ್ಯಾವಳಿಗೆ ಬಂದಿದ್ದು, ತಮ್ಮ ಮೊದಲನೇ ಕಿರೀಟಕ್ಕಾಗಿ ಫೈಟ್ ನಡೆಸುತ್ತಿದ್ದಾರೆ. ಅತ್ತ ಅಮೆರಿಕ ಪ್ರತಿನಿಧಿಸಿರುತ್ತಿರುವ ನಿಶೇಶ್ ಕೂಡ ಗೆಲುವಿಗಾಗಿ ಪೈಪೋಟಿ ನಡೆಸಲಿದ್ದಾರೆ.

ಪಂದ್ಯಾವಳಿಯ ವೇಳಾಪಟ್ಟಿ

- ಮೇ 24-ಮೇ 26: ಪುರುಷ ಮತ್ತು ಮಹಿಳಾ ಸಿಂಗಲ್ಸ್ - ಮೊದಲ ಸುತ್ತು
- ಮೇ 27-ಮೇ 28: ಪುರುಷ ಮತ್ತು ಮಹಿಳಾ ಸಿಂಗಲ್ಸ್ - ಎರಡನೇ ಸುತ್ತು
- ಮೇ 29-ಮೇ 30: ಪುರುಷ ಮತ್ತು ಮಹಿಳಾ ಸಿಂಗಲ್ಸ್ - ಮೂರನೇ ಸುತ್ತು
- ಮೇ 31-ಜೂನ್ 1: ಪುರುಷ ಮತ್ತು ಮಹಿಳಾ ಸಿಂಗಲ್ಸ್ - ನಾಲ್ಕನೇ ಸುತ್ತು
- ಜೂನ್ 2-ಜೂನ್ 3: ಪುರುಷ ಮತ್ತು ಮಹಿಳಾ ಸಿಂಗಲ್ಸ್ - ಕ್ವಾರ್ಟರ್-ಫೈನಲ್ಸ್
- ಜೂನ್ 4: ಮಹಿಳಾ ಸಿಂಗಲ್ಸ್ - ಸೆಮಿಫೈನಲ್ಸ್
- ಜೂನ್ 5: ಪುರುಷರ ಸಿಂಗಲ್ಸ್ - ಸೆಮಿಫೈನಲ್ಸ್
- ಜೂನ್ 6: ಮಹಿಳಾ ಸಿಂಗಲ್ಸ್ - ಫೈನಲ್
- ಜೂನ್ 7: ಪುರುಷರ ಸಿಂಗಲ್ಸ್ - ಫೈನಲ್

ಈ ಪಂದ್ಯ ಸಂಜೆ 5:20ಕ್ಕೆ ನಡೆಯಲಿದೆ.

ಜಿಯೋವಾನಿ ಪೆರಿಕಾರ್ಡ್-ನೋವಾಕ್ ಜೋಕೊವಿಚ್: ಸರ್ಬಿಯಾದ ಟೆನಿಸ್ ದಿಗ್ಗಜ ನೋವಾಕ್ ಜೋಕೊವಿಚ್ ಪಂದ್ಯಾವಳಿಯ ಮೊದಲ ದಿನವೇ ಮೈದಾನಕ್ಕಿಳಿಯಲಿದ್ದಾರೆ. ವಿಶ್ವ ಶ್ರೇಯಾಂಕದಲ್ಲಿ ಅತ್ಯುನ್ನತ ದಾಖಲೆಗಳನ್ನು ಹೊಂದಿರುವ ಜೋಕೊವಿಚ್ ಪಂದ್ಯಾವಳಿಯ ಗೆಲುವಿನ ಫೇವರಿಟ್ ಆಗಿದ್ದಾರೆ. ಮೊದಲ ಪಂದ್ಯದಲ್ಲಿ ಜಿಯೋವಾನಿ ಅವರನ್ನು ಎದುರಿಸಲಿದ್ದು, ಪಂದ್ಯ ತಡರಾತ್ರಿ 11:45ಕ್ಕೆ ನಡೆಯಲಿದೆ.

ಮಹಿಳೆಯರ ವಿಭಾಗದಲ್ಲೂ ಸ್ಟಾರ್ ಆಟಗಾರರಿದ್ದು, ಆದರೆ ಅಗ್ರ ಶ್ರೇಯಾಂಕಿತ ಆಟಗಾರರು ಎರಡನೇ ದಿನ ಮುಖಾಮುಖಿಯಾಗಲಿದ್ದಾರೆ. ಮೊದಲ ದಿನದ ಗಮನಿಸಬೇಕಾದ ಪಂದ್ಯದಲ್ಲಿ ಚೀನಾದ ವಾಂಗ್ ಹಾಗೂ ಟಾಗರ್ ಪಂದ್ಯವಾಡಲಿದ್ದಾರೆ.

ಗೌತಮ್ ನಾಯರ್ ಮುಡಿಗೇರಿದ ಪ್ರಶಸ್ತಿ

ವಿಜಯಪುರ: 15 ವರ್ಷದ ಬಾಲಕರ ಸಿಂಗಲ್ಸ್ ವಿಭಾಗದಲ್ಲಿ ಬೆಂಗಳೂರಿನ ಗೌತಮ್ ಎಸ್ ನಾಯರ್ ಬೆಂಗಳೂರು ಗ್ರಾಮಾಂತರದ ಯಶವರ್ಧನ್ ಎಸ್. ಆರ್. ವಿರುದ್ಧ 21-12, 21-19 ಅಂತರದಿಂದ ಜಯಗಳಿಸಿ ಪಂದ್ಯಾವಳಿ ಮುಡಿಗೇರಿಸಿಕೊಂಡರು.

15 ವರ್ಷದ ಬಾಲಕಿಯರ ಸಿಂಗಲ್ಸ್ ಬೆಂಗಳೂರಿನ ಮಹಿತಾ ನಾಯ್ಡು, ಸ್ಮೃತಿ ಎಸ್. ವಿರುದ್ಧ 21-10, 21-7ರಿಂದ ಗೆದ್ದರು.ಇಲ್ಲಿನ ಡಾ.ಬಿ.ಆರ್. ಅಂಬೇಡ್ಕರ್ ಜಿಲ್ಲಾ ಒಳಾಂಗಣ ಕ್ರೀಡಾಂಗಣದಲ್ಲಿ ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್ ಯೋನೆಕ್ಸ್ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಬ್ಯಾಡ್ಮಿಂಟನ್ ಪಂದಾವಳಿಗೆ ಶನಿವಾರ ತೆರೆ ಬಿದ್ದಿತು.

ಜೋಡಿ ವಿಭಾಗದಲ್ಲಿ: 15 ವರ್ಷದ ಬಾಲಕರ ಡಬಲ್ಸ್ ವಿಭಾಗದಲ್ಲಿ ಬೆಂಗಳೂರಿನ ಚೇತಸ್ ಮುಂಡರಗಿ, ವಿಶಾಲ್ ಡಿ. ಆನಂದ್ ಕೊಡಗಿನ ಗೌತಮ್ ಎಸ್. ನಾಯರ್, ಬೆಂಗಳೂರಿನ ಸಿದ್ಧಾರ್ಥ್ ಎಸ್. ನಾಯರ್ ವಿರುದ್ಧ 14-21, 21-14, 21-16 ಜಯಗಳಿಸಿದರು.15 ವರ್ಷದ ಬಾಲಕಿಯರ ಡಬಲ್ಸ್ ವಿಭಾಗದಲ್ಲಿ ಬೆಂಗಳೂರಿನ ಹಂಸಾ ಮುರಳೀಧರ, ಮಹಿತಾ ನಾಯ್ಡು ಬೆಂಗಳೂರಿನ ಜೀವಿಕಾಹ್ ಸಾಯಿ ರಾಜೇಶ್ ಕುಮಾರ್, ಮನಿಕಾ ನವೀನ್ ವಿರುದ್ಧ 21-18, 21-15ಗೆದ್ದರು.




ಯಶವರ್ಧನ್-ಆದಿತಿ ಚಾಂಪಿಯನ್: 15 ವರ್ಷದ ಮಿಶ್ರ ಡಬಲ್ಸ್ ವಿಭಾಗದಲ್ಲಿಯಶವರ್ಧನ್ ಎಸ್.ಆರ್., ಆದಿತಿ ಸುಶಾಂತ್, ಬಿ.ಬಿ. ವಿಶಾಲ್ ಉತ್ತಪ್ಪ ಹಾಗೂ ಹನ್ಸಿಕಾ ರಾಕೇಶ್ ವಿರುದ್ಧ ಗೆದ್ದರು. 17 ವರ್ಷದ ಬಾಲಕರ ಸಿಂಗಲ್ಸ್ ವಿಭಾಗದಲ್ಲಿ ಬೆಂಗಳೂರಿನ ಪೀಯೂಷ್ ತ್ರಿಪಾಠಿ, ಡಿಲನ್ ಪಿ. ತೋಕ್ಚೊಂ ವಿರುದ್ಧ 21-19, 10-21, 21-17 ಅಂತರದಿಂದ ಗೆದ್ದರು. 17 ವರ್ಷದ ಬಾಲಕಿಯರ ಸಿಂಗಲ್ಸ್ ವಿಭಾಗದಲ್ಲಿ ಆದಿತಿ ಸುಶಾಂತ್ ಕೀರ್ತಿ ಬಾಲಾಜಿ ವಿರುದ್ಧ 21-18, 21-16 ಗೆದ್ದರು.

17 ವರ್ಷದ ಬಾಲಕರ ಡಬಲ್ಸ್ ವಿಭಾಗದಲ್ಲಿ ಬೆಂಗಳೂರಿನ ಮೆಹುಲ್ ಮನವ್ ಆರುಳ್ಮುರುಗನ್, ಸಾತ್ವಿಕ್ ಎಸ್ ಪ್ರಭು, ಚಿರಾಗ್ ಪ್ರಕಾಶ್, ಬೆಂಗಳೂರಿನ ನಿಕೇತನ ಹರಿ ಎನ್.ಡಿ. ವಿರುದ್ಧ 15-21, 21-19, 21-18 ಗೆದ್ದರೆ, ಬಾಲಕಿಯರಲ್ಲಿ ದಿಶಾ ರವಿ ಭಟ್, ತನ್ವಿ ಮುನೋತ್ ಅವರು ರಕ್ಷಾ ಎನ್., ಶ್ರಿಯಾ ಜೋಶಿ ವಿರುದ್ಧ 21-11, 21-13 ಗೆದ್ದರು. 17 ವರ್ಷದ ಮಿಶ್ರ ಡಬಲ್ಸ್ ವಿಭಾಗದಲ್ಲಿ ಬೆಂಗಳೂರಿನ ಈಶ್ವರ್ ಸಾಯಿ ಕಟಂ, ಡೆಬೋರಾ ಜಾನ್ ಅವರು ಚಿರಾಗ್ ಪ್ರಕಾಶ್, ಬೆಂಗಳೂರಿನ ತನ್ವಿ ಮುನೋತ್ ವಿರುದ್ಧ 21-17, 21-16 ಅಂತರದಿಂದ ಜಯಗಳಿಸಿದರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5993


ಎಡದಿಂದ ಬಲಕ್ಕೆ
2.ಸಂಸ್ಕೃತದಿಂದ ಹುಟ್ಟಿದ ಶಬ್ದ (3)
5.ಸ್ವೇಚ್ಛೆಯಾಗಿ ಅಡ್ಡಾಡುವ ಜಾನುವಾರು (4)
6.ಜೊತೆಯಲ್ಲಿರುವವನು-ಒಡನಾಡಿ (4)
7.ಚಾಣಾಕ್ಷತನಕ್ಕೆ ಹೆಸರಾದ ಪ್ರಾಣಿ (2)
9.ದೇವರಿಂದ ಸಿಕ್ಕ ವಿಶೇಷ ಅನುಗ್ರಹ (2)
10.ಭೌತಶಾಸ್ತ್ರದಲ್ಲಿ ಕಂಪನಗಳ ಚಲನೆ (3)
12.ತನ್ನ ದೇಹದಿಂದ ಜನಿಸಿದವನು-ಮಗ (3)
14.ಮಳೆ ಬರುವ ಸಮಯ-ವರ್ಷಕಾಲ (5)
15.ಹತ್ತು ಕುತ್ತಿಗೆಗಳನ್ನು ಹೊಂದಿದವನು-ರಾವಣ (4)
16.ಬಯಲುಸೀಮೆಯಲ್ಲಿ ಕಂಡುಬರುವ ಮುಳ್ಳಿನಮರ (4)

ಮೇಲಿನಿಂದ ಕೆಳಕ್ಕೆ
1.ಮಂತ್ರಪೂರ್ವಕವಾಗಿ ಅಂಗೈಯ ನೀರನ್ನು ಹೀರುವ ಕ್ರಿಯೆ(4)
2.'ಅಂತ್ಯದವರೆಗೆ' ತಲೆಕೆಳಗಾಗಿದೆ (5)
3.ಚೈತ್ರ-ವೈಶಾಖ ಮಾಸಗಳ ಕಾಲ (5)
4.ಹಾವುಗಳನ್ನು ಆಕರ್ಷಿಸುತ್ತದೆ ಎನ್ನುವ ವಾದ್ಯ (4)
8.ಬಣ್ಣದ ಕೆಲಸ ಮಾಡುವವ ತಲೆಕೆಳಗಾಗಿದ್ದಾನೆ (3)
9.ವಸ್ತುವಿನ ಭಾರ ಸೂಚಿಸುವ ಪದ (3)
10.ತಾತ್ವಿಕ ವಿಚಾರಗಳುಳ್ಳ ಹಾಡು (4)
11.ಅಗ್ರಜ ಏರಿ ಕುಳಿತದ್ದು ಈ ಆನೆಯ ಮೇಲೆ (2)
12.ಬೆಳಕಿನ ಅಭಾವ-ಸಾಹಿತ್ಯದಲ್ಲಿ ಅಜ್ಞಾನ (2)
13.ಹೋರಾಟದಲ್ಲಿ ಗೆಲುವು ಸಾಧಿಸಿದವನು (4)

5992 ಉತ್ತರ

ಎಡದಿಂದ ಬಲಕ್ಕೆ:
2.ತರಂಗ 5.ಜ್ಞಾನಿ
6.ರೋಷ 7.ಲಜ್ಜೆಗೇಡಿ
9.ಕ್ಷಮಾಗುಣ
11.ಬೆಣ್ಣೆಕಾಸು
13.ಹಸಿಮಾಂಸ 15.ಲೆಕ್ಕಣಿ
16.ಜಹಾಂಗೀರ್
17.ಜಮಾವಣೆ

ಮೇಲಿನಿಂದ ಕೆಳಕ್ಕೆ :
1.ಮಣ್ಯಕಾಲ 2.ತನಿಗಿಡಿ
3.ಕ್ಷಯರೋಗ
4.ಆಮಂತ್ರಣ
8.ಗೇರೆಣ್ಣೆ 10.ಮಾನಸಿ
11.ಸುರರಾಜ 12.ಬೆಲೆ
13.ಹಣಿ 14.ಸಮರ್ಪಣೆ



Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ

ದಕ್ಷಿಣ ಕನ್ನಡ 32° 26° | ಉಡುಪಿ 31° 27°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಭಾನುವಾರ 24, ಮೇ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 5

ಕಾಸರಗೋಡು ಸರಕಾರಿ ಜನರಲ್ ಆಸ್ಪತ್ರೆಯ ಉದ್ಘಾಟನೆಗೆ ಮೀನಮೇಷ!



ಪುಟ 6

ಮೂಲಸೌಲಭ್ಯ ವಂಚಿತ ಜಿಲ್ಲಾಸ್ಪತ್ರೆಗೆ ಬೇಕಿದೆ ತುರ್ತು ಚಿಕಿತ್ಸೆ!

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಹಲಸಿನ ಬಗೆಬಗೆ ತಿನಿಸುಗಳಿಂದ ಘಮಘಮಿಸುತ್ತಿದೆ ಮಂಗಳೂರಿನ ಬಾಳಂಭಟ್ ಸಭಾಂಗಣ!







ಸಾವಯವ ಕೃಷಿಕ ಗ್ರಾಹಕ ಬಳಗದ ಸಾರಥ್ಯದಲ್ಲಿ ಮಂಗಳೂರಿನ ಬಾಳಂಭಟ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿರುವ ಎರಡು ದಿನಗಳ ಹಲಸು ಹಬ್ಬಕ್ಕೆ ಶನಿವಾರ ಚಾಲನೆ ಸಿಕ್ಕಿದೆ. ಹಲಸಿನ ಶೀರ, ಪಾಯಸ, ಕಬಾಬ್, ಹಲಸಿನ ಗಾರಿಗೆ, ಪೋಡಿ, ಹೋಳಿಗೆ ಹಾಗೂ ವೈವಿಧ್ಯಮಯ ತಿಂಡಿ ತಿನಸುಗಳ ಮಳಿಗೆಗಳಲ್ಲದೆ ತರಕಾರಿ ಬೀಜ, ತರಕಾರಿ ಗಿಡಗಳು, ಜೇನು ಉತ್ಪನ್ನ, ಖಾದಿ ವಸ್ತ್ರಗಳ ಮಳಿಗೆಗಳು ಕೂಡಾ ಇಲ್ಲಿವೆ.

ಸುತ್ತಮುತ್ತ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಂದುವರಿದ ಮೋಡ ಬಿಸಿಲಿನ ವಾತಾವರಣ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶನಿವಾರವೂ ಮೋಡ ಹಾಗೂ ಬಿಸಿಲಿನ ವಾತಾವರಣ ಮುಂದುವರಿದಿದೆ. ಎರಡು ದಿನಗಳ ಕಾಲ ಮಳೆಯ ಮುನ್ಸೂಚನೆ ನೀಡಲಾಗಿದ್ದರೂ ಎಲ್ಲೂ ಭಾರೀ ಪ್ರಮಾಣದ ಮಳೆಯಾಗಿಲ್ಲ, ತಾಪಮಾನ ಏರಿಕೆ ಮುಂದುವರಿದಿದ್ದು, ಗ್ರಾಮೀಣ ಭಾಗಗಳಲ್ಲಿ ರಾತ್ರಿಯ ಬಳಿಕ ತಾಪಮಾನ ಇಳಿಕೆಯಾಗಿ ತುಸು ತಂಪಿನ ಅನುಭವವಾಗುತ್ತಿದೆ.

ಕರ್ಕಶ ಸೈಲೆನ್ಸರ್ ಬಳಕೆ ಮಾಡುತ್ತಿದ್ದ ಬೈಕ್‌ಗಳು ಸಂಚಾರ ಪೊಲೀಸರ ವಶ

ಕುಂದಾಪುರ: ಇಲ್ಲಿನ ನಗರ ವ್ಯಾಪ್ತಿ ಸಹಿತ ವಿವಿದೆಡೆ ಕರ್ಕಶ ಶಬ್ದ ಮಾಡುವ ಮಾರ್ಪಾಡು ಮಾಡಿದ ಸೈಲೆನ್ಸರ್ ಹೊಂದಿದ ಬೈಕ್‌ಗಳಲ್ಲಿ ವೇಗದ ಚಾಲನೆ, ಸಂಚಾರಿ ನಿಯಮ ಉಲ್ಲಂಘಿಸುತ್ತಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದ ಹಿನ್ನೆಲೆ ಶುಕ್ರವಾರ, ಶನಿವಾರ ಕಾರ್ಯಾಚರಣೆಗಿಳಿದ ಕುಂದಾಪುರ ಸಂಚಾರ ಠಾಣೆ ಪೊಲೀಸರು ಹಲವು ಬೈಕ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಕುಂದಾಪುರ ನಗರದ ಕಾಲೇಜು, ಆಸ್ಪತ್ರೆ ಆವರಣ, ವಿದ್ಯಾರ್ಥಿಗಳ ಹಾಸ್ಟೆಲ್ ಸಹಿತ ರಾಷ್ಟ್ರೀಯ ಹೆದ್ದಾರಿಯಲ್ಲಿ ಕರ್ಕಶ ಶಬ್ದದೊಂದಿಗೆ ಸುತ್ತಾಡುವ ಬಗ್ಗೆ ದೂರುಗಳು ಬಂದಿತ್ತು. »ಪುಟ 6

ಎಲ್ಲೆಡೆ ಈಗ ಶಾಲೆಗೆ ಹೊರಡುವ ಸಿದ್ಧತೆ

ವ್ಯಾಪಾರ ಭರ್ಜರಿ!

ಅಂಗಡಿ ಮುಂದೆ ಪೋಷಕರ ದಂಡು

ಕಾಸರಗೋಡು: ಜಿಲ್ಲೆಯಲ್ಲಿ ಶಾಲೆಗಳ ಆರಂಭಕ್ಕೆ ಇನ್ನು ಕೆಲವೇ ಕೆಲವು ದಿನಗಳು ಮಾತ್ರ ಬಾಕಿ ಉಳಿದಿದ್ದು, ಈ ನಿಟ್ಟಿನಲ್ಲಿ ಮಕ್ಕಳ ಪೋಷಕರು ಈಗ ಎಲ್ಲೆಡೆ ಸಕಲ ಸಿದ್ಧತೆಗಳಲ್ಲಿ ಬಿಝಿಯಾಗಿದ್ದಾರೆ.

ಅಂಗಡಿಗಳ ಮುಂದೆ ಸಾಲು ಸಾಲು

ವಿವಿಧ ಶಾಲಾ ಸಾಮಗ್ರಿಗಳನ್ನು ಖರೀದಿಸಲು ಇಲ್ಲಿನ ನಗರ ಸಹಿತ ಜಿಲ್ಲೆಯ ಎಲ್ಲೆಡೆಗಳ ವ್ಯಾಪಾರ ಮಳಿಗೆಗಳಿಗೆ ಪೋಷಕರು ತಮ್ಮ ಮಕ್ಕಳೊಂದಿಗೆ ಭಾರೀ ಸಂಖ್ಯೆಯಲ್ಲಿ ಈಗ ಆಗಮಿಸುತ್ತಿದ್ದಾರೆ.

ವಿದೇಶೀ ವಸ್ತುಗಳ ದರ್ಬಾರು...

ಅಲ್ಲಲ್ಲಿ ಅಂಗಡಿಗಳಲ್ಲಿ ಮಕ್ಕಳನ್ನು ಆಕರ್ಷಿಸುವ ವಿವಿಧ ವಿದೇಶಿ ನಿರ್ಮಿತ ಕಲಿಕೋಪಕರಣಗಳು ಮಾರುಕಟ್ಟೆಗಳಲ್ಲಿ ಅಪಾರ ಸಂಗ್ರಹವಿದೆ. »ಪುಟ 6



ಸಂಗಮ ವಿಶೇಷ

ಒಂದಿಷ್ಟು ಲಾಭಾಂಶ ಈ ಸೀಸನ್‌ನಲ್ಲಿ ಮಾತ್ರ

ಶಾಲಾರಂಭದ ಈ ಸೀಸನ್‌ನಲ್ಲಿ ಸಾಕಷ್ಟು ವ್ಯಾಪಾರವಾದರೆ ನಂತರ ಮಳೆಗಾಲದಲ್ಲಿ ಏನೂ ವ್ಯಾಪಾರವಿಲ್ಲದೆ ಕೈ ಕಟ್ಟಿಕೊಳ್ಳ ಬೇಕಾದ ಪರಿಸ್ಥಿತಿ ತಲೆದೋರುತ್ತದೆ ಎಂದು ಕಾಸರಗೋಡಿನ ವ್ಯಾಪಾರಿಗಳು ಹೇಳುತ್ತಾರೆ.

ಬೇರೆ ಬೇರೆ ಕಡೆ ಬೇರೆ ಬೇರೆ ರೇಟು

ಕಲಿಕೋಪಕರಣಗಳಿಗೆ ಎಲ್ಲಾ ಅಂಗಡಿಗಳಲ್ಲಿ ಒಂದೇ ರೀತಿಯ ದರ ನಿಗದಿಪಡಿಸಿಲ್ಲ. ಬೇರೆ ಬೇರೆ ಅಂಗಡಿಗಳಲ್ಲಿ ಬೇರೆ ಬೇರೆ ದರ ವಸೂಲು ಮಾಡುತ್ತಿರುವುದಾಗಿ ದೂರುಗಳಿವೆ. ಆದಕಾರಣ ರಕ್ಷಕರು ಬ್ಯಾಗ್ ಖರೀದಿಸಬೇಕಾದರೆ ಬೇರೆ ಬೇರೆ ಅಂಗಡಿಗಳಿಗೆ ತೆರಳಿ ದರ ಕೇಳಿ ಹೊರಬರುತ್ತಿರುವುದು ಗೋಚರಿಸುತ್ತಿದೆ. ಇದೇ ರೀತಿ ಕೊಡೆ ಖರೀದಿಯಲ್ಲಿಯೂ ಬೇರೆ ಬೇರೆ ದರ ನಿಗದಿಪಡಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಹೆತ್ತವರಿಗೆ ಯಾವ ಅಂಗಡಿಯಿಂದ ಖರೀದಿಸಬೇಕು ಎಂದು ಆಲೋಚಿಸುವಂತಾಗಿದೆ.

ಕೊರಿಯಾ ಬ್ಯಾಗ್, ಪೆನ್, ಪೆನ್ಸಿಲ್, ಪೆನ್ಸಿಲ್ ಕಟರ್!!

ಕೊರಿಯಾದಲ್ಲಿ ನಿರ್ಮಿಸಿರುವುದೆಂದು ಹೇಳಲಾಗುತ್ತಿರುವ ಸ್ಕೂಲ್ ಬ್ಯಾಗ್, ಪೆನ್ನು, ಪೆನ್ಸಿಲ್, ಪೆನ್ಸಿಲ್ ಕಟರ್, ಇರೇಸರ್ ಮೊದಲಾದವುಗಳು ಕಾಸರಗೋಡಿನ ಹಲವೆಡೆಗಳಲ್ಲಿ ಕಡಿಮೆ ಬೆಲೆಗೆ ಲಭ್ಯವಾಗುತ್ತಿರುವುದಾಗಿ ಹೇಳಲಾಗುತ್ತಿದೆ. ಆದರೆ ಇದರ ಗುಣಮಟ್ಟ ಹೇಗಿದೆ ಎಂಬ ಬಗ್ಗೆ ಮಾತ್ರ ಮಾರಾಟ ಮಾಡುವ ವ್ಯಾಪಾರಿಗಳಲ್ಲಿಯೂ ಯಾವುದೇ ಖಾತ್ರಿಯಿಲ್ಲ.

ಎಲ್ಲೆಡೆ ಮುಂಗಾರು ಪೂರ್ವ ಅಬ್ಬರ

ಜಸ್ಟ್ 24 ಗಂಟೆಯಲ್ಲಿ 43.3 ಮಿ.ಮೀ. ಮಳೆ

ವರ್ಷಧಾರೆಗೆ ಮಿಂದೆದ್ದ ಉಡುಪಿ

ಉಡುಪಿ: ಉಡುಪಿ ಜಿಲ್ಲೆಯಾದ್ಯಂತ ಕಳೆದ 24 ಗಂಟೆಗಳಲ್ಲಿ ಮುಂಗಾರು ಪೂರ್ವ ಮಳೆಯ ಆರ್ಭಟ ಮುಂದುವರಿದಿದ್ದು, ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಉತ್ತಮ ಮಳೆಯಾಗಿರುವ ವರದಿಯಾಗಿದೆ. ಜಿಲ್ಲಾದ್ಯಂತ ಒಟ್ಟು 43.3 ಮಿ.ಮೀ. ಮಳೆ ದಾಖಲಾಗಿದೆ.

ಕಾರ್ಕಳ ,ಕಾಪುವಿನಲ್ಲಿ ಗರಿಷ್ಠ ಮಳೆ

ತಾಲೂಕುವಾರು ಮಳೆಯ ವಿವರವನ್ನು ನೋಡುವುದಾದರೆ, ಕಾರ್ಕಳ ಮತ್ತು ಕಾಪು ಭಾಗದಲ್ಲಿ ಗರಿಷ್ಠ ಪ್ರಮಾಣದ ಮಳೆಯಾಗಿದೆ. ಕಾರ್ಕಳದಲ್ಲಿ 8.6 ಮಿಲಿ ಮೀಟರ್ ಹಾಗೂ ಕಾಪು ತಾಲೂಕಿನಲ್ಲಿ 8.4ಮಿಲಿ ಮೀಟರ್ ಮಳೆ ಬಿದ್ದಿದೆ. ಇದರ ಬೆನ್ನಲ್ಲೇ ಬೈಂದೂರು ತಾಲೂಕಿನಲ್ಲಿ 7.7 ಮಿ ಮೀ., ಕುಂದಾಪುರದಲ್ಲಿ 6.6 ಮಿಲಿ ಮೀಟರ್ ಮತ್ತು ಉಡುಪಿ ತಾಲೂಕಿನಲ್ಲಿ 6.2 ಮಿ.ಮೀ ಮಳೆಯಾಗಿದೆ.

ತಗ್ಗು ಪ್ರದೇಶಗಳಲ್ಲಿ ಇನ್ನೂ ನೆರೆ ನೀರು

ಇನ್ನುಳಿದಂತೆ ಬ್ರಹ್ಮಾವರದಲ್ಲಿ 4.7 ಮಿಲಿ ಮೀಟರ್ ಹಾಗೂ ಹೆಬ್ರಿ ತಾಲೂಕಿನಲ್ಲಿ 4.6 ಮಿಲಿ ಮೀಟರ್ ಮಳೆ ದಾಖಲಾಗಿದೆ. ಹೆದ್ದಾರಿ ಹಾಗೂ ಗ್ರಾಮೀಣ ಭಾಗದ ತಗ್ಗು ಪ್ರದೇಶಗಳಲ್ಲಿ ಮಳೆಯ ನೀರು ನಿಂತಿದ್ದು, ವಾತಾವರಣ ಸಂಪೂರ್ಣ ತಂಪಾಗಿದೆ.



ಕಡಲಿಗೆ ಇಳಿದಿಲ್ಲ

ಸಮುದ್ರದಲ್ಲಿ ಭಾರೀ ಗಾಳಿ ಬೀಸುವ ಸಾಧ್ಯತೆ ಇದೆ ಎಂಬ ಇಲಾಖಾ ಮುನ್ನೆಚ್ಚರಿಕೆ ಹಿನ್ನೆಲೆಯಲ್ಲಿ ಜಿಲ್ಲೆಯ ಹೆಚ್ಚಿನ ಮೀನುಗಾರರು ಮೀನುಗಾರಿಕೆಗೆ ಮುಂದಾಗಿಲ್ಲ.

ಸುತ್ತಮುತ್ತ

ಅಮರ ಚಾರಿಟೇಬಲ್: ಅಕ್ಕಿ ವಿತರಣೆ

ಸುಬ್ರಹ್ಮಣ್ಯ: ಗುತ್ತಿಗಾರಿನ ಅಮರ ತಾಲೂಕು ಪಬ್ಲಿಕ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಸ್ವಚ್ಛತೆ ಮೂಲಕ ಮಾದರಿಯಾದ ದಂಪತಿಗೆ ಅಕ್ಕಿ ವಿತರಣೆ ಮಾಡಲಾಯಿತು. ಜಿಲ್ಲಾ ಮಟ್ಟದ ಯೋಗಾಸನ ಮತ್ತು ರಕ್ತದಾನ ಶಿಬಿರ ಪ್ರಯುಕ್ತ ಶುಕ್ರವಾರ ಆಯೋಜನೆ ಮಾಡಲಾಗಿದ್ದ ಸಹಾಯ ನಿಧಿ ಕೂಪನ್ ಬಹುಮಾನವಾಗಿ ಉಳಿಕೆಯಾಗಿದ್ದ 50 ಕೆ.ಜಿ. ಅಕ್ಕಿಯನ್ನು ಗುತ್ತಿಗಾರಿನಲ್ಲಿ ಸ್ವಚ್ಛತಾ ಕೆಲಸವನ್ನು ಅತ್ಯಂತ ನಿಷ್ಠೆಯಿಂದ ಮಾಡುತ್ತ ಮಾದರಿ ಜೀವನ ನಡೆಸುತ್ತಿರುವ ಲೀಲಾವತಿ ಮತ್ತು ಅನಂತಕೃಷ್ಣ ಛತ್ರಪ್ಪಾಡಿ ಅವರಿಗೆ ವಿತರಿಸಲಾಯಿತು.
ಈ ಸಂದರ್ಭ ಗುತ್ತಿಗಾರು ಸಹಕಾರ ಸಂಘದ ನಿರ್ದೇಶಕ ವೆಂಕಟ್ ದಂಬೆಕೋಡಿ, ಸಹಕಾರ ಸಂಘದ ಮುಖ್ಯಸ್ಥ ಶರತ್ ಎ.ಕೆ., ಪ್ರಮುಖರಾದ ಶಶಿಧರ್ ಕೊಲ್ಯ, ದುರ್ಗಾನಾಥ್ ಅಚ್ರಪ್ಪಾಡಿ, ದಿವ್ಯಾ ಲಕ್ಷ್ಮಣ್ ದೇವಶ್ಯ, ಟ್ರಸ್ಟ್ ಉಪಾಧ್ಯಕ್ಷ ಮೋಹನ್ ದಾಸ್ ಶಿರಾಜೆ, ಟ್ರಸ್ಟ್ ಅಧ್ಯಕ್ಷ ಚಂದ್ರಶೇಖರ ಕಡೋಡಿ ಉಪಸ್ಥಿತರಿದ್ದರು.

ಆಯುರ್ವೇದ ವೈದ್ಯಕೀಯ ತಪಾಸಣಾ ಶಿಬಿರ

ಸುರತ್ಕಲ್: ಬ್ರಾಹ್ಮಣರ ಸಂಘ ಕಾಟಿಪಳ್ಳ ಕೃಷ್ಣಾಪುರ ಇವರ ಆಶ್ರಯದಲ್ಲಿ, ಕರ್ನಾಟಕ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ವೇದಾಮಯ ಆಯುರ್ವೇದ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಸಹಯೋಗದಿಂದ ಕಾಟಿಪಳ್ಳ ಮೂಲ ನಾಗಬ್ರಹ್ಮಸ್ಥಾನ ವಠಾರದಲ್ಲಿ, ಉಚಿತ ವೈದ್ಯಕೀಯ ತಪಾಸಣಾ ಶಿಬಿರ ನಡೆಯಿತು. ವೇದಾಮಯ ಆಯುರ್ವೇದ ಆಸ್ಪತ್ರೆಯ ಮುಖ್ಯಸ್ಥ ಡಾ. ಕೇಶವ್ ರಾಜ್ ಅವರು ಕಾರ್ಯಕಮ ಉದ್ಘಾಟಿಸಿ, ಮಾತನಾಡಿದರು. ಗೌರವ ಅಧ್ಯಕ್ಷ ಡಾ. ಕೃಷ್ಣ ಉಪಾಧ್ಯಾಯ ಮಾತನಾಡಿದರು. ಶಿಬಿರದಲ್ಲಿ ಆಯುರ್ವೇದ ಸ್ತ್ರೀರೋಗ ತಜ್ಞರು, ಆಯುರ್ವೇದ ಇಎನ್‌ಟಿ ತಜ್ಞರು, ಆಯುರ್ವೇದ ಕಣ್ಣಿನ ತಜ್ಞರು ಹಾಗೂ ಆಯುರ್ವೇದ ಮೂಲವ್ಯಾಧಿ ತಜ್ಞರಾದ ಡಾ. ಮನುಸ್ರೀ, ಡಾ. ರಕ್ಷಾ, ಡಾ. ಮೀರಾ ಮತ್ತು ತಂಡ, 100ಕ್ಕೂ ಹೆಚ್ಚು ಜನರಿಗೆ ಉಚಿತ ತಪಾಸಣೆ ಮತ್ತು ಔಷಧಿಗಳನ್ನು ವಿತರಿಸಿದರು. ಇದಲ್ಲದೆ ಮಧುಮೇಹ ಪರೀಕ್ಷೆ, ಮೂಳೆ ಸಾಂದ್ರತೆ ಪರೀಕ್ಷೆ, ಹಿಮೋಗ್ಲೋಬಿನ್ ಪರೀಕ್ಷೆ ಹಾಗೂ ಇತರ ಸಾಮಾನ್ಯ ಆರೋಗ್ಯ ತಪಾಸಣೆಗಳನ್ನು ಉಚಿತವಾಗಿ ನಡೆಸಿದರು. ಈ ಕಾರ್ಯಕ್ರಮದಲ್ಲಿ ಬ್ರಾಹ್ಮಣ ಸಂಘದ ಅಧ್ಯಕ್ಷರು ರವೀಂದ್ರ ರಾವ್, ಕಾರ್ಯದರ್ಶಿ ಡಾ. ನವೀನಚಂದ್ರ, ಭಾಸ್ಕರ್ ಬಾಸ್ರಿತ್ತಾಯ, ರಘುರಾಮ ತಂತ್ರಿ, ದಿನೇಶ ರಾವ್, ಸೂರ್ಯ ನಾರಾಯಣ ಹೊಳ್ಳ, ಜಯಂತಿ ಹೊಳ್ಳ, ರಂಜನ್ ಹೊಳ್ಳ, ಅವನೀಶ್ ಭಟ್, ಕೇಶವ್ ಭಟ್, ಪುರುಷೋತ್ತಮ ರಾವ್, ಕೃಷ್ಣರಾಜ್ ಭಟ್, ಗೋವಿಂದ ಭಟ್, ಟಿಜಿ ಶ್ರೀನಿವಾಸ್, ಭರತ್, ರಾಘವೇಂದ್ರ, ವರುಣ್ ರಾವ್, ಸುರೇಂದ್ರ ರಾವ್, ಗೋಪಾಲ ಮಯ್ಯ, ಸುಬ್ರಹ್ಮಣ್ಯ ಮಯ್ಯ, ಕಾರ್ತಿಕ್, ಮನೋಹರ, ರಾಘವೇಂದ್ರ ರಾವ್, ಹರೀಶ, ಮಾಧವಿ, ಜಯಲಕ್ಷ್ಮಿ ಹೆಗ್ಡೆ, ಯೋಗೀಶ, ನಾಗೇಶ್ ಕಾರಂತ, ಮಾನಸ, ಮಂಜುಳ, ರಾಜೇಶ್ವರಿ, ಅನ್ನಪೂರ್ಣ ಹಾಗೂ ಇನ್ನಿತರರು ಉಪಸ್ಥಿತರಿದ್ದರು. ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ಮೂಡಿಬಂದಿತು.

ಫಿಲೋಮಿನಾದಲ್ಲಿ 'ಯಕ್ಷಾಮೃತ' ಪ್ರಮಾಣ ಪತ್ರ ವಿತರಣೆ

ಪುತ್ತೂರು: ನಗರದ ಸಂತ ಫಿಲೋಮಿನಾ ಕಾಲೇಜ್(ಸ್ವಾಯತ್ತ), ಯಕ್ಷ ಕಲಾ ಕೇಂದ್ರ ಮತ್ತು ದೇಶಭಕ್ತ ಎನ್.ಎಸ್. ಕಿಲ್ಲೆ ಪ್ರತಿಷ್ಠಾನ ಕೆದಂಬಾಡಿ, ಸಹಯೋಗದಲ್ಲಿ 'ಯಕ್ಷಾಮೃತ' ಯಕ್ಷಗಾನ ಪ್ರದರ್ಶನ ಕಲೆಯ ಸರ್ಟಿಫಿಕೇಟ್ ಕೋರ್ಸ್ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ಪ್ರದಾನ ಕಾರ್ಯಕ್ರಮ ಕಾಲೇಜಿನ ಸ್ಪಂದನ ಸಭಾಂಗಣದಲ್ಲಿ ಸಂಪನ್ನಗೊಂಡಿತು. 30 ವಿದ್ಯಾರ್ಥಿಗಳು ಯಕ್ಷಗಾನದ ನೃತ್ಯ, ಅರ್ಥಗಾರಿಕೆ ಮತ್ತು ಪ್ರದರ್ಶನ ವಿಭಾಗದಲ್ಲಿ 40 ಗಂಟೆಗಳ ಉಚಿತ ತರಬೇತಿಯನ್ನು ಪಡೆದು ಪ್ರಾಯೋಗಿಕ ಮತ್ತು ಲಿಖಿತ ಪರೀಕ್ಷೆಗಳಲ್ಲಿ ಉತ್ತಮ ಪ್ರದರ್ಶನವನ್ನು ನೀಡಿದ್ದಾರೆ. ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಪ್ರಾಂಶುಪಾಲ ರೆ.ಡಾ. ಆಂಟೋನಿ ಪ್ರಕಾಶ್ ಮೊಂತೇರೊ ಅವರು ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ನೀಡಿದರು. ಯಕ್ಷ ಕಲಾ ಕೇಂದ್ರ ನಿರ್ದೇಶಕ ಪ್ರಶಾಂತ್ ರೈ ಪ್ರಸ್ತಾವಿಕ ನುಡಿಗಳನ್ನಾಡಿದರು. ಶ್ರದ್ಧಾ ಭಟ್ ಪ್ರಾರ್ಥಿಸಿ, ಯಕ್ಷಾಮೃತ ಸಂಯೋಜಕಿ ಸುರಕ್ಷಾ ರೈ ವಂದಿಸಿದರು.

ಮಕ್ಕಳ ಬೇಸಿಗೆ ಶಿಬಿರ ಸಮಾರೋಪ

ಕಡಬ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಪಂಚಾಯತ್‌ರಾಜ್ ಆಯುಕ್ತಾಲಯ ಹಾಗೂ ದ.ಕ. ಜಿಲ್ಲಾ ಪಂಚಾಯತ್‌ನ ಸಹಕಾರದೊಂದಿಗೆ ಕಡಬ ತಾಲೂಕಿನ ಮರ್ದಾಳ ಗ್ರಾಮ ಪಂಚಾಯತ್‌ನ ಅರಿವು ಕೇಂದ್ರದಲ್ಲಿ ಆಯೋಜಿಸಲಾಗಿದ್ದ ಗ್ರಾಮೀಣ ಮಕ್ಕಳ ಬೇಸಿಗೆ ಶಿಬಿರ ಸಮಾರೋಪ ಸಮಾರಂಭವು ಮರ್ದಾಳ ಅಂಬೇಡ್ಕರ್ ಭವನದಲ್ಲಿ ಜರಗಿತು.
ಮುಖ್ಯ ಅತಿಥಿಯಾಗಿದ್ದ ನಿವೃತ್ತ ಮುಖ್ಯ ಶಿಕ್ಷಕ ಕೆ. ಯಶವಂತ ರೈ ಮಾತನಾಡಿ, ಈ ರೀತಿಯ ಶಿಬಿರಗಳ ಮಕ್ಕಳಲ್ಲಿ ಸುಪ್ತವಾಗಿರುವ ಪ್ರತಿಭೆಗಳನ್ನು ಹೊರ ತೆಗೆಯುವಲ್ಲಿ ಸಹಕಾರಿಯಾಗಿದೆ. ಶಿಬಿರದಲ್ಲಿನ ಕಲಿಕೆಯನ್ನು ಮತ್ತೆ ಮತ್ತೆ ಅಭ್ಯಾಸ ಮಾಡುವ ಮೂಲಕ ತಮ್ಮೊಳಗಿನ ಸೃಜನಶೀಲತೆಯನ್ನು ಮಕ್ಕಳು ಅಭಿವೃದ್ಧಿಪಡಿಸಿಕೊಳ್ಳಬೇಕು ಎಂದರು. ಬಂಟ್ರ ಮಂಡಲದ ಮಾಜಿ ಪ್ರಧಾನ ಎ.ಪಿ. ಚೆರಿಯನ್, ಗ್ರಾ.ಪಂ. ಮಾಜಿ ಅಧ್ಯಕ್ಷ ಹರೀಶ್ ಕೊಚಡಂದೂರು, ಪ್ರಮುಖರಾದ ಶೀನಪ್ಪ ಗೌಡ, ಗಂಗಾಧರ ರೈ ಬಸವಪಾಲು ಶುಭ ಹಾರೈಸಿದರು. ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಶಾಲಿನಿ, ಸಂಪನ್ಮೂಲವ್ಯಕ್ತಿ ಆಶಾಲತಾ ಇದ್ದರು. ಶಿಬಿರಾರ್ಥಿಗಳಾದ 53 ಮಂದಿ ವಿದ್ಯಾರ್ಥಿಗಳು ಶಿಬಿರದಲ್ಲಿ ತಾವು ರಚಿಸಿದ ಕಲಾಕೃತಿಗಳನ್ನು ಪ್ರದರ್ಶಿಸಿದರು. ಗ್ರಾ.ಪಂ.ನ ಗ್ರಂಥಪಾಲಕ ನಾಗೇಶ್ ಕೆಳಗಿನಬೀಡು ಸ್ವಾಗತಿಸಿ, ಸಿಬಂದಿ ಹಸನ್ ವಂದಿಸಿದರು.

ಮಳೆಗಾಲ ಆರಂಭಕ್ಕೂ ಮುನ್ನವೇ ಕೃಷಿ ಚಟುವಟಿಕೆಗೆ ಹಿನ್ನಡೆ | ಮತ್ತಷ್ಟು ದರ ಏರಿಕೆಯ ಆತಂಕ

ಯುದ್ಧದ ಬಿಸಿಗೆ ಕೃಷಿಕನ ಜೇಬು ಸುಡುತ್ತಿದೆ ರಸಗೊಬ್ಬರ ದರ

■ ಮಿಥುನ್ ಕರ್ಲಪ್ಪಾಡಿ



ಸಂಗಮ ವಿಶೇಷ

ಸುಳ್ಯ: ಅಮೆರಿಕಾ-ಇರಾನ್ ದೇಶಗಳಲ್ಲಿ ಯುದ್ಧದ ಪರಿಣಾಮ ಇದೀಗ ಕೃಷಿನಿಗೆ ಮತ್ತಷ್ಟು ಆರ್ಥಿಕವಾಗಿ ಹೊಡೆತ ನೀಡುತ್ತಿದ್ದು, ಮೈಲುತುತ್ತು ಬಳಿಕ ಇದೀಗ ರಸಗೊಬ್ಬರದ ದರವೂ ಕೂಡ ಭಾರೀ ಪ್ರಮಾಣದಲ್ಲಿ ಏರಿಕೆ ಕಂಡಿದೆ. ಇದರಿಂದ ಕೃಷಿ ಚಟುವಟಿಕೆಯ ಉತ್ಸಾಹದಲ್ಲಿದ್ದ ಕೃಷಿಕನಿಗೆ ಹಿನ್ನಡೆಯಾಗಿದೆ.

ಯೂರಿಯಾ, ಎನ್.ಪಿ.ಕೆ, ಎಂ.ಒ.ಪಿ, ಎಸ್.ಎಸ್.ಪಿ ಹಾಗೂ ಪೊಟ್ಯಾಷ್ ಸಹಿತ ಎಲ್ಲಾ ರಸಗೊಬ್ಬರಗಳ ದರ ಭಾರೀ ಪ್ರಮಾಣದಲ್ಲಿ ಏರಿಕೆಯಾಗಿದ್ದು, ಈ ಹಿಂದಿನ ದರಕ್ಕಿಂತ 100 ರೂ.ವಿನಿಂದ 200 ರೂ.ವರೆಗೆ ಏರಿಕೆಯಾಗಿದೆ. ಪೆಟ್ರೋಲ್ ಡೀಸೆಲ್ ಬೆಲೆ ಏರಿಕೆಯಾಗುತ್ತದ್ದಂತೆಯೇ ಎಲ್ಲಾ ವಸ್ತುಗಳ ಬೆಲೆಯೂ ಏರಿಕೆ ಸಹಜ.

ಕರಾವಳಿ ಭಾಗದಲ್ಲಿ ಬಹು ವಾರ್ಷಿಕ ಬೆಳೆಯೇ ಹೆಚ್ಚಾಗಿದ್ದು ಕೃಷಿಕರು ವರ್ಷದಲ್ಲಿ ಮೂರು ಬಾರಿ ರಸಗೊಬ್ಬರ ಗಳನ್ನು ತಮ್ಮ ತೋಟಗಳಿಗೆ ನೀಡುತ್ತಿದ್ದು, ಇದೀಗ ದರ ಏರಿಕೆಯಿಂದ ತೋಟಗಳ ನಿರ್ವಹಣೆಯೇ ಸವಾಲಿನ ಕೆಲಸವಾಗಿದೆ. ಇತ್ತ ರೈತರು ಎಲೆಚುಕ್ಕೆ ರೋಗ ಹಳದಿ ರೋಗ, ಕೆಂಪು ಕೀಟಗಳ ರೋಗ ಸೇರಿದಂತೆ ಅಡಿಕೆ ಕೃಷಿಗಳಿಗೆ ಅಪಾರ ಸಮಸ್ಯೆ ಎದುರಾಗಿದ್ದು, ಸವಾಲಿನ ಮಧ್ಯದಲ್ಲಿ ಕೃಷಿ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗುತ್ತಿದ್ದು, ಇದರ ಜೊತೆಗೆ ಕಾಡು ಪ್ರಾಣಿಗಳ ಹಾವಳಿಯು ಹೆಚ್ಚಾಗಿದ್ದು ಎಲ್ಲಾ ಸವಾಲುಗಳ ಮಧ್ಯೆ ರೈತನು ತನ್ನ ಗಟ್ಟಿತನದಿಂದ ಕೃಷಿ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. ಈ ಮಧ್ಯೆ ಗೊಬ್ಬರಗಳ ಬೆಲೆ ಏರಿಕೆ ಕೃಷಿ ರಂಗಕ್ಕೆ ಹೊಡೆತ ನೀಡಿದೆ.

ಸಾವಯವ ಕೃಷಿಯೂ ದುಬಾರಿ

ಬೇವಿನ ಹಿಂಡಿ ಚೀಲಕ್ಕೆ 80 ರೂಪಾಯಿ ಏರಿಕೆ ಕಂಡಿದ್ದರೆ, ಹರಳು ಹಿಂಡಿ ದರವೂ ಸದ್ದಿಲ್ಲದೇ ಪ್ರತಿದಿನ ಏರಿಕೆ ಕಾಣುತ್ತಲಿದೆ. ಸಾವಯವ ಗೊಬ್ಬರಗಳ ಬಳಕೆಯೂ ಕೂಡ ಕೃಷಿಕನಿಗೆ ದುಬಾರಿಯಾಗಿದ್ದು, ಕೂಲಿ ಕಾರ್ಮಿಕರ ಕೊರತೆಯೂ ಕೂಡ ಸಮಸ್ಯೆ ಸೃಷ್ಟಿಸುತ್ತಿದೆ. ಅತ್ತ ಪ್ರಧಾನಿ ಸಾವಯವ ಬಳಕೆಗೆ ಉತ್ತೇಜನ ನೀಡುತ್ತಿದ್ದು, ಆದರೆ ಸಾವಯವ ಗೊಬ್ಬರಗಳ ದರವೂ ಇಳಿಕೆ ಕಾಣಬೇಕಿದೆ. ರಸಗೊಬ್ಬರಗಳ ಬಳಕೆಯಿಂದ ಕರಾವಳಿ ತೋಟಗಳು ಸಂಪೂರ್ಣವಾಗಿ ರಸಗೊಬ್ಬರಗಳಿಗೆ ಒಗ್ಗಿಕೊಂಡಿದ್ದು, ಇತ್ತ ಸಾವಯವ ಗೊಬ್ಬರಗಳ ಬಳಕೆಯ ಬಗ್ಗೆಯೂ ಪ್ರಶ್ನೆ ಉದ್ಭವವಾಗಿದ್ದು, ಮುಂದೆ ಕೃಷಿ ಜೀವನ ಹೇಗೆ ಎಂಬುವುದೇ ಯಕ್ಷ ಪ್ರಶ್ನೆಯಾಗಿದೆ.

> ಈ ಹಿಂದೆ ಪೆಟ್ರೋಲ್ ಡೀಸೆಲ್ ಬೆಲೆಯಲ್ಲಿ ಕಡಿಮೆಯಿದ್ದು ಜೊತೆಗೆ ರಸಗೊಬ್ಬರಗಳು ರೈತನಿಗೆ ಮಿತದರದಲ್ಲಿ ದೊರೆಯುತ್ತಿದ್ದವು. ಆದರೆ, ಇಂದು ಯುದ್ಧದ ಪರಿಣಾಮವಾಗಿ ರಸಗೊಬ್ಬರಗಳ ಬೆಲೆಯು ದಿನನಿತ್ಯ ಏರಿಕೆಯಾಗುತ್ತಿದ್ದು, ಫಸಲು ಕೈಕೊಟ್ಟ ಪರಿಣಾಮವಾಗಿ ಕೃಷಿ ಜೀವನವೇ ಕಷ್ಟಕರವಾಗಿದ್ದು, ಸರಕಾರ ಇದಕ್ಕೆ ಸಮಯೋಚಿತ ತೀರ್ಮಾನ ಕೈಗೊಂಡು ರೈತರ ಹಿತ ಕಾಪಾಡಬೇಕಿದೆ.
> • ಪದ್ಮನಾಭ ರಾವ್, ರೈತ

ಕೃತಕ ಅಭಾವದ ಆತಂಕ

ಯೂರಿಯಾ ರೂ. 276, ಡಿಎಪಿ ರೂ. 1,300 ರಿಂದ -1,350 ರೂ., ಎನ್.ಪಿ.ಕೆ 1,450ರಿಂದ 1,500 ರೂ., ಎನ್.ಪಿ.ಕೆ 1,350ರಿಂದ 1,400 ರೂ., ಎಂ.ಒ.ಪಿ 1,100ರಿಂದ 1,200 ರೂ.ವರೆಗೆ ಏರಿಕೆ ಕಂಡಿದ್ದು, ಈ ದರ ಮತ್ತಷ್ಟು ಏರಿಕೆಯಾಗುವ ಸಾಧ್ಯತೆ ಇದೆ. ಅಲ್ಲದೇ ರಸಗೊಬ್ಬರ ಅಂಗಡಿಗಳಲ್ಲಿ ಜನರ ಮುಗಿಬಿದ್ದು ಖರೀದಿಸಿದರೆ ಮುಂದಿನ ದಿನಗಳಲ್ಲಿ ರಸಗೊಬ್ಬರ ಕೃತಕ ಅಭಾವ ಸೃಷ್ಟಿಯಾಗುವ ಆತಂಕವೂ ಕೂಡ ಎದುರಾಗಿದೆ.

ಪುತ್ತೂರು ಅಕ್ಷಯ ಪದವಿ ಕಾಲೇಜಿನಲ್ಲಿ ಫ್ಯಾಷನ್ ಶೋ ಅಕ್ಷಯ ವೈಭವ ಉದ್ಘಾಟನೆ



ಪುತ್ತೂರು: ಸಂಪ್ಯದಲ್ಲಿ ಕಾರ್ಯಾಚರಿಸುತ್ತಿರುವ ಅಕ್ಷಯ ಕಾಲೇಜಿನಲ್ಲಿ ನಡೆದ 'ಡಿ-ವಾಕ್' ಫ್ಯಾಷನ್ ಶೋ 'ಅಕ್ಷಯ ವೈಭವ' ಕಾರ್ಯಕ್ರಮ ಜರುಗಿತು.

ತುಳು ಚಿತ್ರನಟ, ತುಳುನಾಡಿನ ಮಾಣಿಕ್ಯ ಅರವಿಂದ ಬೋಳಾರ್ ಕಾರ್ಯಕ್ರಮ ಉದ್ಘಾಟಿಸಿ ಶುಭ ಕೋರಿದರು. ಮುಖ್ಯ ಅತಿಥಿಯಾಗಿ ಮೈಸೂರು ಸಾಹಿ ಎಕ್ಸ್‌ಪೋರ್ಟ್ ಸಂಸ್ಥೆಯ ಎಚ್.ಆರ್. ಜಿ.ಎಂ. ಸತ್ಯಗಣಪತಿ ಭಟ್ ಎ. ಭಾಗವಹಿಸಿದರು. ಮತ್ತೋರ್ವ ಅತಿಥಿ ಡೀನ್ ಮಾಡೆಲ್ ಅನನ್ಯ, ಅಧ್ಯಕ್ಷತೆ ವಹಿಸಿದ್ದ ಅಕ್ಷಯ ಸಮೂಹ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಯ ಅಧ್ಯಕ್ಷ ಜಯಂತ್ ನಡುಬೈಲು, ಅಕ್ಷಯ ಸಮೂಹ ಶಿಕ್ಷಣ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕಿ ಕಲಾವತಿ ಜಯಂತ್, ಅಕ್ಷಯ ಪದವಿ ಕಾಲೇಜಿನ ಪ್ರಾಂಶುಪಾಲ ಸಂಪತ್ ಕೆ. ಪಕ್ಕಳ ಶುಭ ಕೋರಿದರು. ಅಕ್ಷಯ ಎಜ್ಯುಕೇಶನಲ್ ಎಂಡ್ ಚಾರಿಟೇಬಲ್ ಟ್ರಸ್ಟಿನ ಕಾರ್ಯದರ್ಶಿ ಡಾ. ಅಕ್ಷಯ್, ಅಕ್ಷಯ ಸಮೂಹ ಶಿಕ್ಷಣ ಸಂಸ್ಥೆಯ ಆಡಳಿತ ಅಧಿಕಾರಿ ಅರ್ಪಿತ್ ಟಿ.ಎ., ಅಕ್ಷಯ ಪ.ಪೂ. ಕಾಲೇಜಿನ ಪ್ರಾಂಶುಪಾಲೆ ಗಂಗಾರತ್ನ ಉಪಸ್ಥಿತರಿದ್ದರು. ದ್ವಿತೀಯ ಎಫ್.ಡಿ ವಿಭಾಗದ ವಿದ್ಯಾರ್ಥಿನಿಯರಾದ ದೇವಿಕಾ, ಮೋಕ್ಷ ಮತ್ತು ಸ್ವರ್ಣ ಪ್ರಾರ್ಥಿಸಿದರು. ಅಕ್ಷಯ ಪದವಿ ಕಾಲೇಜಿನ ಶೈಕ್ಷಣಿಕ ನಿರ್ದೇಶಕ ಅಭಿಲಾಷ್ ಕ್ಷತ್ರಿಯ ಪ್ರಸ್ತಾವಿಸಿದರು. ಅಕ್ಷಯ ಸಮೂಹ ಶಿಕ್ಷಣ ಸಂಸ್ಥೆಗಳ ಖಜಾಂಚಿ ಅಂಚಿತ್ ಸ್ವಾಗತಿಸಿ, ಎಫ್‌ಡಿ ವಿಭಾಗದ ಮುಖ್ಯಸ್ಥೆ ವೀಣಾ ವಂದಿಸಿದರು. ಉಪನ್ಯಾಸಕ ಹರೀಶ್ಚಂದ್ರ ಮತ್ತು ಶೈಲ ಅತಿಥಿಗಳ ಪರಿಚಯಗೈದರು. ಬಿ.ಎಚ್.ಎಸ್. ವಿಭಾಗದ ಉಪನ್ಯಾಸಕಿ ಶ್ರುತ ಮತ್ತು ಆಂಗ್ಲ ಭಾಷಾ ಉಪನ್ಯಾಸಕಿ ದೀಪ್ತಿ ಕಾರ್ಯಕ್ರಮ ನಿರ್ವಹಿಸಿದರು.

210 ರೂಪದರ್ಶಿಗಳು

ಕಾರ್ಯಕ್ರಮದಲ್ಲಿ 210 ರೂಪದರ್ಶಿಗಳಿಂದ ಅಂತಿಮ ವರ್ಷದ ಫ್ಯಾಶನ್ ಡಿಸೈನ್ ವಿದ್ಯಾರ್ಥಿಗಳು ವಿನ್ಯಾಸಗೊಳಿಸಿದ ಉಡುಪುಗಳ ಮೆಗಾ ಫ್ಯಾಷನ್ ಶೋ ನಡೆಯಿತು. ಮಿಸ್ ಇಂಡಿಯಾ ಕರ್ನಾಟಕ ಮಂಗಳೂರು-2025 ತಷ್ಮಾ ಚೇತನ್, ಮಿಸ್ ಟೀನ್ ಮಂಗಳೂರು ವಿನ್ನರ್-2025 ಅನನ್ಯ ಮತ್ತು ಅಕ್ಷಯ ಪದವಿ ಕಾಲೇಜಿನ ಹಿರಿಯ ವಿದ್ಯಾರ್ಥಿ ವಚನ್ ತೀರ್ಪುಗಾರರಾಗಿದ್ದರು.

ದೇಶದ ಟಾಪ್ 100 ಜ್ಯುವೆಲ್ಲರಿಗಳಲ್ಲಿ ಸ್ಥಾನ ಪಡೆದ ಪುತ್ತೂರಿನ ಜಿ.ಎಲ್. ಸಂಸ್ಥೆ



ಪುತ್ತೂರು: ದಿ ಆರ್ಟ್ ಆಫ್ ಜ್ಯುವೆಲ್ಲರಿ (ಎಒಜೆ) ಮ್ಯಾಗಜಿನ್ 2024-25ರ ಅವಧಿಗೆ ಭಾರತದ ಸರಿಸುಮಾರು 5 ಲಕ್ಷ ಜುವೆಲ್ಲರಿಗಳ ಪೈಕಿ ಒಟ್ಟು ವಾರ್ಷಿಕ ವಹಿವಾಟಿನ ಆಧಾರದ ಮೇಲೆ ಜ್ಯುವೆಲ್ಲರಿ ಸಂಸ್ಥೆಗಳ ರ‍್ಯಾಂಕಿಂಗ್ ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡಿದ್ದು, ಅದರಲ್ಲಿ ಪುತ್ತೂರು ಸೇರಿದಂತೆ ಹಲವು ಕಡೆ ಶಾಖೆಗಳನ್ನು ಹೊಂದಿರುವ ಜಿ.ಎಲ್. ಆಚಾರ್ಯ ಜ್ಯುವೆಲ್ಲರ್ಸ್ ಸಂಸ್ಥೆ ಟಾಪ್ 100ರ ಪಟ್ಟಿಯಲ್ಲಿ ಸ್ಥಾನ ಪಡೆದಿದೆ.

ದಿ ಆರ್ಟ್ ಆಫ್ ಜ್ಯುವೆಲ್ಲರಿ ಸಂಚಿಕೆಯಲ್ಲಿ ಭಾರತದಲ್ಲಿ ಚಿನ್ನ ಮತ್ತು ಆಭರಣಗಳ ಉದ್ಯಮದಲ್ಲಿನ ಸಾಧಕರನ್ನು ಗುರುತಿಸಲಾಗುತ್ತದೆ. ಈ ಬಾರಿ ಟಾಪ್ 100 ಚಿನ್ನದ ವ್ಯಾಪಾರಿಗಳನ್ನು ಆರ್ಥಿಕ ವರ್ಷದ 2025ರಲ್ಲಿ ಒಟ್ಟು ವ್ಯವಹಾರ ಆದಾಯದ ಆಧಾರದ ಮೇಲೆ ಶ್ರೇಯಾಂಕ ನೀಡಲಾಗಿದೆ. ಈ ಪಟ್ಟಿಯನ್ನು ಇಂಟರ್ ನ್ಯಾಷನಲ್ ಜೆಮೋಲಿಜಿಕಲ್ ಇನ್‌ಸ್ಟಿಟ್ಯೂಟ್ ಸಹಯೋಗದೊಂದಿಗೆ ಬಿಡುಗಡೆ ಮಾಡಲಾಗಿದ್ದು, ಪುತ್ತೂರಿನ ಜಿ.ಎಲ್. ಆಚಾರ್ಯ ಚಿನ್ನಾಭರಣ ಮಳಿಗೆ ಸ್ಥಾನ ಪಡೆದುಕೊಂಡಿದೆ.

ದಿ ಆರ್ಟ್ ಆಫ್ ಜ್ಯುವೆಲ್ಲರಿ ಮ್ಯಾಗಜಿನ್ ಭಾರತದ ಆಭರಣ ಉದ್ಯಮದ ಪ್ರಮುಖ ಸುದ್ದಿ ಮತ್ತು ವಿಶ್ಲೇಷಣೆಗಳನ್ನು ಒದಗಿಸುವ ಪ್ರಮುಖ ಮಾಧ್ಯಮವಾಗಿದೆ. ಜುವೆಲ್ಲರಿಗಳ ಒಟ್ಟು ವ್ಯವಹಾರದಲ್ಲಿ ಈ ಆಯ್ಕೆ ನಡೆಯುತ್ತದೆ. 'ನಮ್ಮ ಸಂಸ್ಥೆ 100 ಚಿನ್ನಾಭರಣಗಳ ಮಳಿಗೆಗಳ ಪಟ್ಟಿಯಲ್ಲಿ ಸ್ಥಾನವನ್ನು ಪಡೆದುಕೊಂಡಿರುವುದು ಸಂತೋಷದ ಸಂಗತಿ' ಎಂದು ಸಂಸ್ಥೆ ಚೇರ್ಮನ್ ಜಿ.ಎಲ್. ಬಲರಾಮ ಆಚಾರ್ಯ ಖುಷಿ ವ್ಯಕ್ತಪಡಿಸಿದ್ದಾರೆ.

ಪದ್ಯಾಣ ಕ್ಷೇತ್ರದಲ್ಲಿ ದೃಢಕಲಶ: ಡಾ. ಟಿ. ಶ್ಯಾಮ್ ಭಟ್‌ಗೆ ಗೌರವ



ವಿಟ್ಲ: ಪದ್ಯಾಣ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಬ್ರಹ್ಮಕಲಶೋತ್ಸವ ಕಾರ್ಯಕ್ರಮದ ಬಳಿಕ ಬ್ರಹ್ಮಶ್ರೀ ಕುಂಟುಕುಡೇಲು ರಘುರಾಮ ತಂತ್ರಿಗಳ ನೇತೃತ್ವದಲ್ಲಿ ಸಪರಿವಾರ ಶ್ರೀ ಮಹಾಲಿಂಗೇಶ್ವರ ದೇವರಿಗೆ ನಡೆದ ದೃಢಕಲಶ ಕಾರ್ಯಕ್ರಮ ನಡೆಯಿತು. ಒಡಿಯೂರು ಶ್ರೀ ಗುರುದೇವಾನಂದ ಸ್ವಾಮೀಜಿ ಧಾರ್ಮಿಕ ಸಭೆಯಲ್ಲಿ ಭಾಗವಹಿಸಿ, ಮಾತನಾಡಿದರು.
ಬ್ರಹ್ಮಕಲಶೋತ್ಸವ ಸಮಿತಿ ಗೌರವಾಧ್ಯಕ್ಷ ಡಾ. ಟಿ. ಶ್ಯಾಮ್ ಭಟ್ ಅವರನ್ನು ಈ ಸಂದರ್ಭ ಗೌರವಿಸಲಾಯಿತು. ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಡಾ. ಅರುಣ ಶ್ಯಾಮ, ವಗೆನಾಡು ಶ್ರೀ ಸುಬ್ರಾಯ ದೇವ ಸ್ಥಾನದ ಆಡಳಿತ ಮೊಕ್ತೇಸರ ಮುಗುಳಿ ತಿರುಮಲೇಶ್ವರ ಭಟ್, ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯಾಧ್ಯಕ್ಷ ಶಾಮ ಸುದರ್ಶನ ಹೊಸಮೂಲೆ ಮಾತನಾಡಿದರು. ಬ್ರಹ್ಮಕಲಶ ಸಮಿತಿ ಸಂಚಾಲಕ ಸೇರಾಜೆ ಗೋಪಾಲಕೃಷ್ಣ ಭಟ್, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಅರವಿಂದ ಪದ್ಯಾಣ, ಜೀರ್ಣೋದ್ಧಾರ ಸಮಿತಿ ಗೌರವಾಧ್ಯಕ್ಷರಾದ ಪದ್ಯಾಣ ತಿಮ್ಮಣ್ಣ ಭಟ್ಟ, ಪದ್ಯಾಣ ರಘುರಾಮ ಕಾರಂತ, ಜೀರ್ಣೋದ್ಧಾರ ಸಮಿತಿ ಕಾರ್ಯದರ್ಶಿ ಈಶಾನ್ಯ ಪದ್ಯಾಣ, ಸಂಘಟನಾ ಕಾರ್ಯದರ್ಶಿ ಶಿವಪ್ರಸಾದ ಶೆಟ್ಟಿ ಅನೆಯಾಲಗುತ್ತು ಸಹಿತ ಬ್ರಹ್ಮಕಲಶೋತ್ಸವ, ಸಮಿತಿಯ ಪದಾಧಿಕಾರಿಗಳು ಇದ್ದರು. ದೇವಸ್ಥಾನದ ಆಡಳಿತ ಮೊಕ್ತೇಸರ ಸತ್ಯನಾರಾಯಣ ಭಟ್ ಸೇರಾಜೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಮಿತಿ ಕಾರ್ಯದರ್ಶಿ ಕೃಷ್ಣಎಂ.ಆರ್. ಕಡಬ ಸ್ವಾಗತಿಸಿದರು. ಸೇರಾಜೆ ಶ್ರೀನಿವಾಸ ಭಟ್ ವಂದಿಸಿದರು. ನವ್ಯ ಕೃಷ್ಣ ಮಾಣೆಪ್ಪಾಡಿ ನಿರ್ವಹಿಸಿದರು. ರವಿಚಂದ್ರ ಪದ್ಯಾಣ ಪ್ರಾರ್ಥಿಸಿದರು.

ಗೋ ಹತ್ಯೆ ತಡೆಗೆ ಕ್ರಮ: ಪುತ್ತೂರು ವಿಹಿಂಪದಿಂದ ಪೊಲೀಸರಿಗೆ ಮನವಿ



ಪುತ್ತೂರು: ಬಕ್ರೀದ್ ಹಬ್ಬದ ಸಂದರ್ಭದಲ್ಲಿ ಗೋವುಗಳ ಅಕ್ರಮ ಸಾಗಾಣಿಕೆ ಮತ್ತು ಗೋ ಹತ್ಯೆ ತಡೆಗಟ್ಟುವ ಕುರಿತು ವಿಶ್ವ ಹಿಂದೂ ಪರಿಷದ್ ಬಜರಂಗದಳ ಪುತ್ತೂರು ಗ್ರಾಮಾಂತರ ಪ್ರಖಂಡ ವತಿಯಿಂದ ಪುತ್ತೂರು ಗ್ರಾಮಾಂತರದ ಸಂಪ್ಯ ಪೊಲೀಸ್ ಠಾಣೆಗೆ ಮನವಿ ಸಲ್ಲಿಸಲಾಗಿದೆ.

ಮುಂಬರಲಿರುವ ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ರಾಜ್ಯದಾದ್ಯಂತ ಕಾನೂನು ಬಾಹಿರವಾಗಿ ಗೋವಂಶದ ಸಾಗಾಣಿಕೆ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಗೋ ವಂಶ ಬಲಿ ಬಲಿ (ಕುರ್ಬಾನಿ) ನಡೆಯುವ ಸಾಧ್ಯತೆಯಿದೆ. ಇದನ್ನು ತಡೆಗಟ್ಟಲು ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯ್ದೆ 2020 ಮತ್ತು ಜಾನುವಾರು ಸಾಗಾಟ ನಿಯಮಾವಳಿ 2021 ಅನ್ವಯ ಸೂಕ್ತ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಲಾಗಿದೆ. ವಿಶ್ವ ಹಿಂದೂ ಪರಿಷದ್ ಪುತ್ತೂರು ಜಿಲ್ಲಾ ಸಹ ಕಾರ್ಯದರ್ಶಿ ಶ್ರೀಧರ್ ತೆಂಕಿಲ, ಜಿಲ್ಲಾ ಪ್ರಚಾರ ಪ್ರಸಾರ ಪ್ರಮುಖ್ ಕೇಶವಪ್ರಸಾದ್ ಬಜಪ್ಪಳ, ವಿಶ್ವ ಹಿಂದೂ ಪರಿಷದ್ ಗ್ರಾಮಾಂತರ ಪ್ರಖಂಡ ಅಧ್ಯಕ್ಷ ಜಯಂತ್ ಶೆಟ್ಟಿ ಕಂಬಳತ್ತಡ್ಡ, ನಗರ ಪ್ರಖಂಡದ ಬಜರಂಗದಳ ಸಾಪ್ತಾಯಿಕ್ ಮಿಲನ್ ಪ್ರಮುಖ್ ಸಂದೀಪ್ ಸಿಂಗಣೆ, ತಿಂಗಳಾಡಿ ಘಟಕದ ಬಜರಂಗದಳ ಸಂಯೋಜಕ್ ಜಗದೀಶ್ ತಿಂಗಳಾಡಿ ಉಪಸ್ಥಿತರಿದ್ದರು.

ಕಾಣಿಯೂರು-ಸುಳ್ಯ-ನಾಪೋಕ್ಲು-ಮೈಸೂರು ರೈಲು ಮಾರ್ಗಕ್ಕಾಗಿ ಮನವಿ



ಸುಳ್ಯ: ಪ್ರಾದೇಶಿಕ ಸಂಪರ್ಕ ಮತ್ತು ರೈಲ್ವೆ ಸಾಮರ್ಥ್ಯ ಹೆಚ್ಚಿಸುವ ನಿಟ್ಟಿನಲ್ಲಿ ಕಾಣಿಯೂರು-ಸುಳ್ಯ-ನಾಪೋಕ್ಲು ಮಾರ್ಗವಾಗಿ ಮೈಸೂರಿಗೆ ನೂತನ ರೈಲು ಮಾರ್ಗ ನಿರ್ಮಾಣದ ಕುರಿತು ಕೇಂದ್ರ ರಾಜ್ಯ ರೈಲ್ವೆ ಖಾತೆ ಸಚಿವ ವಿ. ಸೋಮಣ್ಣ ಅವರಿಗೆ ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಶನಿವಾರ ಮಂಗಳೂರಿನಲ್ಲಿ ಮನವಿ ಸಲ್ಲಿಸಿದರು.

ಈ ಪ್ರಸ್ತಾಪಿತ ರೈಲು ಮಾರ್ಗವು ಮಂಗಳೂರು-ಹಾಸನ ರೈಲು ಮಾರ್ಗದಲ್ಲಿರುವ ಕಾಣಿಯೂರು ನಿಲ್ದಾಣದಿಂದ ಪ್ರಾರಂಭವಾಗಲಿದೆ. ಅಲ್ಲಿಂದ ಈ ಮಾರ್ಗವು ಸುಳ್ಯ ಮತ್ತು ನಾಪೋಕ್ಲು ಮೂಲಕ ಹಾದು ಹೋಗಿ, ಪ್ರಸ್ತಾಪಿತ ಕುಶಾಲನಗರ-ಮೈಸೂರು ರೈಲು ಮಾರ್ಗವನ್ನು ಕುಶಾಲನಗರದಲ್ಲಿ ಸಂಪರ್ಕಿಸಲಿದೆ. ತನ್ಮೂಲಕ ಮೈಸೂರು ಮತ್ತು ಮುಂದಿನ ಊರುಗಳಿಗೆ ನೇರ ಸಂಪರ್ಕ ಕಲ್ಪಿಸುವ ಗುರಿಯನ್ನು ಹೊಂದಿದೆ. ಧಾರ್ಮಿಕವಾಗಿ ಈ ಪ್ರದೇಶವು ಅತ್ಯಂತ ಮಹತ್ವದ್ದಾಗಿದ್ದು, ವಿಶ್ವಪ್ರಸಿದ್ಧ ಕುಕ್ಕೆ ಸುಬ್ರಹ್ಮಣ್ಯದೇವಸ್ಥಾನವು ಸುಳ್ಯ ವಿಧಾನಸಭಾ ಕ್ಷೇತ್ರದಲ್ಲಿದೆ. ಇಲ್ಲಿಗೆ ದೇಶಾದ್ಯಂತ ಲಕ್ಷಾಂತರ ಭಕ್ತರು ಪ್ರತಿವರ್ಷ ಆಗಮಿಸುತ್ತಾರೆ. ರೈಲು ಸಂಪರ್ಕದ ಕೊರತೆಯಿಂದಾಗಿ ಯಾತ್ರಿಕರು ರಸ್ತೆ ಮಾರ್ಗವನ್ನೇ ಅವಲಂಬಿಸಬೇಕಾಗಿದೆ. ಇದು ಸಂಚಾರ ದಟ್ಟಣೆ ಮತ್ತು ತೊಂದರೆಗೆ ಕಾರಣವಾಗಿದೆ. ಸುಳ್ಯದ ಮೂಲಕ ಹಾದು ಹೋಗುವ ರೈಲು ಮಾರ್ಗವು ಈ ಪ್ರಮುಖ ಯಾತ್ರಾಸ್ಥಳಕ್ಕೆ ಉತ್ತಮ ಸಂಪರ್ಕ ಕಲ್ಪಿಸಲಿದೆ. ಅಲ್ಲದೆ, ಈ ಹೊಸ ಮಾರ್ಗವು ಕರಾವಳಿ ಕರ್ನಾಟಕ ಮತ್ತು ಒಳನಾಡು ಪ್ರದೇಶಗಳನ್ನು ಮೈಸೂರು, ಬೆಂಗಳೂರು, ಉತ್ತರ ಕರ್ನಾಟಕ, ಮಹಾರಾಷ್ಟ್ರ ಮತ್ತು ಉತ್ತರ ಭಾರತದೊಂದಿಗೆ ಸಂಪರ್ಕಿಸಲು ನೇರ ರೈಲುಗಳನ್ನು ಓಡಿಸಲು ಹೊಸ ಅವಕಾಶಗಳನ್ನು ಸೃಷ್ಟಿಸುತ್ತದೆ. ಮುಂಬರುವ ರೈಲ್ವೆ ಮೂಲಸೌಕರ್ಯ ಯೋಜನೆಗಳು ಹಾಗೂ ಬಜೆಟ್‌ನಲ್ಲಿ ಈ ನೂತನ ಮಾರ್ಗದ ನಿರ್ಮಾಣದ ಪ್ರಸ್ತಾವನೆ ಸೇರಿಸಬೇಕೆಂದು ಮನವಿಯಲ್ಲಿ ವಿನಂತಿಸಿದ್ದಾರೆ. ಸಂಸದ ಕ್ಯಾ. ಬ್ರಿಜೇಶ್ ಚೌಟ, ಶಾಸಕ ಭರತ್ ಶೆಟ್ಟಿ ಉಪಸ್ಥಿತರಿದ್ದರು.

ಜಯಶ್ರೀಕೃಷ್ಣ ಸಮಿತಿಯಿಂದ ಕೇಂದ್ರ ರೈಲ್ವೇ ಸಚಿವ ಸೋಮಣ್ಣರಿಗೆ ಮನವಿ



ಕೈಕಂಬ: ಮುಂಬೈ ಮತ್ತು ಮಂಗಳೂರು ನಡುವೆ ಪ್ರತಿನಿತ್ಯ ಸಂಚರಿಸುವ ಇನ್ನೊಂದು ಸೂಪರ್ ಫಾಸ್ಟ್ ರೈಲು ಹಾಗೂ ಮುಂಬೈ-ಮಂಗಳೂರಿಗೆ ವಂದೇ ಭಾರತ್ ನೇರ ಸಂಚಾರದ ರೈಲು ಸೇವೆ ಆರಂಭಿಸುವಂತೆ ಒತ್ತಾಯಿಸಿ ಜಯಶ್ರೀ ಕೃಷ್ಣ ಪರಿಸರ ಪ್ರೇಮಿ ಸಮಿತಿ ಸ್ಥಾಪಕಾಧ್ಯಕ್ಷ ತೋನ್ಸೆ ಜಯಕೃಷ್ಣ ಶೆಟ್ಟಿ ಗುರುಪುರ ಜಂಗಮ ಮಠದಲ್ಲಿ ದಕ್ಷಿಣ ಕನ್ನಡ ಸಂಸದ ಕ್ಯಾ. ಬ್ರಿಜೇಶ್ ಚೌಟ ಹಾಗೂ ಮಂಗಳೂರು ಉತ್ತರ ಶಾಸಕ ಡಾ. ಭರತ್ ಶೆಟ್ಟಿ ಅವರ ಸಮ್ಮುಖದಲ್ಲಿ ಕೇಂದ್ರ ರೈಲ್ವೇ ರಾಜ್ಯ ಸಚಿವ ವಿ. ಸೋಮಣ್ಣ ಅವರಿಗೆ ಶನಿವಾರ ಮನವಿ ನೀಡಿದರು.

ಸೂಪರ್ ಫಾಸ್ಟ್ ಆರಂಭಿಸಿ

ಮುಂಬೈಯಿಂದ ಮಂಗಳೂರು ಮತ್ತು ಉಡುಪಿ ಭಾಗದ ಪ್ರಯಾಣಿಕರಿಗೆ ಉತ್ತಮ ರೈಲು ಸೇವೆ ನೀಡುವ ನಿಟ್ಟಿನಲ್ಲಿ ಮತ್ಸ್ಯಗಂಧಾ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ ರೈಲಿಗೆ ಪರ್ಯಾಯ ಇನ್ನೊಂದು ಸೂಪರ್ ಫಾಸ್ಟ್ ರೈಲು ಸಂಚಾರ ಆರಂಭಿಸಬೇಕು. ಮುಂಬೈಯಿಂದ ಮಡ್ಗಾಂವ್‌ಗೆ ಮತ್ತು ಮಡ್ಗಾಂವ್‌ನಿಂದ ಮಂಗಳೂರಿಗೆ ವಂದೇ ಭಾರತ್ ರೈಲು ಪ್ರಯಾಣ ಕಷ್ಟಕರವಾಗಿದ್ದು, ಕರಾವಳಿ ಭಾಗದ ಪ್ರಯಾಣಿಕರ ಅನುಕೂಲದ ದೃಷ್ಟಿಯಿಂದ ಮುಂಬೈ-ಮಂಗಳೂರು ನಡುವೆ ನೇರ ಸಂಚಾರದ 'ವಂದೇ ಭಾರತ್' ರೈಲು ಆರಂಭಿಸಬೇಕು ಎಂದು ಆಗ್ರಹಿಸಿದೆ. ರೈಲುಗಳಲ್ಲಿ ಕೊಂಕಣ ಭಾಗದ ಪ್ರಯಾಣಿಕರಿಗೆ ಟಿಕೆಟ್ ಸಿಗುವುದು ಕಷ್ಟವಾಗಿದ್ದು, ತತ್ಕಾಲ್ ಟಿಕೆಟ್ ಮತ್ತಷ್ಟು ಕಷ್ಟದಾಯಕವಾಗಿದೆ ಎಂದು ಸಚಿವರ ಗಮನ ಸೆಳೆದರು. ಉಡುಪಿ, ಮೂಲ್ಕಿ ಮತ್ತು ಸುರತ್ಕಲ್ ರೈಲು ನಿಲ್ದಾಣಗಳಲ್ಲಿ ಮೂಲಸೌಲಭ್ಯ ಕಲ್ಪಿಸುವಂತೆ ಮನವಿ ಮಾಡಿದರು. ಮನವಿ ಸ್ವೀಕರಿಸಿ ಸಚಿವ ವಿ. ಸೋಮಣ್ಣ ಸಕರಾತ್ಮಕವಾಗಿ ಸ್ಪಂದಿಸಿದರು.

ಅನುದಾನಿತ ನೌಕರರ ಶೈಕ್ಷಣಿಕ ಸಮಾವೇಶ | ರಾಜ್ಯ ಸರ್ಕಾರ ಗಮನ ಸೆಳೆಯುವ ಭರವಸೆ ನೀಡಿದ ಭೋಜೇಗೌಡ

ಕಾರ್ಯಭಾರ ಕೊರತೆ ಹೆಸರಿನಲ್ಲಿ ಉಪನ್ಯಾಸಕರ ವರ್ಗಾವಣೆಗೆ ಕ್ರಮ ಸರಿಯಲ್ಲ



ಸುಬ್ರಹ್ಮಣ್ಯ: ಪದವಿ ಪೂರ್ವ ಕಾಲೇಜ್‌ಗಳ ಎಲ್ಲಾ ಸಮಸ್ಯೆಗಳ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಕಾರ್ಯಭಾರ ಕೊರತೆ ಹೆಸರಿನಲ್ಲಿ ಉಪನ್ಯಾಸಕರನ್ನು ಬೇರೆ ಕಾಲೇಜ್‌ಗಳಿಗೆ ನಿಯೋಜಿಸುವ ಪದ್ಧತಿಯನ್ನು ರದ್ದುಪಡಿಸುವ ಬೇಡಿಕೆ ಸೇರಿದಂತೆ ಅನುದಾನಿತ ಉಪನ್ಯಾಸಕರನ್ನು ಹುದ್ದೆಯಿಂದ ವಿಮುಕ್ತಿಗೊಳಿಸುವ ನಿಯಮವನ್ನೂ ರದ್ದುಪಡಿಸುವ ನಿಟ್ಟಿನಲ್ಲಿ ತಕ್ಷಣ ಕ್ರಮ ಕೈಗೊಳ್ಳಲು ಸರಕಾರವನ್ನು ಒತ್ತಾಯಿಸುತ್ತೇನೆ. ಜತೆಗೆ ಅತಿಥಿ ಉಪನ್ಯಾಸಕರ ಬೇಡಿಕೆಗಳಿಗೆ ಸರ್ಕಾರ ತಕ್ಷಣ ಸ್ಪಂದಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಎಸ್.ಎಲ್. ಭೋಜೇಗೌಡ ಹೇಳಿದರು

ದ.ಕ. ಜಿಲ್ಲಾ ಪದವಿ ಪೂರ್ವ ಕಾಲೇಜ್‌ಗಳ ಅನುದಾನಿತ ನೌಕರರ ಸಂಘ ಹಾಗೂ ದ.ಕ. ಜಿಲ್ಲಾ ಪದವಿ ಪೂರ್ವ ಕಾಲೇಜ್‌ಗಳ ಪ್ರಾಂಶುಪಾಲರ ಸಂಘದ ಜಂಟಿ ಆಶ್ರಯದಲ್ಲಿ ನಡೆದ ಅನುದಾನಿತ ನೌಕರರ ಶೈಕ್ಷಣಿಕ ಸಮಾವೇಶವನ್ನು ಎಸ್.ಎಲ್. ಭೋಜೇ ಗೌಡ ಉದ್ಘಾಟಿಸಿ ಮಾತನಾಡಿದರು.

ಅವೈಜ್ಞಾನಿಕ ಕ್ರಮದಿಂದ ಶಿಕ್ಷಣಕ್ಕೆ ಹೊಡೆತ

ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜ್‌ಗಳ ಉಪನ್ಯಾಸಕರ ಸಂಘದ ರಾಜ್ಯಾಧ್ಯಕ್ಷ ನಿಂಗೇಗೌಡ ಮಾತನಾಡಿ, ಕಾರ್ಯಭಾರ ಕೊರತೆ ಹೆಸರಿನಲ್ಲಿ ಉಪನ್ಯಾಸಕರನ್ನು ಮೂರು ದಿನಗಳ ಕಾಲ ಬೇರೆ ಕಾಲೇಜ್‌ಗಳಿಗೆ ನಿಯೋಜಿಸುವ ಕ್ರಮ ಹಾಗೂ 320 ವಿದ್ಯಾರ್ಥಿಗಳಿಗೆ ಒಬ್ಬ ಉಪನ್ಯಾಸಕ ಹುದ್ದೆ ಎಂಬ ಅವೈಜ್ಞಾನಿಕ ನಿಯಮಗಳು ಸರ್ಕಾರಿ ಮತ್ತು ಅನುದಾನಿತ ಸಂಸ್ಥೆಗಳ ಶೈಕ್ಷಣಿಕ ವ್ಯವಸ್ಥೆಗೆ ಹೊಡೆತ ನೀಡುತ್ತಿವೆ. ಇದರಿಂದ ಗ್ರಾಮೀಣ ಭಾಗದ, ಬಡ ಹಾಗೂ ದುರ್ಬಲ ವರ್ಗದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ತೊಂದರೆಯಾಗುತ್ತಿದೆ ಎಂದರು.
ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಉಪನಿರ್ದೇಶಕಿ ರಾಜೇಶ್ವರಿ ಎಂ.ಎಂ. ಅಧ್ಯಕ್ಷತೆ ವಹಿಸಿದ್ದರು. ದ.ಕ ಜಿಲ್ಲಾ ಪದವಿ ಪೂರ್ವ ಕಾಲೇಜ್‌ಗಳ ಪ್ರಾಂಶುಪಾಲರ ಸಂಘದ ಅಧ್ಯಕ್ಷ ಡಾ. ನವೀನ್ ಶೆಟ್ಟಿ ಕೆ. ಮತ್ತಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಮಸ್ಯೆಗಳ ಮಾಹಿತಿ

ಸರ್ಕಾರಿ ಉಪನ್ಯಾಸಕರ ನಿಯೋಜನೆ ಬಗ್ಗೆ ಆಗುತ್ತಿರುವ ಸಮಸ್ಯೆಗಳ ಕುರಿತು ಸರ್ಕಾರಿ ಉಪನ್ಯಾಸಕ ವಿದ್ಯಾಧರ್ ಮಾಹಿತಿ ನೀಡಿದರು. ಅನುದಾನಿತ ಸಂಸ್ಥೆಗಳ ಉಪನ್ಯಾಸಕರ ಸಮಸ್ಯೆಗಳ ಕುರಿತು ಪ್ರಾಂಶುಪಾಲ ವಿಠಲ್ ಹಾಗೂ ಅತಿಥಿ ಉಪನ್ಯಾಸಕರ ಸಂಘದ ಬೇಡಿಕೆಗಳ ಕುರಿತು ಉಪನ್ಯಾಸಕ ಪದ್ಮಪ್ರಭ ಇಂದ್ರ ಮಾಹಿತಿ ನೀಡಿದರು. ದ.ಕ. ಜಿಲ್ಲಾ ಪದವಿ ಪೂರ್ವ ಕಾಲೇಜ್‌ಗಳ ಅನುದಾನಿತ ನೌಕರರ ಸಂಘದ ಅಧ್ಯಕ್ಷ ಸೋಮಶೇಖರ ನಾಯಕ್ ಸ್ವಾಗತಿಸಿ, ಉಪನ್ಯಾಸಕ ರವಿಕುಮಾರ್ ವಂದಿಸಿದರು. ಪುರುಷೋತ್ತಮ ಶೆಟ್ಟಿ ಜಯಪ್ರಕಾಶ್ ನಿರ್ವಹಿಸಿದರು.

ಸನ್ಮಾನ

ಈ ಸಂದರ್ಭದಲ್ಲಿ ಅನುದಾನಿತ ಸಂಸ್ಥೆಗಳಲ್ಲಿ ನಿವೃತ್ತಿ ಹೊಂದಿದ ಪ್ರಾಂಶುಪಾಲರು, ಉಪನ್ಯಾಸಕರು ಹಾಗೂ ಸಿಬ್ಬಂದಿಗಳನ್ನು ಸನ್ಮಾನಿಸಲಾಯಿತು. 2026ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅನುದಾನಿತ ಸಂಸ್ಥೆಗಳಿಂದ ಜಿಲ್ಲಾ ಮಟ್ಟದಲ್ಲಿ ವಿವಿಧ ವಿಭಾಗಗಳಲ್ಲಿ ಮೊದಲ ಮೂರು ಸ್ಥಾನಗಳನ್ನು ಪಡೆದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.

ನಿರ್ದಿಷ್ಟ ಕಾಮಗಾರಿ ಹೆಸರಿನಲ್ಲಿ ಮರಳುಗಾರಿಕೆಗೆ ನೀಡಲಾಗುವ ಅನುಮತಿ ಪತ್ರ ದುರುಪಯೋಗ

ಸದ್ದಿಲ್ಲದೆ ಹೊರ ಜಿಲ್ಲೆಗಳಿಗೆ ಸಾಗುತ್ತಿದೆಯೇ ಇಲ್ಲಿನ ಮರಳು?

ಉಪ್ಪಿನಂಗಡಿ: ಜಿಲ್ಲೆಗೆ ಆಗಮಿಸಿರುವ ಖಡಕ್ ಪೊಲೀಸ್ ಅಧಿಕಾರಿ ಮತ್ತು ಜಿಲ್ಲಾಧಿಕಾರಿ ಅವರ ಕಟ್ಟು ನಿಟ್ಟಿನ ಕ್ರಮದಿಂದ ಭಾರೀ ಪ್ರಮಾಣದಲ್ಲಿ ನಡೆಯುತ್ತಿದ್ದ ಅಕ್ರಮ ಮರಳುಗಾರಿಕೆಗೆ ಕಡಿವಾಣವಾಗಿದ್ದರೂ, ಕೆಲವೊಂದು ಕಡೆ ನಿರ್ದಿಷ್ಠ ಕಾಮಗಾರಿ ಹೆಸರಿನಲ್ಲಿ ಮರಳುಗಾರಿಕೆಗೆ ನೀಡಲಾಗುವ ಅನುಮತಿ ಪತ್ರವನ್ನು ದುರುಪಯೋಗಪಡಿಸಿಕೊಂಡು ಅದರ ಭಾಗವಾಗಿ ಕೆಲವೊಂದು ಕಡೆಗಳಲ್ಲಿ ಅಕ್ರಮ ಮರಳುಗಾರಿಕೆ ನಡೆಯುತ್ತಿದೆ. ಅಂತಹ ಪ್ರಕರಣ ಇದಾಗಿದ್ದು ಭಾರೀ ಪ್ರಮಾಣದಲ್ಲಿ ಮರಳು ಅಕ್ರಮವಾಗಿ ಹೊರ ಜಿಲ್ಲೆಗೆ ಸಾಗಾಟ ಮಾಡುತ್ತಿರುವ ಬಗ್ಗೆ ದೂರು ವ್ಯಕ್ತವಾಗಿದೆ.

ಪುತ್ತೂರು ತಾಲೂಕು ಬಜತ್ತೂರು ಗ್ರಾಮದ ವಳಾಲು ಸಮೀಪದಲ್ಲಿ ನೇತ್ರಾವತಿ ನದಿಯಲ್ಲಿ ಮರಳುಗಾರಿಕೆ ನಡೆಯುತ್ತಿದ್ದು, ಇಲ್ಲಿಂದ ದಿನಕ್ಕೆ ನೂರಾರು ಲಾರಿಗಳಲ್ಲಿ ಮರಳು ತುಂಬಿಸಿಕೊಂಡು ಅವುಗಳು ನಿರ್ಧಿಷ್ಟ ಜಾಗಕ್ಕೆ ಹೋಗದೆ ದೊಡ್ಡ ಮಟ್ಟದ ಗುತ್ತಿಗೆದಾರರಿಗೆ, ಹೊರ ಜಿಲ್ಲೆಗಳಿಗೆ ಅಕ್ರಮವಾಗಿ ಸಾಗಾಟ ಮಾಡುತ್ತಿರುವ ಬಗ್ಗೆ ಗಂಭೀರ ಆರೋಪ, ದೂರುಗಳು ವ್ಯಕ್ತವಾಗಿವೆ.



ಉಳ್ಳಾಲ ಸಮೀಪದ ಕೊಣಾಜೆಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ನಡೆಯುತ್ತಿರುವ ಕಾಮಗಾರಿ ಸಲುವಾಗಿ ಮರಳು ತೆಗೆಯಲು ಗಣಿ ಇಲಾಖೆ ಅನುಮತಿ ನೀಡಿದೆ. ಆ ಪ್ರಕಾರ ಮರಳು ಸಂಗ್ರಹಿಸಲಾಗುತ್ತಿದೆ. ಮರಳು ತುಂಬಿಸಲಾಗಿ ಹೋಗುವ ಲಾರಿಗಳಿಗೆ ಕೊಣಾಜೆ ರಹದಾರಿ ತೋರಿಸಲಾಗಿ, ಗಣಿ ಇಲಾಖೆ ಪರ್ಮಿಟ್ ನೀಡುತ್ತದೆ. ಆದರೆ ಅವುಗಳು ಅದಕ್ಕೆ ವಿರುದ್ಧ ದಿಕ್ಕಿಗೆ ಸಾಗಾಟ ಮಾಡಲಾಗುತ್ತಿದ್ದು, ಪುತ್ತೂರು ಮೊದಲಾದ ಕಡೆಗಳಲ್ಲಿ ಖಾಸಗಿ ಕಟ್ಟಡ ಕಾಮಗಾರಿ ನಡೆಸುವ ಗುತ್ತಿಗೆದಾರರ ಜಾಗಕ್ಕೆ, ಹಲವು ಲಾರಿಗಳು ದ.ಕ. ಜಿಲ್ಲಾ ಗಡಿ ದಾಟಿ ಸಕಲೇಶಪುರ ಕಡೆಗೆ ಹೋಗುತ್ತಿರುವುದಾಗಿ ದೂರು ವ್ಯಕ್ತವಾಗಿದೆ.

ಬಜತ್ತೂರುನಲ್ಲಿ ನಡೆಯುವ ಮರಳುಗಾರಿಕೆ ಈ ಹಿಂದೆ ಬಳ್ಳಾರಿಯಲ್ಲಿ ನಡೆಯುತ್ತಿದ್ದ ಅದಿರು ಮಾಫಿಯಾ ನೆನಪಿಸುವಂತಿದೆ. ನದಿ ದಡದಲ್ಲಿ 30ಕ್ಕೂ ಅಧಿಕ ಲಾರಿಗಳು, 30ಕ್ಕೂ ಅಧಿಕ ದೋಣಿಗಳು, ಉತ್ತರ ಪ್ರದೇಶ ನೂರಾರು ಕಾರ್ಮಿಕರು ನದಿಯಲ್ಲಿ ಮುಳುಗಿ ಮರಳು ಸಂಗ್ರಹಿಸುವುದು, ಸಂಗ್ರಹಿಸಿದ ಮರಳನ್ನು ಜೆಸಿಬಿ ಮೂಲಕ ಲಾರಿಗೆ ತುಂಬಿಸುವುದು ದಿನದ 24 ಗಂಟೆ ನಡೆಯುತ್ತಿದ್ದು, ಇದರಿಂದ ಉಂಟಾಗುವ ಶಬ್ದ ಮಾಲಿನ್ಯದಿಂದ ಪರಿಸರದ ಮಂದಿಗೆ ನಿದ್ದೆಗೂ ಭಂಗ ಉಂಟಾಗಿದೆ ಎಂದು ಸ್ಥಳೀಯರು ದೂರಿದ್ದಾರೆ.

ಮುಳುಗಿ ಮರಳು ಸಂಗ್ರಹಿಸುವ ಸಲುವಾಗಿ ನೀರು ನಿಲ್ಲುವಂತೆ ಆ ಮೂಲಕ ಅಧಿಕ ಮರಳು ತೆಗೆಯುವ ಸಲುವಾಗಿ ಹರಿಯುವ ನದಿಗೆ ತಡೆ ಒಡ್ಡಲಾಗಿದೆ. ನದಿಯ ಇನ್ನೊಂದು ದಡದಿಂದ ಸುಮಾರು 75ರಷ್ಟು ಭಾಗದಲ್ಲಿ ಉದ್ದಕ್ಕೆ ಜಲ್ಲಿ ಕಲ್ಲು ಹಾಸಲಾಗಿ ಹರಿಯುವ ನೀರಿಗೆ ತಡೆ ಒಡ್ಡಲಾಗಿದ್ದು, ನದಿಯಲ್ಲಿ ಕಾರ್ಮಿಕರು ಮುಳುಗಿ ಮರಳು ಸಂಗ್ರಹಿಸುತ್ತಿದ್ದು, ಇವರಿಗೆ ಯಾವುದೇ ರೀತಿ ರಕ್ಷಣಾ ವ್ಯವಸ್ಥೆ ಇರುವುದಿಲ್ಲ.

“ ಕ್ರಮ ಕೈಗೊಳ್ಳಲಾಗುವುದು

ಪಿಡಬ್ಲ್ಯುಡಿ. ಕಾಮಗಾರಿ ಸಂಬಂಧಿಸಿ ಅನುಮತಿ ನೀಡಲಾಗಿದೆ, ಇಲಾಖೆಯವರೊಂದಿಗೆ ಮಾಹಿತಿ ಪಡೆದುಕೊಂಡು ಕಾಮಗಾರಿಗೆ ಹೊರತಾಗಿ ಅಕ್ರಮ ನಡೆಯುವುದಿದ್ದರೆ, ಶೀಘ್ರ ಕ್ರಮಕೈಗೊಳ್ಳಲಾಗುವುದು.

● **ಸಂದೀಪ್,** ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಮಂಗಳೂರು

“ ಸಾಲ ಮಾಡಿ ಮನೆ ಕಟ್ಟುವವರಿಗೆ ಸಿಗುತ್ತಿಲ್ಲ ಮರಳು

ತಾಳಿ ಅಡವಿಟ್ಟು ಸಾಲ ಮಾಡಿ ಮನೆ ಕಟ್ಟಲು ಮುಂದಾದವರಿಗೆ ಮರಳು ಸಿಗುತ್ತಿಲ್ಲ, 28 ಸಾವಿರ ರೂ. ಕೊಟ್ಟರೆ ಮಣ್ಣು ಮಿಶ್ರತ ಹಳೆ 2 ಯುನಿಟ್ ಮರಳು ಸಿಗುತ್ತದೆ. ಆದರೆ ಕಾಮಗಾರಿ ಹೆಸರಿನಲ್ಲಿ ಪರ್ಮಿಟ್ ಪಡೆದು ಅಕ್ರಮ ಸಾಗಾಟ ಮಾಡುವವರ ಮೂಲಕ ದೊಡ್ಡ ಗುತ್ತಿಗೆದಾರ ಉದ್ಯಮಿಗಳಿಗೆ, ಶ್ರೀಮಂತ ರಿಗೆ ಮರಳು ಸಿಗುತ್ತಿದೆ. ಬಜತ್ತೂರು ನಲ್ಲಿ ಮರಳು ತುಂಬಿಸಿ ಬರುವ ಲಾರಿಗಳು ನೆಲ್ಯಾಡಿ, ಗುಂಡ್ಯ ದಾಟಿ ಮುಂದಕ್ಕೆ ಹೋಗುತ್ತಿರುತ್ತದೆ. ಇವೆಲ್ಲ ಪೊಲೀಸ್ ಅಧಿಕಾರಿಗಳಿಗೆ, ಜಿಲ್ಲಾಧಿಕಾರಿಗೆ ಯಾಕೆ ತಿಳಿಯುತ್ತಿಲ್ಲ, ಇದಕ್ಕೆಲ್ಲ ಕಡಿವಾಣ ಹಾಕಿ ಬಡವರಿಗೆ ಮರಳು ಸಿಗುವಂತಾಗಬೇಕು, ಇಲ್ಲದಿದ್ದರೆ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಲಾಗುವುದು.

● **ಕಿಶೋರ್ ಶಿರಾಡಿ,** ಸಂಚಾಲಕರು, ಮಲೆನಾಡು ಜನಹಿತ ರಕ್ಷಣಾ ವೇದಿಕೆ

ಗ್ರಾಮಾಭಿವೃದ್ಧಿಗೆ ಗ್ರಾಮಸ್ಥರ ಸಹಕಾರ ಅತ್ಯಗತ್ಯ: ಸ್ಪೀಕರ್ ಯು.ಟಿ.ಖಾದರ್



ಕೊಣಾಜೆ: ಕೊಣಾಜೆ ಗ್ರಾಮದಲ್ಲಿ ಮಂಗಳೂರು ವಿವಿ ಸ್ಥಾಪನೆ, ಇಲ್ಲಿಯ ಸೌಹಾರ್ದತೆ ವಾತಾವರಣ ಹಾಗೂ ಗ್ರಾಮದ ಅಭಿವೃದ್ಧಿಗೆ ಗ್ರಾಮಸ್ಥರು ನೀಡಿದ ಸಹಕಾರದ ಪರಿಣಾಮ ಕೊಣಾಜೆ ಗ್ರಾಮ ಇಡೀ ರಾಜ್ಯಕ್ಕೆ ಗುರುತಿಸುವಂತಾಗಿದೆ. ಇದೀಗ ಈ ಭಾಗದ ಜನರ ಬೇಡಿಕೆಯಂತೆ ಕೊಣಾಜೆ ಪಂ., ಕೋಡಿಜಾಲ್ ಗೆ ಸಂಪರ್ಕಿಸುವ ರಸ್ತೆಯ ನಿರ್ಮಾಣಕ್ಕೆ ಶಿಲಾನ್ಯಾಸ ನಡೆದಿದ್ದು ಆದಷ್ಟು ಶೀಘ್ರ ಪೂರ್ಣಗೊಳ್ಳಲಿ ಎಂದು ವಿಧಾನಸಭಾ ಅಧ್ಯಕ್ಷ ಯು.ಟಿ.ಖಾದರ್ ಹೇಳಿದ್ದಾರೆ.

ಅವರು ಕೊಣಾಜೆ ಗ್ರಾ.ಪಂ., ಕೋಡಿಜಾಲ್‌ಗೆ ಸುಮಾರು 60 ಲಕ್ಷ ರೂ ವೆಚ್ಚದಲ್ಲಿ ನಿರ್ಮಾಣಗೊಳ್ಳಲಿರುವ ರಸ್ತೆ ಗೆ ಶುಕ್ರವಾರ ಶಿಲಾನ್ಯಾಸ ನೆರವೇರಿಸಿ ಮಾತನಾಡಿದರು

ನಿವೃತ್ತ ಮುಖ್ಯೋಪಾಧ್ಯಾಯರಾದ ರವೀಂದ್ರ ರೈ ಕಲ್ಲಿಮಾರ್ ಮಾತನಾಡಿ, ಕೊಣಾಜೆ ಪಂಚಾಯತ್ ರಸ್ತೆಗೆ ಶಿಲಾನ್ಯಾಸ ನಡೆದಿರುವುದು ಈ ಭಾಗದ ಜನರ ಬಹುದಿನದ ಬೇಡಿಕೆ ಈಡೇರಿದಂತಾಗಿದೆ ಎಂದರು.

ಮೂಡದ ಅಧ್ಯಕ್ಷ ಸದಾಶಿವ ಉಳ್ಳಾಲ್, ಮಾಜಿ ಅಧ್ಯಕ್ಷ ಇಬ್ರಾಹಿಂ ಕೋಡಿಜಾಲ್, ಉಳ್ಳಾಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಶೆಟ್ಟಿ ಬೋಳಿಯಾರ್, ಜಮಿಯತ್ತುಲ್ ಫಲಾಹ್ ಅಧ್ಯಕ್ಷ ಅಬ್ದುಲ್ ರಹಿಮಾನ್ ಕೋಡಿಜಾಲ್, ಕೊಣಾಜೆ ಪಂಚಾಯತ್ ಮಾಜಿ ಸದಸ್ಯರಾದ ಅಚ್ಯುತ ಗಟ್ಟಿ, ಇಕ್ಬಾಲ್ ಕೊಣಾಜೆ, ರವಿ ಕುಮಾರ್ ಡಿಸೋಜ, ಪ್ರೇಮ್‌ದಾಸ್, ದೇವಣ್ಣ ಶೆಟ್ಟಿ, ಮುಖಂಡರಾದ ಪ್ರಸಾದ್ ರೈ ಕಲ್ಲಿಮಾರ್, ಮಂಗಳ ಗ್ರಾಮೀಣ ಯುವಕ ಸಂಘದ ಅಧ್ಯಕ್ಷ ಎ.ಕೆ.ರಹಿಮಾನ್, ತಾ.ಪಂ. ಮಾಜಿ ಸದಸ್ಯ ಮಹಮ್ಮದ್ ಮುಸ್ತಫಾ, ನಾಸೀರ್ ಕೆಕೆ, ಮಹಮ್ಮದ್ ಮೋನು, ಶೌಕತ್ ಆಲಿ, ಗುಲಾಬಿ, ಪದ್ಮಾವತಿ, ಸಿ ಎಮ್ ಮೊಹಮ್ಮದ್, ಖಾದರ್ ಅಡ್ಕರ, ಅಮೀರ್ ಕೋಡಿಜಾಲ್, ಅಜರ್ ಕೋಡಿಜಾಲ್, ಸ್ಟ್ಯಾನಿ ಐಮನ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ ರಜನಿ ಮತ್ತಿತರರಿದ್ದರು.

ಕುಂದಾಪುರ ಡಾ. ಬಿ.ಬಿ.ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳಿಗೆ ಓರಿಯೆಂಟೇಶನ್



ಕುಂದಾಪುರ: ಕುಂದಾಪುರದ ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯ ವಿಭಾಗದ ಆಶ್ರಯದಲ್ಲಿ 2026-27ನೇ ಶೈಕ್ಷಣಿಕ ವರ್ಷಕ್ಕೆ ನೂತನವಾಗಿ ಸೇರ್ಪಡೆಗೊಂಡ ಪ್ರಥಮ ಬಿ.ಕಾಂ. ಜೊತೆ ಸಿಎ, ಸಿಎಸ್, ಸಿಎಂಎ ಅಧ್ಯಯನ ನಡೆಸಲಿರುವ ವಿದ್ಯಾರ್ಥಿಗಳಿಗಾಗಿ ಓರಿಯೆಂಟೇಶನ್ ಕಾರ್ಯಕ್ರಮ ಕಾಲೇಜಿನ ಮೂಕಾಂಬಿಕಾ ಸಭಾಂಗಣದಲ್ಲಿ ಗುರುವಾರ ನಡೆಯಿತು.

ಮುಖ್ಯ ಅತಿಥಿ ಉಡುಪಿಯ ವಿ-ರೀಚ್ ಅಕಾಡೆಮಿಯ ಸಂಸ್ಥಾಪಕ ಸಿಎಸ್ ಸಂತೋಷ ಪ್ರಭು ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ತಮ್ಮ ಗುರಿಯನ್ನು ಸ್ಪಷ್ಟವಾಗಿ ನಿಗಧಿಪಡಿಸಿ, ದೃಢಸಂಕಲ್ಪ ಮತ್ತು ಶ್ರಮದ ಮೂಲಕ ಸಾಧನೆಯತ್ತ ಮುನ್ನಡೆಯಬೇಕು. ಪರಿಶ್ರಮ, ಸಮಯ ನಿರ್ವಹಣೆ, ದೃಢಸಂಕಲ್ಪ ಯಶಸ್ಸಿನ ಮೂಲಮಂತ್ರ ಎಂದರು. ಇದೇ ಸಂದರ್ಭ ಅವರು ಭವಿಷ್ಯದ ದಿನಗಳಲ್ಲಿ ದಕ್ಷಿಣಕನ್ನಡ ಹಾಗೂ ಉಡುಪಿಜಿಲ್ಲೆಗಳಲ್ಲಿ ಸಹ ಸಿಎ, ಸಿಎಸ್, ಸಿಎಂಎ ಮುಂತಾದ ವೃತ್ತಿಪರ ಕೋರ್ಸ್‌ಗಳಲ್ಲಿ ಅಧ್ಯಯನ ಮಾಡಿದವರಿಗೆ ಉದ್ಯೋಗಾವಕಾಶಗಳು ಲಭಿಸಲಿದ್ದು, ವಿದ್ಯಾರ್ಥಿಗಳು ಈ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಿ ಎಂದರು.

ಕಾಲೇಜಿನ ಉಪ ಪ್ರಾಂಶುಪಾಲ ಡಾ.ಚೇತನ ಶೆಟ್ಟಿ ಕೋವಾಡಿ ಅಧ್ಯಕ್ಷತೆ ವಹಿಸಿದ್ದರು. ಉಡುಪಿಯ ವಿ-ರೀಚ್ ಅಕಾಡೆಮಿಯ ಸಂಯೋಜಕ ನಾಗೇಶ ಶೆಣೈ, ಕಾಲೇಜಿನ ಸಿಎ, ಸಿಎಸ್, ಸಿಎಂಎ ಕೋರ್ಸ್‌ಗಳ ಸಂಯೋಜಕರಾದ ಸತೀಶ ಕಾಂಚನ್ ಹಾಗೂ ಕಿಶೋರ್‌ಕೃಷ್ಣ ಮರಕಾಲ ಉಪಸ್ಥಿತರಿದ್ದರು.

ವಾಣಿಜ್ಯ ವಿಭಾಗದ ಮುಖ್ಯಸ್ಥೆ ವೀಣಾ ವಿ. ಭಟ್ ಸ್ವಾಗತಿಸಿ, ಪ್ರಸ್ತಾವಿಸಿದರು. ವಿದ್ಯಾರ್ಥಿಗಳಾದ ವರ್ಷಾ ಪ್ರಾರ್ಥಿಸಿ, ಸುರಕ್ಷಾ ವಂದಿಸಿದರು. ಲಾವಣ್ಯ ಪೂಜಾರಿ ಕಾರ್ಯಕ್ರಮ ನಿರೂಪಿಸಿದರು.

ಶಾಂತಿಗುರಿ ಶ್ರೀ ಮೂಕಾಂಬಿಕಾ ದೇವಳ: ಪ್ರಥಮ ವರ್ಷದ ಪ್ರತಿಷ್ಠಾ ವರ್ಧಂತಿ



ಉಪ್ಪಳ: ಬೇಕೂರು ಶಾಂತಿಗುರಿ ಶ್ರೀ ಮೂಕಾಂಬಿಕಾ ದೇವಸ್ಥಾನದಲ್ಲಿ ಶ್ರೀ ದೇವಿಯ ಪ್ರಥಮ ಪ್ರತಿಷ್ಠಾ ವರ್ಧಂತ್ಯೋತ್ಸವವು ವಿವಿಧ ಕಾರ್ಯಕ್ರಮಗಳೊಂದಿಗೆ ಸಂಭ್ರಮ ಸಡಗರದಿಂದ ಜರಗಿತು. ಆ ಪ್ರಯುಕ್ತ ಮಂಗಳವಾರ ಬೆಳಗ್ಗೆ ಸಾಮೂಹಿಕ ಪ್ರಾರ್ಥನೆ, ಪುಣ್ಯಾಹ, ಗಣಪತಿ ಹೋಮ, ನವಕ ಪ್ರಧಾನ ಕಲಶ, ಪ್ರಧಾನ ಹೋಮ, ದೀಪ ಪ್ರಜ್ವಲನೆ, ಭಜನಾ ಕಾರ್ಯಕ್ರಮ, ನವಕ ಕಲಶಾಭಿಷೇಕ, ನಾಗ ಮತ್ತು ರಕೇಶ್ವರಿ ದೈವಗಳಿಗೆ ತಂಬಿಲ ಸೇವೆ ಪರಿವಾರ ದೈವ ಸನ್ನಿಧಿಗಳಲ್ಲಿ ತಂಬಿಲ ಸೇವೆ ನೆರವೇರಿತು. ಮಧ್ಯಾಹ್ನ ಮಹಾಪೂಜೆ, ಅನ್ನಸಂತರ್ಪಣೆ, ಸಂಜೆ ದುರ್ಗಾಪೂಜೆ, ರಾತ್ರಿ ರಂಗಪೂಜೆ, ಪ್ರಸಾದ ವಿತರಣೆ, ಅನ್ನ ಸಂತರ್ಪಣೆ, ಬುಧವಾರ ಸಂಜೆ ದೈವಗಳಿಗೆ ವರ್ಷಾವಧಿ ಪರ್ವ , ಕೊರಗಜ್ಜ ದೈವದ ಕೋಲ ಜರಗಿತು. ನೂರಾರು ಮಂದಿ ಭಕ್ತಾದಿಗಳು ಪಾಲ್ಗೊಂಡು ಕೃತಾರ್ಥರಾದರು.

ಅತಿಥಿ ಉಪನ್ಯಾಸಕರ ನೇಮಕಾತಿ

ಕಾಸರಗೋಡು: ಪೆರಿಯದಲ್ಲಿರುವ ಕಾಸರಗೋಡು ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಕಂಪ್ಯೂಟರ್ ಇಂಜಿನಿಯರಿಂಗ್ ವಿಭಾಗದಲ್ಲಿ ಅತಿಥಿ ಉಪನ್ಯಾಸಕರ ನೇಮಕಾತಿಗಾಗಿ ಸಂದರ್ಶನವು ಮೇ 29 ರಂದು ನಡೆಯಲಿದೆ. ಉಪನ್ಯಾಸಕರ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ತಮ್ಮ ಬಯೋಡೇಟಾ, ಮೂಲ ದಾಖಲೆಗಳು ಮತ್ತು ಎಲ್ಲಾ ಶೈಕ್ಷಣಿಕ ಹಾಗೂ ಅನುಭವ ಪ್ರಮಾಣಪತ್ರಗಳ ಪ್ರತಿಗಳೊಂದಿಗೆ ಬೆಳಗ್ಗೆ 10.30 ರೊಳಗೆ ಪಾಲಿಟೆಕ್ನಿಕ್ ಕಚೇರಿಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಮಾಹಿತಿಗೆ 0467 2234020 ಕರೆ ಮಾಡಬಹುದು.

ಭಗವಂತನ ನಿರಂತರ ಆರಾಧನೆಯಿಂದ ಗ್ರಾಮದಲ್ಲಿ ಸುಭೀಕ್ಷೆ ಪ್ರಾಪ್ತಿ: ಸುಬ್ರಹ್ಮಣ್ಯ ಶ್ರೀ



ಸುಬ್ರಹ್ಮಣ್ಯ: ದೇವರಕಾನ ಶ್ರೀ ಲಕ್ಷ್ಮೀನರಸಿಂಹ ದೇವಳದಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮಗಳಲ್ಲಿ ನಾವೆಲ್ಲ ಒಂದಾಗಿ ಭಾಗಿಗಳಾಗಬೇಕು. ಇದರಿಂದ ದೇವರ ಅನುಗ್ರಹ ಸಿಗುತ್ತದೆ. ಮುಂದಿನ ದಿನಗಳಲ್ಲಿ ನಡೆಯುವ ಬ್ರಹ್ಮಕಲಶ ಸಂದರ್ಭ ಕನಿಷ್ಠ 48 ದಿವಸ ವ್ರತಾಚರಣೆ ಮಾಡಿದರೆ ಸುಕೃತ ಫಲ ದೊರಕುತ್ತದೆ. ನಿರಂತರ ಭಗವಂತನ ಆರಾಧನೆಯಿಂದ ಗ್ರಾಮದಲ್ಲಿ ಸುಭಿಕ್ಷೆ ಪ್ರಾಪ್ತವಾಗುತ್ತದೆ ಎಂದು ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದ್ದಾರೆ.

ಮುರುಳ್ಯ ಗ್ರಾಮದ ದೇವರಕಾನ ಶ್ರೀ ಲಕ್ಷ್ಮೀನರಸಿಂಹ ದೇವಳ ಪ್ರತಿಷ್ಠಾ ವಾರ್ಷಿಕೋತ್ಸವ, ಜಾತ್ರೋತ್ಸವದ ಅಂಗವಾಗಿ ನಡೆದ ಧಾರ್ಮಿಕ ಸಭೆಯನ್ನು ಉದ್ಘಾಟಿಸಿ ಸ್ವಾಮೀಜಿ ಆಶೀರ್ವಚನ ನೀಡಿದರು.

ಕುಕ್ಕೆ ದೇವಳದಿಂದ ಇತರ ದೇವಳಗಳ ಅಭಿವೃದ್ಧಿಪಡಿಸಲು ಬೇಕಾದ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು. ಈಗಾಗಲೇ ಪೂದೆ ದೇವಳ ಸೇರಿದಂತೆ ಅವಳಿ ದೇವಳಗಳು ಕುಕ್ಕೆ ದೇವಳದಿಂದ ಅಭಿವೃದ್ಧಿ ಹೊಂದುತ್ತಿದೆ. ಇದೇ ರೀತಿ ಶ್ರೀ ದೇವಳದಿಂದ ಗ್ರಾಮೀಣ ದೇವಳ ಪ್ರಗತಿಗೆ ಶ್ರಮಿಸಲಾಗುವುದೆಂದು ಅತಿಥಿಯಾಗಿದ್ದ ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಳ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್ ಇಂಜಾಡಿ ತಿಳಿಸಿದರು.

ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಅಧ್ಯಕ್ಷತೆ ವಹಿಸಿದ್ದರು. ಬ್ರಹ್ಮಕಲಶ ಸಂಚಾಲಕ ಸವಣೂರು ಸೀತಾರಾಮ ರೈ, ಸಾಂದೀಪನಿ ವಿದ್ಯಾಸಂಸ್ಥೆ ಅಧ್ಯಕ್ಷ ಶಿಬರ ಜಯರಾಮ ಕೆದಿಲಾಯ, ಉದ್ಯಮಿ ಅಲೆಕ್ಕಾಡಿ ಸಂತೋಷ್ ಕುಮಾರ್, ಟ್ರಸ್ಟ್ ಅಧ್ಯಕ್ಷ ರಾಮಚಂದ್ರ ಭಟ್ ದೇವಸ್ಯ, ಮಾಜಿ ಅಧ್ಯಕ್ಷ ವಿಠಲ್ ರೈ ಪೊಲಾಜೆ ವೇದಿಕೆಯಲ್ಲಿದ್ದರು.

ಜನಾರ್ದನ ಅಲೆಕ್ಕಾಡಿ ಸ್ವಾಗತಿಸಿ, ಅನುಪು ಬಿಳಿಮಲೆ ವಂದಿಸಿದರು.

ಕೊಡಗು ಹಿಂದೂ ಮಲೆಯಾಳಿ ಸಮಾಜ: ಪ್ರತಿಭಾ ಪುರಸ್ಕಾರ ಕಾರ್ಯಕ್ರಮ, ಮಹಾಸಭೆ



ಗೋಣಿಕೊಪ್ಪ: ಕೊಡಗು ಹಿಂದೂ ಮಲೆಯಾಳಿ ಸಮಾಜದ ಪ್ರತಿಭಾ ಪುರಸ್ಕಾರ, ಮಹಾಸಭೆ ಗೋಣಿಕೊಪ್ಪ ಕೃಷಿ ಉತ್ಪನ್ನ ಮಾರುಕಟ್ಟೆ ಸಭಾಂಗಣದಲ್ಲಿ ನಡೆಯಿತು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಸಮಾಜದ ಅಧ್ಯಕ್ಷ ಕೆ.ಪಿ. ಪ್ರಶಾಂತ್ ಕುಮಾರ್, ಎಲ್ಲರೂ ಒಗ್ಗಟ್ಟಿನಿಂದ ಮುಂದುವರಿದರೆ ಸಮಾಜದ ಅಭಿವೃದ್ಧಿ ಸಾಧ್ಯ ಎಂದರು.

ಗೌರವ ಅಧ್ಯಕ್ಷ ಪಿ.ಎಸ್.ಶರತ್‌ಕಾಂತ್, ಖಜಾಂಚಿ ಶಾಜಿ ಅಚ್ಚುತನ್, ಉಪಾಧ್ಯಕ್ಷರಾದ ಕೆ.ಜಿ.ಪ್ರಸಾದ್, ಸಿ.ಕೆ.ವೇಣುಗೋಪಾಲ್, ಪುಷ್ಪಾ ಮನೋಜ್, ಶ್ರೀಜಾ ಪ್ರದೀಪ್, ಸಂಘಟನಾ ಕಾರ್ಯದರ್ಶಿ ಟಿ.ಜಿ.ಮನು ಕುಮಾರ್, ಸರಳಾ ಮಣಿಲಾಲ್, ಬಿಂದು ಶಾಜಿ, ಕಾನೂನು ಸಲಹೆಗಾರ ಕೆ.ಬಿ.ಸಂಜೀವ್, ನಿರ್ದೇಶಕರಾದ ಪಿ.ಜಿ.ರಾಜಶೇಖರ್, ಪಿ.ವಿ. ಚಂದ್ರ, ರತೀಶ್‌ಕುಮಾರ್, ವಿ.ಎನ್.ರೀನಾ, ಸುನಿತಾ ಕಣ್ಣನ್, ಪಾಲಿಬೆಟ್ಟ ಉಪ ಸಮಿತಿಯ ಅಧ್ಯಕ್ಷ ಪಿ.ವೈ. ಮುರಳಿ, ಮನೋಜ್ ಕುಮಾರ್ ಬಂಡೆ ಮತ್ತಿತರರಿದ್ದರು.

ಸಾಧಕಕ ಮಕ್ಕಳಿಗೆ ಸನ್ಮಾನ

ಎಸ್ಸೆಸ್ಸೆಲ್ಸಿ ವಿಭಾಗದಲ್ಲಿ ಎಂ.ವಿ. ವಿಸ್ಮಿತಾ, ಬಿ.ಎ.ಅನುರಾಗ್, ಎನ್.ಎಸ್.ಶ್ರೀಹರಿ, ದ್ವಿತಿಯ ಪಿಯುಸಿ ವಾಣಿಜ್ಯ ವಿಭಾಗದಲ್ಲಿ ಶಿವಾನಿ, ವಿ. ಎ. ಆತ್ಮಿಕಾ, ವಿಜ್ಞಾನ ವಿಭಾಗದಲ್ಲಿ ಎಂ.ಟಿ.ಶ್ರೇಯಾ, ವಿ.ಎ.ಕ್ರಿಶ್ಮಾ, ಕ್ರೀಡಾ ವಿಭಾಗದಲ್ಲಿ ಉದ್ದಜಿಗಿತದಲ್ಲಿ ಸಾಧನೆ ಮಾಡಿರುವ ಎಂ.ಎಸ್. ನಂದನಾ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಅಗಲಿದ ಸದಸ್ಯರಿಗೆ ಸಂತಾಪ ಸೂಚಿಸಲಾಯಿತು. ನಿರ್ದೇಶಕಿ ವಿ. ಎನ್. ರೀನಾ ಕಳೆದ ಮಹಾಸಭೆ ವರದಿ ವಾಚಿಸಿದರು. ಪ್ರಧಾನ ಕಾರ್ಯದರ್ಶಿ ವಿ. ವಿ. ಅರುಣ್ ಕುಮಾರ್ ವಾರ್ಷಿಕ ವರದಿ ವಾಚಿಸಿದರು. ಶಾಜಿ ಅಚ್ಚುತ್ತನ್ ಲೆಕ್ಕ ಪತ್ರ ಮಂಡಿಸಿದರು. ಸರಳಾ ಮಣಿಲಾಲ್ ವಂದಿಸಿದರು.

ಇರ್ವತ್ತೂರು ಗ್ರಾ.ಪಂ.: ಗ್ರಾಮೀಣ ಮಕ್ಕಳ ಬೇಸಿಗೆ ಶಿಬಿರ ಉದ್ಘಾಟನೆ



ಬಂಟ್ವಾಳ: ತಾಲೂಕಿನ ಇರ್ವತ್ತೂರು ಗ್ರಾಮ ಪಂಚಾಯತ್, ಗ್ರಾ.ಪಂ. ಅರಿವು ಕೇಂದ್ರ ಹಾಗೂ ಮಾಹಿತಿ ಕೇಂದ್ರ, ಇರ್ವತ್ತೂರು ಡಿಜಿಟಲ್ ಗ್ರಂಥಾಲಯ ಇದರ ಆಶ್ರಯದಲ್ಲಿ ಓದುವ ಬೆಳಕು ಕಾರ್ಯಕ್ರಮದಡಿ ಗ್ರಾಮೀಣ ಮಕ್ಕಳ ಬೇಸಿಗೆ ಶಿಬಿರ ಕಾರ್ಯಕ್ರಮ ಇರ್ವತ್ತೂರು ಗ್ರಾ.ಪಂ. ಗ್ರಂಥಾಲಯದಲ್ಲಿ ನಡೆಯಿತು.

ಗ್ರಾಮ ಪಂಚಾಯತ್ ಆಡಳಿತ ಅಧಿಕಾರಿ ನಾರಾಯಣ ಭಟ್ ಅವರು ಶಿಬಿರವನ್ನು ಉದ್ಘಾಟಿಸಿ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ಮಕ್ಕಳಲ್ಲಿ ಓದುವ ಹವ್ಯಾಸವನ್ನು ಬೆಳೆಸಲು ಸರಕಾರ ಈ ಯೋಜನೆಯನ್ನು ಜಾರಿಗೆ ತರಲಾಗಿದೆ. ಶಿಬಿರದಲ್ಲಿ ಪುಸ್ತಕ ಓದುವಿಕೆ ಮಾತ್ರವಲ್ಲದೆ ಚಟುವಟಿಕೆ ಆಧಾರಿಕತ ಕಲೆ, ವಿಜ್ಞಾನ ಆಧಾರಿತ ಕಲೆಗಳನ್ನು ತಿಳಿಸಲಾಗುವುದು. ವಿದ್ಯಾರ್ಥಿಗಳು ಇದನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ನಿಶಾಂತ್ ಬಿ.ಆರ್., ಪಂಚಾಯತ್ ಮಾಜಿ ಉಪಾಧ್ಯಕ್ಷ ಶಂಕರ್ ಶೆಟ್ಟಿ ಬೆದ್ರಮಾರ್, ಪಂಚ ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯರಾದ ಸುಧೀಂದ್ರ ಶೆಟ್ಟಿ ಎರ್ಮೆನಾಡು, ಚಿತ್ರಕಲಾ ಶಿಕ್ಷಕ ವಿಘ್ನೇಶ್, ಗ್ರಂಥಪಾಲಕಿ ಕವಿತಾ ಲೋಕೇಶ್, ವೆಂಕಟೇಶ್, ಸಂಜೀವಿನಿ ಎಂ.ಬಿ.ಕೆ. ಶಾರದಾ, ಪಂಚಾಯತ್ ಸಿಬಂದಿ ವರ್ಗ ಮತ್ತಿತರರು ಉಪಸ್ಥಿತರಿದ್ದರು.

ಬೈಕಂಪಾಡಿ- ಕೆಐಒಸಿಎಲ್ ಜಂಕ್ಷನ್‌ವರೆಗೆ ಎಲಿವೇಟೆಡ್ ಫ್ಲೈಓವರ್ - ಸರ್ವಿಸ್ ರಸ್ತೆ ನಿರ್ಮಾಣ

414.16 ಕೋ.ರೂ.ವೆಚ್ಚದ ಯೋಜನೆಗೆ ಕೇಂದ್ರ ಅನುಮೋದನೆ: ಸಂಸದ ಚೌಟ

ಮಂಗಳೂರು: ರಾ. ಹೆ.66 ರಲ್ಲಿ ಬೈಕಂಪಾಡಿಯಿಂದ ಕೆಐಒಸಿಎಲ್ ಜಂಕ್ಷನ್ ವರೆಗೆ ಒಟ್ಟು 414.16 ಕೋ. ರೂ. ವೆಚ್ಚದಲ್ಲಿ ಎಲಿವೇಟೆಡ್ ಫ್ಲೈಓವರ್-ಸರ್ವಿಸ್ ರಸ್ತೆ ನಿರ್ಮಾಣಕ್ಕೆ ಕೇಂದ್ರಸರ್ಕಾರದಿಂದ ಅನುಮೋದನೆ ದೊರಕಿದ್ದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಟೆಂಡರ್ ಪ್ರಕ್ರಿಯೆ ಆರಂಭಿಸಿದೆ ಎಂದು ಸಂಸದ ಕ್ಯಾ. ಬ್ರಿಜೇಶ್ ಚೌಟ ತಿಳಿಸಿದ್ದಾರೆ.


ನವ ಮಂಗಳೂರು ಬಂದರಿಗೆ ನೇರ ಸಂಪರ್ಕ ಸುಧಾರಿಸುವ ಒಟ್ಟು 3.075 ಕಿ.ಮೀ. ಉದ್ದದ ರಸ್ತೆ ಅಭಿವೃದ್ಧಿ ಯೋಜನೆ ಇದಾಗಿದ್ದು, ಈ ಪೈಕಿ 1.520 ಮೀ. ಉದ್ದದ ಅತ್ಯಾಧುನಿಕ 6 ಪಥದ ಎಲಿವೇಟೆಡ್ ಫ್ಲೈಓವರ್ ನಿರ್ಮಾಣಗೊಳ್ಳಲಿದೆ. ಈ ಬೃಹತ್ ಯೋಜನೆಯನ್ನು ಇಪಿಸಿ ಮಾದರಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಇದರೊಂದಿಗೆ ಹೆದ್ದಾರಿ ಇಕ್ಕೆಲಗಳಲ್ಲಿ ಒಟ್ಟು 5.825 ಕಿ.ಮೀ. ಉದ್ದದ ಸರ್ವಿಸ್ ರಸ್ತೆ ನಿರ್ಮಿಸಲಾಗುವುದು. ಈ ಯೋಜನೆಯ ಯಶಸ್ವಿ ಅನುಷ್ಠಾನಕ್ಕೆ ನವ ಮಂಗಳೂರು ಬಂದರು ಪ್ರಾಧಿಕಾರ ಅಗತ್ಯವಿರುವ ಹೆಚ್ಚುವರಿ ಭೂಮಿ , ಆರ್ಥಿಕ ಧನಸಹಾಯವನ್ನು ಹೆದ್ದಾರಿ ಪ್ರಾಧಿಕಾರಕ್ಕೆ ಒದಗಿಸಲಿದೆ.

ರಾ.ಹೆ. 66ರಲ್ಲಿ ಈ ಭಾಗದ ರಸ್ತೆ ನವ ಮಂಗಳೂರು ಬಂದರಿಗೆ ನೇರ ಸಂಪರ್ಕ ಕಲ್ಪಿಸುವಲ್ಲಿ, ರಫ್ತು-ಆಮದು ಸರಕುಗಳ ಸಾಗಣೆಗೆ ಅತ್ಯಂತ ನಿರ್ಣಾಯಕ ಕಾರಿಡಾರ್ ಆಗಿ ಕಾರ್ಯನಿರ್ವಹಿಸುತ್ತಿದೆ. ಈ ನೂತನ ಯೋಜನೆ ಹೆದ್ದಾರಿ ಸಂಚಾರ, ಸ್ಥಳೀಯ ವಾಹನಗಳ ನಡು ವಿನ ಓಡಾಟ ಪ್ರತ್ಯೇಕಿಸಿ, ಸುಗಮ ಸಂಚಾರ , ರಸ್ತೆ ಸುರಕ್ಷತೆ ಅನುಕೂಲ ಕಲ್ಪಿಸಲಿದೆ ಎಂದು ಸಂಸದರು ತಿಳಿಸಿದ್ದಾರೆ.

ಬೈಕಂಪಾಡಿ ಕೈಗಾರಿಕಾ ಪ್ರದೇಶ ಮತ್ತು ಕೆಐಒಸಿಎಲ್ ವಲಯದ ರಸ್ತೆ ಅಭಿವೃದ್ಧಿ ಯೋಜನೆ ಜಿಲ್ಲೆಯ ಕೈಗಾರಿಕಾ ಮತ್ತು ಆರ್ಥಿಕ ಬೆಳವಣಿಗೆಗೆ ಪ್ರಮುಖ ಪ್ರೇರಕ ಶಕ್ತಿಯಾಗಲಿದೆ. ಕರಾವಳಿ ಭಾಗದ ಒಟ್ಟಾರೆ ರಸ್ತೆ ಸಂಪರ್ಕ ವ್ಯವಸ್ಥೆಯನ್ನು ಸುಧಾರಿಸುವುದರೊಂದಿಗೆ, ಭವಿಷ್ಯದ ವಾಹನ ದಟ್ಟಣೆಯ ಅಗತ್ಯತೆ ಪೂರೈಸಲು , ದೀರ್ಘಕಾಲೀನ ಮೂಲಸೌಕರ್ಯ ಪ್ರಯೋಜನ ಗಳ ಒದಗಿಸಲು ಇದು ಸಹಕಾರಿಯಾಗಲಿದೆ.

ದ.ಕ. ಹಾಗೂ ಕರಾವಳಿ ಭಾಗದ ಈ ರಸ್ತೆಯ ಮೇಲ್ದರ್ಜೆಗೇರಿಸಲು ಅನುಮೋದನೆ ನೀಡಿರುವ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ, ಕೇಂದ್ರ ಬಂದರು ಹಡಗು - ಜಲಮಾರ್ಗಗಳ ಸಚಿವ ಸರ್ಬಾನಂದ ಸೋನೋವಾಲ್, ಯೋಜನೆಗೆ ಕೈ ಜೋಡಿಸಿರುವ ನವ ಮಂಗಳೂರು ಬಂದರು ಪ್ರಾಧಿಕಾರಕ್ಕೆ ಜಿಲ್ಲೆಯ ಜನತೆ ಪರವಾಗಿ ಸಂಸದರು ಕೃತಜ್ಞತೆ ಸಲ್ಲಿಸಿದ್ದಾರೆ.

ಅತ್ಯಾಧುನಿಕ ಮಟ್ಟಕ್ಕೆ ಮೇಲ್ದರ್ಜೆಗೇರಲಿದೆ



ರಾ.ಹೆ.66 ರ ಬೈಕಂಪಾಡಿ ಮತ್ತು ಕೂಳೂರು ಜಂಕ್ಷನ್ ಬಳಿ ಈಗಾಗಲೇ ರೂ. 11.63 ಕೋಟಿ ವೆಚ್ಚದ ಅಂಡರ್‌ಪಾಸ್ ನಿರ್ಮಾಣ ಯೋಜನೆಗೆ ಅನುಮೋದನೆ ದೊರೆತು ಪ್ರಕ್ರಿಯೆ ಚಾಲ್ತಿಯಲ್ಲಿದೆ. ಇದರ ಬೆನ್ನಲ್ಲೇ, ಇದೀಗ ರೂ. 414.16 ಕೋಟಿ ವೆಚ್ಚದ ಎಲಿವೇಟೆಡ್ ಫ್ಲೈಓವರ್ ಹಾಗೂ ಸರ್ವೀಸ್ ರಸ್ತೆ ನಿರ್ಮಾಣಕ್ಕೂ ಕೇಂದ್ರ ಸರ್ಕಾರ ಹಸಿರು ನಿಶಾನೆ ನೀಡಿರುವುದರಿಂದ, ನಮ್ಮ ಬಂದರು ವ್ಯಾಪ್ತಿಯ ಹೆದ್ದಾರಿ ವಲಯ ಸಂಪೂರ್ಣವಾಗಿ ಅತ್ಯಾಧುನಿಕ ಮಟ್ಟಕ್ಕೆ ಮೇಲ್ದರ್ಜೆಗೇರಲಿದೆ. ಈ ಅಭಿವೃದ್ಧಿ ಕಾರಿಡಾರ್‌ನಿಂದ ನವ ಮಂಗಳೂರು ಬಂದರಿನ ಸರಕು ಸಾಗಣೆ ವಾಹನಗಳ ಸಂಚಾರ ಸುಗಮ ಗೊಳ್ಳುವುದರ ಜೊತೆಗೆ, ಸ್ಥಳೀಯ ಸಾರ್ವಜನಿಕರ ದೈನಂದಿನ ಓಡಾಟ, ಅತ್ಯಾಧುನಿಕ -ದೀರ್ಘಕಾಲೀನ ಮೂಲಸೌಕರ್ಯ ಸೌಲಭ್ಯ ದೊರೆತಂತಾಗಲಿದೆ.

● **ಕ್ಯಾ. ಬ್ರಿಜೇಶ್ ಚೌಟ, ಸಂಸದ**

ಸುತ್ತಮುತ್ತ

ಇಂದು ವಿಹಿಂಪದಿಂದ ಶ್ರವಣ ತಪಾಸಣಾ ಶಿಬಿರ

ಮಂಜೇಶ್ವರ: ವಿಶ್ವ ಹಿಂದು ಪರಿಷತ್‌ನ ಕೋಡಿಬೈಲು ಉಪಖಂಡ ಸಮಿತಿ ಹಾಗೂ ಓಂ ಶಕ್ತಿ ಫ್ರೆಂಡ್ಸ್ ಕೋಡಿಬೈಲು ಇವುಗಳ ಆಶ್ರಯದಲ್ಲಿ ಟೀಮ್ ಈಶ್ವರ್ ಮಲ್ಪೆ ಸಹಯೋಗದೊಂದಿಗೆ ಶ್ರವಣ ತಪಾಸಣೆ ಮತ್ತು ಶ್ರವಣ ಯಂತ್ರಕ್ಕೆ ಸಹಾಯಧನ ವಿತರಣೆ ಕಾರ್ಯಕ್ರಮವು ಮೇ 24ರಂದು ಬೆಳಿಗ್ಗೆ 9.30ರಿಂದ ಕೋಡಿಬೈಲು ನವೋದಯ ಎಎಲ್‌ಪಿ ಶಾಲೆಯಲ್ಲಿ ಜರಗಲಿದೆ. ಸಮಾಜ ಸೇವಕ ಈಶ್ವರ ಮಲ್ಪೆ ದೀಪ ಬೆಳಗಿಸಿ ಉದ್ಘಾಟಿಸುವರು. ವಿಶ್ವ ಹಿಂದು ಪರಿಷತ್‌ನ ಕೋಡಿಬೈಲು ಉಪಖಂಡ ಸಮಿತಿ ಅಧ್ಯಕ್ಷ ನಾರಾಯಣ ತೊಟ್ಟಿ ಅಧ್ಯಕ್ಷತೆ ವಹಿಸುವರು. ವಿಹಿಂಪ ಕಾಸರಗೋಡು ಜಿಲ್ಲಾ ಮಾತೃ ಶಕ್ತಿ ಪ್ರಮುಖ್ ಮೀರಾ ಆಳ್ವ ಬೇಕೂರು, ವಿಹಿಂಪ ಮಂಗಲ್ಪಾಡಿ ಖಂಡ ಸಮಿತಿ ಅಧ್ಯಕ್ಷ ಹರಿನಾಥ ಭಂಡಾರಿ, ಕೋಡಿಬೈಲು ಗ್ರಾಮ ಸಮಿತಿ ಅಧ್ಯಕ್ಷೆ ಕುಸುಮಾ ಸದಾನಂದ, ಕೋಡಿಬೈಲು ಓಂ ಶಕ್ತಿ ಫ್ರೆಂಡ್ಸ್ ಅಧ್ಯಕ್ಷ ಸುನೀಲ್ ಕುಮಾರ್ ಭಾಗವಹಿಸುವರು.

ಮೇ 25ರ ವರೆಗೆ ವಿದ್ಯುತ್ ವ್ಯತ್ಯಯ

ಕಾಸರಗೋಡು: ಕಲ್ಲಿಕೋಟೆ ಪವರ್‌ಗ್ರಿಡ್ ಕಾರ್ಪೋರೇಶನ್‌ನ 400 ಕೆವಿ ಸಬ್‌ಸ್ಟೇಷನ್‌ನ ಮೂರನೇ ನಂಬ್ರ 500 ಎಂವಿಎ ಟ್ರಾನ್ಸ್‌ಫಾರ್ಮರ್‌ನ 220 ಕೆವಿ ಬುಶ್ಶಿಂಗ್‌ನಲ್ಲಿ ಉಂಟಾದ ಹಾನಿ ಹಿನ್ನೆಲೆಯಲ್ಲಿ ದುರಸ್ತಿಗೊಳಿಸಲು ಒಂದು ವಾರದ ಕಾಲಾವಕಾಶ ಬೇಕಾಗಿ ಬರಲಿದೆ. ಈ ನಿಟ್ಟಿನಲ್ಲಿ ಕಲ್ಲಿಕೋಟೆ, ವಯನಾಡು, ಕಣ್ಣೂರು ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ ಆಂಶಿಕವಾಗಿ ವಿದ್ಯುತ್ ನಿಯಂತ್ರಣ ಏರ್ಪಡಿಸಲಾಗುವುದು ಎಂದು ಕೆಎಸ್‌ಇಬಿ ತಿಳಿಸಿದೆ. ಮೇ 25ರ ತನಕ ಈ ರೀತಿಯಲ್ಲಿ ವಿದ್ಯುತ್ ಆಂಶಿಕವಾಗಿ ಮೊಟಕುಗೊಳ್ಳಲಿದೆ ಎಂದು ಕೆಎಸ್‌ಇಬಿ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 29: ಪ್ರಾಧ್ಯಾಪಕರ ಹುದ್ದೆಗಳಿಗೆ ಸಂದರ್ಶನ

ಕಾಸರಗೋಡು: ಕಾಸರಗೋಡು ಸರಕಾರಿ ಕಾಲೇಜಿನಲ್ಲಿ ಪ್ರಾಧ್ಯಾಪಕರ ಹುದ್ದೆಗಳಿಗೆ ಸಂದರ್ಶನವು ಮೇ 29 ರಂದು ನಡೆಯಲಿದೆ. ಬೆಳಗ್ಗೆ 11.30ಕ್ಕೆ ಮಲೆಯಾಳ, ಮಧ್ಯಾಹ್ನ 2 ಗಂಟೆಗೆ ವಾಣಿಜ್ಯ ವಿಷಯಗಳಿಗೆ ಸಂದರ್ಶನ ಏರ್ಪಡಿಸಲಾಗಿದೆ. ಶೇಕಡಾ 55 ಅಂಕಗಳೊಂದಿಗೆ ಸ್ನಾತಕೋತ್ತರ ಪದವಿ ಮತ್ತು ನೆಟ್ ವಿದ್ಯಾರ್ಹತೆಯಾಗಿದೆ. ನೆಟ್ ಅರ್ಹತೆ ಹೊಂದಿದ ಅಭ್ಯರ್ಥಿಗಳ ಅನುಪಸ್ಥಿತಿಯಲ್ಲಿ ಸ್ನಾತಕೋತ್ತರ ಪದವೀಧರರನ್ನು ಪರಿಗಣಿಸಲಾಗುತ್ತದೆ. ಕಾಲೇಜು ಶಿಕ್ಷಣ ನಿರ್ದೇಶಕರ ಕಚೇರಿಯಲ್ಲಿ ತಮ್ಮ ಹೆಸರುಗಳನ್ನು ನೋಂದಾಯಿಸಿದ ಅಭ್ಯರ್ಥಿಗಳು ಮೂಲ ಪ್ರಮಾಣಪತ್ರಗಳೊಂದಿಗೆ ಕಾಲೇಜು ಪ್ರಾಂಶುಪಾಲರ ಕಚೇರಿಯಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು. ಹೆಚ್ಚಿನ ವಿವರಗಳಿಗೆ 04994 256027 ಸಂಪರ್ಕಿಸಬಹುದು.

ಅಪ್ಪೆ ಬೇರ್ ದ ತುಳುನಾಡ್'' ವಿಚಾರಗೋಷ್ಠಿಗೆ ಆಯ್ಕೆಯಾದ ಪ್ರಬಂಧಕಾರರಿಗೆ ಅಭಿನಂದನೆ

ಮುಲ್ಕಿ: ಮೇ 24ರಂದು ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ಕ್ಷೇತ್ರದಲ್ಲಿ ನಡೆಯಲಿರುವ 'ಅಪ್ಪೆ ಬೇರ್ ದ ತುಳುನಾಡ್' ರಾಷ್ಟ್ರೀಯ ತುಳು ವಿಚಾರಗೋಷ್ಠಿ ಕಾರ್ಯಕ್ರಮದ ಅಂಗವಾಗಿ ವಿವಿಧ ಭಾಗಗಳಿಂದ ಪ್ರಬಂಧಗಳನ್ನು ಆಹ್ವಾನಿಸಲಾಗಿದ್ದು, ಸ್ವೀಕಾರಗೊಂಡ ಪ್ರಬಂಧಗಳನ್ನು ಕಳುಹಿಸಿದ ಪ್ರಬಂಧಕಾರರನ್ನು ಕಾರ್ಯಕ್ರಮದಲ್ಲಿ ಅಭಿನಂದಿಸಿ ಗೌರವಿಸಲು ಆಯೋಜಕರು ತೀರ್ಮಾನಿಸಿದ್ದಾರೆ. ತುಳುನಾಡಿನ ಮಾತೃಮೂಲ ಸಂಸ್ಕೃತಿ, ತುಳು ಭಾಷೆ, ಪರಂಪರೆ ಹಾಗೂ ಸಾಮಾಜಿಕ ವಿಚಾರಗಳನ್ನು ಆಧರಿಸಿ ದೇಶ-ವಿದೇಶಗಳಿಂದ ಬಂದ ಪ್ರಬಂಧಗಳಲ್ಲಿ ಕೆಲವು ಪ್ರಬಂಧಗಳನ್ನು ವಿಚಾರಗೋಷ್ಠಿಗೆ ಆಯ್ಕೆ ಮಾಡಲಾಗಿದೆ. ಆಯ್ಕೆಯಾದ ಪ್ರಬಂಧಕಾರರಿಗೆ ಕಾರ್ಯಕ್ರಮದಲ್ಲಿ ಅಭಿನಂದನಾ ಪತ್ರ ನೀಡಿ ಗೌರವಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಪ್ರಬಂಧ ಸ್ವೀಕಾರಗೊಂಡವರಲ್ಲಿ ಶರತ್ ಶೆಟ್ಟಿ ಪಡುಪಳ್ಳಿ ನೈಜೀರಿಯಾ, ಶರೋನ್ ಶೆಟ್ಟಿ ಐಕಳ, ರೇಮಂಡ್ ಡಿಕೂನಾ ತಾಕೊಡೆ, ವಿನೋದ ಜಯಪ್ರಸಾದ್ ಕಾರಿಂಜ, ಕಾಸರಗೋಡು, ಕುಸುಮ್ ಸಾಲಿಯಾನ್ ಪುಣೆ, ಶಂಕರ್ ಪಡಂಗ ಕಿಲ್ಪಾಡಿ, ಪಡುಕುಡೂರ್ ಪ್ರಫುಲ್ಲ ದಿನೇಶ್ ಶೆಟ್ಟಿ ಮುಂಬೈ ಸೇರಿದ್ದಾರೆ. ಕಾರ್ಯಕ್ರಮದಲ್ಲಿ ಪ್ರಬಂಧಕಾರರನ್ನು ಗೌರವಿ ಸುವ ಮೂಲಕ ಅವರ ಚಿಂತನೆ ಮತ್ತು ಬೌದ್ಧಿಕ ಕೊಡುಗೆಯನ್ನು ಸನ್ಮಾನಿಸಲಾಗುವುದೆಂದು ಪ್ರಕಟಣೆ ತಿಳಿಸಿದೆ.

ವಿಟ್ಲ ತಾ.ಹೋರಾಟಕ್ಕೆ ನೂತನ ಸಮಿತಿ ರಚನೆ

ವಿಟ್ಲ: ಪಂಚಲಿಂಗೇಶ್ವರ ಸಭಾಭವನದಲ್ಲಿ ವಿಟ್ಲ ತಾಲೂಕು ಕೇಂದ್ರ ರಚನೆ ಮತ್ತು ವಿಟ್ಲ ವಿಧಾನ ಸಭಾ ಕ್ಷೇತ್ರದ ಮರುಸ್ಥಾಪನೆಗೆ ಒತ್ತಾಯಿಸಿ ಶನಿವಾರ ನೂತನ ಸಮಿತಿ ರಚಿಸಲಾಯಿತು. ಹೋರಾಟ ಸಮಿತಿಯ ಗೌರವಾಧ್ಯಕ್ಷರಾಗಿ ವಿಟ್ಲ ಅರಮನೆಯ ಬಂಗಾರು ಅರಸರು, ಹಿರಿಯ ಹೋರಾಟಗಾರ ಮುರುವ ನಡುಮನೆ ಮಹಾಬಲ ಭಟ್ ಅವರನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ವಿ. ಕೆ. ಬಶೀರ್, ಸಂಚಾಲಕರಾಗಿ ರಾಮಣ್ಣ ಪಾಲಿಗೆ, ಉಪಾಧ್ಯಕ್ಷರಾಗಿ ಹಸೈನಾರ್ ಕಡಂಬು, ಸುದರ್ಶನ ಪಡಿಯಾರ್, ಪ್ರಧಾನ ಕಾರ್ಯದರ್ಶಿಯಾಗಿ ರಮಾನಾಥ ವಿಟ್ಲ, ಕಾರ್ಯದರ್ಶಿಯಾಗಿ ಕಾನ ಈಶ್ವರ ಭಟ್, ಸಂಘಟನಾ ಕಾರ್ಯದರ್ಶಿಯಾಗಿ ಅಬ್ದುಲ್ ರಹಮಾನ್ ನೆಲ್ಲಿಗುಡ್ಡೆ, ಜತೆ ಕಾರ್ಯದರ್ಶಿಯಾಗಿ ಸದಾನಂದ ಗೌಡ ಸೇರಾಜೆ ಅವರನ್ನು ಆರಿಸಲಾಯಿತು. ಉದ್ದೇಶಿತ ವಿಟ್ಲ ತಾಲೂಕು ವ್ಯಾಪ್ತಿಯ ಗ್ರಾಮ ಪಂಚಾಯತಿಗಳಲ್ಲಿ ಸಭೆ ನಡೆಸಿ, ಇಲ್ಲಿನವರನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳುವುದು. ಈ ವ್ಯಾಪ್ತಿಯ ಶಾಸಕರಿಗೆ, ಸಭಾಪತಿಗಳಿಗೆ ಮನವಿ ಮಾಡುವ ತೀರ್ಮಾನ ಮಾಡಲಾಗಿತು. ಮುರುವ ನಡುಮನೆ ಮಹಾಬಲ ಭಟ್, ವಿ. ಕೆ. ಬಶೀರ್, ಕಾನ ಈಶ್ವರ ಭಟ್ , ಅಬ್ದುಲ್ ರಹಿಮಾನ್ ನೆಲ್ಲಿಗುಡ್ಡೆ, ರಾಮಣ್ಣ ಪಾಲಿಗೆ, ರಮಾನಾಥ ವಿಟ್ಲ ಜಯರಾಮ ಬಳ್ಳಾಲ್, ಹಸೈನಾರ್ ಕಡಂಬು ಮತ್ತಿತರರು ಅಭಿಪ್ರಾಯ ವ್ಯಕ್ತಪಡಿಸಿದರು.

ಸುತ್ತಮುತ್ತ

ಆಶ್ಲೇಷ ಬಲಿ ಪೂಜೆ

ಬಂಟ್ವಾಳ: ಸಜೀಪ ಮೂಡ ಗ್ರಾಮದ ಆಗರಿ ಮಾಡ ಆಲಾಡಿ ಖಾನ ಬಳಿ ನೂತನವಾಗಿ ನಿರ್ಮಾಣಗೊಂಡ ವಾಸುಕಿ ನಾಗದೇವರ ಸನ್ನಿಧಿಯಲ್ಲಿ ಶ್ರೀ ಆಶ್ಲೇಷ ಬಲಿ ಪೂಜೆ ನವಕಲಶಾಭಿಷೇಕ ಫಲಪಂಚಾಮೃತ ಅಭಿಷೇಕ ನಾಗತಂಬಿಲ ಪ್ರಸನ್ನ ಪೂಜೆ ಕಲ್ಪೋಕ್ತ ಪೂಜೆಯು ಸಜೀಪ ಮಾಗಣೆ ತಂತ್ರಿ ಎಂ.ಸುಬ್ರಹ್ಮಣ್ಯ ಭಟ್ ಅವರ

ವಳಲಂಬೆ ವೇದಪಾಠ ಸಮಾರೋಪ

ಸುಬ್ರಹ್ಮಣ್ಯ: ನಮ್ಮ ಆಹಾರ, ವಿಹಾರ, ಆಚಾರ ವಿಚಾರಗಳಲ್ಲಿ ಸನಾತನ ಸಂಸ್ಕೃತಿ ಉಳಿಸಲು ಪ್ರಯತ್ನಿಸುವ ಅಗತ್ಯವಿದೆ ಎಂದು ನಿವೃತ್ತ ಮುಖ್ಯ ಶಿಕ್ಷಕ ಹಾಗೂ ಮುಳ್ಳೇರಿಯ ಮಂಡಲ ವಿದ್ಯಾರ್ಥಿ ವಾಹಿನಿ ಪ್ರಧಾನ ಶ್ರೀಕೃಷ್ಣ ಶರ್ಮ ಹೇಳಿದರು. ಅನುಚಾನ ವಿದ್ಯಾ ಪ್ರತಿಷ್ಠಾನ ವಳಲಂಬೆ ಹಾಗೂ ಗುತ್ತಿಗಾರು ಹವ್ಯಕ ವಲಯದ ಆಶ್ರಯದಲ್ಲಿ ವಳಲಂಬೆ ಶಂಖಪಾಲ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಜರುಗಿದ ವಸಂತ ವೇದ ಶಿಬಿರದ ಸಮಾರೋಪ ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಪ್ರತಿಭಾ ಪುರಸ್ಕಾರ

ಚಿತ್ರಕಲೆಯಲ್ಲಿ ವಿಶೇಷ ಸಾಧನೆ ಮಾಡಿ ವಿಶ್ವ ದಾಖಲೆ ಮಾಡಿದ ಅನುಷಾ ಹರ್ಲಡ್ಕ ಅವರನ್ನು ಸಮಾರಂಭದಲ್ಲಿ ಸನ್ಮಾನಿಸಲಾಯಿತು. ನಿವೃತ್ತ ಮುಖ್ಯ ಗುರು ಶಿವರಾಮ ಶಾಸ್ತ್ರಿ ಸಮಾರೋಪ ಭಾಷಣ ಮಾಡಿದರು. ಗುತ್ತಿಗಾರು ಹವ್ಯಕ ವಲಯದ ಅಧ್ಯಕ್ಷ ಮಹಾಲಿಂಗೇಶ್ವರ ಶರ್ಮ ಅಧ್ಯಕ್ಷತೆ ವಹಿಸಿದ್ದರು. ಮಾತೃ ವಿಭಾಗದ ಪ್ರಧಾನೆ ದೇವಕಿ ಪನ್ನೆ, ದೇವಳದ ಪುರೋಹಿತ ಮಹಾಬಲೇಶ್ವರ ಭಟ್, ವೇದ ವಿದ್ವಾಂಸ ಕರುವಜೆ ಕೇಶವ ಭಟ್ ವೇದಿಕೆಯಲ್ಲಿದ್ದರು. ಅನುಚಾನ ಪ್ರತಿಷ್ಠಾನದ ಅಧ್ಯಕ್ಷ ಶ್ರೀಕೃಷ್ಣ ಗುಂಡಿಮಜಲು ಸ್ವಾಗತಿಸಿ, ಗುತ್ತಿಗಾರು ವಲಯ ಕಾರ್ಯದರ್ಶಿ ಪ್ರೇಮ ಕಟ್ಟ ವಂದಿಸಿದರು. ಶಿವರಾಮ ಕರುವಜೆ ಕಾರ್ಯಕ್ರಮ ನಿರ್ವಹಿಸಿದರು.

ಪುತ್ತೂರನ್ನು ಜಿಲ್ಲೆ, ವಿಟ್ಲವನ್ನು ತಾಲೂಕನ್ನಾಗಿ ಮಾಡಿ: ಎಸ್.ಡಿ.ಪಿ.ಐ.

ಪುತ್ತೂರು: ಜನರ ಪ್ರಯೋಜನಕ್ಕಾಗಿ ಪುತ್ತೂರು ಜಿಲ್ಲೆಯಾಗಬೇಕು, ವಿಟ್ಲ ತಾಲೂಕು ರಚನೆ ಆಗಬೇಕು. ಈ ಸಂಬಂಧ ಸರಕಾರಕ್ಕೆ ಮನವಿ ನೀಡಿದ್ದು, ಮನವಿಗೆ ಸ್ಪಂದಿಸದಿದ್ದರೆ ಬೇಡಿಕೆ ಈಡೇರುವವರೆಗೆ ಹೋರಾಟ ಮಾಡಲಿದ್ದೇವೆ ಎಂದು ಎಸ್.ಡಿ.ಪಿ.ಐ. ಗ್ರಾಮಾಂತರ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿದ್ದೀಕ್ ಎ. ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪುತ್ತೂರು ಭೌಗೋಳಿಕ ಪ್ರದೇಶವಾಗಿ ಬಹಳ ದೊಡ್ಡದಾಗಿದೆ. ಪುತ್ತೂರು, ಬೆಳ್ತಂಗಡಿ, ಸುಳ್ಯ, ಕಡಬ, ವಿಟ್ಲ ಸೇರಿ ಪುತ್ತೂರು ಜಿಲ್ಲೆಯಾಗಬೇಕು. ಅದೇ ರೀತಿ ವಿಟ್ಲ ತಾಲೂಕು ರಚನೆಯಾಗಬೇಕೆಂದು ನಮ್ಮ ಆಗ್ರಹ. ಇದು ರಾಜಕೀಯ ಲಾಭಕ್ಕಾಗಿ ಅಲ್ಲ, ಜನರ ಪ್ರಯೋಜನಕ್ಕಾಗಿ ಎಂದರು.

ಸುಳ್ಯ, ಅರಂತೋಡು ಭಾಗದಿಂದ ಜಿಲ್ಲಾಧಿಕಾರಿಗಳ ಕಚೇರಿಗೆ ಹೋಗಬೇಕಾದರೆ ಸುಮಾರು 100 ರಿಂದ 130 ಕಿ.ಮೀ. ಪ್ರಯಾಣಿಸಬೇಕು. ಅಲ್ಲಿ ಹೋದಾಗ ಕೆಲಸ ಆಗದಿದ್ದರೆ ಮತ್ತು ಸಂಬಂಧಿಸಿದ ಅಧಿಕಾರಿಗಳು ಸಿಗದಿದ್ದರೆ ಒಂದು ದಿನ ಪೂರ್ತಿ ವ್ಯರ್ಥ. ಹಾಗಾಗಿ ಜಿಲ್ಲಾಧಿಕಾರಿ ಕಚೇರಿ ಪುತ್ತೂರಿನಲ್ಲಿ ಆಗಬೇಕೆಂದು ನಾವು ಸರಕಾರವನ್ನು ಒತ್ತಾಯಿಸುತ್ತೇವೆ. ಇದರ ಜೊತೆಗೆ ಗ್ರಾಮೀಣ ಪ್ರದೇಶದ ಜನರ ಅಗತ್ಯತೆಯನ್ನು ಮನಗಂಡು ವಿಟ್ಲ ತಾಲೂಕು ಆಗಿ ರಚನೆಯಾಗಬೇಕಾಗಿದೆ ಎಂದರು. ಎಸ್.ಡಿ.ಪಿ.ಐ. ಪದಾಧಿಕಾರಿಗಳು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮಕ್ಕಳ ಬೇಸಿಗೆ ಶಿಬಿರದ ಸಮಾರೋಪ

ನಿಡ್ಪಳ್ಳಿ: ನಿಡ್ಪಳ್ಳಿ ಗ್ರಾಮ ಪಂಚಾಯತ್ ಅರಿವು ಕೇಂದ್ರದಲ್ಲಿ ಒಂದು ವಾರದಿಂದ ನಡೆಯುತ್ತಿದ್ದ ಗ್ರಾಮೀಣ ಮಕ್ಕಳ ಬೇಸಿಗೆ ಶಿಬಿರದ ಕೊನೆ ದಿನವಾದ ಮೇ 22ರಂದು ಮಕ್ಕಳಿಗೆ ಸಮುದಾಯ ಆರೋಗ್ಯ ಅಧಿಕಾರಿ ಲಕ್ಷ್ಮಿ ಛಲವಾದಿ ವಿವಿಧ ಚಟುವಟಿಕೆಗಳನ್ನು ನಡೆಸಿ ಮಾಹಿತಿ ನೀಡಿ ಮಕ್ಕಳಿಗೆ ಪೆನ್ ಕೊಡುಗೆ ನೀಡಿದರು. ನಂತರ ನಡೆದ ಸಮಾರೋಪ ಸಮಾರಂಭದ ವೇದಿಕೆಯಲ್ಲಿ ಪಂಚಾಯತ್ ಆಡಳಿತ ಅಧಿಕಾರಿ ಚೇತನ್, ಪಿಡಿಒ ಜಯಪ್ರಕಾಶ್, ಕಾರ್ಯದರ್ಶಿ ಶಿವರಾಮ ಮೂಲ್ಯ ಉಪಸ್ಥಿತರಿದ್ದರು. ಮಕ್ಕಳಿಗೆ ಪ್ರಶಸ್ತಿ ಪತ್ರಗಳನ್ನು ವಿತರಿಸಲಾಯಿತು. ಗ್ರಂಥಪಾಲಕಿ ಪವಿತ್ರ ಜಿ. ಕಾರ್ಯಕ್ರಮ ನಿರ್ವಹಿಸಿದರು. ಪಂಚಾಯತ್ ಸಿಬ್ಬಂದಿಗಳಾದ ರೇವತಿ, ಸಂಶೀನಾ, ವಿನೀತ್ ಕುಮಾರ್, ಜಯಕುಮಾರಿ, ಚಿತ್ರಾ, ಶಾಲಿನಿ, ತೇಜಸ್ವಿನಿ, ಗ್ರಾಮೀಣ ಪುನರ್ವಸತಿ ಕಾರ್ಯಕರ್ತ ರಾಮ ಸಹಕರಿಸಿದರು.

ನೆಲ್ಯಹುದಿಕೇರಿಯಲ್ಲಿ 7 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾರ್ಯಕ್ಕೆ ಚಾಲನೆ ನೀಡಿ ಮಂಥರ್ ಹೇಳಿಕೆ

ಸ್ವಾವಲಂಬಿ ಜೀವನಕ್ಕೆ ಪಂಚ ಗ್ಯಾರಂಟಿ ಯೋಜನೆಗಳು ಪೂರಕ

ಮಡಿಕೇರಿ: ಚುನಾವಣೆ ಸಂದರ್ಭ ನೀಡಿದ ಭರವಸೆಯನ್ವಯ ನೆಲ್ಯಹುದಿಕೇರಿ ಗ್ರಾಮಕ್ಕೆ ಭೇಟಿ ನೀಡಿದ ಮಡಿಕೇರಿ ಕ್ಷೇತ್ರದ ಶಾಸಕ ಡಾ. ಮಂಥರ್ ಗೌಡ ಅವರು ಪಂಚಾಯತ್ ವ್ಯಾಪ್ತಿಯ 7ಕೋಟಿ ರೂ.ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿದರು.

ಈ ಸಂದರ್ಭ ಮಾತನಾಡಿದ ಶಾಸಕರು, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಸರ್ಕಾರದ ಯೋಜನೆಗಳನ್ನು ಪ್ರತಿ ಮನೆಗಳಿಗೆ ತಲುಪುವಂತೆ ಮಾಡಿ ಪಂಚ ಗ್ಯಾರಂಟಿ ಯೋಜನೆಗಳನ್ನು ನೀಡಿ ಅಭಿವೃದ್ಧಿಯೊಂದಿಗೆ ಸ್ವಾವಲಂಬಿ ಜೀವನ ನಡೆಸಲು ಎಲ್ಲಾ ರೀತಿಯ ಯೋಜನೆಗಳನ್ನು ನೀಡುತ್ತಿದೆ. ಸರ್ಕಾರದ ಯೋಜನೆಗಳನ್ನು ಸದ್ಬಳಕೆ ಮಾಡಿಕೊಳ್ಳುವುದರ ಮೂಲಕ ಅಭಿವೃದ್ಧಿಯೊಂದಿಗೆ ಸಮಾಜದ ಮುಖ್ಯವಾಹಿನಿಗೆ ಬಂದಲ್ಲಿ ನಮ್ಮ ರಾಜ್ಯ ಪ್ರಗತಿಯತ್ತ ಸಾಗಲಿದೆ. ಚುನಾವಣೆ ಸಂದರ್ಭದಲ್ಲಿ ನೀಡಿದ ಭರವಸೆಗಳನ್ನು ಈಡೇರಿಸುವುದು ನಮ್ಮ ಕರ್ತವ್ಯವಾಗಿದ್ದು, ಹಲವು ವರ್ಷಗಳಿಂದಲೂ



ಅಭಿವೃದ್ಧಿ ಕಾಣದೆ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದ ಜನರಿಗೆ ಇದೀಗ ಅಭಿವೃದ್ಧಿ ಭಾಗ್ಯ ದೊರೆತಂತಾಗಿದೆ ಎಂದರು.

ಸರ್ಕಾರ ಜನರ ಪರವಾಗಿ ಕೆಲಸ ಮಾಡುತ್ತಿದ್ದು ನಿಮ್ಮೆಲ್ಲರ ಸಹಕಾರ ಅಗತ್ಯವಾಗಿದೆ ಎಂದು ಹೇಳಿದ ಅವರು, ಮತ್ತಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಲು ರಸ್ತೆ, ಚರಂಡಿ ನಿರ್ಮಾಣಗಳಿಗೆ ವಾರ್ಡ್ ವ್ಯಾಪ್ತಿಯಲ್ಲಿ ಜಾಗ ಬಿಟ್ಟು ಕೊಡಬೇಕೆಂದು ನಿವಾಸಿಗಳಲ್ಲಿ ಮನವಿ ಮಾಡಿದರು.

ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಸಾಬು ವರ್ಗೀಸ್ ಮಾತನಾಡಿ, ಹಲವು ವರ್ಷಗಳಿಂದಲೂ ಪ್ರಮುಖ ರಸ್ತೆಗಳು ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಗಳು ನಡೆಯದೆ ಈ ಭಾಗದ ಜನರು ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದರು. ಶಾಸಕ ಮಂಥರ್ ಗೌಡರು ಚುನಾವಣೆ ಸಂದರ್ಭದಲ್ಲಿ ಗ್ರಾಮಕ್ಕೆ ಭೇಟಿ ನೀಡಿ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಭರವಸೆ ನೀಡಿದ್ದರು. ಇದೀಗ ನುಡಿದಂತೆ ನಡೆದುಕೊಂಡು ಇದುವರೆಗೂ ಅಂದಾಜು 7 ಕೋಟಿ ರೂ. ವೆಚ್ಚದಲ್ಲಿ ವಿದ್ಯುತ್ ಸಮಸ್ಯೆ, ಕುಡಿಯುವ ನೀರು, ರಸ್ತೆ ಅಭಿವೃದ್ಧಿ, ಚರಂಡಿ ನಿರ್ಮಾಣ, ಕಿರು ಸೇತುವೆ, ತಡೆಗೋಡೆ ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಗಳು ನಡೆದಿದ್ದು ಮತ್ತಷ್ಟು ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿದ್ದಾರೆ. ಗ್ರಾಮದಲ್ಲಿ ಮತ್ತಷ್ಟು ಸಮಸ್ಯೆಗಳಿದ್ದು ಬಗೆಹರಿಸಿ ಕೊಡಬೇಕೆಂದು ಮನವಿ ಮಾಡಿದರು.

> **ಆರತಿ ಬೆಳಗಿ ಸ್ವಾಗತಿಸಿದ ಮಹಿಳೆಯರು**
>
> 'ನುಡಿದಂತೆ ನಡೆದುಕೊಂಡ' ಮಂಥರ್ ಗೌಡ ಅವರ ಜನಪರ ಕಾಳಜಿಗೆ ನೆಲ್ಯಹುದಿಕೇರಿ ಸುತ್ತಮುತ್ತಲ ನಿವಾಸಿಗಳು ಶಾಸಕರನ್ನು ಅದ್ದೂರಿಯಾಗಿ ಬರಮಾಡಿಕೊಂಡರು. ನೆಲ್ಯಹುದಿಕೇರಿಯ ವಿವಿಧ ವಾರ್ಡುಗಳಿಗೆ ಆಗಮಿಸಿದ ಶಾಸಕರಿಗೆ ಮಹಿಳೆಯರು ಆರತಿ ಎತ್ತಿ ಸ್ವಾಗತಿಸಿದರೆ, ಪುರುಷರು ಸನ್ಮಾನಿಸಿ ಗೌರವಿಸಿ ಸಿಹಿ ಹಂಚಿ ಬರಮಾಡಿಕೊಂಡರು.

ಕುಶಾಲನಗರ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ವಿ.ಪಿ. ಶಶಿಧರ್, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಎಂ.ಕೆ. ಹಕಿಂ, ಧನಲಕ್ಷ್ಮೀ ಅಲ್ಪಸಂಖ್ಯಾತ ಘಟಕದ ಪ್ರಧಾನ ಕಾರ್ಯದರ್ಶಿ ಕೆ.ಎಂ. ಸೈಯ್ಯದ್ ಬಾವಾ, ಅಭಿವೃದ್ಧಿ ಅಧಿಕಾರಿ ನಂಜುಂಡಸ್ವಾಮಿ, ಚೆಸ್ಕಾಂ ಇಲಾಖೆಯ ಮಂಜುನಾಥ್, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯೆ ಸುನಿತಾ ಮಂಜುನಾಥ್, ಕಾಂಗ್ರೆಸ್ ಜಿಲ್ಲಾ ಸಮಿತಿ ಸದಸ್ಯ ಕೆ ಎಂ.ಬಶೀರ್, ಜೋಸೆಫ್ ಶ್ಯಾಮ್, ಪ್ರಮುಖರಾದ ಎಸ್. ದೂಲ್ಪಾಡಿ, ಮುಸ್ತಫಾ, ಹನೀಫ್, ವಸಂತ್ ಕುಮಾರ್ ಹೊಸಮನೆ, ಪ್ರಮೀಳಾ, ಕೆ.ಎಂ. ಮುಸ್ತಫಾ, ಅಫ್ಸಲ್, ಶಿಹಾಬ್ ಸೇರಿದಂತೆ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು, ಗ್ರಾಮಸ್ಥರು ಪಂಚಾಯತ್ ಮಾಜಿ ಸದಸ್ಯರುಗಳು ಹಾಜರಿದ್ದರು.

ಮೇ 25ರಂದು ಆರ್ಯಾಪು ಪ್ರಾಥಮಿಕ ಸಹಕಾರ ಸಂಘದಲ್ಲಿ ಉದ್ಘಾಟನೆ

ಸದಸ್ಯರಿಗೆ ಸಹಕಾರ ಸಂಜೀವಿನಿ ವಿಮೆ ಯೋಜನೆ

ಪುತ್ತೂರು: ಸಹಕಾರ ಸಂಘ, ಬ್ಯಾಂಕ್‌ಗಳಲ್ಲಿ ಸದಸ್ಯರಿಗಾಗಿ ಆರೋಗ್ಯ ವಿಮೆಯ ಸೌಲಭ್ಯಗಳು ಖಾಸಗಿ ವಿಮಾ ಸಂಸ್ಥೆಗಳ ಒಡಂಬಡಿಕೆಯೊಂದಿಗೆ ನಡೆಯುತ್ತವೆ. ಆದರೆ ಪುತ್ತೂರಿನ ಆರ್ಯಾಪು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವು ಸಹಕಾರ ಕ್ಷೇತ್ರದಲ್ಲಿ ಪ್ರಥಮ ಬಾರಿಗೆ ಎಂಬಂತೆ ಯಾವುದೇ ವಿಮಾ ಕಂಪನಿಗಳ ಒಡಂಬಡಿಕೆಯಿಲ್ಲದೆ ತನ್ನ ಸ್ವಂತ ನೆಲೆಯಲ್ಲಿ ಸದಸ್ಯರಿಗೆ ಹೆಚ್ಚು ಪ್ರಯೋಜನ ಸಿಗುವ ನಿಟ್ಟಿನಲ್ಲಿ 'ಸಹಕಾರ ಸಂಜೀವಿನಿ ವಿಮೆ' ಜಾರಿಗೊಳಿಸಿದೆ. ಮೇ 25ಕ್ಕೆ ಯೋಜನೆಯ ಉದ್ಘಾಟನಾ ಕಾರ್ಯಕ್ರಮ ನಡೆಯಲಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಆರ್ಯಾಪು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಚ್. ಮಹಮ್ಮದ್ ಆಲಿ ಮಾಹಿತಿ ನೀಡಿ, ಹೆಚ್ಚಿನ ಸಹಕಾರಿ ಸಂಘಗಳಲ್ಲಿ ಬೇರೆ ಖಾಸಗಿ ವಿಮಾದಾರರ ಒಡಂಬಡಿಕೆಯಿಂದ ಸದಸ್ಯರಿಗೆ ವಿಮಾ ಸೌಲಭ್ಯ ನೀಡುತ್ತಾರೆ. ಆದರೆ ಈ ವಿಮೆಯಲ್ಲಿ ಸಹಕಾರಿ ಸಂಘ ಮತ್ತು ಫಲಾನುಭವಿಗಳು ಪ್ರೀಮಿಯಂ ಮೊತ್ತದ ಅರ್ಧ ಭಾಗ ಪಾವತಿಸಬೇಕಾಗುತ್ತದೆ. ಒಂದು ವೇಳೆ ವಿಮಾ ಮೊತ್ತ ಕ್ಲೈಮ್ ಆಗದಿದ್ದರೆ ಅದು ವಿಮಾ ಸಂಸ್ಥೆಗೆ ಸೇರುತ್ತದೆ. ಇದರಿಂದ ಸಹಕಾರಿ ಸಂಘಕ್ಕೆ ಯಾವುದೇ ಲಾಭವಿಲ್ಲ, ಹಾಗಾಗಿ ನಾವು ನಮ್ಮದೇ ವಿಮಾ ಯೋಜನೆ ಆರಂಭ



> ಈಗಾಗಲೇ ನಮ್ಮ 3 ಗ್ರಾಮಕ್ಕೆ ಒಳಪಟ್ಟಿದ್ದು ಸಂಘದಲ್ಲಿ 4,150 ಸದಸ್ಯರಿದ್ದಾರೆ. ಅವರೆಲ್ಲರನ್ನು ಈ ಯೋಜನೆಗೆ ಸೇರ್ಪಡೆ ಮಾಡುವ ಪ್ರಯತ್ನ ಮಾಡಲಾಗುವುದು. ಸಂಘದ ಎ ವರ್ಗದ ಸದಸ್ಯರು ರೂ. 500ರಂತೆ ಪ್ರತಿ ವರ್ಷ ತೊಡಗಿಸಬೇಕು. ಪ್ರತಿ ವರ್ಷ ಪ್ರೀಮಿಯಂ ಮೊತ್ತವನ್ನು ತೊಡಗಿಸಿದ ಸದಸ್ಯನಿಗೆ ಮಾತ್ರ ಈ ಸೌಲಭ್ಯ ನೀಡಲಾಗುವುದು.
>
> ● ಎಚ್. ಮಹಮ್ಮದ್ ಆಲಿ

ಮಾಡುವ ಮೂಲಕ ಸದಸ್ಯರಿಗೆ ಸೌಲಭ್ಯ ನೀಡುತ್ತಿದ್ದೇವೆ. ಅದಕ್ಕಾಗಿ ಸದಸ್ಯರ ಕಲ್ಯಾಣ ನಿಧಿ ಸ್ಥಾಪನೆ ಮಾಡಿದ್ದೇವೆ ಎಂದವರು ತಿಳಿಸಿದರು.

ಪ್ರಮುಖರು ಭಾಗಿ

ಸಹಕಾರ ಸಂಜೀವಿನಿ ವಿಮಾ ಯೋಜನೆಯನ್ನು ಸಂಘದಲ್ಲಿರುವ ಸಂಘದ ಕೇಂದ್ರ ಕಚೇರಿಯಲ್ಲಿ ಮೇ 25ರಂದು ಬೆಳಗ್ಗೆ 10 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ವಿಧಾನಸಭೆ ಸಭಾಧ್ಯಕ್ಷ ಯು.ಟಿ. ಖಾದರ್ ಅವರು ಉದ್ಘಾಟಿಸಲಿದ್ದಾರೆ. ಶಾಸಕ ಅಶೋಕ್ ಕುಮಾರ್ ರೈ ಅಧ್ಯಕ್ಷತೆ ವಹಿಸಲಿದ್ದಾರೆ. ಮಾಜಿ ಸಚಿವ ವಿನಯ ಕುಮಾರ್ ಸೊರಕೆ, ವಿಧಾನಪರಿಷತ್ ಸದಸ್ಯರಾದ ಮಂಜುನಾಥ್ ಭಂಡಾರಿ, ಕಿಶೋರ್ ಕುಮಾರ್ ಪುತ್ತೂರು, ದ.ಕ. ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷ ಶಶಿಕುಮಾರ್ ರೈ ಬಾಲ್ಯೊಟ್ಟು, ಸಹಕಾರಿ ಸಂಘಗಳ ಸಹಾಯಕ ನಿಬಂಧಕ ಎಸ್.ಎಂ. ರಘು ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಮಹಮ್ಮದ್ ಆಲಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷ ಸುರೇಂದ್ರ ರೈ ಬಿ., ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಜಿತ್ ಕುಮಾರ್ ರೈ, ನಿರ್ದೇಶಕರಾದ ಗಣೇಶ್ ರೈ ಕುರಿಯ, ಸಂಶುದ್ದೀನ್ ನೀರ್ಕಜೆ, ತರಾಸ ಸ್ವಿಕೇರ ಉಪಸ್ಥಿತರಿದ್ದರು.

ನೆಲ್ಲಿಕಟ್ಟೆ ಅಂಬಿಕಾ ವಿದ್ಯಾಲಯ: ಪ್ರಥಮ ಪಿಯು ತರಗತಿಗಳ ಉದ್ಘಾಟನೆ

ಶಿಸ್ತು, ಸಮಯ ಪಾಲನೆ ಸಾಧನೆ ಗುಟ್ಟು: ಡಾ. ಕಿಶನ್

ಪುತ್ತೂರು: ಪದವಿ ಪೂರ್ವ ಹಂತ ಜೀವನ ರೂಪಿಸುವ ಪ್ರಮುಖ ಘಟ್ಟ ವಾಗಿದ್ದು ನಿರಂತರ ಓದು ಪರಿಶ್ರಮ ಅಗತ್ಯ. ಈ ಸಂದರ್ಭದಲ್ಲಿ ಕೆಲವು ವೈಯಕ್ತಿಕ ಜೀವನದ ಆಕಾಂಕ್ಷೆಗಳನ್ನು ತ್ಯಾಗ ಮಾಡಬೇಕಾಗಿರುವುದು ಅನಿವಾರ್ಯ ಎಂದು ಮಂಗಳೂರಿನ ಖ್ಯಾತ ಶಸ್ತ್ರಚಿಕಿತ್ಸಕ ಡಾ. ಕಿಶನ್ ಕುಮಾರ್ ಬಾಳಿಲ ಹೇಳಿದರು.

ನಗರದ ನಟ್ಟೋಜ ಫೌಂಡೇಶನ್ ಟ್ರಸ್ಟ್ ಮುನ್ನಡೆಸುತ್ತಿರುವ ಬಪ್ಪಳಿಗೆಯಲ್ಲಿನ ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿರುವ ಶ್ರೀಶಂಕರ ಸಭಾಭವನದಲ್ಲಿ ನೆಲ್ಲಿಕಟ್ಟೆ ಅಂಬಿಕಾ ಪದವಿ ಪೂರ್ವ ವಿಭಾಗದ ಪ್ರಥಮ ವರ್ಷದ ಪ.ಪೂ. ತರಗತಿಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮುಖ್ಯ ಭಾಷಣಕಾರರಾಗಿ ಮಾತನಾಡಿದರು.

ಕಾರ್ಯಕ್ರಮ ಉದ್ಘಾಟಿಸಿದ ಪುತ್ತೂರಿನ ಖ್ಯಾತ ವೈದ್ಯ ಡಾ. ಸುರೇಶ್ ಪುತ್ತೂರಾಯ, ಪ.ಪೂ. ಹಂತದಲ್ಲಿ ವಿದ್ಯಾರ್ಥಿಗಳು ಶಿಕ್ಷಣ ಪಡೆಯುವ ಕುರಿತು ಹೆಚ್ಚಿನ ಆಸಕ್ತಿ ವಹಿಸಿದಾಗ ತಮ್ಮ ಜೀವನದ ಗುರಿಯನ್ನು ಸಾಧಿಸಲು ಸಾಧ್ಯವಾಗುತ್ತದೆ. ಅಂಬಿಕಾ ಸಂಸ್ಥೆ ಶಿಕ್ಷಣದ ಜೊತೆ ದೇಶಭಕ್ತಿಯನ್ನು ಹಾಗೂ ಧರ್ಮ ಜಾಗೃತಿಯನ್ನು ಮೂಡಿಸುವ ಕೇಂದ್ರವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಸುಬ್ರಹ್ಮಣ್ಯ ನಟ್ಟೋಜ, ಅಂಬಿಕಾದಲ್ಲಿ ಯೋಗ ಶಿಕ್ಷಣ, ಧಾರ್ಮಿಕ ಪ್ರಜ್ಞೆಯ ಅರಿವು, ದೇಶ ಭಕ್ತಿಯನ್ನು ವಿದ್ಯಾರ್ಥಿಗಳಿಗೆ ತಿಳಿಸುವ ಮೂಲಕ ಬೆಳೆಸಲಾಗುತ್ತದೆ. ಶಿಸ್ತು, ಸಮಯ ಪಾಲನೆ, ಉತ್ತಮ ಶಿಕ್ಷಣ ಯಶಸ್ಸಿನ ಅಂಬಿಕಾದ ಭಾಗವಾಗಿದ್ದು, ಅತ್ಯುತ್ತಮ ಅಂಕ ಗಳಿಸುವ ವಿದ್ಯಾರ್ಥಿಗಳನ್ನು ಪ್ರತಿ ವರ್ಷ ರೂಪಿಸಲಾಗುತ್ತಿದೆ ಎಂದರು.

ಸಾಧಕ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಹಾಗೂ ಖಜಾಂಚಿ ರಾಜಶ್ರೀ ಎಸ್. ನಟ್ಟೋಜ, ಆಡಳಿತ ಮಂಡಳಿ ಸದಸ್ಯ ಕೆ. ಸುರೇಶ್ ಶೆಟ್ಟಿ, ಡಾ.ಎಚ್. ಮಾಧವ ಭಟ್ ಇದ್ದರು. ವಿದ್ಯಾರ್ಥಿನಿ ಅವನಿ ನಾಯಕ್ ಪ್ರಾರ್ಥಿಸಿದರು. ನೆಲ್ಲಿಕಟ್ಟೆ ಅಂಬಿಕಾ ಪ.ಪೂ. ವಿದ್ಯಾಲಯದ ಪ್ರಾಂಶುಪಾಲ ಸತ್ಯಜಿತ್ ಉಪಾಧ್ಯಾಯ ಸ್ವಾಗತಿಸಿ, ಕನ್ನಡ ಉಪನ್ಯಾಸಕ ಸತೀಶ್ ಇರ್ದೆ ವಂದಿಸಿದರು.



> **ಐಎಎಸ್‌ಗೆ ತಯಾರಿ ನಡೆಸಿದ್ದೆ**
>
> ನಾನು ಐಎಎಸ್ ಪರೀಕ್ಷೆಗೆ ಪೂರ್ಣ ಪ್ರಮಾಣದ ತಯಾರಿ ನಡೆಸಿದ್ದೆ. ಆದರೆ, ತಂದೆ-ತಾಯಿ ತಾನೊಬ್ಬ ಉತ್ತಮ ಸರ್ಜನ್ ಆಗಬೇಕೆಂದು ಕನಸು ಕಂಡಿದ್ದರು. ಅವರ ಮಾತು ಮೀರುವುದು ನನಗೆ ಇಷ್ಟವಿರಲಿಲ್ಲ, ಆದ್ದರಿಂದ ಕೇವಲ 3 ತಿಂಗಳ ಸೀಮಿತ ಅವಧಿಯಲ್ಲಿ ವೈದ್ಯಕೀಯ ಪರೀಕ್ಷೆಗೆ ತಯಾರಿ ನಡೆಸಿ ಶಸ್ತ್ರಚಿಕಿತ್ಸಕ ತರಬೇತಿಗೆ ಸೇರಿದೆ. ವಿದ್ಯೆಯ ಜೊತೆಗೆ ತಂದೆ-ತಾಯಿಗಳ ಮಾತಿಗೆ ಗೌರವ ನೀಡಿದಾಗ ಮಾತ್ರ ಸಾಧನೆಗೆ ಅರ್ಥ ಸಿಗುತ್ತದೆ.
>
> ● ಡಾ. ಕಿಶನ್ ಕುಮಾರ್ ಬಾಳಿಲ

ಉಜಿರೆ ಮಂಜುಶ್ರೀ ಪ್ರಬಂಧಕ ಶೇಖರ್ ಟಿ.ಗೆ ಬೀಳ್ಕೊಡುಗೆ, ಸನ್ಮಾನ



ಉಜಿರೆ: ಒಂದೇ ಸಂಸ್ಥೆಯಲ್ಲಿ 48 ವರ್ಷಗಳ ಸುದೀರ್ಘ ಸೇವೆ ನೀಡಿದ ಪ್ರಬಂಧಕ ಶೇಖರ್ ಟಿ. ಅವರ ಸಾಧನೆ ವಿಶೇಷ ವಾದುದು. ಒಳ್ಳೆಯ ನಾಯಕತ್ವ ಗುಣದಿಂದ ಗ್ರಾಹಕರ ವಿಶ್ವಾಸಾರ್ಹತೆ ಗಳಿಸಿ ಸಂತೃಪ್ತಿ ಒದಗಿಸಿದವರು ಅವರು ಉಜಿರೆ ಎಸ್‌ಡಿಎಂ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ. ಸತೀಶ್ಚಂದ್ರ ಎಸ್.ನುಡಿದರು.

ಮೇ 16ರಂದು ಉಜಿರೆಯ ಮಂಜುಶ್ರೀ ಮುದ್ರಣಾಲಯದಲ್ಲಿ 48 ವರ್ಷಗಳ ಕಾಲ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ ಪ್ರಬಂಧಕರಾಗಿ ನಿವೃತ್ತರಾದ ಶೇಖರ್ ಟಿ ಅವರಿಗೆ ಸನ್ಮಾನಿಸಿ ಬೀಳ್ಕೊಡುಗೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಎಸ್‌ಡಿಎಂ ಕಾಲೇಜು ಪ್ರಾಚಾರ್ಯ ಪ್ರೊ. ವಿಶ್ವನಾಥ್ ಪಿ. ಮಾತನಾಡಿ, ಶೇಖರ್ ಟಿ ಅವರು ತಾಳ್ಮೆ, ಸಂಯಮ ದಿಂದ ಯಾವುದೇ ಮುದ್ರಣ ಕಾರ್ಯವನ್ನು ಕ್ಲಪ್ತ ಸಮಯದಲ್ಲಿ ಮುದ್ರಿಸಿ ಕೊಟ್ಟು ಎಲ್ಲರಿಗೂ ಆತ್ಮೀಯರಾಗಿದ್ದರು. ಅವರ ನಿವೃತ್ತ ಜೀವನ ಸುಖ, ಶಾಂತಿ, ನೆಮ್ಮದಿ ಆರೋಗ್ಯ ಪೂರ್ಣವಾಗಿರಲಿ ಎಂದು ಶುಭ ಹಾರೈಸಿದರು.

ಶೇಖರ್ ಟಿ.ಮತ್ತು ಅಂಬಿಕಾ ದಂಪತಿಗಳನ್ನು ಗೌರವಿಸಲಾಯಿತು. ಸನ್ಮಾನ ಸ್ವೀಕರಿಸಿ ಶೇಖರ್ ಟಿ. ಮಾತನಾಡಿದರು. ವಸಂತ ಶೆಟ್ಟಿ ಶ್ರದ್ಧಾ ಮತ್ತು ಸಿಬ್ಬಂದಿ ಮಣೆಲಾ ಅನಿಸಿಕೆ ವ್ಯಕ್ತಪಡಿಸಿದರು. ಮಂಜುವಾಣಿ ಪತ್ರಿಕಾ ಸಂಪಾದಕ ಡಾ. ಭಾಸ್ಕರ ಹೆಗಡೆ ಉಪಸ್ಥಿತರಿದ್ದರು.

ಮಂಜುಶ್ರೀ ಮುದ್ರಣಾಲಯದ ಪ್ರಸ್ತುತ ಮ್ಯಾನೇಜರ್ ವೇಣುಗೋಪಾಲ್ ಸ್ವಾಗತಿಸಿ, ರವಿ ಪರಕ್ಕಜೆ ನಿರೂಪಿಸಿದರು. ಅನಿಲ್ ವಂದಿಸಿ, ಭುಜಬಲಿ ಧರ್ಮಸ್ಥಳ,ಪ್ರಕಾಶ್ ಕಾಮತ್, ಅಜಿತ್ ಹೆಗ್ಡೆ ಮತ್ತು ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಸಿದ್ಧವನ ರುಡ್‌ಸೆಟ್‌ನಲ್ಲಿ ಇಲೆಕ್ಟ್ರಿಕಲ್ ಮೋಟಾರ್ ರಿವೈಂಡಿಂಗ್ ತರಬೇತಿ



ಉಜಿರೆ: ವ್ಯವಹಾರ ಹಾಗೂ ಉದ್ಯಮ ಕ್ಷೇತ್ರದಲ್ಲಿ ಅವಕಾಶಗಳು ಎಲ್ಲರಿಗೂ ಸಮಾನವಾಗಿ ಲಭ್ಯವಿರುತ್ತವೆ. ಆದರೆ ಆ ಅವಕಾಶಗಳನ್ನು ಗುರುತಿಸಿ, ಬಳಸಿಕೊಳ್ಳುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವುದು ಅತ್ಯಂತ ಮುಖ್ಯ ಎಂದು ಶ್ರೀ ಕ್ಷೇತ್ರ ಧರ್ಮಸ್ಥಳ ಧರ್ಮೋತ್ಥಾನ ಟ್ರಸ್ಟ್‌ನ ಕಾರ್ಯದರ್ಶಿ ವೀರು ಶೆಟ್ಟಿ ಹೇಳಿದರು.

ಅವರು ರುಡ್‌ಸೆಟ್ ಸಂಸ್ಥೆ, ಸಿದ್ಧವನ, ಉಜಿರೆ ವತಿಯಿಂದ 30 ದಿನಗಳ ಕಾಲ ಆಯೋಜಿಸಲಾದ ಇಲೆಕ್ಟ್ರಿಕಲ್ ಮೋಟಾರ್ ರಿವೈಂಡಿಂಗ್ ತರಬೇತಿ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ, ಶಿಬಿರಾರ್ಥಿಗಳಿಗೆ ಪ್ರಮಾಣಪತ್ರ ವಿತರಿಸಿ ಮಾತನಾಡಿದರು.

ರುಡ್‌ಸೆಟ್ ಸಂಸ್ಥೆಗಳ ಕೇಂದ್ರ ಕಚೇರಿ ಉಜಿರೆಯ ಕಾರ್ಯನಿರ್ವಾಹಕ ನಿರ್ದೇಶಕ ಬಿ.ಪಿ. ವಿಜಯ ಕುಮಾರ್ ಅಧ್ಯಕ್ಷತೆ ವಹಿಸಿ, ರುಡ್‌ಸೆಟ್‌ನ ತರಬೇತಿಗಳು ಕೇವಲ ಕೌಶಲ್ಯಾಭಿವೃದ್ಧಿಗೆ ಮಾತ್ರ ಸೀಮಿತವಾಗಿಲ್ಲ, ವ್ಯಕ್ತಿತ್ವ ವಿಕಸನ, ಆತ್ಮವಿಶ್ವಾಸ ಹಾಗೂ ಉದ್ಯಮಶೀಲ ಮನೋಭಾವ ಬೆಳೆಸುವ ದಿಕ್ಕಿನಲ್ಲಿ ಅವು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿವೆ ಎಂದರು.

ಸಂಸ್ಥೆಯನಿರ್ದೇಶಕಅಜೇಯಅತಿಥಿಗಳನ್ನು ಸ್ವಾಗತಿಸಿದರು. ಹಿರಿಯ ಉಪನ್ಯಾಸಕ ಅಬ್ರಹಾಂ ಜೇಮ್ಸ್ ನಿರೂಪಿಸಿದರು. ಹಿರಿಯ ಉಪನ್ಯಾಸಕ ಕೆ. ಕರುಣಾಕರ ಜೈನ್ ವಂದಿಸಿದರು. ಶ್ರವಣಿ ಮತ್ತು ಜಲಜಾಕ್ಷಿ ಅವರ ಪ್ರಾರ್ಥಿಸಿದರು. ಈ ಸಂದರ್ಭದಲ್ಲಿ ಶಿಬಿರಾರ್ಥಿಗಳಾದ ಉದಯ ಹಾಗೂ ನಿತೀಶ್ ತಮ್ಮ ತರಬೇತಿ ಅನುಭವಗಳನ್ನು ಹಂಚಿಕೊಂಡು, ರುಡ್‌ಸೆಟ್ ಸಂಸ್ಥೆಯ ತರಬೇತಿಯು ತಮ್ಮ ಜೀವನದಲ್ಲಿ ಹೊಸ ಆತ್ಮವಿಶ್ವಾಸ ಮೂಡಿಸಿದ್ದು, ಉದ್ಯೋಗ ಹಾಗೂ ಸ್ವಉದ್ಯೋಗದ ದಿಕ್ಕಿನಲ್ಲಿ ಮುನ್ನಡೆಯಲು ಪ್ರೇರಣೆ ನೀಡಿದೆ ಎಂದು ಅಭಿಪ್ರಾಯಪಟ್ಟರು.

ಬಂಟ್ವಾಳ ತಾಲೂಕಿನ ಹೋಬಳಿ ಮಟ್ಟದ ದಾಖಲಾತಿ ಆಂದೋಲನ



ಬಂಟ್ವಾಳ: ಇಲ್ಲಿನ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ವತಿಯಿಂದ ಬಂಟ್ವಾಳ ತಾಲೂಕಿನ ಹೋಬಳಿ ಮಟ್ಟದ ದಾಖಲಾತಿ ಆಂದೋಲನ ಕಾರ್ಯಕ್ರಮವು ತಾಲೂಕಿನ 5 ವಲಯದಲ್ಲಿ ಏಕಕಾಲಕ್ಕೆ ಚಾಲನೆ ನೀಡಲಾಯಿತು.

ಆಯಾಯ ಹೋಬಳಿ ಮಟ್ಟದಲ್ಲಿ ಶಾಲಾ ಎಸ್‌ಡಿಎಂಸಿ ಅಧ್ಯಕ್ಷರು ಆಂದೋಲನಕ್ಕೆ ಚಾಲನೆ ನೀಡಿದರು. . ವಾಮದಪದವು ವಲಯ ಮಟ್ಟದಲ್ಲಿ ಚೆನ್ನೈತ್ತೋಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮೊಂಟೆಪದವು ಕೆಪಿಎಸ್ ಪ್ರಾಥಮಿಕ ಶಾಲೆ,ಬಂಟ್ವಾಳ ನಗರ ವಲಯದ ತುಂಬೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಲ್ಲಡ್ಕ ವಲಯದ ದಾಖಲಾತಿಆಂದೋಲನ ಮಾಣಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ವಿಟ್ಲವಲಯದ ದಾಖಲಾತಿ ಆಂದೋಲನ ವಿಟ್ಲ ಆರ್‌ಎಂಎಸ್‌ಎ ಪ್ರಾಥಮಿಕ ಶಾಲೆಯಲ್ಲಿ ನಡೆಯಿತು.



ಮಂಗಳೂರು ನಗರದ ಬಿಜೈಯ ಮೆಸ್ಕಾಂ ಕಾರ್ಪೊರೇಟ್ ಕಚೇರಿಯಲ್ಲಿ ಭಯೋತ್ಪಾದನೆ ವಿರೋಧಿ ದಿನಾಚರಣೆ ನಡೆಯಿತು. ಮೆಸ್ಕಾಂ ಮುಖ್ಯ ಆರ್ಥಿಕ ಅಧಿಕಾರಿ ಮುರಳೀಧರ ನಾಯಕ್, ಸಹಿತ ಹಿರಿಯ ಅಧಿಕಾರಿಗಳು, ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು, ಸಾರ್ವಜನಿಕ ಸಂಪರ್ಕಾಧಿಕಾರಿ ವಸಂತ ಶೆಟ್ಟಿ ಪ್ರಮಾಣ ವಚನ ಕಾರ್ಯಕ್ರಮ ನಿರ್ವಹಿಸಿದರು.

ಶಂಕುಸ್ಥಾಪನೆ ಕಾರ್ಯಕ್ರಮದ ರೂಪರೇಷೆಗಳ ಬಗ್ಗೆ ನಿಯೋಗದಿಂದ ಚರ್ಚೆ

ಬೆಳ್ತಂಗಡಿ ಕೋರ್ಟ್ ಸಂಕೀರ್ಣಕ್ಕೆ ಅನುಮೋದನೆ

ಬೆಳ್ತಂಗಡಿ: ಬಹು ನಿರೀಕ್ಷಿತ ಬೆಳ್ತಂಗಡಿ ನೂತನ ನ್ಯಾಯಾಲಯ ಸಂಕೀರ್ಣದ ಕಾಮಗಾರಿಯ ಆರ್ಥಿಕ ಬಿಡ್‌ಗೆ ಸರಕಾರ ಈಗಾಗಲೇ ಅನುಮೋದನೆ ನೀಡಿದ್ದು, ಆ ನಿಟ್ಟಿನಲ್ಲಿ ವಕೀಲರ ಸಂಘದ ನಿಯೋಗ ಬೆಂಗಳೂರಿನ ನ್ಯಾಯ ಗ್ರಾಮದಲ್ಲಿರುವ ವಸತಿ ಗೃಹದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಆಡಳಿತಾತ್ಮಕ ನ್ಯಾಯಮೂರ್ತಿ ಎಚ್.ಟಿ. ನರೇಂದ್ರಪ್ರಸಾದ್ ಅವರನ್ನು ಬೇಟಿ ಮಾಡಿ ನೂತನ ನ್ಯಾಯಾಲಯ ಸಂಕೀರ್ಣ ಶಂಕುಸ್ಥಾಪನೆ ಕಾರ್ಯಕ್ರಮದ ರೂಪರೇಷೆಗಳ ಬಗ್ಗೆ ಚರ್ಚೆ ನಡೆಸಿದರು.

ಇದೇ ಸಂದರ್ಭದಲ್ಲಿ ಹೈಕೋರ್ಟ್ ನ್ಯಾಯಮೂರ್ತಿ ಮಹಮ್ಮದ್ ನವಾಜ್ ರವರನ್ನು ಭೇಟಿ ಮಾಡಿ ಶಂಕುಸ್ಥಾಪನೆ ಕಾರ್ಯಕ್ರಮಕ್ಕೆ ಅತಿಥಿಯಾಗಿ ಆಗಮಿಸುವಂತೆ ಆಹ್ವಾನ ನೀಡಿದರು. ನಿಯೋಗದಲ್ಲಿ ವಕೀಲರ ಸಂಘದ ಅಧ್ಯಕ್ಷ ಅಲೋಶಿಯಸ್ ಎಸ್ ಲೋಬೋ, ಉಪಾಧ್ಯಕ್ಷ ಶ್ರೀನಿವಾಸ ಗೌಡ, ಹಿರಿಯ ಸಮಿತಿ ಅಧ್ಯಕ್ಷ ಶಿವ ಕುಮಾರ್ ಎಸ್.ಎಂ., ಅಪರ ಸರ್ಕಾರಿ ವಕೀಲರಾದ ಮನೋಹರ ಕುಮಾರ್ ಎ. ಇಳಂತಿಲ ಮತ್ತು ಮಾಜಿ ಪ್ರಧಾನ ಕಾರ್ಯದರ್ಶಿ ನವೀನ್ ಬಿ.ಕೆ. ಮೊದಲಾದವರು ಉಪಸ್ಥಿತರಿದ್ದರು.



ಬಂಟ್ವಾಳ ಲೊರೆಟ್ಟೊ ಮಾತಾ ಚರ್ಚ್‌ಗೆ ನೂತನ ಧರ್ಮಗುರು ನೇಮಕ

ವಂ. ಜೇಮ್ಸ್ ಡಿಸೋಜರಿಂದ ಅಧಿಕಾರ ಸ್ವೀಕಾರ

ಬಂಟ್ವಾಳ: ಲೊರೆಟ್ಟೊ ಮಾತಾ ಚರ್ಚಿನ ನೂತನ ಧರ್ಮ ಗುರುಗಳಾಗಿ ವಂ. ಜೇಮ್ಸ್ ಡಿಸೋಜ ಅವರು ತಮ್ಮ ಸೇವಸ್ಥಾನದ ಅಧಿಕಾರ ಸ್ವೀಕರಿಸಿದರು. 36 ವರ್ಷಗಳ ಸುದೀರ್ಘ ಅನುಭವವುಳ್ಳ ಧರ್ಮ ಗುರುಗಳು ವೇಣೂರು ,ಬೆಳ್ತಂಗಡಿ, , ವೆಲೆನ್ಸಿಯ ವಾಮಂಜೂರು ಹೀಗೆ ಏಳನೇ ಚರ್ಚ್ ಆಗಿ ಲೊರೆಟ್ಟೊ ಮಾತಾ ದೇವಾಲಯದ 15ನೆಯ ಧರ್ಮ ಗುರುಗಳಾಗಿ ಅಧಿಕಾರ ಸ್ವೀಕರಿಸಿದರು.

ಧರ್ಮ ಗುರುಗಳಾದ ವಂ. ಫ್ರಾನ್ಸಿಸ್ ಕ್ರಾಸ್ತಾ, ಲೊರೆಟ್ಟೊ ಸೆಂಟ್ರಲ್ ಸ್ಕೂಲ್ ಪ್ರಿನ್ಸಿಪಾಲ್ ವಂ ಜೇಸನ್ ಮೊನಿಸ್, ಚರ್ಚ್ ಪಾಲನಾ ಪರಿಷದ್‌ನ ಉಪಾಧ್ಯಕ್ಷ ಐಸಾಕ್ ವಾಸ್, ಕಾರ್ಯದರ್ಶಿ ಆಲ್ವಿನ್ ಪಿಂಟೊ, ಸರ್ವ ಆಯೋಗಗಳ ಸಂಯೋಜಕ ಸಚಿನ್ ನೊರೊನ್ಹಾ, ನಿರ್ಮಲ ಕಾನ್ವೆಂಟ್‌ನ ಸೂಪರಿಯರ್ ಭಗಿನಿ ಇಡೊಲಿನ್ ರೊಡ್ರಿಗಸ್ ನೂತನ ಧರ್ಮ ಗುರುಗಳನ್ನು ಚರ್ಚ್ ದ್ವಾರದ ಬಳಿ ಚರ್ಚ್ ವ್ಯಾಪ್ತಿಯ ಭಕ್ತಾದಿಗಳ ಪರವಾಗಿ ಸ್ವಾಗತಿಸಲಾಯಿತು. ಧರ್ಮ ಅಧ್ಯಕ್ಷರ ಪ್ರತಿನಿಧಿಯಾಗಿ, ಬಂಟ್ವಾಳ ವಲಯದ ಪ್ರಧಾನ ಧರ್ಮ ಗುರುಗಳಾದ ವಿಕ್ಟರ್ ಡಿಸೋಜ ರವರು ಸೇವಸ್ಥಾನದ ಪ್ರಾರ್ಥನಾ ವಿಧಿಯನ್ನು ನೆರವೇರಿಸಿದರು. ಮಂಗಳೂರು ಧರ್ಮ ಪ್ರಾಂತ್ಯದ ವಿವಿಧ ಚರ್ಚ್‌ಗಳ ಧರ್ಮ ಗುರುಗಳು, ಭಗಿನಿಯರು ಹಾಗೂ ಭಕ್ತಾದಿಗಳು ಪಾಲ್ಗೊಂಡಿದ್ದರು.



ನಿರಂತರ ಸುದ್ದಿ ಅಪ್‌ಡೇಟ್‌ಗಾಗಿ
Google Lens ನಲ್ಲಿ
ಈ QRಕೋಡ್ ಸ್ಕ್ಯಾನ್ ಮಾಡಿ
WhatsApp ಗ್ರೂಪ್ ಇಂದೇ ಸೇರಿ!

ನಮ್ಮ ಕಾಸರಗೋಡು

ಹೊಸದಿಗಂತ ಸಂಗಮ 5

ಭಾನುವಾರ 24, ಮೇ 2026

website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb

ಪುಟ ಸಂಖ್ಯೆ

ಸುತ್ತ ಮುತ್ತ

ನಾಳೆ ಶಾಲಾ ವಾಹನ ತಪಾಸಣೆ

ಮಂಜೇಶ್ವರ: ಶೈಕ್ಷಣಿಕ ವರ್ಷ ಆರಂಭವಾಗುವ ಮುನ್ನ ಮಂಜೇಶ್ವರ ತಾಲೂಕಿನ ಶಾಲಾ ವಾಹನಗಳ ತಪಾಸಣೆಯು ಮೇ 25ರಂದು ಬೆಳಗ್ಗೆ 9 ಗಂಟೆಗೆ ಉಪ್ಪಳ ಎಜೆಐ ಇಂಗ್ಲಿಷ್ ಮೀಡಿಯಂ ಶಾಲೆಯಲ್ಲಿ ನಡೆಯಲಿದೆ. ಮೂಲ ವಾಹನ ದಾಖಲೆಗಳೊಂದಿಗೆ ಚಾಲನಾ ಪರವಾನಗಿ, ಜಿಪಿಎಸ್ ಪ್ರಮಾಣಪತ್ರ, ವಿದ್ಯಾವಾಹನ ಪ್ರಮಾಣಪತ್ರ ಮತ್ತು ಸ್ಪೀಡೋಮೀಟರ್ ಪ್ರಮಾಣಪತ್ರವನ್ನು ಪರಿಶೀಲನೆಗೆ ಹಾಜರುಪಡಿಸಬೇಕು ಎಂದು ಕಾಸರಗೋಡು ಆರ್‌ಟಿಒ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 26ರವರೆಗೆ ಸಪ್ಲೈಕೋದಲ್ಲಿ ಬಕ್ರೀದ್ ವಿಶೇಷ ಕಿಟ್

ಕಾಸರಗೋಡು: ವಿವಿಧ ಹಬ್ಬಹರಿದಿನಗಳಿಗೆ ಸಾರ್ವಜನಿಕರಿಗೆ ಅಗತ್ಯ ವಸ್ತುಗಳು ಮತ್ತು ಸಬ್ಸಿಡಿ ವಸ್ತುಗಳನ್ನು ಸಪ್ಲೈಕೋ ಸಂಸ್ಥೆ ಒದಗಿಸುತ್ತಿದೆ. ಆದರಂತೆ 10 ವಸ್ತುಗಳನ್ನು ಒಳಗೊಂಡಿರುವ ವಿಶೇಷ ಬಕ್ರೀದ್ ಕಿಟ್‌ಗಳನ್ನು ಸಪ್ಲೈಕೋ ಸಿದ್ಧಪಡಿಸಿದೆ. ಈ ಕಿಟ್ ಮೇ 26 ರ ವರೆಗೆ ಸಪ್ಲೈಕೋ ಅಂಗಡಿಗಳಲ್ಲಿ ಲಭ್ಯವಿರುತ್ತದೆ. 1101 ರೂಪಾಯಿ ಮೌಲ್ಯದ ಆಹಾರ ಪದಾರ್ಥಗಳನ್ನು 850 ರೂಪಾಯಿಗೆ ವಿಶೇಷ ಕಿಟ್ ಆಗಿ ನೀಡಲಾಗುತ್ತದೆ. ಕಿಟ್‌ನಲ್ಲಿ ಮೂರು ಕಿಲೋ ಬಿರಿಯಾನಿ ಅಕ್ಕಿ, ಒಂದು ಕಿಲೋ ಸಕ್ಕರೆ, ಒಂದು ಲೀಟರ್ ಶಬರಿ ತೆಂಗಿನ ಎಣ್ಣೆ, ಒಂದು ಕಿಲೋ ಶಬರಿ ಅಪ್ಪಂ ಪುಡಿ, 250 ಗ್ರಾಂ ಶಬರಿ ಬ್ರಾಂಡ್ ಗೋಲ್ಡ್ ಟೀ ಪುಡಿ, 100 ಗ್ರಾಂ ಮಾಂಸ ಮಸಾಲ, 50 ಗ್ರಾಂ ಗರಂ ಮಸಾಲ, 100 ಗ್ರಾಂ ಚಿಕನ್ ಮಸಾಲ ಮತ್ತು 100 ಗ್ರಾಂ ಕರಿಮೆಣಸಿನ ಪುಡಿ ಇರುತ್ತದೆ. ಕಿಟ್‌ನಲ್ಲಿ ಏಲಕ್ಕಿ ಮತ್ತು ಲವಂಗ ಸೇರಿದಂತೆ 50 ಗ್ರಾಂ ಮಸಾಲೆಗಳಿವೆ.

ಮಾನ್ಯತೆ ಪಡೆದ ಮೇಲ್ವಿಚಾರಕರ ನೇಮಕಾತಿ

ಕಾಸರಗೋಡು: ಜಿಲ್ಲೆಯ ಗ್ರಾ.ಪಂ.ಕಚೇರಿಯಲ್ಲಿ ಮೇ 26ರಂದು ಬೆಳಗ್ಗೆ 11ಗಂಟೆಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಮಾನ್ಯತೆ ಪಡೆದ ಮೇಲ್ವಿಚಾರಕರ ಹುದ್ದೆಗೆ ಹಿಂದಿನ ಅನುಭವ ಹೊಂದಿರುವ ಅರ್ಹ ಅಭ್ಯರ್ಥಿಗಳಿಂದ ಗುತ್ತಿಗೆ ಆಧಾರದ ಮೇಲೆ ನೌಕರರನ್ನು ನೇಮಿಸಲು ಸಂದರ್ಶನ ನಡೆಯಲಿದೆ. ಆಸಕ್ತ ಅಭ್ಯರ್ಥಿಗಳು ಬಯೋಡೇಟಾ, ಹಿಂದಿನ ಅನುಭವ ಸಾಬೀತುಪಡಿಸುವ ದಾಖಲೆಗಳು ಮತ್ತು ಶೈಕ್ಷಣಿಕ ಅರ್ಹತೆ ಸಾಬೀತುಪಡಿಸುವ ಪ್ರಮಾಣಪತ್ರಗಳೊಂದಿಗೆ ಹಾಜರಾಗಬೇಕು. ಮಾಹಿತಿಗೆ 04998 240221 ಕರೆ ಮಾಡಬಹುದು.

ಬಿಎಂಎಸ್ ಸದಸ್ಯತನದ ಕ್ಯಾಂಪೈನ್ ಆರಂಭ

ಕಾಸರಗೋಡು: ಹೊಸದುರ್ಗ ತಾಲೂಕು ಬಸ್ ಆ್ಯಂಡ್ ಹೆವೀ ವೆಹಿಕಲ್ಸ್ ಭಾರತೀಯ ಮಜ್ದೂರ್ ಸಂಘ (ಬಿಎಂಎಸ್)ದ ಸದಸ್ಯತನ ಕ್ಯಾಂಪೈನ್ ಆರಂಭಗೊಂಡಿತು. ಬಿಎಂಎಸ್ ಜಿಲ್ಲಾ ಉಪಾಧ್ಯಕ್ಷ ಪರಶ್ಶಿನಿ ಪ್ರಕಾಶನ್ ಅವರು ತಾಲೂಕು ಕಾರ್ಯದರ್ಶಿ ಅನೀಶ್ ಪಳ್ಳತ್ತ್ ಅವರಿಗೆ ಸದಸ್ಯತನ ನೀಡಿ ಉದ್ಘಾಟಿಸಿದರು. ಸುಧಿ ಪುದಿಯಕಂಡಂ, ರಾಜೇಶ್ ಕಾಟ್ಟಿಪ್ಪೊಯಿಲ್, ಭಾಸ್ಕರನ್, ವಿಜೇಶ್ ಚೆರುವತ್ತೂರು ಮೊದಲಾದವರು ಉಪಸ್ಥಿತರಿದ್ದರು.

ಬರೋಟಿ - ಕರಿಯತ್ ರಸ್ತೆಯ ಕಲ್ವರ್ಟ್ ಉದ್ಘಾಟನೆ

ಕಾಸರಗೋಡು: ಬೇಡಡ್ಕ ಗ್ರಾ.ಪಂ.ನಿಂದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕಾಮಗಾರಿ ಪೂರ್ಣಗೊಂಡಿರುವ ಬರೋಟಿ ಆದಿರ ನಗರ – ಕರಿಯತ್ ರಸ್ತೆಯ ಕಲ್ವರ್ಟ್‌ನ್ನು ಉದ್ಘಾಟಿಸಲಾಯಿತು. ಬೇಡಡ್ಕ ಗ್ರಾ.ಪಂ. ಅಧ್ಯಕ್ಷ ಇ.ಕುಂಞಿರಾಮನ್ ಉದ್ಘಾಟಿಸಿದರು. ಪಂ. ಸ್ಥಾಯೀ ಸಮಿತಿ ಅಧ್ಯಕ್ಷ ವಿಷ್ಣು ಚೆರಿಪ್ಪಾಡಿ ಅಧ್ಯಕ್ಷತೆ ವಹಿಸಿದ್ದರು. ಯೋಜನಾ ಸಮಿತಿ ಸದಸ್ಯ ರಾಧಾಕೃಷ್ಣನ್ ಚಾಲಕಾಡ್, ಟಿ.ನಾರಾಯಣನ್, ಎಂ.ಗೋಪಾಲಕೃಷ್ಣನ್, ಪುಷ್ಪಾ ಕೃಷ್ಣನ್ ಮತ್ತು ಗೋಪನ್ ಎಸ್.ವಿ. ಮಾತನಾಡಿದರು. ಭಾಸ್ಕರನ್ ಕರಿಯತ್ ಸ್ವಾಗತಿಸಿ, ಕೆ.ಪದ್ಮಿನಿ ವಂದಿಸಿದರು.

ಭದ್ರತಾ ಸಿಬ್ಬಂದಿ ನೇಮಕಾತಿ

ಕಾಸರಗೋಡು: ಹೊಸದುರ್ಗ ತಾಲೂಕು ಆಸ್ಪತ್ರೆಯಲ್ಲಿ ಸೆಕ್ಯುರಿಟಿ ಗಾರ್ಡ್ ಹುದ್ದೆಗೆ ನಿವೃತ್ತ ಸೈನಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಯೋಮಿತಿ 50 ವರ್ಷಗಳು. ಆಸಕ್ತ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ಜಿಲ್ಲಾ ಸೈನಿಕ ಕಲ್ಯಾಣ ಕಚೇರಿಗೆ ಮೇ 28ರಂದು ಸಂಜೆ 5 ಗಂಟೆಯೊಳಗೆ ಸಲ್ಲಿಸಬೇಕು. ಮಾಹಿತಿಗೆ 04994 256860 ಕರೆ ಮಾಡಬಹುದು.

8 ವರ್ಷಗಳಿಂದ ನಡೆಯುತ್ತಿರುವ ಕಾಸರಗೋಡು ಸರಕಾರಿ ಜನರಲ್ ಆಸ್ಪತ್ರೆಯ 7 ಅಂತಸ್ತಿನ ಕಟ್ಟಡ ಕಾಮಗಾರಿ

ಯೋಜನೆ ಅಂತಿಮದಲ್ಲಿದ್ದರೂ ಉದ್ಘಾಟನೆಗೆ ಮೀನಮೇಷ!

ಕಾಸರಗೋಡು: ಕಳೆದ ಎಂಟು ವರ್ಷಗಳ ಹಿಂದೆ ಆರಂಭಿಸಲಾದ ಕಾಸರಗೋಡು ಸರಕಾರಿ ಜನರಲ್ ಆಸ್ಪತ್ರೆಯ ಅತ್ಯಾಧುನಿಕ ಮಾದರಿಯ ನೂತನ ಏಳು ಅಂತಸ್ತಿನ ಕಟ್ಟಡದ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ, ಕೆಲಸಕಾರ್ಯಗಳು ಕೊನೆಯ ಹಂತದಲ್ಲಿದ್ದರೂ ಈ ಕಟ್ಟಡದ ಉದ್ಘಾಟನೆಗೆ ಅಧಿಕಾರಿಗಳು ಮೀನಮೇಷ ಎಣಿಸುತ್ತಿದ್ದಾರೆ ಎಂಬ ಆಕ್ರೋಶ ಸಾರ್ವಜನಿಕರದ್ದಾಗಿದೆ.

ಜಿಲ್ಲೆಯ ಜನಸಾಮಾನ್ಯರು ಹೆಚ್ಚಾಗಿ ಆಶ್ರಯಿಸುತ್ತಿರುವುದು ಕಾಸರಗೋಡು ಜನರಲ್ ಆಸ್ಪತ್ರೆಯನ್ನಾಗಿದೆ. ಪ್ರಸ್ತುತ 220 ಬೆಡ್‌ಗಳಿರುವ ಈ ನೂತನ ಆಸ್ಪತ್ರೆ ಕಟ್ಟಡವನ್ನು 2025ರಲ್ಲಿ ವೈದ್ಯಕೀಯ ಕಾಲೇಜು ಆಸ್ಪತ್ರೆಯಾಗಿ ಕೇರಳ ಸರಕಾರವು ಘೋಷಿಸಿತ್ತು. ಆದರೆ ಇದರಿಂದಾಗಿ ಯಾವುದೇ ಪ್ರಯೋಜನವಾಗದಿರುವುದು ದುರಂತವಾಗಿದೆ. ವೈದ್ಯಕೀಯ ಕಾಲೇಜು ಆಸ್ಪತ್ರೆ ಎಂಬ ಘೋಷಣೆ ಕೇವಲ ಕಡತಗಳಿಗಷ್ಟೇ ಸೀಮಿತವಾಗಿರುವುದು ಕಂಡುಬರುತ್ತಿದೆ.

2011ರಲ್ಲಿ ಆಸ್ಪತ್ರೆಯ ಮೂಲಭೂತ ಸೌಕರ್ಯ ಹೆಚ್ಚಿಸುವುದರ ಅಂಗವಾಗಿ ಏಳು ಅಂತಸ್ತಿನ ನೂತನ



ಕಟ್ಟಡ ನಿರ್ಮಾಣ ಯೋಜನೆಯನ್ನು ರಾಜ್ಯ ಸರಕಾರ ಘೋಷಿಸಿದ್ದು, 2018ರಲ್ಲಿ ರಾಷ್ಟ್ರೀಯ ಕೃಷಿ ಗ್ರಾಮಾಭಿವೃದ್ಧಿ ಬ್ಯಾಂಕ್ ಆದ ನಬಾರ್ಡ್‌ನ ಸಹಾಯದೊಂದಿಗೆ ನಿರ್ಮಾಣ ಕಾಮಗಾರಿಯನ್ನು ಆರಂಭಿಸಲಾಗಿತ್ತು. 8 ಕೋಟಿ ರೂಪಾಯಿ ಮೊತ್ತವನ್ನು ಇದಕ್ಕಾಗಿ ನಬಾರ್ಡ್ ಮಂಜೂರುಗೊಳಿಸಿತ್ತು.

ಆದರೆ ಬಳಿಕ ಬಂದ ಕೊರೋನಾ ಮಹಾಮಾರಿ ಹಾಗೂ ಇತರ ತಾಂತ್ರಿಕ ಅಡಚಣೆಗಳ ಕಾರಣ ಕಟ್ಟಡ ನಿರ್ಮಾಣ ಕಾಮಗಾರಿಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿತ್ತು. ನಿರ್ದಿಷ್ಟ ಸಮಯದೊಳಗೆ ಯೋಜನೆಯನ್ನು ಪೂರ್ಣಗೊಳಿಸಲು ಸಾಧ್ಯವಾಗದ ಹಿನ್ನೆಲೆ ನಬಾರ್ಡ್ ಅನುದಾನವು ನಷ್ಟಗೊಂಡಿತ್ತು. ನಿರ್ಮಾಣ ಸ್ಥಗಿತಗೊಳ್ಳದಿರಲು ಕಾಸರಗೋಡು ಅಭಿವೃದ್ಧಿ ಪ್ಯಾಕೇಜ್‌ನಿಂದ 3 ಕೋಟಿ ರೂಪಾಯಿ ಮೊತ್ತವನ್ನು ಮಂಜೂರುಗೊಳಿಸಲಾಗಿದ್ದು, ನಂತರ ಕಾಮಗಾರಿಯನ್ನು ಮುಂದುವರಿಸಲಾಯಿತು. ಪ್ರಸ್ತುತ ಪ್ರಧಾನ ನಿರ್ಮಾಣ ಕಾಮಗಾರಿಗಳು, ವಿದ್ಯುದ್ದೀಕರಣ ಕಾಮಗಾರಿಗಳು ಪೂರ್ಣಗೊಂಡಿವೆ.

ಸಮಸ್ಯೆಯಾಗುತ್ತಿದೆ

ಉಕ್ಕಿನಡ್ಕದ ಕಾಸರಗೋಡು ಸರಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆ ಬ್ಲಾಕ್‌ನ ಕಾಮಗಾರಿ ಪೂರ್ಣಗೊಳ್ಳದ ಹಿನ್ನೆಲೆ ಕಾಸರಗೋಡು ಸರಕಾರಿ ಜನರಲ್ ಆಸ್ಪತ್ರೆಯನ್ನು ವೈದ್ಯಕೀಯ ಕಾಲೇಜು ಆಸ್ಪತ್ರೆಯನ್ನಾಗಿ ಅಭಿವೃದ್ಧಿಗೊಳಿಸಲು ನಿರ್ಧರಿಸಲಾಗಿತ್ತು. ಇದರಿಂದ ರೋಗಿಗಳ ಸಂಖ್ಯೆ ಹೆಚ್ಚಿದರೂ ಪ್ರಸ್ತುತ ಹಳೆಯ 6 ಅಂತಸ್ತಿನ ಕಟ್ಟಡದಲ್ಲಿ ಸ್ಥಳ ಸೌಕರ್ಯ ಕೊರತೆ ಬಹುದೊಡ್ಡ ಸಮಸ್ಯೆಯಾಗಿ ಮುಂದುವರಿಯುತ್ತಿದೆ. ಆಸ್ಪತ್ರೆ ಹಲವು ಪ್ರಧಾನ ವಿಭಾಗಗಳು ಇತಿಮಿತಿಗಳೊಂದಿಗೆ ಇದೀಗ ಕಾರ್ಯಾಚರಿಸುತ್ತಿವೆ.

ನೂತನ ಕಟ್ಟಡ ನಿರ್ಮಾಣ ಪೂರ್ತಿಯಾದರೆ ಇದೀಗ ಸ್ಥಳ ಸೌಕರ್ಯ ಕೊರತೆಯಿರುವ ಹಳೆ ಕಟ್ಟಡದಲ್ಲಿ ಕಾರ್ಯಾಚರಿಸುತ್ತಿರುವ ಕಣ್ಣಿನ ಚಿಕಿತ್ಸಾ ವಿಭಾಗ, ದಂತ ಚಿಕಿತ್ಸಾ ವಿಭಾಗಗಳನ್ನು ನೂತನ ಕಟ್ಟಡಕ್ಕೆ ಸ್ಥಳಾಂತರಿಸುವ ಸಾಧ್ಯತೆಗಳಿವೆ.

ಹೊಸ ಕಟ್ಟಡವು ರೋಗಿಗಳಿಗೆ ಅತ್ಯಂತ ಪ್ರಯೋಜನಕಾರಿ

ರಾಷ್ಟ್ರೀಯ ಆರೋಗ್ಯ ಯಜ್ಞದ ಅಧೀನದಲ್ಲಿ ಟ್ರೋಮ ಪರಿಪಾಲನಾ ಕೇಂದ್ರಕ್ಕಿರುವ ನೂತನ ಯೋಜನೆ ಜನರಲ್ ಆಸ್ಪತ್ರೆಗೆ ಲಭಿಸಿದ್ದು, ನೂತನ ಕಟ್ಟಡ ಕಾರ್ಯಾಚರಣೆಗೆ ಸಜ್ಜಾದರೆ ಈ ಯೋಜನೆಗೆ ಸ್ಥಳ ವ್ಯವಸ್ಥೆಗೊಳಿಸಲು ಮತ್ತು ಆಸ್ಪತ್ರೆಯ ಬೆಡ್‌ಗಳ ಸಂಖ್ಯೆ ಇನ್ನಷ್ಟು ಹೆಚ್ಚಿಸುವ ಉದ್ದೇಶವಿದೆ. ನೂತನ ಕಟ್ಟಡದಲ್ಲಿ ಆಧುನಿಕ ಸೌಕರ್ಯಗಳೊಂದಿಗೆ ರ‍್ಯಾಂಪ್, ಲಿಫ್ಟ್, ವಿಶಾಲವಾದ ವಾರ್ಡ್‌ಗಳ ವ್ಯವಸ್ಥೆಗೊಳಿಸ ಲಾಗಿದೆ. ಹಳೆಯ ಕಟ್ಟಡದಲ್ಲಿ ರ‍್ಯಾಂಪ್ ಇಲ್ಲದಿರುವುದರಿಂದ ರೋಗಿಗಳನ್ನು ಮೇಲಿನ ಅಂತಸ್ತಿಗೆ ಕೊಂಡೊಯ್ಯಲು ಸಮಸ್ಯೆ ಉಂಟಾಗುತ್ತಿದೆ. ನೂತನ ಕಟ್ಟಡ ಉದ್ಘಾಟನೆಗೊಂಡರೆ ರೋಗಿ ಗಳಿಗೆ ಹೆಚ್ಚು ಪ್ರಯೋಜನಕಾರಿಯಾಗಲಿದೆ ಎಂದು ಆಸ್ಪತ್ರೆಯ ಅಧಿಕಾರಿಗಳು ತಿಳಿಸಿದ್ದಾರೆ.

ಕಾಸರಗೋಡಿನ ರಂಗಭೂಮಿಗೆ ನವಚೇತನ ಕಾಲ ಕೂಡಿ ಬಂದಿದೆ: ನಾಗರಾಜ ಮೂರ್ತಿ



ಕಾಸರಗೋಡು: ಚಿಂತನಶೀಲ ಸಮಾಜ ನಿರ್ಮಾಣದಲ್ಲಿ ರಂಗಭೂಮಿ ಚಟುವಟಿಕೆಗಳು ಎಂದಿಗೂ ಅಗತ್ಯ. ತಿದ್ದುವ ವ್ಯವಸ್ಥೆಗಳು ಮಾಸಿದಾಗ ಸಹಜವಾದ ರಾಕ್ಷಸೀಯ ಪ್ರವೃತ್ತಿಗಳು ಎದ್ದು ನಿಲ್ಲುತ್ತವೆ. ಈ ನಿಟ್ಟಿನಲ್ಲಿ ಸಾಮಾಜಿಕ ವ್ಯವಸ್ಥೆ ಪುನರ್ ರೂಪಿಸಲು ರಂಗಭೂಮಿಯೊಂದೇ ಪರಿಹಾರ ಎಂದು ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ.ನಾಗರಾಜ ಮೂರ್ತಿ ಅಭಿಪ್ರಾಯ ವ್ಯಕ್ತಪಡಿಸಿದರು.

ರಂಗಶಂಕರ ಬೆಂಗಳೂರು, ಕಾಸರಗೋಡು ಥಿಯಾಟ್ರಿಕ್ಸ್ ಸೊಸೈಟಿ , ಸವಾಕ್ ಕಾಸರಗೋಡು ಸಹಯೋಗದಲ್ಲಿ ಕಾಸರಗೋಡು ನಗರಸಭಾ ಸಭಾ ಭವನದಲ್ಲಿ ಆಯೋಜಿಸಲಾಗಿರುವ 4 ದಿನಗಳ ಕನ್ನಡ ನಾಟಕೋತ್ಸವದ 2ನೇ ದಿನದ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಕಾಸರಗೋಡು ಕನ್ನಡ ರಂಗಭೂಮಿಗೆ ದಶಕಗಳ ಹಿಂದೆ ನೀಡಿದ್ದ ಕೊಡುಗೆಗಳು ಅವಿಸ್ಮರಣೀಯ. ದಿ.ಪ್ರೊ.ವೇಣುಗೋಪಾಲ ಕಾಸರಗೋಡು ಅವರಂತಹ ಸೃಜನಶೀಲರ ಒಡನಾಟ ಅಚ್ಚಳಿಯದ್ದು. ಯುವ ಸಮೂಹವನ್ನು ಮತ್ತೆ ರಂಗಭೂಮಿಗೆ ಕರೆತರಲು ಇಂತಹ ನಾಟಕೋತ್ಸವಗಳು ಪರಿಣಾಮಕಾರಿ ಎಂದವರು ತಿಳಿಸಿದರು.

ಸವಾಕ್ ರಾಜ್ಯ ಕೋಶಾಧಿಕಾರಿ ಎಂ.ಉಮೇಶ ಸಾಲ್ಯಾನ್ ಕಾಸರಗೋಡು ಸ್ವಾಗತಿಸಿದರು. ರಂಗ ಶಂಕರದ ನಿರ್ದೇಶಕ ಮುದ್ದಣ್ಣ ರಾಟೆಹಳ್ಳಿ, ಹಿರಿಯ ನಟಿ ಜಯಶ್ರೀ ಎಂ.ರಾವ್, ಮಲೆಯಾಳಂ ನಟ ಕೆ.ಎಚ್. ಮೊಹಮ್ಮದ್, ರಂಗ ನಿರ್ದೇಶಕ ಉದಯ ಸಾರಂಗ್, ಪತ್ರಕರ್ತ ಪುರುಷೋತ್ತಮ ಭಟ್. ಕೆ. ಉಪಸ್ಥಿತರಿದ್ದು ಶುಭಹಾರೈಸಿದರು.

ನಾಟಕ ಪ್ರದರ್ಶನ

ಬಳಿಕ ವಿವೇಕ ಶಾನುಭೋಗ್ ರಚನೆಯ ಬಹುಮುಖಿ ನಾಟಕವನ್ನು ಗಳಿಗೇನಹಳ್ಳಿ ರಂಗಾರಂಭ ತಂಡದವರು ಶ್ರೀನಿವಾಸ ಮೂರ್ತಿ ನಿರ್ದೇಶನದಲ್ಲಿ ಪ್ರದರ್ಶಿಸಿದರು.

ಬಿಜೆಪಿ ಕಾರ್ಯಾಲಯ: ಕಾಸರಗೋಡು ಜಿಲ್ಲಾಮಟ್ಟದ ನಾಯಕತ್ವ ಸಭೆ ಉದ್ಘಾಟನೆ



ಕಾಸರಗೋಡು: ಈ ಬಾರಿಯ ವಿಧಾನ ಸಭಾ ಚುನಾವಣೆಯನ್ನು ಗಣನೆಗೆ ತೆಗೆದುಕೊಂಡಾಗ ಕೇರಳದಲ್ಲಿ ಬಿಜೆಪಿ ಶಕ್ತಿವೃದ್ಧಿಸಿಕೊಂಡಿದೆ. ಆದ್ದರಿಂದ ಮುಂದಿನ ಚುನಾವಣೆಗಳಲ್ಲಿ ಪಕ್ಷವು ಇನ್ನಷ್ಟು ಪ್ರಬಲವಾಗಿ ಮುನ್ನುಗ್ಗಲಿದೆ ಎಂದು ಬಿಜೆಪಿ ರಾಜ್ಯ ಸೆಲ್ ಕೋ ಓರ್ಡಿನೇಟರ್ , ಕಲ್ಲಿಕೋಟೆ ವಲಯ ಪ್ರಭಾರಿ ವಿ.ಕೆ.ಸಜೀವನ್ ಹೇಳಿದ್ದಾರೆ.

ಬಿಜೆಪಿ ಕಾಸರಗೋಡು ಜಿಲ್ಲಾ ಕಾರ್ಯಾಲಯವಾದ ಡಾ.ಶ್ಯಾಮ್‌ಪ್ರಸಾದ್ ಮುಖರ್ಜಿ ಮಂದಿರದಲ್ಲಿ ಶನಿವಾರ ನಡೆದ ಪಕ್ಷದ ಜಿಲ್ಲಾ ನಾಯಕತ್ವ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. 30 ಲಕ್ಷ ಮತಗಳು, 3ಎಂಎಲ್‌ಎ ಸ್ಥಾನಗಳು ಕೇರಳದಲ್ಲಿ ಲಭಿಸಿರುವುದು ಜನರು ಬಿಜೆಪಿ ಅಂಗೀಕರಿಸುತ್ತಿರುವುದಕ್ಕೆ ಸಾಕ್ಷಿಯಾಗಿವೆ. ಬಿಜೆಪಿ ಮುನ್ನಡೆಸುತ್ತಿರುವ ಅಭಿವೃದ್ಧಿ ರಾಜಕಾ ರಣಕ್ಕೆ ದೊರೆತ ಅಂಗೀ ಕಾರ ಇದಾಗಿದೆ ಎಂದು ವಿ.ಕೆ.ಸಜೀವನ್ ಕರೆ ನೀಡಿದರು.

ಸಭೆಯ ನಿರ್ಣಯ

- **ಕನ್ನಡ ಭಾಷೆಯ ಬಗೆಗಿನ ಕಡೆಗಣನೆಯನ್ನು ಕೊನೆಗಾಣಿಸಬೇಕು, ಪರಿಸರ ಮಾಲಿನ್ಯಕ್ಕೆ ಪರಿಹಾರ ಕಂಡುಕೊಳ್ಳಬೇಕು**
- **ಸರ್ಕಾರಿ ವೈದ್ಯಕೀಯಕಾಲೇಜು ಕಾರ್ಯಾಚರಣೆಗೆ ಮುಕ್ತಗೊಳಿಸಬೇಕು, ಮಾದಕದ್ರವ್ಯ ವಿರೋಧಿ ಚಟುವಟಿಕೆ ಬಲಪಡಿಸಬೇಕು**

ಬಿಜೆಪಿ ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ ಅಧ್ಯಕ್ಷತೆ ವಹಿಸಿದ್ದರು. ಕಲ್ಲಿಕೋಟೆವಲಯಸಂಘಟನಾ ಕಾರ್ಯದರ್ಶಿ ಜಿ.ಕಾಶಿನಾಥ್, ರಾಷ್ಟ್ರೀಯ ಕೌನ್ಸಿಲ್ ಸದಸ್ಯ ಎಂ.ಸಂಜೀವ ಶೆಟ್ಟಿ, ರಾಜ್ಯ ಸಮಿತಿ ಸದಸ್ಯರಾದ ಸವಿತಾ ಟೀಚರ್, ಎ.ವೇಲಾಯುಧನ್, ರಾಮಪ್ಪಮಂಜೇಶ್ವರ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗ ಳಾದ ಪಿ.ಆರ್.ಸುನೀಲ್, ಎನ್. ಬಾಬುರಾಜ್, ಮನುಲಾಲ್ ಮೇಲತ್ ಮಾತನಾಡಿದರು.

ಕಾಸರಗೋಡು ಜಿಲ್ಲೆ ವಾರ್ಷಿಕೋತ್ಸವ: ಸರಕಾರಿ ನೌಕರರಿಗೆ ರಸಪ್ರಶ್ನೆ ಸ್ಪರ್ಧೆ



ಕಾಸರಗೋಡು: ಕಾಸರಗೋಡು ಜಿಲ್ಲೆಯ 42ನೇ ವಾರ್ಷಿಕೋತ್ಸವದ ಅಂಗವಾಗಿ ಮಾಹಿತಿ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಸಿಬ್ಬಂದಿ ಮಂಡಳಿ ಮತ್ತು ಅಕ್ಷರ ಗ್ರಂಥಾಲಯ ಇವುಗಳ ಜಂಟಿ ಆಶ್ರಯದಲ್ಲಿ ಸರಕಾರಿ ನೌಕರರಿಗಾಗಿ ರಸಪ್ರಶ್ನೆ ಸ್ಪರ್ಧೆಯನ್ನು ಶನಿವಾರ ಆಯೋಜಿಸಲಾಗಿತ್ತು.

ಈ ಸ್ಪರ್ಧೆಯಲ್ಲಿ ಜಿಲ್ಲೆಯ ಇತಿಹಾಸ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಲಾಗಿತ್ತು.

ಜಿಲ್ಲಾ ಮಾಹಿತಿ ಕಚೇರಿ ಪಿಆರ್ ಚೇಂಬರ್‌ನಲ್ಲಿ ನಡೆದ ಸ್ಪರ್ಧೆಯಲ್ಲಿ ಜಿಎಸ್‌ಟಿ ವಿಭಾಗದ ವಿ.ಎಂ.ಸತೀಶನ್ ಮತ್ತು ಎಂ.ಪವಿತ್ರನ್ ಪ್ರಥಮ ಸ್ಥಾನ ಪಡೆದರು. ಜಿಲ್ಲಾ ಮಾಹಿತಿ ಅಧಿಕಾರಿ ಎಂ.ಮಧುಸೂದನನ್ ರಸಪ್ರಶ್ನೆ ಸ್ಪರ್ಧೆಯನ್ನು ನಿರ್ವಹಿಸಿದರು. ಎಡಿಎಂ ಕೆ.ವಿ.ಶ್ರುತಿ ಅವರು ಸ್ಪರ್ಧಾ ವಿಜೇತರಿಗೆ ಬಹುಮಾನಗಳನ್ನು ವಿತರಿಸಿದರು. ಜಿಲ್ಲಾ ಮಾಹಿತಿ ಕಚೇರಿ ಸಹಾಯಕ ಸಂಪಾದಕಿ ಎ.ಪಿ.ದಿಲ್ನಾ, ಅಕ್ಷರ ಗ್ರಂಥಾಲಯ ಮಂಡಳಿ ಕಾರ್ಯದರ್ಶಿ ಕೆ.ಮುಕುಂದನ್ ಮತ್ತು ಇತರರು ಶುಭಹಾರೈಸಿ ಮಾತನಾಡಿದರು.

ನಮಸ್ತೆ ಕಲೆಕ್ಟರ್‌ನಲ್ಲಿ ನೀಡಿದ ಭರವಸೆಯಂತೆ ವಿದ್ಯಾರ್ಥಿಗೆ ಸೈಕಲ್ ನೀಡಿದ ಜಿಲ್ಲಾಧಿಕಾರಿ!



ಕಾಸರಗೋಡು: ಅಧಿಕಾರಿಗಳು ಮತ್ತು ಜನರ ನಡುವಿನ ಅಂತರ ಕಡಿಮೆ ಮಾಡುವ ಗುರಿ ಹೊಂದಿರುವ ನಮಸ್ತೆ ಕಲೆಕ್ಟರ್ ಕಾರ್ಯಕ್ರಮದ ಮೂಲಕ ವಿದ್ಯಾರ್ಥಿ ಸಂದೇಶ್ ಎಂಬವರ ಕನಸು ನನಸಾಗಿದೆ. ಕುಂಬಳೆ ಮಾವಿನಕಟ್ಟೆಯ ಕೊರಗ ಉನ್ನತಿ (ಕಾಲನಿ) ಬಾಲಸಭಾದ ಸದಸ್ಯ , 8ನೇ ತರಗತಿಯ ವಿದ್ಯಾರ್ಥಿ ಸಂದೇಶ್ ವಿನಂತಿಸಿದಂತೆ ನೂತನ ಸೈಕಲ್‌ನ್ನು ಡೀಸಿ ಅರ್ಜುನ್ ಪಾಂಡ್ಯನ್ ಭರವಸೆ ನೀಡಿದ 3 ದಿನದಲ್ಲಿ(ಶನಿವಾರ) ವಿತರಿಸಿ ಮಾದರಿಯಾದರು.

ಕುಟುಂಬಶ್ರೀ ಮಿಷನ್‌ನ ಕೊರಗ ವಿಶೇಷ ಯೋಜನೆ ಭಾಗವಾಗಿ ನಮಸ್ತೆ ಕಲೆಕ್ಟರ್ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಭಾಗವಹಿಸಿದ ವಿದ್ಯಾರ್ಥಿ ಸಂದೇಶ್ ಅವರು ಅಧ್ಯಯನ ಉದ್ದೇಶಗಳಿಗೆ ಸೈಕಲ್ ಹೊಂದಬೇಕೆಂಬ ತಮ್ಮ ಆಸೆಯನ್ನು ನೇರವಾಗಿ ಡೀಸಿಯೊಂದಿಗೆ ಹಂಚಿಕೊಂಡರು. ಮಕ್ಕಳ ಅಗತ್ಯಗಳನ್ನು ಅರ್ಥಮಾಡಿಕೊಂಡ ಜಿಲ್ಲಾಧಿಕಾರಿಗಳು ಯಾವುದೇ ವಿಳಂಬವಿಲ್ಲದೆ ಸೈಕಲ್ ಒದಗಿಸಲು ಕ್ರಮ ಕೈಗೊಂಡರು.

ಜನಸಾಮಾನ್ಯರ ಸಮಸ್ಯೆ ನೇರವಾಗಿ ಪರಿಹರಿಸುವ ನಿಟ್ಟಿನಲ್ಲಿ ನಮಸ್ತೆ ಕಲೆಕ್ಟರ್ ಕಾರ್ಯಕ್ರಮ ಹೆಚ್ಚು ಜನಪ್ರಿಯವಾಗುತ್ತಿದೆ ಎಂಬುದಕ್ಕೆ ಸಂದೇಶ್‌ಗೆ ದೊರೆತ ತ್ವರಿತ ಸಹಾಯ ಸಾಕ್ಷಿಯಾಗಿದೆ ಎಂದು ಕುಟುಂಬಶ್ರೀ ಜಿಲ್ಲಾ ಮಿಷನ್ ಸಂಯೋಜಕ ಕೆ.ರತೀಶ್‌ಕುಮಾರ್ ಹೇಳಿದ್ದಾರೆ. ಸಂದೇಶ್‌ಗಾಗಿ ಸೈಕಲ್‌ಗಳ ವಿತರಣೆಯನ್ನು ಡೀಸಿ ಅರ್ಜುನ್ ಪಾಂಡ್ಯನ್ ಆನ್‌ಲೈನ್ ಮೂಲಕ ಉದ್ಘಾಟಿಸಿದರು. ಕೆ.ರತೀಶ್ ಕುಮಾರ್ ಅತಿಥಿಯಾಗಿದ್ದರು.

ಕುಂಬಳೆ ಗ್ರಾ.ಪಂ.ಅಧ್ಯಕ್ಷ ವಿ.ಪಿ.ಅಬ್ದುಲ್ ಖಾದರ್, ಉಪಾಧ್ಯಕ್ಷೆ ಎಂ.ಬುಲ್ಕೀಸ್, ಸ್ಥಾಯೀ ಸಮಿತಿ ಅಧ್ಯಕ್ಷ ವಿ.ಎಂ.ಟಿ. ಖಾಲಿದ್, ಇನಾಸ್ ಪವಾಸ್ ಕೊಹಿನೂರ್, ಗ್ರಾ.ಪಂ. ಸದಸ್ಯ ಎಂ. ಸಬೂರ, ಕುಟುಂಬಶ್ರೀ ಮೆಂಬರ್ ಕಾರ್ಯದರ್ಶಿ ಕೆ.ಶೈಜು, ಸಿಡಿಎಸ್ ಅಧ್ಯಕ್ಷೆ ತಾಹಿರಾ, ಸಹಾಯಕ ಜಿಲ್ಲಾ ಮಿಷನ್ ಸಂಯೋಜಕ ಕೆ.ಎಂ.ಕಿಶೋರ್‌ಕುಮಾರ್, ಯೋಜನಾ ಸಂಯೋಜಕಿ ಶೋಭಿತಾ, ಸಹಾಯಕ ಯೋಜನಾ ಸಂಯೋಜಕ ಯದುರಾಜ್ ಮತ್ತಿತರರಿದ್ದರು.

ಇಂದು ಬಂದಡ್ಕ ಸರಕಾರಿ ಸೆಕೆಂಡರಿ ಶಾಲೆಯ ಪ್ಲಾಟಿನಂ ಜುಬಿಲಿ, ಹಳೆ ವಿದ್ಯಾರ್ಥಿ ಸಂಗಮ

ಕಾಸರಗೋಡು: ಬಂದಡ್ಕ ಸರಕಾರಿ ಹೈಯರ್ ಸೆಕೆಂಡರಿ ಶಾಲೆಯ 1 ವರ್ಷದ ಪ್ಲಾಟಿನಂ ಜುಬಿಲಿ ಆಚರಣೆಗಳ ಅಂಗವಾಗಿ ಹಳೆ ವಿದ್ಯಾರ್ಥಿಗಳ ಸಮ್ಮಿಲನ ಮೇ 24ರಂದು ಬೆಳಗ್ಗೆ 10 ಗಂಟೆಗೆ ಜರಗಲಿದೆ.

ಶಾಲೆಯ ಹಳೆ ವಿದ್ಯಾರ್ಥಿಯಾಗಿರುವ ನಿವೃತ್ತ ಜಿಲ್ಲಾ ನ್ಯಾಯಾಧೀಶ ಎ. ಶಂಕರನ್ ನಾಯರ್ ಕಾರ್ಯಕ್ರಮ ಉದ್ಘಾಟಿಸುವರು. 1952ರಲ್ಲಿ ಸಣ್ಣಯ್ಯ ಮಾಸ್ತರು ಆರಂಭಿಸಿದ ಈ ವಿದ್ಯಾಸಂಸ್ಥೆಯು ಇಂದು ಮಲೆನಾಡು ಪ್ರದೇಶದ ಜ್ಞಾನಜ್ಯೋತಿಯಾಗಿ ಬೆಳಗುತ್ತಿದೆ. ಮೂರು ತಲೆಮಾರಿನ ಜ್ಞಾನಪರಂಪರೆಯನ್ನು ಮುಂದುವರಿಸಲು ಸಾಧ್ಯವಾದ ಈ ಶಾಲೆಯ ಬೆಳವಣಿಗೆಯಲ್ಲಿ ವಿದ್ಯಾರ್ಥಿಗಳ ಪಾತ್ರ ಮಹತ್ತರವಾಗಿದೆ. ಆರಂಭದಲ್ಲಿ ಕೇವಲ ಕನ್ನಡ ಮಾಧ್ಯಮವಿದ್ದ ಈ ಶಾಲೆ, 1956ರ ಕೇರಳ ರಾಜ್ಯೋತ್ಸವದ ನಂತರ ಮಲೆಯಾಳಂ ವಿಭಾಗಗಳನ್ನೂ ಒಳಗೊಂಡ ಎಲ್‌ಪಿ ತರಗತಿ ಶಾಲೆಯಾಯಿತು. ನಂತರ ಅಪ್ಪರ್ ಪ್ರೈಮರಿ, ಹೈಸ್ಕೂಲ್, ಹೈಯರ್ ಸೆಕೆಂಡರಿ, ಪ್ರೀ ಪ್ರೈಮರಿ ಮುಂತಾದ ವಿವಿಧ ಘಟಕಗಳು ಆರಂಭಗೊಂಡವು.

ಶಾಲೆಯ ಆರಂಭದಿಂದಲೂ ಇಂದಿನವರೆಗೆ ಶಾಲೆಯ ಚಟುವಟಿಕೆಗಳಲ್ಲಿ ಹೆಗಲಿಗೆ ಹೆಗಲು ಸೇರಿಸಿ ನಿಂತವರು ಇಲ್ಲಿನ ಜನರು. ಕುತ್ತಿಕೋಲು ಪಂಚಾಯತ್‌ನ ಬಹುಪಾಲು ಜನರು ಈ ಶಾಲೆಯ ಹಳೆ ವಿದ್ಯಾರ್ಥಿಗಳೇ



ಪಠ್ಯ -ಪಠ್ಯೇತರ ವಿಷಯಗಳಲ್ಲಿ ಸಾಧನೆ

-2 ರಿಂದ +2ರ ವರೆಗೆ ಒಂದೇ ಗೂಡಿನಡಿಯಲ್ಲಿ ಮೂರು ಭಾಷೆಗಳಲ್ಲಿ ಶಿಕ್ಷಣ ನಡೆಯುತ್ತಿರುವ ಈ ವಿದ್ಯಾಸಂಸ್ಥೆಯಿಂದ, ಪ್ರತಿವರ್ಷ ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿ ಗಳು ಶಿಕ್ಷಣ ಪಡೆಯುತ್ತಿದ್ದಾರೆ. ಪ್ರಸ್ತುತ ಸುಮಾರು 1200 ವಿದ್ಯಾರ್ಥಿಗಳು ಇಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಶೈಕ್ಷಣಿಕ ಹಾಗೂ ಪಠ್ಯೇತರ ಕ್ಷೇತ್ರಗಳಲ್ಲಿ ಉತ್ತಮ ಸಾಧನೆಗಳನ್ನು ಮಾಡಿರುವ ಈ ಶಾಲೆಯು ಜಿಲ್ಲೆಯ ಪ್ರಮುಖ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾಗಿದೆ.

ಆಗಿದ್ದಾರೆ. ಮುಂದೆ ಶಾಲೆಯೊಂದಿಗಿನ ಸಂಬಂಧ ಸಹಕಾರ ಮುಂದುವರಿಯಲಿ ಎಂದು ಈ ಸಮ್ಮಿಲನ ಏರ್ಪಡಿಸಲಾಗಿದೆ ಎಂದು ಸಂಘಟಕರು ತಿಳಿಸಿದ್ದಾರೆ.

ಪ್ರವಾಸೋದ್ಯಮದ ಸಾಮರ್ಥ್ಯವನ್ನು ಹೆಚ್ಚು ಬಳಸಿಕೊಳ್ಳಬೇಕು: ಜಿಲ್ಲಾಧಿಕಾರಿ



ಕಾಸರಗೋಡು: ಕಾಸರಗೋಡು ಜಿಲ್ಲೆಯ 42ನೇ ವಾರ್ಷಿಕೋತ್ಸವದ ಅಂಗವಾಗಿ ಜಿಲ್ಲಾಡಳಿತ, ಅಕ್ಷರ ಗ್ರಂಥಾಲಯ ಮತ್ತು ಜಿಲ್ಲಾ ಮಾಹಿತಿ ಕಚೇರಿಯ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರ ವಿಶೇಷ ಸಹಯೋಗದೊಂದಿಗೆ ಆಯೋಜಿಸಲಾಗಿದ್ದ ವಿವಿಧ ಕಾರ್ಯಕ್ರಮ ಕಲೆಕ್ಟರೇಟ್ ಪರಿಸರದಲ್ಲಿ ಮಾವಿನ ಗಿಡ ನೆಡುವ ಮೂಲಕ ಶನಿವಾರ ಉದ್ಘಾಟಿಸಲಾಯಿತು.

ನಂತರ ಜಿಲ್ಲಾ ಮಾಹಿತಿ ಕಚೇರಿಯ ಪಿಆರ್ ಚೇಂಬರ್‌ನಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಪ್ರವಾಸೋದ್ಯಮಕ್ಕೆ ಪ್ರಾಮುಖ್ಯತೆ

ಕಾಸರಗೋಡು ಐತಿಹಾಸಿಕ ಮಹತ್ವವುಳ್ಳ ಹಲವು ಸ್ಥಳಗಳನ್ನು ಹೊಂದಿರುವ ಜಿಲ್ಲೆಯಾಗಿದೆ. ಆದರೆ ಅವುಗಳನ್ನು ಸಾಕಷ್ಟು ಪ್ರಾಮುಖ್ಯತೆಯೊಂದಿಗೆ ಪರಿಗಣಿಸಲಾಗಿಲ್ಲ ಎಂದು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಹೇಳಿದರು. ಜಿಲ್ಲೆಯ ಪ್ರವಾಸೋದ್ಯಮ ಸಾಮರ್ಥ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕು ಎಂದರು.

ಸಮಾರಂಭದಲ್ಲಿ ಚುನಾವಣಾ ವಿಭಾಗದ ಉಪ ಕಲೆಕ್ಟರ್ ಎ.ಎನ್.ಗೋಪಕುಮಾರ್ ಅಧ್ಯಕ್ಷತೆ ವಹಿಸಿದ್ದರು.

ಪುಸ್ತಕ ಬಿಡುಗಡೆ

ಸಹಾಯಕ ಅಬಕಾರಿ ಆಯುಕ್ತ ಪಿ.ಅನ್ವರ್ ಸಾದತ್ ಬರೆದ ಪುಸ್ತಕವನ್ನು ಜಿಲ್ಲಾಧಿಕಾರಿ ಕಾರ್ಯಕ್ರಮದಲ್ಲಿ ಬಿಡುಗಡೆಗೊಳಿಸಿದರು. ಎಲ್‌ಎ ವಿಭಾಗದ ಉಪ ಕಲೆಕ್ಟರ್ ಲಿಪು ಎಸ್.ಲಾರೆನ್ಸ್, ಎಲ್‌ಆರ್ ವಿಭಾಗದ ಉಪ ಕಲೆಕ್ಟರ್ ವಿ.ಪಿ.ರಘುಮಣಿ ಮತ್ತು ಕಲೆಕ್ಟರೇಟ್ ಹುಸೂರ್ ಶಿರಸ್ತೇದಾರ ಸತೀಶನ್ ಮಾತನಾಡಿದರು.

ಜಿಲ್ಲಾ ಮಾಹಿತಿ ಅಧಿಕಾರಿ ಎಂ.ಮಧುಸೂದನನ್ ಸ್ವಾಗತಿಸಿ, ಅಕ್ಷರ ಗ್ರಂಥಾಲಯ ಕಾರ್ಯದರ್ಶಿ ಕೆ. ಮುಕುಂದನ್ ವಂದಿಸಿದರು. ವಿದ್ಯಾನಗರ ಸಿವಿಲ್ ಸ್ಟೇಷನ್ ನೌಕರರು ಭಾಗವಹಿಸಿದ್ದರು.

ಎಂಡೋಸಲ್ಫಾನ್ ಪುನರ್ವಸತಿ ಗ್ರಾಮದಲ್ಲಿ 'ಮಳೆಹನಿ' ವಿನೂತನ ಸಹ ಶೈಕ್ಷಣಿಕ ಶಿಬಿರ

ದಿವ್ಯಾಂಗ ಮಕ್ಕಳು-ಪೋಷಕರ ಮಾನಸಿಕ ಯೋಗಕ್ಷೇಮ ವಿಚಾರಿಸಲು ಸಹಕಾರಿ

ಕಾಸರಗೋಡು: ಮುಳಿಯಾರಿನ ಎಂಡೋಸಲ್ಫಾನ್ ಪುನರ್ವಸತಿ ಗ್ರಾಮದಲ್ಲಿ ದಿವ್ಯಾಂಗ ಮಕ್ಕಳು ಮತ್ತು ಅವರ ಪೋಷಕರಿಗೆ ಮಾನಸಿಕ ಯೋಗಕ್ಷೇಮವನ್ನು ಒದಗಿಸುವ ಉದ್ದೇಶದೊಂದಿಗೆ ಸಹಜೀವನ ಸ್ನೇಹ ಗ್ರಾಮ ಪುನರ್ವಸತಿ ಗ್ರಾಮ ಶನಿವಾರ ಆಯೋಜಿಸಿದ್ದ 'ಮಳೆಹನಿ' ಎಂಬ ಒಂದು ದಿನದ ವಿನೂತನ ಸಹ ಶೈಕ್ಷಣಿಕ ಶಿಬಿರವನ್ನು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಉದ್ಘಾಟಿಸಿ ಮಾತನಾಡಿದರು.

ಜಿಲ್ಲಾಧಿಕಾರಿಗಳ ಭೇಟಿ ಮತ್ತು ಉಪಸ್ಥಿತಿಯು ಶಿಬಿರದ ಎಂಡೋಸಲ್ಫಾನ್ ಬಾಧಿತ ಮಕ್ಕಳು ಮತ್ತು ಪೋಷಕರಿಗೆ ಹೆಚ್ಚಿನ ಉತ್ಸಾಹ ಹಾಗೂ ಭರವಸೆ ನೀಡಿತು. ಯೋಜನಾ ಬೆಂಬಲ ಗ್ರೂಪ್‌ನ ಕಾರ್ಯಕಾರಿ ಸಮಿತಿಯ ಸದಸ್ಯೆ ಕೆ.ವಿನೀತಾ ಅಧ್ಯಕ್ಷತೆ ವಹಿಸಿದ್ದರು. ಮುಳಿಯಾರು ಗ್ರಾಮ ಪಂಚಾಯತ್ ಅಧ್ಯಕ್ಷ ಕೆ.ಬಿ.ಮುಹಮ್ಮದ್



ಕುಂಞಿ ಶುಭಹಾರೈಸಿದರು. ಗ್ರಾಮ ಪಂಚಾಯತ್ ಸದಸ್ಯೆ ಮಿಸ್ರಿಯಾ ರಫೀಕ್, ಶಾಸ್ತಾ ಕ್ಲಬ್ ಮುಂಡಕ್ಕೈ ಇದರ ಅಧ್ಯಕ್ಷ ಸುನೀಲ್ ಮಳಿಕಲ್, ಯೋಜನಾ ಬೆಂಬಲ ಗ್ರೂಪ್‌ನ ಕೋಶಾಧಿಕಾರಿ ಕೆ.ಮಣಿಕಂಠನ್, ಕಾರ್ಯಕಾರಿ ಸಮಿತಿ ಸದಸ್ಯೆ ಆದಿರಾ ಸುರೇಂದ್ರನ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಹಜೀವನ ಸ್ನೇಹ ಗ್ರಾಮದ ವ್ಯವಸ್ಥಾಪಕ ಸುರೇಶ ಪುದಿಯಾಡತ್ ಸ್ವಾಗತಿಸಿ, ಸಹಜೀವನ ಸ್ನೇಹ ಗ್ರಾಮ ಸಮಾಜ ಸೇವಕಿ ಸುರಭಿ ಎಸ್.ನಾಯರ್ ವಂದಿಸಿದರು.

ವಿವಿಧ ಕಾರ್ಯಕ್ರಮ

ಉದಯನ್ ಕುಂಡಂಗುಳಿ, ಜಯನ್ ಕಾಡಗಂ ನೇತೃತ್ವದ ರಂಗ ಚಟುವಟಿಕೆ ಮಕ್ಕಳಿಗೆ ಒಂದು ವಿಶಿಷ್ಟ ಅನುಭವವಾಗಿತ್ತು. ಶಿಬಿರದ ಭಾಗವಾಗಿ ಮಕ್ಕಳಿಗಾಗಿ ವಿಶೇಷ ತರಗತಿಗಳು, ಪೋಷಕರಿಗೆ ಅಧಿವೇಶನ-ಚರ್ಚೆಗಳು ನಡೆದವು.

ವಿವಿಧ ಕಾರ್ಯಕ್ರಮ

ಉದ್ಘಾಟನಾ ಸಮಾರಂಭದ ನಂತರ ಶಿಬಿರದಲ್ಲಿ ಮಕ್ಕಳು ಮತ್ತು ಅವರ ಪೋಷಕರಿಗೆ ವಿವಿಧ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಡಿಎಡಬ್ಲ್ಯೂಎಸ್ ರಾಜ್ಯ ಸಮಿತಿ ಸದಸ್ಯ ಎ.ವೇಣುಗೋಪಾಲ್, ಹಿರಿಯ ಸಲಹೆಗಾರರಾದ ವಿಶೇಷ ಶಿಕ್ಷಕಿ ಪಿ.ಎಂ.ಮುಮ್ತಾಜ್, ವಿ.ಶ್ರೀದೇವಿ ಮೊದಲಾದವರು ಚರ್ಚೆಯಲ್ಲಿ ಭಾಗವಹಿಸಿದ್ದರು. ಈ ಕಾರ್ಯಕ್ರಮವನ್ನು ಕೆ.ಆರ್.ವಿನೀತಾ ಕಾರ್ಯಕ್ರಮ ನಿರೂಪಿಸಿದರು. ಯು.ಕೆ.ಶ್ರುತಿ ಸಹಕರಿಸಿದರು.

ಸಮುದ್ರದ ತಂಗಾಳಿಯಲ್ಲಿ ಓಡೋಣ: ಇಂದು 'ಕಾಸರಗೋಡು ಬೀಚ್ ರನ್' ಕಾರ್ಯಕ್ರಮ

ಕಾಸರಗೋಡು: ನೆಲ್ಲಿಕುಂಜೆ ಬೀಚ್‌ನ ಸೌಂದರ್ಯ ಜಗತ್ತಿಗೆ ಪರಿಚಯಿಸಲು, ದೇಶೀಯ ಪ್ರವಾಸೋದ್ಯಮಕ್ಕೆ ಹೊಸ ಉತ್ತೇಜನ ನೀಡಲು ಜಿಲ್ಲಾಡಳಿತ, ಜಿಲ್ಲಾ ಪ್ರವಾಸೋದ್ಯಮ ಪ್ರಚಾರ ಮಂಡಳಿ (ಡಿಟಿಪಿಸಿ) ಮತ್ತು ಕಾಸರಗೋಡು ನಗರಸಭೆಯು ಜಂಟಿಯಾಗಿ ಆಯೋಜಿಸಿರುವ ಕಾಸರಗೋಡು ಬೀಚ್ ರನ್ 2026 ಕಾರ್ಯಕ್ರಮ ಮೇ 24ರಂದು ಸಮುದ್ರದ ತಂಗಾಳಿಯಲ್ಲಿ ಓಡೋಣ ಎಂಬ ಧ್ಯೇಯದೊಂದಿಗೆ ನಡೆಯಲಿದೆ.

ಕಾಸರಗೋಡು ಶಾಸಕ ಕಲ್ಲಟ್ರ ಮಾಹಿನ್ ಹಾಜಿ ಬೀಚ್ ರನ್‌ಗೆ ಚಾಲನೆ ನೀಡಲಿದ್ದಾರೆ. ನಗರಸಭಾ ಅಧ್ಯಕ್ಷೆ ಶಾಹಿನಾ ಸಲೀಂ ಇತರರು ಪಾಲ್ಗೊಳ್ಳಲಿದ್ದಾರೆ.

ಬೀಚ್ ರನ್ ಕಾರ್ಯಕ್ರಮ ಬೆಳಿಗ್ಗೆ 6.30ಕ್ಕೆ ಆರಂಭವಾಗಲಿದೆ. ಓಟವು ನೆಲ್ಲಿಕುಂಜೆ ಲೈಟ್ ಹೌಸ್‌ನಿಂದ ಪ್ರಾರಂಭವಾಗಿ ನೆಲ್ಲಿಕುಂಜೆ ಬೀಚ್, ಕಸಬಾ ಬೀಚ್ ರಸ್ತೆ, ಪುಲಿಮುಟ್ಟು ಮತ್ತು ಮಣಲ್ಪರಪ್ಪು ಮೂಲಕ 6 ಕಿ.ಮೀ.ದೂರ ಕ್ರಮಿಸಿ ಲೈಟ್ ಹೌಸ್‌ನಲ್ಲಿ ಕೊನೆಗೊಳ್ಳಲಿದೆ. ಓಟವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಎಲ್ಲರಿಗೂ ಪದಕ ನೀಡಲಾಗುವುದು. ಓಟದಲ್ಲಿ ಭಾಗವಹಿಸುವವರಿಗೆ ಮಾರ್ಗದುದ್ದಕ್ಕೂ ಉಪಹಾರ, ಕುಡಿಯುವ ನೀರಿನ ವಿತರಣಾ ಕೇಂದ್ರ ಸ್ಥಾಪಿಸಲಾಗಿದೆ.

ಬೀಚ್ ಓಟಕ್ಕೂ ಮುನ್ನ ನೆಲ್ಲಿಕುಂಜೆ ಬೀಚ್‌ನಲ್ಲಿ ನಗರಸಭಾ ಅಧಿಕಾರಿಗಳು , ಡಿಟಿಪಿಸಿ ಸ್ವಯಂ ಸೇವಕರ ನೇತೃತ್ವ ಶುಚಿಗೊಳಿಸುವ ಚಟುವಟಿಕೆಗಳು ಪೂರ್ಣಗೊಂಡಿವೆ. ಆರೋಗ್ಯ ಇಲಾಖೆ, ಪೊಲೀಸ್, ಮೀನುಗಾರಿಕೆ, ಬಂದರು ಇಂಜಿನಿಯರಿಂಗ್, ಕುಟುಂಬಶ್ರೀ ಮತ್ತು ಶುಚಿತ್ವ ಮಿಷನ್ ಸೇರಿದಂತೆ ವಿವಿಧ ಸರಕಾರಿ ಇಲಾಖೆಯ ಸಂಪೂರ್ಣ ಸಹಕಾರದೊಂದಿಗೆ ಬೀಚ್ ರನ್ ಏರ್ಪಡಿಸಲಾಗಿದೆ.

ಸುತ್ತ ಮುತ್ತ

ಪಿಯು ಪರೀಕ್ಷೆ-2ರ ಫಲಿತಾಂಶ ಪ್ರಕಟ: ಜನತಾ ಕಾಲೇಜಿಗೆ ರ್‍ಯಾಂಕ್

ಕುಂದಾಪುರ: 2025–26ನೇ ಸಾಲಿನ ಕರ್ನಾಟಕ ಶಾಲಾ ಶಿಕ್ಷಣ ಇಲಾಖೆ ನಡೆದಿದ ದ್ವಿತೀಯ ಪಿಯುಸಿ ಪರೀಕ್ಷೆ –2ರ ಫಲಿತಾಂಶ ಪ್ರಕಟಗೊಂಡಿದ್ದು, ಹೆಮ್ಮಾಡಿಯ ಜನತಾ ಪಿಯು ಕಾಲೇಜಿನ ವಿದ್ಯಾರ್ಥಿಗಳು ಸಾಧನೆ ಮೆರೆದಿದ್ದಾರೆ. ವಿದ್ಯಾರ್ಥಿಗಳಾದ ಅಕ್ಷತಾ ವೀರಣ್ಣ 597 ಅಂಕ ಗಳಿಸಿ 3ನೇ ರ್‍ಯಾಂಕ್, ದೀಕ್ಷಾ 596 ಅಂಕದೊಂದಿಗೆ 4ನೇ ರ್‍ಯಾಂಕ್, ತನ್ವಿತಾ 595 ಅಂಕದೊಂದಿಗೆ 5ನೇ ರ್‍ಯಾಂಕ್, ಗಗನ್ ಜಿ. 594 ಅಂಕದೊಂದಿಗೆ 6ನೇ ರ್‍ಯಾಂಕ್, ಸ್ಮೃತಿಕಾ 593 ಅಂಕದೊಂದಿಗೆ 7ನೇ ರ್‍ಯಾಂಕ್, ಶ್ರೇಯಸ್ ಪಿ.ಗಾಣಿಗ 591 ರಾಂಕ್ ಪಡೆದು 9ನೇ ರ್‍ಯಾಂಕ್ ಸಾಕ್ಷಿ ಎಸ್. ಪೂಜಾರಿ 591 ಅಂಕದೊಂದಿಗೆ 9ನೇ ರ್‍ಯಾಂಕ್, ಸನ್ಮಿತಾ 590 ಅಂಕ ಗಳಿಸಿ 10ನೇ ರ್‍ಯಾಂಕ್, ಶ್ರದ್ಧಾ ಎಸ್.ಎಂ. 590 ಅಂಕ ಗಳಿಸಿ 10ನೇ ರ್‍ಯಾಂಕ್, ಸ್ಪಂದನಾ ಪಿ.ಎಸ್. 590 ಅಂಕದೊಂದಿಗೆ 10ನೇ ರ್‍ಯಾಂಕ್, ಅನುಷಾ ಪೂಜಾರಿ 590 ಅಂಕಗಳೊಂದಿಗೆ 10ನೇ ರ್‍ಯಾಂಕ್ ಪಡೆದಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಆಡಳಿತ ಮಂಡಳಿ, ಪ್ರಾಂಶುಪಾಲರು, ಬೋಧಕ, ಬೋಧಕೇತರ ಸಿಬ್ಬಂದಿಗಳು ಅಭಿನಂದನೆ ಸಲ್ಲಿಸಿದ್ದಾರೆ.

ಮೇ 24ರಂದು ಮಹಿಳಾ ಸ್ಪಂದನ ಸಮಾವೇಶ

ಕುಂದಾಪುರ: ಜಿಲ್ಲಾ ಚೈತನ್ಯ ಸ್ತ್ರೀ ಶಕ್ತಿ ಒಕ್ಕೂಟ ಉಡುಪಿ, ಜಿಲ್ಲಾ ಮಹಿಳಾ ಮಂಡಲಗಳ ಒಕ್ಕೂಟ ಉಡುಪಿ, ಉಡುಪಿ ಜಿಲ್ಲಾ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಘ ಉಡುಪಿ ಹಾಗೂ ವಿವಿಧ ಸಂಘಟನೆಗಳ ಸಹಯೋಗದೊಂದಿಗೆ ಮಹಿಳಾ ಸ್ಪಂದನ ಸಮಾವೇಶ ತೆಕ್ಕಟ್ಟೆಯ ದುರ್ಗಾಪರಮೇಶ್ವರಿ ಕಲ್ಯಾಣ ಮಂಟಪದಲ್ಲಿ ಮೇ 24ರಂದು ಸಂಜೆ 3 ಗಂಟೆಗೆ ನಡೆಯಲಿದೆ. ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಜಿಪಂ ಮಾಜಿ ಸದಸ್ಯೆ ಗೀತಾಂಜಲಿ ಸುವರ್ಣ ಮತ್ತು ಶ್ರೀಲತಾ ಸುರೇಶ ಶೆಟ್ಟಿ, ಕೋಟ ಶ್ರೀ ಅಮೃತೇಶ್ವರಿ ದೇವಸ್ಥಾನದ ಆಡಳಿತ ಧರ್ಮದರ್ಶಿ ಆನಂದ ಸಿ.ಕುಂದರ್, ಶಿವರಾಮ ಶೆಟ್ಟಿ ಮಲ್ಯಾಡಿ ಮೊದಲಾದವರು ಪಾಲ್ಗೊಳ್ಳಲಿದ್ದಾರೆ ಎಂದು

ಮೊದಲನೇ ಪುಟದಿಂದ

ಭರ್ಜರಿ!

ಆದ್ದರಿಂದ ಅವುಗಳ ಬೇಡಿಕೆ ವಿಪರೀತವಾಗಿ ಹೆಚ್ಚಿದೆ. ಆದರೆ ಅವುಗಳ ಗುಣಮಟ್ಟ ಎಷ್ಟಿದೆ ಎಂಬುದನ್ನು ಖಚಿತವಾಗಿ ಹೇಳಲು ಸಾಧ್ಯವಿಲ್ಲ ಎಂದು ನಗರದ ವ್ಯಾಪಾರಿಯೋರ್ವರು ತಿಳಿಸಿದ್ದಾರೆ. ಉದ್ದಿಮೆ ವಲಯದಲ್ಲಿ ಕೇರಳವು ಮುಂಚೂಣಿಯಲ್ಲಿದೆ ಎಂದು ಹೇಳಲಾಗುತ್ತಿದ್ದರೂ ರಾಜ್ಯದಲ್ಲಿ ತಯಾರಿಸಿದ ಯಾವುದೇ ಕಲಿಕೋಪಕರಣಗಳು ಮಾರುಕಟ್ಟೆಯಲ್ಲಿ ಕಂಡುಬರುತ್ತಿಲ್ಲ ಎಂಬ ಆರೋಪ ಕೇಳಿಬರುತ್ತಿದೆ. ನಗರದಲ್ಲಿ ಸಮವಸ , ಬ್ಯಾಗ್ ಹಾಗೂ ಕೊಡೆ ವ್ಯಾಪಾರ ಭರದಿಂದ ನಡೆಯುತ್ತಿದೆ. 300 ರೂ.ನಿಂದ ತೊಡಗಿ 2000 ರೂ. ವರೆಗೆ ವಿವಿಧ ದರದ ಸ್ಕೂಲ್ ಬ್ಯಾಗ್‌ಗಳನ್ನು ಮಾರಾಟಕ್ಕೆ ಇಡಲಾಗಿದೆ.

ಪೊಲೀಸರ ವಶ

ಈ ಹಿನ್ನೆಲೆ ಉಡುಪಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹರಿರಾಂ ಶಂಕರ್ ಅವರ ನಿರ್ದೇಶನದಲ್ಲಿ ಕುಂದಾಪುರ ಡಿವೈಎಸ್ಪಿ ಎಚ್.ಡಿ. ಕುಲಕರ್ಣಿ, ನಗರ ಠಾಣೆ ಇನ್ಸ್‌ಪೆಕ್ಟರ್ ಜಯರಾಮ ಗೌಡ ಅವರ ಮಾರ್ಗದರ್ಶನದಲ್ಲಿ ಕುಂದಾಪುರ ಟ್ರಾಫಿಕ್ ಠಾಣೆ ಪಿಎಸ್‌ಐ ಅನೂಪ್ ನಾಯಕ್, ಸುಧಾ ಪ್ರಭು ಹಾಗೂ ಸಿಬ್ಬಂದಿಗಳ ತಂಡ ಸಂಚಾರ ಠಾಣಾ ವ್ಯಾಪ್ತಿಯ ವಿವಿದೆಡೆ ಕಾರ್ಯಾಚರಣೆ ನಡೆಸಿ ಸಂಚಾರ ನಿಯಮ ಉಲ್ಲಂಘಿಸಿದ ದೂರುಗಳಿರುವ ದ್ವಿಚಕ್ರ ವಾಹನಗಳನ್ನು ಪತ್ತೆ ಮಾಡಿ ವಶಕ್ಕೆ ಪಡೆದಿದ್ದಾರೆ. ರಸ್ತೆ ಅಪಘಾತಗಳು ಹೆಚ್ಚುತ್ತಿದ್ದು ಸಂಚಾರ ನಿಯಮ ಪಾಲನೆ ಅಗತ್ಯವಾಗಿದೆ. ಈ ಉದ್ದೇಶದಿಂದ ದ್ವಿಚಕ್ರ, ಘನ ಹಾಗೂ ಲಘು ವಾಹನಗಳ ಮೇಲೆ ನಿಗಾವಹಿಸಲಾಗಿದೆ. ಸಾರ್ವಜನಿಕ ರಸ್ತೆಯಲ್ಲಿ ಅತೀವೇಗ, ನಿರ್ಲಕ್ಷ್ಯತನ ವಹಿಸುವ ವಾಹನ ಸವಾರರ ಪತ್ತೆ ಮಾಡಿ ಕಾನೂನು ಚೌಕಟ್ಟಿನಲ್ಲಿ ಕ್ರಮಜರುಗಿಸುವ ಕಾರ್ಯಾಚರಣೆ ಮುಂದುವರೆಯಲಿದ್ದು ಪ್ರಸ್ತುತ ವಶಪಡಿಸಿಕೊಂಡ ಬೈಕ್‌ಗಳಿಗೆ ಸಂಬಂಧಿತ ದಾಖಲೆಗಳು ಹಾಗೂ ಸವಾರರ ಚಾಲನ ಪರವಾನಿಗೆ ಸಹಿತ ಲೋಪದೋಷಗಳನ್ನಾಧರಿಸಿ ಪ್ರಕರಣ ದಾಖಲಿಸಲಾಗುತ್ತದೆ ಎಂದು ಕುಂದಾಪುರ ಸಂಚಾರ ಠಾಣೆ ಪೊಲೀಸ್ ಉಪನಿರೀಕ್ಷಕ ಅನುಪ್ ನಾಯಕ್ ತಿಳಿಸಿದ್ದಾರೆ.

ಉಡುಪಿಯಲ್ಲಿ ಬಡ ರೋಗಿಗಳಿಗೆ ಸಿಗುತ್ತಿಲ್ಲ ಔಷಧಿಗಳು, ಚುಚ್ಚುಮದ್ದುಗಳು | ಮುಚ್ಚಿದ ಕ್ಯಾಂಟಿನ್

ಮೂಲಸೌಲಭ್ಯ ವಂಚಿತ ಜಿಲ್ಲಾಸ್ಪತ್ರೆಗೆ ಬೇಕಿದೆ ತುರ್ತು ಚಿಕಿತ್ಸೆ!

ಉಡುಪಿ: ಉಡುಪಿಯ ಅಜ್ಜರಕಾಡಿನಲ್ಲಿರುವ ಜಿಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ದಿನದಿಂದ ದಿನಕ್ಕೆ ಮೂಲಭೂತ ಸಮಸ್ಯೆಗಳು ಹೆಚ್ಚಾಗುತ್ತಿದ್ದು, ಚಿಕಿತ್ಸೆಗಾಗಿ ಬರುವ ಬಡ ರೋಗಿಗಳು ಹಾಗೂ ಸಾರ್ವಜನಿಕರು ತೀವ್ರ ಸಂಕಷ್ಟ ಅನುಭವಿಸುವಂತಾಗಿದೆ.

ಉಚಿತ ಮತ್ತು ಗುಣಮಟ್ಟದ ಚಿಕಿತ್ಸೆಯ ಭರವಸೆಯೊಂದಿಗೆ ಬರುವ ಜನಸಾಮಾನ್ಯರಿಗೆ ಇಲ್ಲಿನ ಅವ್ಯವಸ್ಥೆಗಳು ತಲೆನೋವಾಗಿ ಪರಿಣಮಿಸಿವೆ ಎಂಬ ದೂರುಗಳು ಸಾರ್ವಜನಿಕ ವಲಯದಿಂದ ವ್ಯಾಪಕವಾಗಿ ಕೇಳಿಬರುತ್ತಿವೆ.

ಈ ಕುರಿತು ಉಡುಪಿ ಜಿಲ್ಲಾ ನಾಗರಿಕ ಸಮಿತಿಯು ಉಡುಪಿ ಜಿಲ್ಲಾಡಳಿತ ಹಾಗೂ ಆರೋಗ್ಯ ಇಲಾಖೆಯ ನಿರ್ಲಕ್ಷ್ಯದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದೆ.

ಬಡವರಿಗಿಲ್ಲದ 'ಉಚಿತ' ಭಾಗ್ಯ

ಉಡುಪಿ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ಬಡ ರೋಗಿಗಳಿಗೆ ಅಗತ್ಯವಿರುವ ಪ್ರಮುಖ ಔಷಧಿಗಳು ಹಾಗೂ ಚುಚ್ಚುಮದ್ದುಗಳು ಸರಿಯಾದ ಸಮಯಕ್ಕೆ ಲಭ್ಯವಾಗುತ್ತಿಲ್ಲ ಎನ್ನುವುದು ಸಾರ್ವಜನಿಕರ ಪ್ರಮುಖ ಆರೋಪವಾಗಿದೆ. ಆಸ್ಪತ್ರೆಯ ವೈದ್ಯರು



ಬರೆದುಕೊಡುವ ಕೆಲವು ಅತ್ಯಗತ್ಯ ಹಾಗೂ ದುಬಾರಿ ಔಷಧಿಗಳು ಸರ್ಕಾರಿ ಫಾರ್ಮಸಿಯಲ್ಲಿ ಸಿಗುತ್ತಿಲ್ಲ. ಇದರಿಂದಾಗಿ ಅನಿವಾರ್ಯವಾಗಿ ಬಡ ರೋಗಿಗಳು ಹೊರಗಿನ ಖಾಸಗಿ ಮೆಡಿಕಲ್ ಅಂಗಡಿಗಳಿಂದ ಸಾವಿರಾರು ರೂಪಾಯಿ ಖರ್ಚು ಮಾಡಿ ಔಷಧಿ ಖರೀದಿಸಬೇಕಾದ ಪರಿಸ್ಥಿತಿ ಎದುರಾಗಿದೆ. 'ಸರ್ಕಾರದ ಆಸ್ಪತ್ರೆಯಲ್ಲಿ ಸಂಪೂರ್ಣ ಉಚಿತ ಚಿಕಿತ್ಸೆ ಸಿಗಬೇಕಾದರೆ, ಅಗತ್ಯವಿರುವ ಎಲ್ಲಾ ಔಷಧಿಗಳು ಆಸ್ಪತ್ರೆಯ ಔಷಧಿ ಕೇಂದ್ರದಲ್ಲೇ ಲಭ್ಯವಾಗುವಂತೆ ಆರೋಗ್ಯ ಇಲಾಖೆ ತಕ್ಷಣ ಕ್ರಮ ಕೈಗೊಳ್ಳಬೇಕು' ಎಂದು ಉಡುಪಿ ಜಿಲ್ಲಾ ನಾಗರಿಕ ಸಮಿತಿಯ ಸಂಚಾಲಕ ನಿತ್ಯಾನಂದ ಒಳಕಾಡು ಹಾಗೂ ಸಹಸಂಚಾಲಕ ತಾರಾನಾಥ್ ಮೇಸ್ತ ಶಿರೂರು ಜಿಲ್ಲಾಡಳಿತವನ್ನು ಬಲವಾಗಿ ಆಗ್ರಹಿಸಿದ್ದಾರೆ.

ರೋಗಿಗಳ ಪರದಾಟ!

ಜಿಲ್ಲಾಸ್ಪತ್ರೆಯ ಆವರಣದಲ್ಲಿ ಈ ಹಿಂದೆ ಸಾರ್ವ ಜನಿಕರಿಗೆ ಕಡಿಮೆ ದರದಲ್ಲಿ ಊಟ-ತಿಂಡಿ ಒದಗಿಸುತ್ತಿದ್ದ ಕ್ಯಾಂಟಿನ್ ಕಳೆದ ಹಲವು ತಿಂಗಳುಗಳಿಂದ ಮುಚ್ಚಲ್ಪಟ್ಟಿದೆ. ಆಸ್ಪತ್ರೆಯಲ್ಲಿ ಒಳರೋಗಿಗಳಾಗಿ ದಾಖಲಾದವರಿಗೆ ಸರ್ಕಾರದಿಂದ ಉಚಿತ ಆಹಾರ ದೊರೆಯುತ್ತಿದ್ದರೂ, ಅವರ ಜೊತೆಗಿರುವ ಸಂಬಂಧಿಕರು ಮತ್ತು ಆರೈಕೆದಾರರು ಊಟ, ಉಪಹಾರ ಮತ್ತು ಕುಡಿಯುವ ನೀರಿಗಾಗಿ ಆಸ್ಪತ್ರೆಯಿಂದ ದೂರದ ಹೋಟೆಲ್‌ಗಳಿಗೆ ಅಲೆಯಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಆಸ್ಪತ್ರೆ ಆವರಣದಲ್ಲಿ ಪರ್ಯಾಯ ಕ್ಯಾಂಟಿನ್ ವ್ಯವಸ್ಥೆ ಇಲ್ಲದ ಕಾರಣ, ಆರ್ಥಿಕವಾಗಿ ಹಿಂದುಳಿದ ಅನೇಕರು ಹಸಿದ ಹೊಟ್ಟೆಯಲ್ಲೇ ಆಸ್ಪತ್ರೆ ಕಾರಿಡಾರ್‌ಗಳಲ್ಲಿ ಕಳೆಯುವಂತಾಗಿದೆ.

ಜಿಲ್ಲಾಡಳಿತಕ್ಕೆ ಮನವಿ

ಬಡ ರೋಗಿಗಳಿಗೆ ಅನುಕೂಲವಾಗುವಂತೆ ಆಸ್ಪತ್ರೆಯ ಆವರಣದಲ್ಲೇ ಎಲ್ಲಾ ಅಗತ್ಯ ಔಷಧಿ ಮತ್ತು ಚುಚ್ಚುಮದ್ದುಗಳು ಸಿಗುವಂತಾಗಬೇಕು. ಜೊತೆಗೆ ಮುಚ್ಚಿ ಹೋಗಿರುವ ಕ್ಯಾಂಟಿನ್ ವ್ಯವಸ್ಥೆ ತಕ್ಷಣವೇ ಮರು ಪ್ರಾರಂಭಿಸಬೇಕು ಹಾಗೂ ಗುಣಮುಖರಾದ ನಿರ್ಗತಿಕರನ್ನು ಪುನರ್ವಸತಿ ಕೇಂದ್ರಗಳಿಗೆ ಸ್ಥಳಾಂತರಿಸಲು ಜಿಲ್ಲಾಡಳಿತ ಕ್ರಮ ಕೈಗೊಳ್ಳಬೇಕು ಎಂದು ಉಡುಪಿ ಜಿಲ್ಲಾ ನಾಗರಿಕ ಸಮಿತಿ ತೀವ್ರವಾಗಿ ಒತ್ತಾಯಿಸಿದೆ.

ನಿರ್ಗತಿಕರ ಪುನರ್ವಸತಿಗೆ ಇಲ್ಲ ಸೂಕ್ತ ವ್ಯವಸ್ಥೆ

ಉಡುಪಿ ನಗರದ ವಿವಿಧ ಸಾರ್ವಜನಿಕ ಸ್ಥಳಗಳಲ್ಲಿ ಅಸಹಾಯಕ ಹಾಗೂ ರೋಗಗ್ರಸ್ತ ಸ್ಥಿತಿಯಲ್ಲಿ ಪತ್ತೆಯಾಗುವ ಅಪರಿಚಿತ ನಿರ್ಗತಿಕರನ್ನು 108 ಆ್ಯಂಬುಲೆನ್ಸ್ ಸಿಬ್ಬಂದಿ ಹಾಗೂ ಸ್ಥಳೀಯ ಸಮಾಜ ಸೇವಕರು ಮಾನವೀಯತೆಯ ಆಧಾರದ ಮೇಲೆ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗುತ್ತಿದೆ. ಆದರೆ, ಇಲ್ಲಿ ಸೂಕ್ತ ಚಿಕಿತ್ಸೆ ಪಡೆದು ಸಂಪೂರ್ಣ ಗುಣಮುಖರಾದ ಬಳಿಕವೂ ಇಂತಹ ನಿರ್ಗತಿಕರನ್ನು ನೋಡಿಕೊಳ್ಳಲು ಯಾರೂ ಇಲ್ಲದ ಕಾರಣ ಅವರು ಆಸ್ಪತ್ರೆಯ ಆವರಣ ಹಾಗೂ ವಾರ್ಡ್‌ಗಳಲ್ಲೇ ಉಳಿದುಕೊಳ್ಳುತ್ತಿದ್ದಾರೆ. ಇದರಿಂದಾಗಿ ಆಸ್ಪತ್ರೆಯ ಬೆಡ್‌ಗಳ ಕೊರತೆ ಉಂಟಾಗುತ್ತಿದ್ದು ಚಿಕಿತ್ಸೆ ದಾಖಲಾಗಲು ಇತರ ರೋಗಿಗಳಿಗೆ ತೊಂದರೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಗುಣಮುಖರಾದ ರೋಗಿಗಳನ್ನು ತಕ್ಷಣ ಪುನರ್ವಸತಿ ಕೇಂದ್ರಗಳಿಗೆ ಸ್ಥಳಾಂತರಿಸಲು ಜಿಲ್ಲಾಡಳಿತ ಮತ್ತು ಆರೋಗ್ಯ ಇಲಾಖೆ ಜಂಟಿಯಾಗಿ ರೂಪಿಸಬೇಕೆಂದು ನಾಗರಿಕ ಸಮಿತಿ ಮನವಿ ಮಾಡಿದೆ.

ಸಾಲಿಗ್ರಾಮ ಬ್ರಾಹ್ಮಣ ಮಹಾಸಭಾ: ಸಹಸ್ರ ಪ್ರದಕ್ಷಿಣ ನಮಸ್ಕಾರಕ್ಕೆ ಚಾಲನೆ



ಕೋಟ: ಬ್ರಾಹ್ಮಣ ಮಹಾಸಭಾ ಸಾಲಿಗ್ರಾಮ ವಲಯದ ವತಿಯಿಂದ ಸಾಲಿಗ್ರಾಮ ಶ್ರೀ ಗುರು ನರಸಿಂಹ ದೇವರ ಸನ್ನಿಧಿಯಲ್ಲಿ ಅಧಿಕ ಜ್ಯೇಷ್ಠ ಮಾಸದ ಪ್ರಯುಕ್ತ ವಿಶೇಷವಾಗಿ ಹಮ್ಮಿಕೊಂಡಿದ್ದ ಸಹಸ್ರ ಪ್ರದಕ್ಷಿಣ ನಮಸ್ಕಾರ ಕಾರ್ಯಕ್ರಮಕ್ಕೆ ಶ್ರೀ ಗುರು ನರಸಿಂಹ ದೇವಸ್ಥಾನದ ಆಡಳಿತ ಮಂಡಳಿಯ ಉಪಾಧ್ಯಕ್ಷ ಸಿ. ಚಂದ್ರಶೇಖರ ಉಪಾಧ್ಯ ಚಾಲನೆ ನೀಡಿದರು.

ಶ್ರೀ ಗುರು ನರಸಿಂಹ ದೇವಸ್ಥಾನದ ಆಡಳಿತ ಮಂಡಳಿಯ ಸಹಕಾರದೊಂದಿಗೆ ನಡೆಯುತ್ತಿರುವ ಈ ಸಹಸ್ರ ಪ್ರದಕ್ಷಿಣ ನಮಸ್ಕಾರದಲ್ಲಿ ದೇವಸ್ಥಾನದ ಆಡಳಿತ ಮಂಡಳಿಯ ಸದಸ್ಯ ಕೆ. ತಾರಾನಾಥ ಹೊಳ್ಳ, ಪ್ರಧಾನ ಅರ್ಚಕ ಪಿ. ಜನಾರ್ದನ ಅಡಿಗ, ಬ್ರಾಹ್ಮಣ ಮಹಾಸಭಾದ ಗೌರವಾಧ್ಯಕ್ಷ ಎಂ.ಶಿವರಾಮ ಉಡುಪ, ಅಧ್ಯಕ್ಷ ಪಟ್ಟಾಭಿರಾಮ ಸೋಮಯಾಜಿ, ಉಪಾಧ್ಯಕ್ಷ ಸಿ. ಸುಬ್ರಾಯ ಉರಾಳ, ಕೋಶಾಧಿಕಾರಿ ನಾಗರಾಜ ಉಪಾಧ್ಯ, ಶ್ರೀ ದೇವಳದ ಸಿಬ್ಬಂದಿಗಳು, ವಲಯದ ಹೆಚ್ಚಿನ ಮಹಿಳಾ ಸದಸ್ಯರು, ಗ್ರಾಮ ಪ್ರತಿನಿಧಿಗಳು ಉಪಸ್ಥಿತರಿದ್ದರು. ಸಭಾದ ಕಾರ್ಯದರ್ಶಿ ಕೆ. ರಾಜಾರಾಮ ಐತಾಳ ಕಾರ್ಯಕ್ರಮದ ಔಚಿತ್ಯದ ಕುರಿತು ಮಾಹಿತಿ ನೀಡಿ, ಅಧಿಕ ಜ್ಯೇಷ್ಠ ಮಾಸದ ಪ್ರಯುಕ್ತ ಲೋಕಕಲ್ಯಾಣಕ್ಕಾಗಿ ನಡೆಸುತ್ತಿರುವ ಈ 'ಸಹಸ್ರ ಪ್ರದಕ್ಷಿಣೆ ನಮಸ್ಕಾರ' ಮುಂದಿನ ಮೂರು ಶನಿವಾರಗಳಂದು ಪೂರ್ವಾಹ್ನ 8ರಿಂದ 9ರ ವರೆಗೆ ಜರುಗಲಿದ್ದು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಸಮಾಜ ಬಾಂಧವರು ಭಾಗವಹಿಸುವಂತೆ ವಿನಂತಿಸಿದರು.

ವಿದ್ಯಾರ್ಥಿಗಳಿಂದ ಸೌರಶಕ್ತಿ ಚಾಲಿತ ನೀರು ಶುದ್ಧೀಕರಣ ವ್ಯವಸ್ಥೆ ಅಭಿವೃದ್ಧಿ



ಶಿರ್ವ: ಬಂಟಕಲ್ಲು ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾವಿದ್ಯಾಲಯದ ವಿದ್ಯುನ್ಮಾನ ಮತ್ತು ಸಂವಹನ ವಿಭಾಗದ ಅಂತಿಮ ವರ್ಷದ ವಿದ್ಯಾರ್ಥಿಗಳಾದ ಸೃಜನ್, ಶರಣ್ ಧೋಂಡ್ಯ, ಸುರೇಶ್ ನಾಯಕ್ ಮತ್ತು ಉಜ್ವಲ್ ಯು ನಾಯಕ್ ಇವರು ವಿದ್ಯುನ್ಮಾನ ಮತ್ತು ಸಂವಹನ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಜಯಶ್ರೀ ಎಂ. ಮತ್ತು ಶಶಿಕಲಾ ಆರ್. ಅವರ ಮಾರ್ಗದರ್ಶನದಲ್ಲಿ ಹಳ್ಳಿಗಳಲ್ಲಿ ಸೌರಶಕ್ತಿ ಚಾಲಿತ ನೀರು ಶುದ್ಧೀಕರಣ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಿದ್ದಾರೆ.

ಈ ವ್ಯವಸ್ಥೆಯು ಸೂರ್ಯನ ಬೆಳಕನ್ನು ವಿದ್ಯುತ್ ಶಕ್ತಿಯನ್ನಾಗಿ ಪರಿವರ್ತಿಸಲು ದ್ಯುತಿ ವಿದ್ಯುಜ್ಜನಕ ಫಲಕವನ್ನು ಬಳಸುತ್ತದೆ, ಇದು ಬ್ಯಾಟರಿಯನ್ನು ಏಕಕಾಲದಲ್ಲಿ ಚಾರ್ಜ್ ಮಾಡುವಾಗ ಡಿಸಿ ಪಂಪ್‌ಗೆ ಶಕ್ತಿಯನ್ನು ನೀಡುತ್ತದೆ. ಇದು ಕಡಿಮೆ ಸೂರ್ಯನ ಬೆಳಕಿನಲ್ಲಿಯುಸಹಕಾರ್ಯಾಚರಣೆಯನ್ನು ನಡೆಸುತ್ತದೆ. ಇದು ನೀರಿನಲ್ಲಿರುವ ಕಲ್ಮಶಗಳು, ವಾಸನೆ, ಬಣ್ಣ, ಕರಗಿದ ಮಾಲಿನ್ಯಕಾರಕಗಳು ಮತ್ತು ಹಾನಿಕಾರಕ ಸೂಕ್ಷ್ಮಜೀವಿಗಳನ್ನು ಪರಿಣಾಮಕಾರಿಯಾಗಿ ತೆಗೆದುಹಾಕಲು ಬಹು ಹಂತದ ಶೋಧನಾ ಪ್ರಕ್ರಿಯೆಯನ್ನು ಬಳಸಿಕೊಳ್ಳುತ್ತದೆ. ಕಡಿಮೆ ವಿದ್ಯುತ್ ಬಳಕೆ ಮತ್ತು ಕಡಿಮೆ ನಿರ್ವಹಣಾ ವೆಚ್ಚವನ್ನು ಹೊಂದಿರುವ ಈ ವ್ಯವಸ್ಥೆಯು ಸೀಮಿತ ಮೂಲ ಸೌಕರ್ಯವನ್ನು ಹೊಂದಿರುವ ಹಳ್ಳಿಗಳಿಗೆ ಸೂಕ್ತವಾಗಿದೆ. ಈ ಯೋಜನೆಯು ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯಿಂದ ಅನುದಾನವನ್ನು ಪಡೆದಿದೆ.

ಮೂಡಗಲ್ಲು ಕ್ಷೇತ್ರಕ್ಕೆ ಶ್ರೀ ಸಾಯಿ ಈಶ್ವರ್ ಗುರೂಜಿ ತ್ರಿಶೂಲ, ಡಮರು ಸಮರ್ಪಣೆ



ಕುಂದಾಪುರ: ಶ್ರೀ ಕೇಶವನಾಥೇಶ್ವರ ದೇವಸ್ಥಾನ ಮೂಡಗಲ್ಲು ಕೆರಾಡಿ ಇಲ್ಲಿಗೆ ಶ್ರೀ ಕ್ಷೇತ್ರ ಶಂಕರಪುರ ಏಕ ಜಾತಿ ಧರ್ಮ ಪೀಠದ ಪೀಠಾಧ್ಯಕ್ಷ ಶ್ರೀ ಸಾಯಿ ಈಶ್ವರ್ ಗುರೂಜಿ ಅವರು ಬುಧವಾರ ಭೇಟಿ ನೀಡಿ, ಶ್ರೀದೇವರ ದರುಶನ ಪಡೆದು ಪೂಜೆ ಸಲ್ಲಿಸಿದರು.

ಶ್ರೀ ಕೇಶವನಾಥೇಶ್ವರ ದೇವರಿಗೆ ತ್ರಿಶೂಲ ಹಾಗೂ ಡಮರುಗ ಸಮರ್ಪಿಸಿ, ಶ್ರೀ ಕ್ಷೇತ್ರ ಶಂಕರಪುರ ದ್ವಾರಕಾಮಯಿ ಏಕಜಾತಿ ಧರ್ಮ ಪೀಠದ ಪೀಠಾಧ್ಯಕ್ಷರ ಶ್ರೀ ಸಾಯಿ ಈಶ್ವರ್ ಗುರೂಜಿ ಮಾತನಾಡಿ, ಸಮಸ್ತ ಹಿಂದೂಗಳ ಮನಸ್ಸು ಒಂದಾಗಬೇಕು ಎಲ್ಲಾ ಹಿಂದೂಗಳ ರಕ್ಷಣೆಯಾಗಬೇಕು. ಸನಾತನದ ಧರ್ಮದ ರಕ್ಷಣೆಯಾಗಬೇಕು ಎನ್ನುವ ಮಹಾ ಸಂಕಲ್ಪ ಇಟ್ಟುಕೊಂಡು ಕೇಶವನಾಥೇಶ್ವರ ದೇವರಿಗೆ ತ್ರಿಶೂಲ ಸಮರ್ಪಣೆ ಮಾಡಿದ್ದೇವೆ. ಈ ಸನಾತನ ಭೂಮಿಗೆ ಸೂರ್ಯ-ಚಂದ್ರ ಇರುವ ತನಕ ಶಾಶ್ವತವಾಗಿರಲಿ ಎಂದರು.

ಶ್ರೀ ಕೇಶವನಾಥೇಶ್ವರ ದೇವಸ್ಥಾನ ಮೂಡಗಲ್ಲು ಅನುವಂಶಿ ಧರ್ಮದರ್ಶಿ ರಾಘವೇಂದ್ರ ಕಾರಂತ್, ಶಂಕರಪುರ ಮಠದ ಭಕ್ತರಾದ ಗಜೇಂದ್ರ ಎಸ್ ಬೇಲೆಮನೆ, ನಾಗರಾಜ್ ಪೂಜಾರಿ ಹೇರೂರು, ತೊಕ್ಕೊಟ್ಟಿನ ಶ್ರೀ ಸಾಯಿ ಪರಿವಾರ್ ಸೇವಾ ಟ್ರಸ್ಟ್ ನ ಸ್ಥಾಪಕ ಪ್ರವೀಣ್ ಎಸ್. ಕುಂಪಲ, ಪುರುಷೋತ್ತಮ ಕಲ್ಲಾಪು, ಟ್ರಸ್ಟಿಗಳಾದ ನರೇಶ್ ಚೌಟ ಮುಳಿಹಿತ್ಲು, ಗಣೇಶ್ ಪಂಡಿತ್, ಪ್ರಶಾಂತ್ ಗಟ್ಟಿ ಕಾಯಂಗಳ, ಸೇವಕರುಗಳಾದ ಪ್ರವೀಣ್ ಮೆಸ್ಕಾಂ, ಶವಿತ್ ಉಚ್ಚಿಲ್, ಕರ್ನಾಟಕ ರಾಜ್ಯ ವಿಶ್ವಕರ್ಮ ಯುವಕ ಸಂಘದ ಜಿಲ್ಲಾಧ್ಯಕ್ಷ ಎಚ್. ಸುಶಾಂತ್ ಆಚಾರ್ ಬೈಂದೂರು ಮತ್ತಿತರರು ಇದ್ದರು.

ಕಾರ್ಕಳ ಆಶಯ ವಿವಿಧೋದ್ದೇಶ ಸಹಕಾರಿ ಸಂಘದ 'ಗ್ರಾಹಕರ ಸಮ್ಮಿಲನ'



ಕಾರ್ಕಳ: ಆಶಯ ಸೊಸೈಟಿ ಎಲ್ಲರ ಆಶಯ ಈಡೇರಿಸುವ ಸಂಸ್ಥೆಯಾಗಿದೆ. ಸಾಲ ಪಡೆದವರು ಅಷ್ಟೇ ಬದ್ಧತೆಯಿಂದ ಸಾಲ ತೀರಿಸುವ ಗುಣ ಹೊಂದಬೇಕು. ಆಗ ಸಂಘವು ಕೂಡ ಬೆಳೆಯುತ್ತದೆ. ವಹಿವಾಟು ಬೆಳೆದಾಗ ಸಮಾಜದಲ್ಲಿ ಉದ್ಯೋಗ ಸೃಷ್ಟಿಯಾಗುತ್ತದೆ ಎಂದು ಜ್ಞಾನಸುಧಾ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ. ಸುಧಾಕರ್ ಶೆಟ್ಟಿ ಹೇಳಿದರು.

ಅವರು ಆಶಯ ವಿವಿಧೋದ್ದೇಶ ಸಹಕಾರಿ ಸಂಘದ ಸ್ಥಳಾಂತರ ಕಾರ್ಯಕ್ರಮದ ಪ್ರಯುಕ್ತ ಕಾರ್ಕಳದ ಫೈಮ್ ಸಿಟಿ ಸೆಂಟರ್‌ನಲ್ಲಿ ಶುಕ್ರವಾರ ನಡೆದ ಗ್ರಾಹಕರ ಸಮ್ಮಿಲನ ಕಾರ್ಯಕ್ರಮದಲ್ಲಿ ಮಾತನಾಡಿ, ಆಶಯ ಸಂಸ್ಥೆಯೂ ಎತ್ತರಕ್ಕೇರಲಿ ಎನ್ನುವ ಆಶಯ ವ್ಯಕ್ತಪಡಿಸಿದರು.

ಸಂಘದ ಅಧ್ಯಕ್ಷ ಸುವ್ರತ್ ಕುಮಾರ್ ಮಾತನಾಡಿ, ಯಾವುದೇ ಹಣಕಾಸು ಸಂಸ್ಥೆ ಸದೃಢವಾಗಿ ಮುನ್ನಡೆಯಬೇಕಾದರೆ ಸಮರ್ಥ ಆಡಳಿತ ಮಂಡಳಿ ದಕ್ಷತೆ ಹಾಗೂ ಬದ್ಧತೆಯಿಂದ ಕಾರ್ಯ ನಿರ್ವಹಿಸಬೇಕು. ಇಂದು ಸಂಸ್ಥೆ ಸುಮಾರು 3 ಸಾವಿರಕ್ಕೂ ಅಧಿಕ ಸದಸ್ಯರನ್ನು ಒಳಗೊಂಡಿದ್ದು, ಕಳೆದ 2022ರಲ್ಲಿ 40 ಕೋಟಿ ಇದ್ದ ವಹಿವಾಟು ಇಂದು ಠೇವಣಿದಾರ, ಸಾಲಗಾರರ ಸಹಕಾರ, ಸಿಬ್ಬಂದಿ ಶ್ರಮದಿಂದ 300 ಕೋ.ರೂ. ವ್ಯವಹಾರ ನಡೆಸಿದೆ. ಸಾಲ ವಸೂಲಾತಿಯಲ್ಲಿ ಶೇ.100ರ ಸಾಧನೆ ಮಾಡಿದೆ ಎಂದರು.

ಮುಖ್ಯ ಅತಿಥಿಯಾಗಿ ಭುವನೇಂದ್ರ ಕಾಲೇಜಿನ ಪ್ರಾಂಶುಪಾಲ ಮಂಜುನಾಥ ಕೋಟ್ಯಾನ್, ಉದ್ಯಮಿ ಬೋಳ ಪ್ರಭಾಕರ ಕಾಮತ್ ಮಾತನಾಡಿದರು. ಸಂಸ್ಥೆಯ ಉಪಾಧ್ಯಕ್ಷ ರೋಬರ್ಟ್ ರೊನಾಲ್ಡ್ ಫೆರ್ನಾಂಡಿಸ್, ವೀಣಾ ಡಿಸೋಜಾ ದಂಪತಿ, ಬೈಂದೂರು ಶಾಸಕ ಗುರುರಾಜ್ ಗಂಟಿಹೊಳೆ ಶುಭ ಹಾರೈಸಿದರು. ನಿರ್ದೇಶಕ ಮೋಹನ್ ಪಡಿವಾಳ ಸ್ವಾಗತಿಸಿದರು. ಆರ್. ಜೆ. ಪ್ರಸನ್ನ ನಿರೂಪಿಸಿ, ವಂದಿಸಿದರು.

ಗಿಳಿಯಾರು ಯುವಕ ಮಂಡಲದ ದಶಮಾನೋತ್ಸವ ಸಂಭ್ರಮ, ಸನ್ಮಾನ



ಕೋಟ: ಸಂಘ ಸಂಸ್ಥೆಗಳು ಶೈಕ್ಷಣಿಕ ಕಾರ್ಯಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿರುವುದು ಅತ್ಯಂತ ಪ್ರಶಂಸನೀಯ ಕಾರ್ಯ ಎಂದು ಉದ್ಯಮಿ ಸಂಪತ್ ಕುಮಾರ್ ಶೆಟ್ಟಿ ಹೇಳಿದರು.

ಶುಕ್ರವಾರ ಮೂಡುಗಿಳಿಯಾರಿನಲ್ಲಿ ಗಿಳಿಯಾರು ಯುವಕ ಮಂಡಲ ಇದರ ದಶಮಾನೋತ್ಸವದಲ್ಲಿ ಮಾತನಾಡಿ, ಗಿಳಿಯಾರು ಯುವಕ ಮಂಡಲ ತನ್ನೂರಿನ ಸರಕಾರಿ ಶಾಲೆಗಳ ಉಳಿವಿನ ಬಗ್ಗೆ ಶ್ರಮಿಸುತ್ತಿವುದು ಇತರ ಸಂಘಟನೆಗಳಿಗೆ ಮಾದರಿಯಾಗಿದೆ.ವಾರ್ಷಿಕೋತ್ಸವ ಅಥವಾ ದಶಮಾನೋತ್ಸವ ಕಾರ್ಯಕ್ರಮಗಳು ಸರಳ ರೀತಿಯಲ್ಲಿ ಆಚರಿಸುವುದರ ಮೂಲಕ ಮನೆಮಾತಾಗಿ ಬೆಳೆದು ನಿಂತಿದೆ ಎಂದು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಸತತ ಹತ್ತು ವರ್ಷ ಸೇವೆ ಸಲ್ಲಿಸಿದ ಏಳು ಸೇವಾಧ್ಯಕ್ಷರಿಗೆ ಪುಷ್ಪ ನೀಡಿ ಗೌರವಿಸಲಾಯಿತು. ಗಿಳಿಯಾರು ಯುವಕ ಮಂಡಲದ ದಶಮ ಸಂಭ್ರಮದ ಪುರಸ್ಕಾರವನ್ನು ಸಮಾಜಸೇವಕ ರವಿ ಕಟಪಾಡಿ ಇವರಿಗೆ ನೀಡಲಾಯಿತು.

ಸಭಾಧ್ಯಕ್ಷತೆಯನ್ನು ಗಿಳಿಯಾರು ಯುವಕ ಮಂಡಲದ ಅಧ್ಯಕ್ಷ ಸುಭಾಷ್ ಪೂಜಾರಿ ವಹಿಸಿದ್ದರು. ಮುಖ್ಯ ಅಭ್ಯಾಗತರಾಗಿ ನ್ಯೂ ಕರ್ನಾಟಕ ಬಿಲ್ಡರ್ಸ್ ಮಾಲೀಕ ಚೇತನ್ ಕುಮಾರ್ ಶೆಟ್ಟಿ, ಹೊನ್ನಾರಿ ಬೊಬ್ಬರ್ಯ ದೈವಸ್ಥಾನದ ಮೊಕ್ತೇಸರ ಮಹಾಬಲ ಹೇರ್ಳೆ, ಬೆಂಗಳೂರಿನ ಉದ್ಯಮಿ ಪುಣ್ಯ ಗೋಪಾಲ್ ಜಿ. ಉಪಸ್ಥಿತರಿದ್ದರು. ಯುವಕ ಮಂಡಲದ ಮಾಜಿ ಅಧ್ಯಕ್ಷ ಯೋಗಾನಂದ ಆರ್. ಹೆಗ್ಡೆ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾರ್ಯಕ್ರಮವನ್ನು ಪ್ರದೀಪ್ ಪುತ್ರನ್ ನಿರೂಪಿಸಿ, ವಂದಿಸಿದರು.ಸಾಂಸ್ಕೃತಿಕ ಕಾರ್ಯಕ್ರಮದ ಭಾಗವಾಗಿ ಸೌಕೂರು ಮೇಳದ ವತಿಯಿಂದ ಪಂಜರ ಪಕ್ಷಿ ಯಕ್ಷಗಾನ ಪ್ರದರ್ಶನಗೊಂಡಿತು.



ಬಕ್ರೀದ್ ಹಿನ್ನೆಲೆಯಲ್ಲಿ ಸರ್ವ ಧರ್ಮದ ಮುಖಂಡರೊಂದಿಗೆ ಕುಂದಾಪುರ ನಗರ ಪೊಲೀಸ್ ಠಾಣೆಯಲ್ಲಿ ಗುರುವಾರ ಶಾಂತಿ ಸೌಹಾರ್ದ ಸಭೆ ನಡೆಯಿತು. ಕುಂದಾಪುರ ವೃತ್ತ ನಿರೀಕ್ಷಕ ಜಯರಾಮ ಗೌಡ ಅವರು ಕಾನೂನು ಸುವ್ಯವಸ್ಥೆ ಕಾಪಾಡುವಂತೆ ಮನವಿ ಮಾಡಿದರು. ಕುಂದಾಪುರ ನಗರ ಠಾಣಾ ಎಸ್‌ಐ ಪುಷ್ಪಾ, ಸಂಚಾರ ಠಾಣಾ ಎಸ್‌ಐ ಅನೂಪ್ ನಾಯಕ್, ಸಿಬಂದಿ, ವಿವಿಧ ಧಾರ್ಮಿಕ ಮುಖಂಡರು, ಪುರಸಭೆ ಮಾಜಿ ಸದಸ್ಯರು, ಸಾರ್ವಜನಿಕರು ಉಪಸ್ಥಿತರಿದ್ದರು.



ಕೋಟೇಶ್ವರದ ಕಾಳಾವರ ವರದರಾಜ ಎಂ. ಶೆಟ್ಟಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ ಪ್ರತಿಭಾ ದಿನಾಚರಣೆ ಅಂಗವಾಗಿ ನಡೆದ ಪ್ರತಿಭಾ ಸ್ಪರ್ಧೆ 'ಸಿಂಚನ' ನಡೆಯಿತು. ಕೋಟೇಶ್ವರದ ರಥ ಶಿಲ್ಪಿ ರಾಜಗೋಪಾಲ ಆಚಾರ್ಯ ಕಾರ್ಯಕ್ರಮ ಉದ್ಘಾಟಿಸಿದರು. ಕಾಲೇಜಿನ ಪ್ರಾಂಶುಪಾಲ ರಾಮರಾಯ ಆಚಾರ್ಯ, ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ನಾಗರಾಜ ವೈದ್ಯ ಎಂ., ಐಕ್ಯೂಎಸಿ ಸಂಚಾಲಕ ನಾಗರಾಜ ಯು. ಮೊದಲಾದವರು ಇದ್ದರು.

ಮಲ್ಪೆಯ ಆನಂದ ಶರಧಿಯಲ್ಲಿ ಶ್ರೀ ಕೃಷ್ಣ ಪರಿಸರ ಪ್ರತಿಷ್ಠಾನದಿಂದ ಭಜನಾ ಸ್ಪರ್ಧೆ | ಆರನೇ ದಿನದ ಕಾರ್ಯಕ್ರಮ ಉದ್ಘಾಟನೆ

ಯುವಜನತೆಗೆ ಸಂಸ್ಕೃತಿ ಪರಿಚಯಿಸಲು ಭಜನಾ ಸ್ಪರ್ಧೆಗಳು ಅತ್ಯಗತ್ಯ: ಡಾ. ರಾಜೇಶ್ ಅಭಿಮತ

ಉಡುಪಿ: ಇಂದಿನ ಯುವ ಪೀಳಿಗೆಗೆ ನಮ್ಮ ಸನಾತನ ಸಂಸ್ಕೃತಿಯನ್ನು ಪರಿಚಯಿಸುವಲ್ಲಿ ಭಜನಾ ಸ್ಪರ್ಧೆಗಳು ಅತ್ಯಂತ ಮಹತ್ತರ ಪಾತ್ರ ವಹಿಸುತ್ತವೆ. ಭಜನೆಯ ಜೊತೆಗೆ ನಮ್ಮ ದೇಶದ ಭವ್ಯ ಸಂಸ್ಕೃತಿ ಮತ್ತು ಸಂಪ್ರದಾಯವನ್ನು ಉಳಿಸಿ ಬೆಳೆಸುವ ಅಗತ್ಯವಿದ್ದು ಈ ಕುರಿತು ಸಮಾಜದಲ್ಲಿ ಜಾಗೃತಿ ಮೂಡಿಸುವ ಕಾರ್ಯವನ್ನು ಯುವಜನತೆ ಸಾಗಿಸಬೇಕಾಗಿದೆ ಎಂದು ಶಾಂತಿ ನಿಕೇತನ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ಡಾ. ರಾಜೇಶ್ ತಿಳಿಸಿದರು.

ಅವರು ಮಲ್ಪೆಯ ಆನಂದ ಶರಧಿಯಲ್ಲಿ ಶ್ರೀ ಕೃಷ್ಣ ಪರಿಸರ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ ಭಜನಾ ಸ್ಪರ್ಧೆಯ ಆರನೇ ದಿನದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಿದ್ದರು.

ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ



ಭಾಗವಹಿಸಿದ್ದ ಪ್ರಮುಖರಾದ ಶ್ರೀಕಾಂತ್ ಶೆಟ್ಟಿ ಮಾತನಾಡಿ, ಮಲ್ಪೆ ಕರಾವಳಿಯು ಕೇವಲ ಅನ್ನ ನೀಡುವ ಬಟ್ಟಲಷ್ಟೇ ಅಲ್ಲ, ಅದು ಭಾರತೀಯ ಸಂಸ್ಕೃತಿಯ ಹೆಮ್ಮೆಯ ತೊಟ್ಟಿಲಾಗಿದೆ. ಈ ಸಂಸ್ಕೃತಿಯ ತೊಟ್ಟಿಲಿಗೆ ಸ್ವತಃ ಸಮುದ್ರರಾಜನೇ ಜೋಗುಳ ಹಾಡುತ್ತಿದ್ದಾನೆ. ವಿಶೇಷವಾಗಿ ಇಲ್ಲಿನ ಮೊಗವೀರ ಸಮುದಾಯವು ಭಜನಾ ಮಂದಿರಗಳನ್ನು ನಿರ್ಮಿಸಿ ಭಜನಾ ಸಂಸ್ಕೃತಿಯನ್ನು ಉಳಿಸುವುದರ ಜೊತೆಗೆ, ಕರಾವಳಿಯ ಗಡಿಯನ್ನು ಕಾಯುವ ಮಹತ್ತರವಾದ ದೇಶಸೇವೆಯ ಕಾರ್ಯವನ್ನು ಮಾಡುತ್ತಿದೆ ಎಂದು ಆಶಯ ವ್ಯಕ್ತಪಡಿಸಿದರು.

> ಹಿಂದು ಸಮಾಜವು ಶ್ರೇಷ್ಠ ಪರಂಪರೆ ಹಾಗೂ ಉದಾತ್ತ ಮೌಲ್ಯವನ್ನು ಹೊಂದಿದೆ. ಇದನ್ನು ಮುಂದಿನ ಪೀಳಿಗೆಗೆ ರವಾನಿಸುವ ಕಾರ್ಯ ಆಗಬೇಕಿದೆ. ಇಂದಿನ ಹಿರಿಯರು ಈ ಕಾರ್ಯ ಮಾಡಬೇಕಿದೆ.
>
> ● ಶ್ರೀಕಾಂತ್ ಶೆಟ್ಟಿ ವಾಗ್ಮಿ

ಮುಂದಿನ ಪೀಳಿಗೆಗೆ ಉನ್ನತ ಮೌಲ್ಯ ತಲುಪಿಸಿ

ಹಿಂದು ಸಮಾಜವು ಅವನತಿಯತ್ತ ಸಾಗುತ್ತಿದ್ದ ಕಾಲದಲ್ಲಿ ಅದನ್ನು ಭಜನೆಯ ಮೂಲಕವೇ ಒಟ್ಟುಗೂಡಿಸಿ ಉಳಿಸಲಾಯಿತು ಎಂಬ ಛತ್ರಪತಿ ಶಿವಾಜಿ ಮಹಾರಾಜರ ಹೇಳಿಕೆಯನ್ನು ಉಲ್ಲೇಖಿಸಿದ ಅವರು, ಭಜನೆಯು ಇಡೀ ಸಮಾಜವನ್ನು ಒಂದುಗೂಡಿಸುವ ದಿವ್ಯ ಶಕ್ತಿಯಾಗಿದೆ ಎಂದರು.

ನಮ್ಮ ಅಂತರಂಗದಲ್ಲಿ ನಿಜವಾದ ಭಕ್ತಿ ಮತ್ತು ನಂಬಿಕೆ ಇದ್ದಾಗ ಮಾತ್ರ ದೇವರ ಸಂಪೂರ್ಣ ಕೃಪೆ ನಮಗೆ ಲಭಿಸಲು ಸಾಧ್ಯ. ಭಜನೆ, ಭಕ್ತಿ ಮತ್ತು ಸಂಸ್ಕೃತಿಯ ಮೂಲಕ ಸಮಾಜದ ಉನ್ನತ ಮೌಲ್ಯಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಕಾರ್ಯ ನಿರಂತರವಾಗಿ ನಡೆಯಬೇಕು ಎಂದು ಅವರು ಕರೆ ನೀಡಿದರು.

ಸಭಾ ಕಾರ್ಯಕ್ರಮದ ವೇದಿಕೆಯಲ್ಲಿ ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನಕರ ಹೇರೂರು, ನಗರಸಭೆಯ ಮಾಜಿ ಅಧ್ಯಕ್ಷ ದಿನಕರ ಶೆಟ್ಟಿ ಹೆರ್ಗ, ಪ್ರಮುಖರಾದ ನಾಗರಾಜ್ ರಾವ್ ಅಂಬಲಪಾಡಿ, ತೊಟ್ಟಂನ ದೇವಿ ಮುಖ್ಯಪ್ರಾಣ ಭಜನಾ ಮಂದಿರದ ಅಧ್ಯಕ್ಷ ಪ್ರದೀಪ್ ಕುಮಾರ್, ಮಾತೃ ಮಂಡಳಿ ಅಧ್ಯಕ್ಷೆ ಜ್ಯೋತಿ ಸುರೇಂದ್ರ, ಪ್ರಮುಖರಾದ ನಳಿನಿ ಪ್ರದೀಪ್, ಸನ್ಯಾಸಿಮಠದ ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ದೇವಸ್ಥಾನದ ಮಾತೃ ಮಂಡಳಿ ಅಧ್ಯಕ್ಷೆ ದೀಪಾ ಹರೀಶ್ ಹಾಗೂ ಕಾರ್ಯಕ್ರಮದ ಸಂಚಾಲಕ ದಿನೇಶ್ ಪುತ್ರನ್ ಉಪಸ್ಥಿತರಿದ್ದರು. ಭಜನಾ ಸಂಚಾಲಕ ಅರುಣ್ ಕುಂದರ್ ಪ್ರಾರ್ಥಿಸಿದರು. ಸಂಚಾಲಕ ಗೋವಿಂದರಾಜ್ ಸ್ವಾಗತಿಸಿದರು. ವಿಜಯ ಕೊಡವೂರು ವಂದಿಸಿದರು. ವಿದ್ವಾನ್ ಷಣ್ಮುಖ ಹೆಬ್ಬಾರ್ ನಿರೂಪಿಸಿದರು. ಬಳಿಕ ಯುವತಿಯರ ತಂಡಗಳ ಭಜನಾ ಸ್ಪರ್ಧೆ ಜರುಗಿತು. ಈ ಸ್ಪರ್ಧೆಗೆ ತೀರ್ಪುಗಾರರಾಗಿ ಸೌಮ್ಯಾ ಭಟ್ ಕಟೀಲು ಹಾಗೂ ಅಖಿಲಾ ಹೆಗ್ಡೆ ಕಟಪಾಡಿ ಸಹಕರಿಸಿದರು.